ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 22 ಮಾರ್ಚ್ 2026
ಸಂಪುಟ 15, ಸಂಚಿಕೆ 362, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ಮೇ 4ರಿಂದ 10ರವರೆಗೆ ಟೆನಿಸ್ ಹಬ್ಬ

೧೦

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ



೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಭರಣಿ

ದಿನದ ಮಾತು

ತನ್ನ ಬಂಧು ಬಾಂಧವರನ್ನು ಅತಿಯಾಗಿ ಹಚ್ಚಿಕೊಂಡವನು ಭಯಶೋಕಗಳನ್ನು ಅನುಭವಿಸಲೇಬೇಕಾಗುತ್ತದೆ. ಅತಿ ಮಮತೆಯನ್ನು ಬಿಟ್ಟವನೇ ಸುಖಿಯಾಗಬಲ್ಲ.
▲ಚಾಣಕ್ಯ ನೀತಿ

ಬಾಯ್ ಮಾತು

ವಕ್ರದೃಷ್ಟಿ
• ಎನ್.ರಾಮನಾಥ್
• ಪುಟ ೬

ಕಿರುಸುದ್ದಿ

ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ

• **ತೀರ್ಥಹಳ್ಳಿ:** ತಾಲೂಕಿನಲ್ಲಿ ಮಂಗನ ಕಾಯಿಲೆಗೆ ಈ ವರ್ಷ ಎರಡನೇ ಸಾವು ಸಂಭವಿಸಿದ್ದು, ಅರಳಸುರುಳಿ ಸಮೀಪದ ತಟ್ಟೆಕೇವಿ ಗ್ರಾಮದ ಮಹಿಳೆ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.



ಗುಲಾಬಿ ಶೆಟ್ಟಿ (ನಾಗು ಶೆಡ್ತಿ (60) ಮೃತಪಟ್ಟವರು.ರೋಗ ಉಲ್ಬಣಗೊಂಡ ಸ್ಥಿತಿಯಲ್ಲಿ ಮಂಗಳವಾರ ಸರ್ಕಾರಿ ಜೆಸಿ ಆಸ್ಪತ್ರೆಗೆ ದಾಖಲಾಗಿದ್ದ ಅವರನ್ನು ಅದೇ ದಿನ ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ಅಸುನೀಗಿದರು. ಕಿಡ್ನಿ ಸಮಸ್ಯೆ ಕೂಡ ಇತ್ತು ಎಂದು ಹೇಳಲಾಗಿದೆ. ➡ಪುಟ ೪

ಸರ್ಕಾರಿ ಕಚೇರಿಯಲ್ಲೇ ಅಧಿಕಾರಿ ಆತ್ಮಹತ್ಯೆ

• **ಪಾವಗಡ:** ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಹಾಯ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

• ಪುಟ ೫

ಡಿಜಿಟಲ್ ಅರೆಸ್ಟ್ ವಂಚನೆಗೆ ಕೇಂದ್ರ ಸರ್ಕಾರ ಬ್ರೇಕ್

• **ಹೊಸದಿಲ್ಲಿ:** ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

• ಪುಟ ೨

ಆರೆಸ್ಸೆಸ್ ನಿಷೇಧ ಶಿಫಾರಸು ಪೂರ್ವಾಗ್ರಹಪೀಡಿತ

• ಪುಟ ೭

ಅಪರಿಚಿತರಿಂದ ಮತ್ತೊಬ್ಬ ಭಯೋತ್ಪಾದಕನ ಹತ್ಯೆ

• ಪುಟ ೭

ವಾಣಿಜ್ಯ ಎಲ್‌ಪಿಜಿ ಹಂಚಿಕೆ ಶೇ.50ಕ್ಕೆ ಏರಿಕೆ

• ಪುಟ ೭

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

• ಪುಟ ೭

ವಿಕಿರಣ ಸೋರಿಕೆ? | ಟೆಹ್ರಾನ್‌ನಿಂದ 220 ಕಿಮೀ ದೂರದ ಸ್ಥಾವರ

ಇರಾನ್ ಪರಮಾಣು ಸ್ಥಾವರ ಮೇಲೆ ದಾಳಿ

• **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಭೀಕರ ಯುದ್ಧ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರ ಅಮೆರಿಕ-ಇಸ್ರೇಲ್ ಇರಾನ್‌ನ ನಟಾಂಜ್ ಪರಮಾಣು ಸ್ಥಾವರದ ಮೇಲೆ ದಾಳಿ ನಡೆಸಿದೆ. ಇದರಿಂದ ವಿಕಿರಣ ಸೋರಿಕೆಯ ಆತಂಕ ಎಲ್ಲೆಡೆ ಮನೆ ಮಾಡಿದೆ.

ಶನಿವಾರ ಬೆಳಗ್ಗೆ ನಟಾಂಜ್‌ನಲ್ಲಿರುವ ಇರಾನ್‌ನ ಪ್ರಮುಖ ಯುರೇನಿಯಂ-ಪುಷ್ಟೀಕರಣ ಸ್ಥಾವರದ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿವೆ. ದಾಳಿ ನಂತರ ಯಾವುದೇ ವಿಕಿರಣ ಸೋರಿಕೆ ಪತ್ತೆಯಾಗಿಲ್ಲ ಮತ್ತು ಸ್ಥಾವರದ ಬಳಿ ವಾಸಿಸುವ ನಿವಾಸಿಗಳು ಅಪಾಯದಲ್ಲಿಲ್ಲ ಎಂದು ಸುದ್ದಿ ಸಂಸ್ಥೆ ತಿಳಿಸಿದೆ. ಆದರೂ ಸ್ಥಳೀಯ ನಿವಾಸಿಗಳು ವಿಕಿರಣ ಸೋರಿಕೆಯ ಆತಂಕದಲ್ಲಿದ್ದಾರೆ. ನಟಾಂಜ್ ಪರಮಾಣು ಸ್ಥಾವರ ಇರಾನ್ ರಾಜಧಾನಿ ಟೆಹ್ರಾನ್‌ನಿಂದ ಸುಮಾರು 220 ಕಿಮೀ ದೂರದಲ್ಲಿದೆ.ಇರಾನ್‌ನ ಪರಮಾಣು ಸೌಲಭ್ಯ ಕೇಂದ್ರವಾದ ನಟಾಂಜ್ ಅನ್ನು ಯುದ್ಧ ಶುರುವಾದ ಮೊದಲ ವಾರದಲ್ಲೇ ಗುರಿಯಾಗಿಸಿತ್ತು ಎಂದು ಮಧ್ಯಮಗಳು ವರದಿ ಮಾಡಿವೆ. ದಾಳಿಯ ಉಪಗ್ರಹ ಚಿತ್ರಗಳು ಬೆಳಕಿಗೆ ಬಂದಿವೆ. ಈ ಕೇಂದ್ರದಿಂದ ಯಾವುದೇ ವಿಕಿರಣ ಸೋರಿಕೆಯಾಗಿಲ್ಲ ಎಂದು ಇರಾನ್ ಸುದ್ದಿಸಂಸ್ಥೆ ವರದಿ ಮಾಡಿದೆ.





4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!



• **ಹೊಸದಿಲ್ಲಿ:** ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ. ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. • ವಿವರ ಪುಟ ೭

ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಜಾಗತಿಕ ಇಂಧನ ಬೆಲೆಗಳನ್ನು ನಿಯಂತ್ರಿಸುವ ಉದ್ದೇಶದಿಂದ, ಸಮುದ್ರದಲ್ಲಿರುವ ಇರಾನ್ ತೈಲದ ಮಾರಾಟಕ್ಕೆ ಟ್ರಂಪ್ ಆಡಳಿತ ಶುಕ್ರವಾರ 30 ದಿನಗಳ ಕಾಲ ನಿರ್ಬಂಧ ಸಡಿಲಿಕೆ ಘೋಷಿಸಿದೆ. ಸುಮಾರು 140 ಮಿಲಿಯನ್ ಬ್ಯಾರೆಲ್ ತೈಲವನ್ನು ಜಾಗತಿಕ ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುವುದು ಎಂದು ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ತಿಳಿಸಿದ್ದಾರೆ. ಫೆ.28ರಂದು ಮಿಲಿಟರಿ ಕಾರ್ಯಾಚರಣೆ ಆರಂಭವಾದಾಗಿನಿಂದ ತೈಲ ಬೆಲೆ ಶೇ.50ರಷ್ಟು ಏರಿಕೆಯಾಗಿದ್ದು, ಈ ಕ್ರಮ ಗ್ರಾಹಕರು ಮತ್ತು ಉದ್ಯಮಗಳಿಗೆ ನಿರಾಳತೆ ತರುವ ಗುರಿ ಹೊಂದಿದೆ. ಏಪ್ರಿಲ್ 19 ರವರೆಗೆ ಈ ರಿಯಾಯಿತಿ ಜಾರಿಯಲ್ಲಿರಲಿದೆ.

ಭಾರತಕ್ಕೂ ಪ್ರಯೋಜನ?: ಈ ತೈಲ ಕೆಲವೇ ದಿನಗಳಲ್ಲಿ ಏಷ್ಯಾದ ಮಾರುಕಟ್ಟೆ ತಲುಪಬಹುದು ಎಂದು ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಹೇಳಿದ್ದಾರೆ. ➡ಪುಟ ೪

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

• **ಹೊಸದಿಲ್ಲಿ:** ಪ್ರಧಾನಿ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. • ವಿವರ ಪುಟ ೭

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್



• **ಟೆಹ್ರಾನ್:** ಅಂತಾರಾಷ್ಟ್ರೀಯ ಮಾರುಕಟ್ಟೆಗಳಿಗೆ ಪೂರೈಸಲು ಪ್ರಸ್ತುತ ತನ್ನಲ್ಲಿ ಯಾವುದೇ ಹೆಚ್ಚುವರಿ ಅಥವಾ ಸಂಗ್ರಹಿತ ಕಚ್ಚಾ ತೈಲ ಲಭ್ಯವಿಲ್ಲ ಎಂದು ತಿಳಿಸುವ ಮೂಲಕ ಇರಾನ್ ತೈಲ ಸಚಿವಾಲಯ ಅಮೆರಿಕದ ಹೇಳಿಕೆಯನ್ನು ತಳ್ಳಿಹಾಕಿದೆ.ವಿವಾದಿತ ತೈಲ ದಾಸ್ತಾನು ವಾಷಿಂಗ್ಟನ್ ಗುರುತಿಸಿರುವಂತೆ ತನ್ನಲ್ಲಿ 140 ಮಿಲಿಯನ್ ಬ್ಯಾರೆಲ್‌ನಷ್ಟು ಸಿಲುಕಿಕೊಂಡಿರುವ ತೈಲ ದಾಸ್ತಾನು ಇಲ್ಲ ಎಂದು ಮುಂಬೈನಲ್ಲಿರುವ ಇರಾನ್ ರಾಯಭಾರ ಕಚೇರಿ ಸ್ಪಷ್ಟಪಡಿಸಿದೆ. ➡ಪುಟ ೪

ಚಿಂತೆಗೀಡಾದ ಅಭ್ಯರ್ಥಿ ಆಕಾಂಕ್ಷಿಗಳು

ಬಗೆಹರಿಯದ ಕೈ ಟಿಕೆಟ್ ಗೊಂದಲ



• **ಬೆಂಗಳೂರು:** ಉಪ ಸಮರಕ್ಕೆ ಸಜ್ಜಾಗಿರುವ ಕಾಂಗ್ರೆಸ್‌ನಲ್ಲಿ ಆಂತರಿಕ ಬಡಿದಾಟವೇ ಹೆಚ್ಚಾಗಿದ್ದು, ಆಡಳಿತ ಪಕ್ಷ ಕಾಂಗ್ರೆಸ್‌ಗೆ ಬಣಗಳ ಬಡಿದಾಟವು ತಲೆನೋವು ತಂದಿರುವುದರಿಂದ ತಮ್ಮದೇ ಕ್ಷೇತ್ರಗಳನ್ನು ಮರಳಿ ಪಡೆಯುವ ತಂತ್ರಕ್ಕೆ ಆರಂಭಿಕ ಹಿನ್ನಡೆಯಾಗಿದೆ.

ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಮತ್ತು ಎಚ್.ವೈ ಮೇಟಿ ಅವರ ನಿಧನದ ನಂತರ ತೆರವಾಗಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭೆ ಕ್ಷೇತ್ರಗಳಿಗೆ ಏ.9ರಂದು ಉಪ ಚುನಾವಣೆ ನಿಗದಿಯಾಗಿದ್ದು, ಮಾ.23 ಸೋಮವಾರ ನಾಮಪತ್ರ ಸಲ್ಲಿಸಲು ಕೊನೆ ದಿನವಾಗಿದ್ದರೂ ಇನ್ನೂ ಟಿಕೆಟ್ ಹಂಚಿಕೆ ಆಗದಿರುವುದು ಎರಡೂ ಕುಟುಂಬ ಸದಸ್ಯರನ್ನು ಚಿಂತೆಗೀಡು ಮಾಡಿವೆ.



ಮುಂಬರುವ ಸ್ಥಳೀಯ ಚುನಾವಣೆಗೆ ಈ ಉಪಕದನ ದಿಕ್ಸೂಚಿ ಎಂದು ಬಿಂಬಿತವಾಗಿರುವುದರಿಂದ ಈ ಚುನಾವಣೆ ಉಭಯ ಪಕ್ಷಗಳಿಗೆ ಸವಾಲಾಗಿದೆ. 3 ವರ್ಷದ ಸನಿಹದಲ್ಲಿರುವ ಗ್ಯಾರಂಟಿ ಸರ್ಕಾರವು 2 ಸ್ಥಾನವನ್ನು ಗೆಲ್ಲುವ ಮೂಲಕ ವಿಶ್ವಾಸ ಹೆಚ್ಚಿಸಿಕೊಳ್ಳುವ ಜತೆಗೆ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸೆಮಿಫೈನಲ್ ಎಂದು ಪರಿಗಣಿಸಿರುವುದರಿಂದ ಈ ಚುನಾವಣೆ ಕಾಂಗ್ರೆಸ್‌ಗೆ ಮುಖ್ಯವಾಗಿದೆ.

ಲೋಕಸಭೆ ಚುನಾವಣೆ ನಂತರ ನಡೆದ ಉಪ ಚುನಾವಣೆಯಲ್ಲಿ ಮೇಲುಗೈ ಸಾಧಿಸಿದ್ದ ಕಾಂಗ್ರೆಸ್ ಅದನ್ನು ಮುಂದುವರಿಸಲು ಸಿದ್ಧತೆ ನಡೆಸಿದೆ. ➡ಪುಟ ೪

ದಾವಣಗೆರೆಗೆ ಸಮರ್ಥ್, ಬಾಗಲಕೋಟೆಗೆ ಉಮೇಶ್ ಮೇಟಿ?

ಉಪ ಚುನಾವಣೆಗೆ ಕಾಂಗ್ರೆಸ್‌ನಿಂದ ಕುಟುಂಬ ಸದಸ್ಯರೆ ಅಭ್ಯರ್ಥಿಗಳು ಎಂದು ಹೇಳಲಾಗಿದ್ದರೂ ನಂತರದ ದಿನಗಳಲ್ಲಿ ಅದು ಬೇರೆ ರೀತಿ ತಿರುಗಿದ್ದರಿಂದ ಟಿಕೆಟ್ ಹಂಚಿಕೆ ಜಟಿಲವಾಗಿದೆ. ಬಾಗಲಕೋಟೆ, ದಾವಣಗೆರೆ ದಕ್ಷಿಣ ಟಿಕೆಟ್ ಬಹುತೇಕ ಬಗೆಹರಿದಿದ್ದು, ರಣದೀಪ್ ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಮಲ್ಲಿಕಾರ್ಜುನ, ಜಮೀರ್ ಅಹಮದ್ ಉಪಸ್ಥಿತಿಯಲ್ಲಿ ಸಭೆ ನಡೆಸಿದ್ದು, ಭಾನುವಾರ ಅಧಿಕೃತವಾಗಿ ಟಿಕೆಟ್ ಘೋಷಣೆ ಆಗಲಿದೆ. ಸೋಮವಾರ ನಾಮಪತ್ರ ಸಲ್ಲಿಸಲಿದ್ದಾರೆ.

ಬೈಕ್ ಮೇಲೆ ಟ್ರಕ್ ಹತ್ತಿಸಿ ಹತ್ಯೆ | ದಿಲ್ಲಿ-ಆಗ್ರಾ ರಾ.ಹೆ. ಬಂದ್

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

• **ಲಖನೌ:** ಫರ್ಸಾ ವಾಲೆ ಬಾಬಾ (ಕೊಡಲಿ ಬಾಬಾ) ಎಂದೇ ಪ್ರಖ್ಯಾತರಾಗಿದ್ದ ಉತ್ತರಪ್ರದೇಶದ ಗೋರಕ್ಷಕ ಚಂದ್ರಶೇಖರ್ ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಹತ್ಯೆಯಾಗಿದ್ದು, ಭಕ್ತರು ಹಾಗೂ ಗ್ರಾಮಸ್ಥರಿಂದ ಭಾರೀ ಆಕ್ರೋಶ ವ್ಯಕ್ತವಾಗಿದೆ. ಬಾಬಾ ಹತ್ಯೆ ನಡೆಸಿದವರ ಮೇಲೆ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪೊಲೀಸರಿಗೆ ಆದೇಶಿಸಿದ್ದಾರೆ. ಈದ್ ಹಬ್ಬದ ಸಂದರ್ಭ ಮಥುರಾದಲ್ಲಿ ಗೋವುಗಳ ಕಳ್ಳಸಾಗಣೆ ಮಾಡುತ್ತಿದ್ದ ಟ್ರಕ್‌ವೊಂದನ್ನು ಬಾಬಾ ತಮ್ಮ ಬೈಕ್‌ನಲ್ಲಿ ಬೆನ್ನಟ್ಟಿ ಅಡ್ಡಗಟ್ಟಲು ಪ್ರಯತ್ನಿಸಿದ್ದರು. ಆದರೆ ಟ್ರಕ್‌ನಲ್ಲಿದ್ದ ನಾಲ್ವರು ಆರೋಪಿಗಳು ಬೈಕ್ ಮೇಲೆಯೇ ಟ್ರಕ್ ಚಲಾಯಿಸಿ ಬಾಬಾರನ್ನು ಹತ್ಯೆ ಮಾಡಿದ್ದಾರೆಂದು ಆರೋಪಿಸಲಾಗಿದೆ. ಬೈಕ್ ಮೇಲೆ ಟ್ರಕ್ ಚಲಾಯಿಸಿದ ವೇಗಕ್ಕೆ ಗಂಭೀರ ಗಾಯಗೊಂಡಿದ್ದ ಬಾಬಾ ಸ್ಥಳದಲ್ಲೇ ಮೃತ ಪಟ್ಟಿದ್ದರು. ಪೊಲೀಸರ ಪ್ರಕಾರ, ಬಾಬಾ ಅಡ್ಡಗಟ್ಟಿದ್ದ ಟ್ರಕ್ ರಾಜಸ್ಥಾನದ್ದಾಗಿದ್ದು, ಟ್ರಕ್‌ನಲ್ಲಿ ದಿನಸಿ ಸಾಮಗ್ರಿಗಳಿದ್ದವು. ದಟ್ಟವಾದ ಮಂಜು ಇದ್ದಿದ್ದರಿಂದ ರಸ್ತೆ ಅಪಘಾತ ಸಂಭವಿಸಿದೆ. ➡ಪುಟ ೪



ಬೃಹತ್ ಪ್ರತಿಭಟನೆ

ಗೋರಕ್ಷಕನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಸಾವಿರಾರು ಸಂಖ್ಯೆಯಲ್ಲಿ ಜನ ಸೇರಿದ್ದು, ದಿಲ್ಲಿ-ಆಗ್ರಾ ನಡುವಿನ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್-19) ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ಇದರಿಂದ ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಸಂಚರಿಸಲಾಗದೆ ಸಾಲಾಗಿ ನಿಂತಿದ್ದವು.

ವ್ಯವಸ್ಥೆಗೆ ಕೃತಕ ಬುದ್ಧಿಮತ್ತೆ ಪೂರಕವಾಗಿರಲಿ: ನ್ಯಾ.ಸೂರ್ಯಕಾಂತ್

ಎಐ ನ್ಯಾಯಾಂಗ ಆಳಬಾರದು: ಸಿಜೆಐ

• **ಬೆಂಗಳೂರು:** ನ್ಯಾಯಾಂಗ ವ್ಯವಸ್ಥೆಗೆ ಎಐ ತಾಂತ್ರಿಕತೆಯನ್ನು ಸಂಯೋಜನೆಗೊಳಿಸುವಾಗ ಅದು ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸುವ ರೀತಿಯಲ್ಲಿ ಇರಬೇಕೇ ಹೊರತು ಅದರ ಮೇಲೆಯೇ ಸವಾರಿ ಮಾಡುವಂತಿರಬಾರದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿಯು ವತಿಯಿಂದ ಶನಿವಾರ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಭಾಂಗಣದಲ್ಲಿ ಹಮ್ಮಿಕೊಂಡ ಕೃತಕ ಬುದ್ಧಿಮತ್ತೆ-ವ್ಯಾಜ್ಯಗಳ ತಡೆ ಗಟ್ಟುವಿಕೆ ಮತ್ತು ಇತ್ಯರ್ಥ ಕುರಿತಾಗಿನ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಗಾಧ ಪ್ರಮಾಣದ ದತ್ತಾಂಶ-ದಾಖಲಾತಿಗಳನ್ನು ನಿರ್ವಹಿಸಲು, ಮಾದರಿಗಳನ್ನು ಗುರುತಿಸಲು, ಪ್ರಕ್ರಿಯೆಗಳ ವಿಳಂಬ ತಗ್ಗಿಸಲು ಎಐ ಸಹಾಯಕವಾಗಬೇಕು. ಆದರೆ, ಪ್ರಧಾನ ಕಾರ್ಯವಾದ ತೀರ್ಪು ಪ್ರಕಟಿಸುವಿಕೆಯನ್ನೇ ಅದು ಅತಿಕ್ರಮಿಸುವಂತಾಗಬಾರದು. ➡ಪುಟ ೪



ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ: ನ್ಯಾ.ನಾಗರತ್ನ

• ಪುಟ ೪

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು



• **ತಿರುಮಲ:** ಮುಖ್ಯಮಂತ್ರಿ ಹುದ್ದೆಯಲ್ಲಿದ್ದರೂ ನಾರಾ ಚಂದ್ರಬಾಬು ನಾಯ್ಡು ಅವರು ವಿಐಪಿ ಸೌಲಭ್ಯಗಳನ್ನು ಬಳಸದೆ ಸಾಮಾನ್ಯ ಭಕ್ತರಂತೆ ಆಗಮಿಸಿ ಕುಟುಂಬಸ್ಥರೊಂದಿಗೆ ತಿರುಮಲದ ಶ್ರೀ ವೆಂಕಟೇಶ್ವರನ ದರ್ಶನ ಪಡೆದರು. ಶಿಷ್ಟಾಚಾರದ ಪ್ರಕಾರ ನೇರವಾಗಿ ಮಹಾದ್ವಾರದ ಮೂಲಕ ಪ್ರವೇಶಿಸುವ ಅವಕಾಶ ವಿದ್ದರೂ, ವೈಕುಂಠಂ ಕ್ಯೂ ಕಾಂಪ್ಲೆಕ್ಸ್ ಮೂಲಕವೇ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಸರಳತೆ ಮೆರೆದಿದ್ದಾರೆ. ➡ಪುಟ ೪



ಭಯೋತ್ಪಾದನೆಯಲ್ಲಿ ಪಾಕಿಸ್ತಾನ ನಂಬರ್ 1

- ಜಾಗತಿಕ ಉಗ್ರ ಸೂಚ್ಯಂಕದಲ್ಲಿ ಪಾಕ್‌ಗೆ ಮೊದಲ ಸ್ಥಾನ ಕುಖ್ಯಾತಿ
- ವಿಶ್ವದಲ್ಲಿ ಸಾವಿನ ಪ್ರಮಾಣ ಇಳಿಕೆಯಾದರೂ ಗಡಿಯಾಚೆಗಿನ ಉಗ್ರ ಜಾಲ ಮತ್ತೆ ಸಕ್ರಿಯ

• **ಇಸ್ಲಾಮಾಬಾದ್:** ಒಂದು ಕಾಲದಲ್ಲಿ ತಾನೇ ಅನ್ನ ಹಾಕಿ, ಸಲಹಿ, ಪೊರೆದು ಪೋಷಿಸಿದ ಉಗ್ರವಾದವೇ ಪಾಕಿಸ್ತಾನಕ್ಕೆ ಮುಳ್ಳಾಗಿದೆ.

ಜಾಗತಿಕ ಭಯೋತ್ಪಾದನಾ ಸೂಚ್ಯಂಕ 2026ರಲ್ಲಿ ಪಾಕಿಸ್ತಾನವೇ ಅತ್ಯಂತ ಹೆಚ್ಚು ಉಗ್ರ ಬಾಧಿತ ದೇಶವಾಗಿ ಹೊರಹೊಮ್ಮಿದ್ದು, ತಾನು ಬೆಂಬಲಿಸಿದವರಿಂದಲೇ ಏಟು ತಿನ್ನುತ್ತಿದೆ. ಇದುವರೆಗೆ ಪಾಕಿಸ್ತಾನವನ್ನು ಉಗ್ರ ಪೋಷಕ ದೇಶವೆಂದೇ ಕರೆಯಲಾಗುತ್ತಿತ್ತು. ಇದರಿಂದ ನೆರೆ ಹೊರೆಯ ದೇಶಗಳಿಗೆ ಹೆಚ್ಚು ಹಾನಿಯಾಗುತ್ತಿತ್ತೇ ವಿನಃ ತನಗೆ ಏನೂ ಆಗುತ್ತಿರಲಿಲ್ಲ. ಆದರೆ, ಈಗ ನೆರೆಯ ದೇಶಗಳ ಭದ್ರತಾ ಸ್ಥಿತಿ, ರಾಜಕೀಯ ಗಟ್ಟಿತನದಿಂದಾಗಿ ಪಾಕ್ ಪ್ರಾಯೋಜಿತ ಉಗ್ರರು, ತಮ್ಮ ದೇಶದ ಒಳಗೇ ದಾಳಿ ನಡೆಸಿ ಜನರನ್ನು ಕೊಲ್ಲುತ್ತಿದ್ದಾರೆ. ತೆಹ್ರೀಕ್-ಇ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ), ಬಲೂಚ್‌ನ ಪ್ರತ್ಯೇಕ ಹೋರಾಟಗಾರರ ಜಾಲ ಮತ್ತು ಅಫ್ಘಾನ್ ಗಡಿ ಅಸ್ಥಿರತೆ ಪರಿಣಾಮವಾಗಿ ಪಾಕ್ ಈ ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿದೆ. ಅಂದರೆ, 2025ರಲ್ಲಿ ಪಾಕಿಸ್ತಾನದಲ್ಲಿ ಉಗ್ರ ದಾಳಿಗಳ ತೀವ್ರತೆ ಏರಿಕೆಯಾಗಿದ್ದು, ಅದು ಉಗ್ರತೆಯಿಂದ ಅತ್ಯಂತ ಹೆಚ್ಚು ಬಾಧಿತ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದೆ. ➡ಪುಟ ೪



ಚಾಮುಂಡೇಶ್ವರಿಗೆ ನಮೋ ಭಕ್ತಿನಮನ



• **ಹೊಸದಿಲ್ಲಿ:** ಶ್ರೀಚಾಮುಂಡೇಶ್ವರಿ ಎಂಬ ಪ್ರಸಿದ್ಧ ಕನ್ನಡ ಭಕ್ತಿಗೀತೆಯನ್ನು ತಮ್ಮ ಎಕ್ಸ್ ಖಾತೆಯಲ್ಲಿ ಹಂಚಿಕೊಳ್ಳುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಚೈತ್ರ ನವರಾತ್ರಿಯ 3ನೇ ದಿನದ ಸಂದೇಶ ನೀಡಿದ್ದಾರೆ. ಇದು ಡಾ.ರಾಜಕುಮಾರ್ ಅಭಿನಯದ ಶ್ರೀ ಕೃಷ್ಣದೇವರಾಯ ಚಿತ್ರದ ಗೀತೆಯಾಗಿದ್ದು, ಮೋದಿ ಪೋಸ್ಟ್‌ಗೆ ವಿಶ್ವದೆಲ್ಲೆಡೆ ಕನ್ನಡಿಗರು, ಅಣ್ಣಾವ್ರ ಅಭಿಮಾನಿಗಳು ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಜಗಜ್ಜನನಿ ಅಮ್ಮನವರ ಮೇಲಿನ ಅಚಲ ನಂಬಿಕೆಯು ಭಕ್ತರಲ್ಲಿ ಹೊಸ ಚೈತನ್ಯ ಮತ್ತು ಸ್ಫೂರ್ತಿ ತುಂಬಲಿದೆ ಎಂದು ಮೋದಿ ತಮ್ಮ ಚೈತ್ರ ನವರಾತ್ರಿ ಮೂರನೇ ದಿನದ ಸಂದೇಶದಲ್ಲಿ ಬರೆದುಕೊಂಡಿದ್ದಾರೆ. ➡ಪುಟ ೪



ಎಕ್ಸ್‌ನಲ್ಲಿ ಡಾ.ರಾಜ್ ಚಿತ್ರದ ಗೀತೆ ಹಂಚಿಕೊಂಡ ಪ್ರಧಾನಿ

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,45,000**(2,55,000) ಅಪರಂಜಿ ಚಿನ್ನ: **1,45,970**(1,50,930) ಆಭರಣ ಚಿನ್ನ: **1,38,800**(1,38,350) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **74,532**(325↑) ಎನ್‌ಎಸ್‌ಇ **23,114**(112↑)

$1 = ₹93.72

ಕಿರುಸುದ್ದಿ

ದತ್ತಿ ಕಾರ್ಯಕ್ರಮ ಇಂದು

ಹುಬ್ಬಳ್ಳಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಧಾರವಾಡ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹುಬ್ಬಳ್ಳಿ ನಗರ, ನಾಗಸುಧೆ ಜಗಲಿ ಹುಬ್ಬಳ್ಳಿ ಇವರ ಆಶ್ರಯದಲ್ಲಿ ಇಲ್ಲಿನ ಕಾಳಿದಾಸನಗರದ ನಾಗಸುಧೆ ಜಗಲಿ ಟೆರೇಸಿನಲ್ಲಿ ಮಾ.22ರಂದು ಸಂಜೆ 5 ಗಂಟೆಗೆ ನಾಗಸುಧೆ ದತ್ತಿ ಕಾರ್ಯಕ್ರಮ, ಉಪನ್ಯಾಸ ಮತ್ತು ಕವಿಗೋಷ್ಠಿ ಆಯೋಜಿಸಲಾಗಿದೆ. ಸುನಂದಾ ಮತ್ತು ಪ್ರಕಾಶ ಕಡಮೆ ದತ್ತಿ ದಾನಿಗಳಾಗಿದ್ದು, ಡಾ. ಲಿಂಗರಾಜ ಅಂಗಡಿ ಉದ್ಘಾಟಿಸುವರು. ವಿದ್ಯಾ ವಂಟಮುರಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪ್ರೊ.ಕೆ.ಎಸ್. ಕೌಜಲಗಿ ಆಗಮಿಸಲಿದ್ದು, ಮಲ್ಲಮ್ಮ ಯಾಟಗಲ್ ಅವರಿಂದ ನಾನು ಮತ್ತು ನನ್ನ ಬರಹ ಎಂಬ ವಿಷಯದ ಕುರಿತು ಉಪನ್ಯಾಸ ನಡೆಯಲಿದೆ. ಇದೇ ವೇಳೆ ಸಿ.ಎಂ. ಚೆನ್ನಬಸಪ್ಪ, ಸಿ.ಎಂ. ಮುನಿಸ್ವಾಮಿ, ಗಾಯತ್ರಿ ರವಿ, ವಿರೂಪಾಕ್ಷ ಕಟ್ಟಿಮನಿ, ಕವಿತಾ ಹೆಗಡೆ ಅಭಯಂ ಹಾಗೂ ಸುಜಾತಾ ಹೆಬ್ಬಾಳದ ಅವರಿಂದ ಕವಿಗೋಷ್ಠಿ ನಡೆಯಲಿದೆ.

ಮೂರು ಸಾವಿರ ಮಠಕ್ಕೆ ಮುಸ್ಲಿಂ ಮುಖಂಡರ ಭೇಟಿ



ಹುಬ್ಬಳ್ಳಿ: ರಂಜಾನ ಹಬ್ಬದ ಅಂಗವಾಗಿ ಮುಸ್ಲಿಂ ಸಮುದಾಯದ ಮುಖಂಡರು ನಗರದ ಮೂರು ಸಾವಿರ ಮಠಕ್ಕೆ ಭೇಟಿ ನೀಡಿ ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಅವರ ಅನುಪಸ್ಥಿತಿಯಲ್ಲಿ ಆನಂದಪುರದ ಜಗದ್ಗುರು ಮುರ್ಗಾಮಠದ ಮಲ್ಲಿಕಾರ್ಜುನ ಮುರುಘರಾಜೇಂದ್ರಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಎರಡೆತ್ತಿನ ಮಠದ ಸಿದ್ದಲಿಂಗ ಸ್ವಾಮೀಜಿ, ಸಂಸ್ಥೆಯ ಚೇರಮನ್ ಅರವಿಂದ ಕುಬಸದ, ಮಾಜಿ ಸಂಸದ ಎ.ಎಂ. ಹಿಂಡಸಗೇರಿ, ಅಲ್ತಾಫ್ ಹಳ್ಳೂರ, ದಾವಲ್‌ಸಾಬ್ ನದಾಫ್, ಯುಸೂಫ್ ಸವಣೂರ, ಚನ್ನಬಸಪ್ಪ ಧಾರವಾಡ ಶೆಟ್ಟರ್, ಮಲ್ಲಿಕಾರ್ಜುನ ಕಳಸರಾಯ್, ಸದಾನಂದ ಡಂಗನವರ್ ಲಿಂಗರಾಜ ಇಂಗಳಹಳ್ಳಿ, ಮಲ್ಲಿಕಾರ್ಜುನ ಶಿರಗನ್ನವರ, ಅಮರೇಶ ಹಿಪ್ಪರಗಿ, ಅಪ್ಪಣ್ಣ ಬೆಂಡಿಗೇರಿ ಇದ್ದರು.

ಶ್ರದ್ಧಾ ಭಕ್ತಿಯ ರಂಜಾನ್



ಹುಬ್ಬಳ್ಳಿ: ನಗರ ಹಾಗೂ ತಾಲೂಕಿನಾದ್ಯಂತ ಶನಿವಾರ ಶ್ರದ್ಧಾ ಭಕ್ತಿಯಿಂದ ರಂಜಾನ್ ಆಚರಿಸಲಾಯಿತು. ಹುಬ್ಬಳ್ಳಿ ಚನ್ನಮ್ಮ ವೃತ್ತದ ಬಳಿಯ ಚನ್ನಮ್ಮ ಮೈದಾನದಲ್ಲಿ (ಈದ್ಗಾ) ಹಾಗೂ ಹಳೇ ಹುಬ್ಬಳ್ಳಿ ದರ್ಗಾ ಹತ್ತಿರ ನಗರ ವಿವಿಧೆಡೆ ಮುಸ್ಲಿಮರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಒಂದು ತಿಂಗಳಿಗೂ ಹೆಚ್ಚು ಉಪವಾಸ ಮಾಡಿದ ಮುಸ್ಲಿಮರು ಹಬ್ಬದ ಅಂಗವಾಗಿ ಹೊಸ ಬಟ್ಟೆ ಧರಿಸಿ, ಪರಸ್ಪರ ಹಬ್ಬದ ಶುಭಾಶಯ ಕೋರಿದರು. ಬಡಾವಣೆ ಹಾಗೂ ವಾರ್ಡ್‌ಗಳಿಂದ ಶ್ವೇತ ವರ್ಣದ ಬಟ್ಟೆಗಳ ಧರಿಸಿ ಪ್ರಾರ್ಥನೆ ಆಗಮಿಸಿದರು. ಇಲ್ಲಿಯ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ, ಬಗೆಗೆಯ ಖಾದ್ಯ ಹಾಗೂ ಭಕ್ಷ್ಯಗಳನ್ನೊಳಗೊಂಡ ಊಟ ಸವಿದರು. ಪ್ರಾರ್ಥನೆ ನಂತರ ಬಡವರಿಗೆ ದಾನ ನೀಡಿದರು.

5.22 ಲಕ್ಷ ರೂ. ವಂಚನೆ

ಹುಬ್ಬಳ್ಳಿ: ಷೇರ್ ಮಾರ್ಕೆಟ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಹಣ ಗಳಿಸಬಹುದು ಎಂದು ಇಲ್ಲಿಯ ಬಿಡನಾಳದ ವಿನಾಯಕ ಮ್ಯಾಗೇರಿ ಎಂಬುವರಿಗೆ ಅಪರಿಚಿತರು 5.22 ಲಕ್ಷ ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾರೆ. ಅಪರಿಚಿತರು ವಿನಾಯಕ ಅವರಿಗೆ ಸಂಪರ್ಕಿಸಿ ಹಣ ಹೂಡಿಕೆ ಮಾಡಲು ತಿಳಿಸಿದ್ದಾರೆ. ಇದನ್ನು ನಂಬಿದ ವಿನಾಯಕ ಹಂತ ಹಂತವಾಗಿ 14.81 ಲಕ್ಷ ರೂ. ಹೂಡಿಕೆ ಮಾಡಿದ್ದರು. ಬಳಿಕ 9.58 ಲಕ್ಷ ರೂ. ಮರಳಿ ನೀಡಿದ್ದು, ಉಳಿದ ಹಣ ನೀಡದೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಕ್ಷುಲ್ಲಕ ಕಾರಣಕ್ಕೆ ಜಗಳ: ದೂರು, ಪ್ರತಿದೂರು ದಾಖಲು


ಹುಬ್ಬಳ್ಳಿ: ಕ್ಷುಲ್ಲಕ ಕಾರಣಕ್ಕೆ ಬಟ್ಟೆ ವ್ಯಾಪಾರಿ ಹಾಗೂ ಆಟೋ ರಿಕ್ಷಾ ಚಾಲಕ ನಡುವೆ ಜಗಳವಾಗಿದ್ದು, ಇಬ್ಬರು ಹೊಡೆದಾಡಿಕೊಂಡು ಜೀವ ಬೆದರಿಕೆ ಹಾಕಿರುವ ಕುರಿತು ಶಹರ ಪೊಲೀಸ್ ಠಾಣೆಯಲ್ಲಿ ದೂರು, ಪ್ರತಿದೂರು ದಾಖಲಾಗಿವೆ. ಜಾಫರ್ ಸಾಧಿಕ್ ಬೇಪಾರಿ ವಿರುದ್ಧ ಮಲ್ಲಿಕಜಾನ ಬಿಜಾಪುರ ದೂರು ನೀಡಿದರೆ ಮಲ್ಲಿಕಜಾನ್ ಎಂಬಾತ ಜಾಫರ್ ಸಾಧಿಕ್ ಸೇರಿದಂತೆ ಮೂವರ ವಿರುದ್ಧ ಪ್ರತಿದೂರು ದಾಖಲಿಸಿದ್ದಾನೆ. ಸಿಬಿಟಿಯ ನವಲೂರ ಡೈರಿ ಹತ್ತಿರ ಫುಟ್‌ಪಾತ್ ಮೇಲೆ ಬಟ್ಟೆ ವ್ಯಾಪಾರ ಮಾಡುವಾಗ ಆಟೋ ನಿಲ್ಲಿಸಿದ ಕಾರಣಕ್ಕೆ ಇಬ್ಬರ ಮಧ್ಯೆ ಜಗಳ ನಡೆದು, ಪರಸ್ಪರ ಹೊಡೆದಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಕಲಘಟಗಿ: ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಕಲಘಟಗಿ ತಾಲೂಕಿನ ಬೀರವಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಅನಿರೀಕ್ಷಿತ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಆರನೇ ತರಗತಿ ಮಕ್ಕಳಿಗೆ ಹಿಂದಿ ಪಠ್ಯ ಬೋಧನೆ ಮಾಡಿ, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಿದರು.

ದೇವಸ್ಥಾನದ ಸಮುದಾಯ ಭವನಕ್ಕೆ ಭೂಮಿಪೂಜೆ

ಅಣ್ಣಿಗೇರಿ: ಕುರುಬ ಸಮಾಜದ ಬಹುದಿನದ ಬೇಡಿಕೆಯಾದ ಶಲವಡಿ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಮುದಾಯ ಭವನ ನಿರ್ಮಿಸಲು ಅವರ ಮನವಿಗೆ ಸ್ಪಂದಿಸಿ 50 ಲಕ್ಷ ರೂ. ಅನುದಾನದಲ್ಲಿ ಕಟ್ಟಡ ಕಾಮಗಾರಿಯ ಭೂಮಿಪೂಜೆ ನೆರವೇರಿಸುತ್ತಿರುವುದು ನನಗೆ ಸಂತಸ ತಂದಿದೆ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು. ಅವರು ತಾಲೂಕಿನ ಶಲವಡಿ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಮುದಾಯ ಭವನ ಹಾಗೂ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಬೀರಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನದ ರೂ 5.00 ಲಕ್ಷ ವೆಚ್ಚದ ಭೂಮಿಪೂಜೆ ನೆರವೇರಿಸಿ ಮಾತನಾಡಿದದರು. ಸಾನಿಧ್ಯವನ್ನು ಗುರುಶಾಂತೇಶ್ವರ ಮಠದ ಗುರುಶಾಂತೇಶ್ವರ ಸ್ವಾಮೀಜಿ, ವಿರಕ್ತಮಠ ಬಸವಲಿಂಗ ಸ್ವಾಮೀಜಿ ಹಾಗೂ ತುಪ್ಪದಕುರಹಟ್ಟಿ ಗ್ರಾಮದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಭೂಸನೂರ ಮಠದ ಹಿರೀಯರಾದ ದೇವಪ್ಪ ರೋಣದ, ವಿ.ಸಿ. ಪಾಟೀಲ, ಉಮೇಶ ಶಿರೋಳ, ಅರುಣ ಮಜ್ಜಗಿ, ಮಲ್ಲಿಕಾರ್ಜುನ ಹಳ್ಳಿ, ಶ್ರೀನಿವಾಸ ಮರಡ್ಡಿ, ಶಾಂತಪ್ಪ ಕುರಹಟ್ಟಿ, ಮಾಂತೇಶ ವಗ್ಗರ, ಎಸ್.ಎಫ್. ನಡುವಿನಹಳ್ಳಿ, ವೀರಣ್ಣ ಹುರಕಡ್ಲಿ, ಶಾಂತವ್ವ ಪೂಜಾರ, ಶ್ರೀಶೈಲ ಬಸವರಡ್ಡಿ, ಗುರುಶಾಂತಪ್ಪ ಬಸಾಪೂರ, ದುಂಡಯ್ಯ ನಮಸ್ತೆಮಠ, ಹನಮಂತಪ್ಪ ಕಡಲಿಮಟ್ಟಿ, ಮಹಾಂತೇಶ ಗಡ್ಡಿ, ಮುತ್ತಪ್ಪ ಹುಚನಾಯ್ಕರ, ಸಂಗಪ್ಪ ಮಾದರ, ಹುಸೇನಸಾಬ ಯಾವಗಲ (ಮಾಸ್ತರ), ಬೀರಪ್ಪ ನಾಗನೂರ, ಗುರುಶಾಂತ ಕಂಬಳಿ, ದೇವಪ್ಪ ಉಡಚಣ್ಣವರ, ಹನಮಂತ ನೈನಾಪೂರ, ಬಸವರಾಜ ಗುಳೇದ, ರುದ್ರಗೌಡ ಎಮ್ಮಿ, ಷಣ್ಮುಖ ಕುಲಕರ್ಣಿ, ಗುರಪ್ಪ ಮರಡ್ಡಿ, ಶಿವಯೋಗಿ ಸವದತ್ತಿ ಸುರೇಶ ಕನಕರಡ್ಡಿ, ಶರಣಪ್ಪ ಪರಣ್ಣವರ, ವಿಷ್ಣು ಕಗದಾಳ, ಶ್ರೀಶೈಲ ತೋಟರ ಮುಂತರಾದವರಿದ್ದರು.



ಅಣ್ಣಿಗೇರಿ: ತಾಲೂಕಿನ ಶಲವಡಿ ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಮುದಾಯ ಭವನ ಹಾಗೂ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಬೀರಲಿಂಗೇಶ್ವರ ದೇವಸ್ಥಾನದ ಸಮುದಾಯ ಭವನದ ರೂ. 5.00 ಲಕ್ಷ ವೆಚ್ಚದಲ್ಲಿ ಶಾಸಕ ಎನ್.ಎಚ್. ಕೋನರಡಿ ಅವರು ಭೂಮಿಪೂಜೆ ನೆರವೇರಿಸಿದರು.

ಅಕ್ಕ ಪ್ರಶಸ್ತಿ ಪ್ರದಾನ ಸಮಾರಂಭ | ಗುರಮ್ಮ ಸಂಕಿನಮಠ ಪ್ರಶ್ನೆ

ರೈತರಿಗೇಕೆ ಕನ್ಯೆ ಕೊಡುತ್ತಿಲ್ಲ?

ಧಾರವಾಡ: ಪ್ರಸ್ತುತ ಸಮಾಜದಲ್ಲಿ ರೈತರ ಮದುವೆಗೆ ಕನ್ಯೆ ಕೊಡದಿರುವ ಅನಿಷ್ಟ ಪದ್ಧತಿ ತಲೆದೋರಿದೆ. ಜಗದ ಹೊಟ್ಟೆ ತುಂಬಿಸುವ ಕೃಷಿ ಕಾಯಕ ಯೋಗಿಗಳಿಗೆ ಏಕೆ ಹೆಣ್ಣು ಕೊಡುತ್ತಿಲ್ಲ? ಎಂದು ಸಮಾಜ ಸೇವಕಿ ಗುರಮ್ಮ ಪಂಪಯ್ಯ ಸಂಕಿನಮಠ ಪ್ರಶ್ನಿಸಿದರು.

ನಗರದ ಅಕ್ಕನ ಬಳಗದ ಮೃತ್ಯುಂಜಯ ಅಪ್ಪಗಳ ಭವನದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಅಕ್ಕ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಸಮಾಜದಲ್ಲಿ ರೈತರು, ಅವರ ಮಕ್ಕಳು ಎದುರಿಸುತ್ತಿರುವ ದೊಡ್ಡ ಸಮಸ್ಯೆ ಎಂದರೆ ಹೆಣ್ಣು ಸಿಗದಿರುವುದು ಎಂದರು.

ಪ್ರತಿಯೊಬ್ಬ ಪೋಷಕರು ತಮ್ಮ ಮಗಳಿಗೆ ಸರ್ಕಾರಿ ನೌಕರಿ ಅಥವಾ ನಗರದಲ್ಲಿ ನೆಲೆಸಿರುವ ವರನನ್ನೇ ಹುಡುಕುತ್ತಿದ್ದಾರೆ. ಆದರೆ ಜಗತ್ತಿಗೆ ಅನ್ನ ನೀಡುವ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಹಿಂದೇಟು ಹಾಕುವುದು ಏಕೆ? ಎಂದು ಪ್ರಶ್ನೆ ಮಾಡಿದರು.

ಬಸವಣ್ಣವರು ಕಾಯಕವೇ ಕೈಲಾಸವೆಂದು ಸಾರಿದ್ದು, ಮಣ್ಣಿನೊಂದಿಗೆ ಮಣ್ಣಾಗಿ ದುಡಿದು ನಮಗೆ ಆಹಾರ ನೀಡುವ ರೈತನಿಗಿಂತ ದೊಡ್ಡ ಉದ್ಯೋಗಿ ಯಾರಿಲ್ಲ, ರೈತರ ಮನೆತನಕ್ಕೆ ಹೆಣ್ಣು ಕೊಡುವುದು ಪುಣ್ಯ ಎಂದು ಪಾಲಕರು ಭಾವಿಸಬೇಕು ಎಂದರು.

ಕೇವಲ ಆಡಂಬರ ಮತ್ತು ನೌಕರಿಯ ಆಸೆಗಾಗಿ ರೈತರನ್ನು ಕಡೆಗಣಿಸುವುದು ಸಮಾಜದ ಅವನತಿಗೆ ದಾರಿಯಾಗಲಿದೆ. ಗ್ರಾಮೀಣರ ಬದುಕು, ಕೃಷಿ ಸಂಸ್ಕೃತಿ ಉಳಿಸಬೇಕಾದರೆ ರೈತ ಕುಟುಂಬಗಳಿಗೆ ನಾವು ಗೌರವ ನೀಡಬೇಕು ಎಂದು ಪ್ರತಿಪಾದಿಸಿದರು.

ಉದ್ಘಾಟಿಸಿದ ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಬಸವ ತತ್ವದಡಿ ಸಾಗುತ್ತಿರುವ ಅಕ್ಕನ ಬಳಗವು, ಕೇವಲ ಧಾರ್ಮಿಕ ಚಟುವಟಿಕೆಗಳಿಗೆ ಸೀಮಿತವಾಗದೆ ಮಹಿಳೆಯರಲ್ಲಿ ಆತ್ಮವಿಶ್ವಾಸ ತುಂಬುವ ಮತ್ತು ಸಾಧಕರನ್ನು ಬೆನ್ನುತಟ್ಟುವ ಕೆಲಸ ಮಾಡುವುದು ಶ್ಲಾಘಿಸಿದರು. ಗುರಮ್ಮ ಸಂಕಿನಮಠ ಅವರಿಗೆ ರೂ.10 ಸಾವಿರ ನಗದು, ಸ್ಮರಣಿಕೆ ಒಳಗೊಂಡ ಅಕ್ಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗೌರಮ್ಮ ನ್ಯಾಮತಿ, ನಿರ್ಮಲಾ ಗೆಜ್ಜಿ, ಪ್ರೇಮಾ ಸಂಗೊಂದಿಮಠ, ವನಜಾಕ್ಷಿ ಆಲದಕಟ್ಟಿ, ಸುನಂದಾ ಅಂಗಡಿ, ಶಾರದಾ ಕೌದಿ ಇದ್ದರು.



> ಅಕ್ಕನ ಬಳಗವು ಕಳೆದ ಹಲವು ದಶಕಗಳಿಂದ ಮಹಿಳೆಯರ ಸಬಲೀಕರಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ದೊಡ್ಡ ವೇದಿಕೆ ಒದಗಿಸುತ್ತ ಬಂದಿದೆ. ಬಸವಾದಿ ಶರಣರ ತತ್ವಗಳು ಇಂದಿನ ಸಮಾಜಕ್ಕೆ ಅತ್ಯಗತ್ಯ. ಮಹಿಳೆಯರನ್ನು ಗುರುತಿಸಿ ಪ್ರಶಸ್ತಿ ನೀಡುವ ಕಾರ್ಯ ಶ್ಲಾಘನೀಯ.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ


ಸಂಸ್ಕಾರ ನೀಡಿ

ದೇಶದಲ್ಲಿ ಮಹಿಳೆಯರಿಗೆ ದೊಡ್ಡ ಸ್ಥಾನವಿದೆ. ಕಿತ್ತೂರಾಣಿ ಚನ್ನಮ್ಮ, ಬೆಳವಣಿ ಮಲ್ಲಮ್ಮ, ಓಬವ್ವ ಹೀಗೆ ಸಾಕಷ್ಟು ಮಹಿಳೆಯರು ದೇಶಕ್ಕೆ ಕೊಡುಗೆ ನೀಡಿದ್ದಾರೆ. ಪ್ರತಿಯೊಬ್ಬ ಪಾಲಕರು ಮಗಳಿಗೆ ಸಂಸ್ಕಾರ ಕೊಡಬೇಕು ಎಂದು ಸಮಾಜ ಸೇವಕಿ ಗುರಮ್ಮ ಪಂಪಯ್ಯ ಸಂಕಿನಮಠ ಹೇಳಿದರು.

ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ

ನವಲಗುಂದ: ಶ್ರೀ ಸಾವಳಗಿಮಠ ಹಡಪದ ಗುರುಗಳ ಸಮುದಾಯ ಭವನ ರೂ. 40 ಲಕ್ಷ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಯುಗಾದಿ ಹಬ್ಬದಂದು ಭೂಮಿಪೂಜೆ ನೆರವೇರಿಸುತ್ತಿರುವುದು ನಮ್ಮ ಪುಣ್ಯ ಎಂದು ಶಾಸಕ ಎನ್.ಎಚ್. ಕೋನರಡ್ಡಿ ಹೇಳಿದರು.

ಅವರು ನಗರದ ಗುಡ್ಡದಕೇರಿ ಓಣಿಯಲ್ಲಿರುವ ಹಡಪದ ಸಮಾಜದ ಸಾವಳಗಿ ಮಠದ ಆವರಣದಲ್ಲಿ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಹಡಪದ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ 40 ಲಕ್ಷ ರೂ. ಅನುದಾನ ನೀಡಿ ಇತಿಹಾಸ ನಿರ್ಮಿಸಿದ ನವಲಗುಂದ ಶಾಸಕ ಎನ್.ಹೆಚ್. ಕೋನರಡ್ಡಿ ಅವರು ಸಮಾಜದ ಪರವಾಗಿ ಶಾಲು ಹೊದಿಸಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಎನ್.ಹೆಚ್. ಕೋನರಡ್ಡಿ ಹಾಗೂ ಪುತ್ರ ನವೀನ ಕೋನರಡ್ಡಿ ಕುಟುಂಬ ಸಮೇತರಾಗಿ ಉತ್ತರ ಕರ್ನಾಟಕದ ರಾಮಲಿಂಗ ಕಾಮಣ್ಣ ದೇವರ ಆಶೀರ್ವಾದವನ್ನು ಪಡೆದರು. ಸಾನ್ನಿಧ್ಯವನ್ನು ನವಲಗುಂದ ಅಜಾತ ನಾಗಲಿಂಗಸ್ವಾಮಿ ಮಠದ ವೀರೇಂದ್ರಸ್ವಾಮೀಜಿ, ಪಂಚಗ್ರಹ ಹಿರೇಮಠದ ಉತ್ತರಾಧಿಕಾರಿ ಗುರುಬಸವ ದೇವರು, ಸಮಾಜದ ಪದಾಧಿಕಾರಿಗಳಾದ ಜಿಲ್ಲಾಧ್ಯಕ್ಷ ಮಹಾರುದ್ರಪ್ಪ ಪಡೆಸೂರ, ಗೌರವ ಅಧ್ಯಕ್ಷ ಗಣೇಶ ಹಡಪದ, ಮಾಜಿ ಅಧ್ಯಕ್ಷ ವೀರಣ್ಣ ಬೆಳ್ಳಿಗಟ್ಟಿ, ಶಿವಕುಮಾರ ಅಣ್ಣಿಗೇರಿ, ಸಿದ್ದಪ್ಪ ನವಲಗುಂದ, ತಾಲೂಕು ಅಧ್ಯಕ್ಷ ವೀರಣ್ಣ ಹಡಪದ, ಫಕೀರೇಶ ಹಡಪದ, ತಿಪ್ಪಣ್ಣ ಹಡಪದ, ವೀರಪ್ಪ ಬೆಳ್ಳಿಗಡ್ಡಿ, ಪ್ರ.ಕಾ. ಸುರೇಶ ಹಡಪದ, ಡಿ.ಎನ್. ಹಡಪದ (ಸೊಟಕನಾಳ), ಮಲ್ಲಪ್ಪ ಹಡಪದ (ಬೆಳವಟಗಿ), ಚನ್ನಪ್ಪ ಹಡಪದ (ಬಸಾಪೂರ), ಪರಶುರಾಮ ಹಡಪದ, ತಿಪ್ಪಣ್ಣ ಚಾವಣಿಮನಿ, ಶಿವಪುತ್ರಪ್ಪ ಹಿಂದಿನಮನಿ, ಶಂಕ್ರಪ್ಪ ಹಡಪದ (ಖಜಾಂಜಿ), ಸದಸ್ಯರುಗಳಾದ ನಾಗಪ್ಪ ಹಡಪದ, ಬಸವರಾಜ ಹಡಪದ, ಮಲ್ಲಿಕಾರ್ಜುನ ಹಡಪದ (ನರೇಂದ್ರ), ಹಿರಿಯರಾದ ಜೀವನ ಪವಾರ, ಸಂತೋಷಗೌಡ ಪಾಟೀಲ, ಆನಂದ ಹವಳಕೋಡ, ಮೋದಿನಸಾಬ ಶಿರೂರ, ಅಧ್ಯಕ್ಷೆ ಶಾಂತಮ್ಮ ಹಡಪದ, ಶಾಂತವ್ವ ಬಸವರಾಜ ಹಡಪದ, ಸುಮಿತ್ರಾ ಹಿಂದಿನಮನಿ, ಯಲ್ಲವ್ವ ಹಡಪದ, ಸವಿತಾ ಹಡಪದ ಸೇರಿದಂತೆ ಮುಂತಾದವರಿದ್ದರು.



ಲವಣಗಿರಿ ಉತ್ಸವ: ಮೇದಾರ ಕೇತಯ್ಯರ ಕುರಿತು ಪ್ರವಚನ

ಉಪ್ಪಿನಬೆಟಗೇರಿ: ಶರಣರ ಜೀವನ ಬಹಳ ಸರಳ. ಆದರೆ ಭಕ್ತರ ಜೊತೆ ಇರುವುದು ಅಷ್ಟೇ ಕಷ್ಟ ಎಂದುಯಾದವಾಡ ಸಿದ್ಧಾರೂಢ ಮಠದ ಡಾ. ಆನಂದ ಸ್ವಾಮೀಜಿ ಹೇಳಿದರು.

ಗ್ರಾಮದ ವಿಶ್ವಗುರು ಬಸವಣ್ಣ ವೇದಿಕೆಯಲ್ಲಿ ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಲವಣಗಿರಿ ಉತ್ಸವದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. 8ನೇ ದಿನದ ಶರಣರ ಜೀವನ ದರ್ಶನದಲ್ಲಿ ಮೇದಾರ ಕೇತಯ್ಯ ಕುರಿತು ನಂದಿಕೇಶ್ವರ ಪಂಡಿತ ವೀರೇಶ್ವರ ಶಾಸ್ತ್ರಿಗಳು ಪ್ರವಚನ ನೀಡಿದರು.

ಸ್ವಾಮೀಜಿಯ ಜೀವನ ನೋಡಲು ಬಹು ಚಂದ. ಆದರೆ ಅವರ ನೋವು ಅವರಿಗೇ ಗೊತ್ತು. ತನ್ನ ತಂದೆ ತಾಯಿ, ಬಂಧು ಬಳಗ ಎಲ್ಲವನ್ನೂ ತೊರೆದು ಭಕ್ತರೇ ನನ್ನ ತಂದೆ ತಾಯಿ, ಬಂಧು ಬಳಗ ಎಂದು ತಿಳಿದಿರುವ ಭಕ್ತರ ಮಡಿಲಿನಲ್ಲಿರುವ ಕಂದಗಳು ನಾವು. ಸಕಾರಣವಿಲ್ಲದೇ ಒಬ್ಬರ ತೇಜೋವಧೆ ಮಾಡುವುದು ಸುಲಭ. ಆದರೆ ಅದರಿಂದ ಅವರು ಅನುಭವಿಸುವ ಸಂಕಟ ನೋವು ಅನುಭವಿಸಿದವರಿಗೆ ಮಾತ್ರ ಗೊತ್ತು. ಮಠ ಮಂದಿರಗಳಿಗೆ ಭಕ್ತರೇ ನಿಜವಾದ ಆಸ್ತಿ ಎಂದು ಶ್ರೀಗಳು ಭಾವುಕರಾದರು.

ಜೆಡಿಎಸ್ ಪಕ್ಷದ ಅಧ್ಯಕ್ಷ ಗುರುರಾಜ ಹುಣಸಿಮರದ ಮಾತನಾಡಿದರು. ಎಪಿಎಮ್‌ಸಿ ಮಾಜಿ ಉಪಾಧ್ಯಕ್ಷ ಕೃಷ್ಣಾ ಕೊಳ್ಳಾನಟ್ಟಿ, ಧಾರವಾಡ ಉದ್ದಿಮೆ ಶ್ರೀಶೈಲ ಗೋಕಾವಿ, ಮುತ್ತಣ್ಣ ಬಳ್ಳಾರಿ, ಈರಯ್ಯ ಪತ್ರಿಮಠ ಹಾಗೂ ಬೋಗೂರ, ಗುಳೇದಕೊಪ್ಪ, ಉಪ್ಪಿನಬೆಟಗೇರಿ ಗ್ರಾಮದ ಹಿರಿಯರನ್ನು ಕುಮಾರ ವಿರುಪಾಕ್ಷ ಸ್ವಾಮೀಜಿ ಸನ್ಮಾನಿಸಿದರು. ಗ್ರಾಮದ ಹಿರಿಯ ಮಲ್ಲೇಶಪ್ಪ ಭಬ್ಬಿ ಅಧ್ಯಕ್ಷತೆ ವಹಿಸಿದ್ದರು.

ಶರಣ ಬಸವರಾಜ ತಳವಾರ,ದೀನಬಂಧು ತಳವಾರ,ಅನ್ನ ಪ್ರಸಾದ ಸೇವೆ ಸಲ್ಲಿಸಿದರು. ಶಿಕ್ಷಕ ನ್ಯಾಯವಾದಿ ಗಂಗಪ್ಪ ಮೇದಾರ ನಿರೂಪಿಸಿದರು. ಗ್ರಾಮದ ವಿಶ್ವಗುರು ಬಸವಣ್ಣ ವೇದಿಕೆಯಲ್ಲಿ ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತವಾಗಿ ಮಾ.22ರಂದು ಸಂಜೆ 6 ಗಂಟೆಗೆ ನಾಡಿನ ಪೂಜ್ಯರ ಹಾಗೂ ಗಣ್ಯ ಮಾನ್ಯರು ಸೇರಿ ನಡೆಯುವ ಧರ್ಮ ಸಭೆಯಲ್ಲಿ ಕಾರ್ಮಿಕ ಖಾತೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಧಾರವಾಡ ಖ್ಯಾತ ವೈದ್ಯಡಾ. ಎಸ್.ಆರ್. ರಾಮನಗೌಡರ ಆಸ್ಪತ್ರೆಯ ತಜ್ಞರಿಂದ ಅಂದು ಬೆಳಗ್ಗೆ 10 ಗಂಟೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ.



ಮಾನವ ಧರ್ಮಕ್ಕೆ ಹಿತ ಬಯಸಿದ ರೇಣುಕಾಚಾರ್ಯರು: ಗುರುಸಿದ್ಧೇಶ್ವರ ಶ್ರೀ

ಕಲಘಟಗಿ: ನಾಲ್ಕು ಯುಗಗಳಲ್ಲಿ ಒಂದೊಂದು ಅವತಾರವೆತ್ತಿ, ತಮ್ಮ ಲೀಲೆಗಳಿಂದ ಮಾನವ ಧರ್ಮಕ್ಕೆ ಹಿತವನ್ನ ಬಯಸುವ ಮೂಲಕ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಘೋಷವಾಕ್ಯ ಸಾರಿದವರು ರೇಣುಕಾಚಾರ್ಯರು ಎಂದು ಶಿರಕೋಳ ಹಿರೇಮಠದ ಗುರುಸಿದ್ಧೇಶ್ವರ ಶಿವಾಚಾರ್ಯರು ಹೇಳಿದರು.

ಪಟ್ಟಣದ ಹನ್ನೆರಡು ಮಠದ ಸಭಾಭವನದಲ್ಲಿ ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾದ ಧರ್ಮಸಭೆಯಲ್ಲಿ ಭಾಗವಹಿಸಿ ಉಪದೇಶಾಮೃತ ನೀಡುತ್ತಾ ಅವರು ಮಾತನಾಡಿದರು.

ಸಾನ್ನಿಧ್ಯ ವಹಿಸಿದ್ದ ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯರು ಮಾತನಾಡಿ, ವೀರಶೈವ ಲಿಂಗಾಯತ ಧರ್ಮದ ಮೂಲತಃ ಸಿದ್ಧಾಂತಗಳನ್ನು ಪ್ರತಿಪಾದಿಸಲು ಮತ್ತು ಶೈವ ಪರಂಪರೆಯನ್ನು ಬಲಪಡಿಸಲು ರೇಣುಕಾಚಾರ್ಯರು ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದರು. ಅವರ ತತ್ವಗಳು ಇಂದು ಸಮಾಜದ ಸಮಾನತೆ, ಧಾರ್ಮಿಕ ಸಮರಸತೆ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಆಧುನಿಕ ದಾರಿದೀಪದಂತಿವೆ ಎಂದರು.

ಪಟ್ಟಣದ ಬೆಂಡಿಗೇರಿ ಓಣಿಯಲ್ಲಿನ ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದಲ್ಲಿ ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯರು, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಅವರ ಆಪ್ತಕಾರ್ಯದರ್ಶಿ ಹರಿಶಂಕರ ಮಠದ ರೇಣುಕಾಚಾರ್ಯರ ಭವ್ಯ ಮೂರ್ತಿಯನ್ನ ಲೋಕಾರ್ಪಣೆ ಮಾಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ನಾಗರಾಜ ಛಬ್ಬಿ, ಸಚಿವರ ಆಪ್ತಕಾರ್ಯದರ್ಶಿ ಹರಿಶಂಕರ ಮಠದ, ಜಂಗಮ ಕ್ಷೇಮಾಭಿವೃದ್ಧಿ ಸಂಘದ ತಲೂಕು ಅಧ್ಯಕ್ಷ ಅಜ್ಜಯ್ಯ ಹಿರೇಮಠ, ಬಿಜೆಪಿ ಜಿಲ್ಲಾಧ್ಯಕ್ಷ ನಿಂಗಪ್ಪ ಸುತಗಟ್ಟಿ, ತಾಲೂಕು ಅಧ್ಯಕ್ಷ ಯಲ್ಲಾರಿ ಶಿಂದೆ, ಜಾನಪದ ವಿದ್ವಾಂಸ ಎಂ.ಆರ್. ತೋಟಗಂಟಿ, ಐ.ಸಿ. ಗೋಕುಲ್, ಎಸ್.ವಿ.ತಡಸಮಠ, ಸಿ.ಬಿ. ಹೊನ್ನಿಹಳ್ಳಿ, ಬಾಳು ಖಾನಾಪುರ, ಬಾಬಣ್ಣ ಅಂಚಟಗೇರಿ, ಶಶಿಧರ್ ನಿಂಬಣ್ಣವರ್, ನರೇಶ ಮಲೆನಾಡು, ಶ್ರೀಶೈಲ ಸುತಾರ, ಬಸವರಾಜ ತಿಪ್ಪಣ್ಣವರ, ಬಿ.ವೈ. ಪಾಟೀಲ್, ಬಸಯ್ಯ ಹಿರೇಮಠ, ಸೋಮಲಿಂಗ ಒಡೆಯರ್, ಮಂಜಯ್ಯ ಅಣ್ಣಿಗೇರಿ, ಗಂಗಾಧರ್ ಚಿಕ್ಕಮಠ, ವಿರೇಶ ಹಾರೋಗೇರಿ, ಚನ್ನಬಸಯ್ಯ ಚಿಕ್ಕಮಠ, ಮಾಂತೇಶ್ ವಿರಕ್ತಮಠ, ಶಿವಯ್ಯ ತೇಗೂರಮಠ ಶಂಕರಗೌಡ ಭಾವಿಕಟ್ಟಿ, ಚರಣಗೌಡ ಪಾಟೀಲ್, ಶರಣಯ್ಯ ಬನ್ನಿಕೊಪ್ಪಮಠ, ಗುರುಪಾದಯ್ಯ ಹಿರೇಮಠ, ರುದ್ರಯ್ಯ ಹಿರೇಮಠ ಸೇರಿದಂತೆ ವೀರಶೈವ ಲಿಂಗಾಯತ ಹಾಗೂ ಜಂಗಮ ಸಮಾಜ ಬಾಂಧವರು ಪಾಲ್ಗೊಂಡಿದ್ದರು.



ಯುದ್ಧದಿಂದ ಜಾಗತಿಕ ಅಸ್ಥಿರತೆ ಹೆಚ್ಚಳ: ಪ್ರೊ. ಕವಿತಾ ಮಠದ

ಧಾರವಾಡ: ಜಾಗತಿಕ ಮಟ್ಟದಲ್ಲಿ ಅಮೇರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಅಸ್ಥಿರತೆ ಹೆಚ್ಚಿಸಿದೆ. ಇದು ವಾಣಿಜ್ಯ ಯುದ್ಧವಾಗಿ ಮಾರ್ಪಟ್ಟು, ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ ಎಂದು ಪುಣೆಯ ಇಂದಿರಾ ವಿವಿಯ ಡೀನ್ ಪ್ರೊ. ಕವಿತಾ ಮಠದ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡ ವ್ಯಾಪಾರ ಯುದ್ಧಗಳು, ಟ್ರಂಪ್ ಸುಂಕಗಳು ಮತ್ತು ಭಾರತ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದ ಅವರು, ಈ ಯುದ್ಧದಿಂದ ದೇಶ-ದೇಶಗಳ ಮಧ್ಯದ ಆಮದು-ರಫ್ತು ತೆರಿಗೆಯೂ ಹೆಚ್ಚಿಸುತ್ತಿದೆ ಎಂದರು. ವಿವಿಧ ವಸ್ತುಗಳ ರಫ್ತು ಹಾಗೂ ಆಮದು ಸುಂಕಗಳ ಹೆಚ್ಚಳದಿಂದ ದೇಶದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಭೌಗೋಳಿಕ ಮತ್ತು ರಾಜಕೀಯ ವಲಯದಲ್ಲಿ ಕೂಡ ಅನಿಶ್ಚಿತತೆ ಹೆಚ್ಚುತ್ತದೆ. ಸದ್ಯ 1.20 ಲಕ್ಷ ವಿದ್ಯುತ್ ಒಲೆಗಳು ಮಾರಾಟಕ್ಕೆ ಯುದ್ಧವೇ ಕಾರಣ ಎಂದರು. ಅಮೇರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಆಡಳಿತಾವಧಿಯಲ್ಲಿ ಅಮೇರಿಕಾ ಫಸ್ಟ್ ನೀತಿಯಡಿ ಹಲವು ದೇಶಗಳ ಮೇಲೆ ಸುಂಕಗಳನ್ನು ವಿಧಿಸಲಾಯಿತು. ಪರಿಣಾಮ ಭಾರತವೂ ಅನೇಕ ಸವಾಲು ಎದುರಿಸಿತು. ಇದರಿಂದ ಭಾರತದ ರಫ್ತುದಾರರಿಗೆ ನಷ್ಟ ಉಂಟಾಯಿತು. ಈ ಯುದ್ಧದಿಂದ ಉದ್ಭವಿಸುವ ಸಮಸ್ಯೆಗಳನ್ನು ಸರಿಪಡಿಸಲು ಬಹಳ ಸಮಯ ಹಿಡಿಯಲಿದೆ ಎಂದರು. ಪ್ರೊ. ಬಿ.ಎಚ್.ನಾಗೂರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ. ಎನ್.ಎಸ್.ಮುಗದೂರ, ವಿವಿಧ ವಿಭಾಗಗಳ ಪ್ರಾಧ್ಯಾಪಕರು ಸೇರಿದಂತೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ವಿವಿಧೆಡೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣದಿಂದ ಶಾಶ್ವತ ಪರಿಹಾರ

ಕುಂದಗೋಳ: ತಾಲೂಕಿನ ರೈತರ ಬಹುಕಾಲದ ಬೇಡಿಕೆಯಾಗಿದ್ದ ಬೆಣ್ಣೆಹಳ್ಳ ಸೇರಿದಂತೆ ಸ್ಥಳೀಯ ಹಳ್ಳಗಳ ಪ್ರವಾಹ ನಿಯಂತ್ರಣ ಹಾಗೂ ನೀರಾವರಿ ಸೌಲಭ್ಯ ವೃದ್ಧಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಂ.ಆರ್. ಪಾಟೀಲ ಚಾಲನೆ ನೀಡಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಡಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಭಾಗವಾಗಿ ಯಲಿನಾರಾಯಣಪುರ - ಶಿರಗುಪ್ಪಿ ಗ್ರಾಮದ ಸಮೀಪ ಬೆಣ್ಣೆಹಳ್ಳಕ್ಕೆ ಅಡ್ಡಲಾಗಿ ಬ್ರಿಜ್ ಕಮ್ ಬ್ಯಾರೇಜ್ (ಬಿ.ಸಿ.ಬಿ) ನಿರ್ಮಾಣ, ಹಿರೇನರ್ತಿ ಹಾಗೂ ಚಾಕಲಬ್ಬಿ ಗ್ರಾಮದ ಬಳಿ ಹರಿಯುವ ಗೊಗ್ಗಿ ಹಳ್ಳಕ್ಕೆ ತಡೆಗೋಡೆ ಸಹಿತ ಬ್ಯಾರೇಜ್ ನಿರ್ಮಾಣ ಮತ್ತು ಚಿಕ್ಕನರ್ತಿ ಗ್ರಾಮದಲ್ಲಿ ಬಾಂದಾರ ನಿರ್ಮಾಣ ಕಾಮಗಾರಿಗಳಿಗೆ ಸರಣಿ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ಬೆಣ್ಣೆಹಳ್ಳದ ಪ್ರವಾಹದಿಂದ ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗುತ್ತಿತ್ತು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ವಿವಿಧೆಡೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕರು ತಿಳಿಸಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ವಿಶೇಷ ಆಸಕ್ತಿ ಹಾಗೂ ಶಿಫಾರಸಿನ ಮೇರೆಗೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಈ ಮಹತ್ವದ ಯೋಜನೆಗಳು ಮಂಜೂರಾಗಿವೆ. ಧಾರವಾಡ ಜಿಲ್ಲೆಯಲ್ಲೇ ಕುಂದಗೋಳ ಮತಕ್ಷೇತ್ರಕ್ಕೆ ಹೆಚ್ಚಿನ ಅನುದಾನ ದೊರೆತಿರುವುದು ಸಂತಸದ ವಿಚಾರವಾಗಿದ್ದು, ಕೇಂದ್ರ ಸರ್ಕಾರದ ಸಹಕಾರದಿಂದ ಈ ಭಾಗದ ಕೃಷಿ ಚಟುವಟಿಕೆಗಳಿಗೆ ಹೊಸ ಉತ್ತೇಜನ ದೊರೆಯಲಿದೆ ಎಂದರು.

ಕಾರ್ಯಕ್ರಮದಲ್ಲಿ ಮಾಲತೇಶ ಶ್ಯಾಗೋಟಿ, ದಾನಪ್ಪ ಗಂಗಾಯಿ, ನಾಗನಗೌಡ ಸಾತ್ಮಾರ, ರವಿಗೌಡ ಪಾಟೀಲ, ಡಿ.ವೈ. ಲಕ್ಕನಗೌಡ್ರ, ಪ್ರಕಾಶ ಕೂಬಿಹಾಳ, ಶಂಕರಗೌಡ ದೊಡ್ಡಮನಿ, ಪಕ್ಕೀರಗೌಡ, ಮಲ್ಲಿಕಾರ್ಜುನ ಸೊರಟೂರ, ಅಪ್ಪಣ್ಣ ನದಾಫ್, ಗುರುಪಾದ ಸ್ವಾದಿ, ಸಂಜುಕುಮಾರ ಸೋಮರಡ್ಡಿ, ಅಂದಪ್ಪ ಶಾನವಾಡ ಸೇರಿದಂತೆ ಹಲವು ಮುಖಂಡರು, ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.



ಸ್ವರ್ಣ ವಿನಾಯಕನ 12ನೇ ಮಹೋತ್ಸವ ಅದ್ಧೂರಿ ಆಚರಣೆ

ಲೋಕ ಶಾಂತಿ, ಸಮೃದ್ಧಿಗೆ ಸಂಕಲ್ಪ

ಹುಬ್ಬಳ್ಳಿ: ಉದ್ಯಮದ ಬೆಳವಣಿಗೆಯ ಜೊತೆಗೆ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವ ಅಪೂರ್ವ ಸಂದೇಶವನ್ನು ಸಾರುವ ರೀತಿಯಲ್ಲಿ ಸ್ವರ್ಣಾ ಗ್ರೂಪ್ ಆಫ್ ಕಂಪನಿಯ ವತಿಯಿಂದ ಸ್ವರ್ಣ ವಿನಾಯಕ ದೇವಾಲಯದ 12ನೇ ವಾರ್ಷಿಕೋತ್ಸವವನ್ನು ಭಕ್ತಿಭಾವದಿಂದ ಹಾಗೂ ಅದ್ಧೂರಿಯಾಗಿ ಆಚರಿಸಲಾಯಿತು.

ತಾಲೂಕಿನ ಚಳಮಟ್ಟಿ ಗ್ರಾಮದ ಹ'ೂ ರ'ವ' ಲ ಯ ು ದ'ಲ್ಲಿ ರ' ು ವ' ಸ್ವರ್ಣಾ ಗ್ರೂಪ್ ಫ್ಯಾಕ್ಟರಿ ಆವರಣದಲ್ಲಿ ಸ್ಥಾಪಿತವಾಗಿರುವ ವಿಘ್ನೇಶ್ವರ ದೇವಾಲಯವು ಕಳೆದ 12 ವರ್ಷಗಳಿಂದ ಭಕ್ತರಿಗೆ ಆಧ್ಯಾತ್ಮಿಕ ಕೇಂದ್ರವಾಗಿದ್ದು, ಈ ವಾರ್ಷಿಕೋತ್ಸವವು ವಿಶೇಷ ಮಹತ್ವ ಪಡೆದುಕೊಂಡಿತು.

ಈ ಅಂಗವಾಗಿ ಮೂರು ದಿನಗಳ ಕಾಲ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಮೊದಲ ದಿನ ಆಶ್ಲೇಷಾ ಬಲಿ ಹಾಗೂ ಮೃತ್ಯುಂಜಯ ಹೋಮ ನಡೆದರೆ, ಎರಡನೇ ದಿನ ಚಂಡಿಕಾ ಹೋಮ ಮತ್ತು ಗಣ ಹೋಮಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು.

ಶನಿವಾರ ಸಂಸ್ಥೆಯ ಮುಖ್ಯಸ್ಥ ಡಾ. ಸಿ.ಎಚ್.ವಿ.ಎಸ್.ವಿ ಪ್ರಸಾದ ಹಾಗೂ ಅವರ ಪತ್ನಿ ಲೋಕ ಕಲ್ಯಾಣ, ಶಾಂತಿ ಮತ್ತು ಸಮೃದ್ಧಿಗಾಗಿ ವಿಶೇಷಪೂಜೆ ಸಲ್ಲಿಸಿದರು. ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಅಶಾಂತಿ ಹಾಗೂ ಸಂಘರ್ಷಗಳು ನಿವಾರಣೆಯಾಗಲಿ ಎಂಬ ಸಂಕಲ್ಪವನ್ನು ಈ ಧಾರ್ಮಿಕ ಕಾರ್ಯಕ್ರಮದ ಮೂಲಕ ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ಭಕ್ತರು, ಸಿಬ್ಬಂದಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಪ್ರಸಾದ ವಿತರಣೆ ಮಾಡಲಾಯಿತು. ಚಳಮಟ್ಟಿ, ಚವರಗುಡ್ಡ ಹಾಗೂ ಅಂಚಟಗೇರಿ ಭಾಗದ ಜನರು ಡಾ. ಪ್ರಸಾದ ಅವರ ಧಾರ್ಮಿಕತೆ ಮತ್ತು ಸಾಮಾಜಿಕ ಕಾಳಜಿಯನ್ನು ಕೊಂಡಾಡಿದರು.

ಈ ಸಂದರ್ಭದಲ್ಲಿ ಉದ್ಯಮಿಗಳಾದ ಡಾ.ವಿಜಯ ಸಂಕೇಶ್ವರ, ಆನಂದ ಸಂಕೇಶ್ವರ, ನಂದಕುಮಾರ, ಗೋವಿಂದ ಜೋಶಿ, ಅಶೋಕ ಶೆಟ್ಟರ್, ಶೇಷಗಿರಿ ಕುಲಕರ್ಣಿ, ಜಗದೀಶ್ ಹಿರೇಮಠ, ಅರವಿಂದ ಕಲಬುರ್ಗಿ, ಮಹದೇವ ಕರಮರಿ ಸೇರಿದಂತೆ ಮುಂತಾದ ಗಣ್ಯರು ಪಾಲ್ಗೊಂಡಿದ್ದರು.



ಕಿರುಸುದ್ದಿ

ಅಂಜನಾದ್ರಿಗೆ ಬಂದಿದ್ದ ಪುನೀತ್ ಕೆರೆಹಳ್ಳಿಗೆ ಪೊಲೀಸ್ ನಿರ್ಬಂಧ

◆**ಗಂಗಾವತಿ:** ಪೌರಾಣಿಕ ಪ್ರಸಿದ್ಧ, ಹನುಮ ಜನ್ಮಸ್ಥಳ ಅಂಜನಾದ್ರಿ ಬೆಟ್ಟಕ್ಕೆ ಬಂದಿದ್ದ ಹಿಂದು ಪರ ಸಂಘಟನೆ ಮುಖಂಡ ಪುನೀತ್ ಕೆರೆಹಳ್ಳಿ ಅವರನ್ನು ಪೊಲೀಸರು ಶನಿವಾರ ತಡೆದಿದ್ದಾರೆ. ಪುನೀತ್ ಕೆರೆಹಳ್ಳಿ ಅಂಜನಾದ್ರಿ ಭೇಟಿಯಿಂದ ತಾಲೂಕಿನಲ್ಲಿ ಶಾಂತಿ-ಸುವ್ಯವಸ್ಥೆಗೆ



ಧಕ್ಕೆ ಆಗಬಹುದು ಎಂಬ ಮುನ್ನೆಚ್ಚರಿಕೆಯಾಗಿ ಕ್ರಮ ಕೈಗೊಂಡಿದ್ದಾಗಿ ಜಿಲ್ಲಾಡಳಿತ ಹೇಳಿದ್ದು, ಪೊಲೀಸ್ ಕಣ್ಗಾವಲಿನಲ್ಲೇ ಕೆರೆಹಳ್ಳಿ ಹನುಮಂತನ ದರ್ಶನ ಪಡೆಯುವಂತಾಯಿತು. ಕೊಪ್ಪಳ ಜಿಲ್ಲಾಧಿಕಾರಿ ಆದೇಶದ ಹಿನ್ನೆಲೆ ಕೆರೆಹಳ್ಳಿ ಅಂಜನಾದ್ರಿ ಬೆಟ್ಟಕ್ಕೆ ತೆರಳದಂತೆ ಪೊಲೀಸರು ತಡೆದಿದ್ದಾರೆ. ಜೊತೆಗೆ ಸ್ಥಳದಲ್ಲೇ ನೋಟಿಸ್ ನೀಡಲು ಮುಂದಾಗಿದ್ದರು. ಜಿಲ್ಲಾಡಳಿತದ ಈ ಕ್ರಮಕ್ಕೆ ಪುನೀತ್ ಕೆರೆಹಳ್ಳಿ ತೀವ್ರ ವಿರೋಧ ವ್ಯಕ್ತಪಡಿಸಿದರು. ತಮಗೆ ವಿಧಿಸಲಾಗಿರುವ ನಿರ್ಬಂಧದ ಕುರಿತು ದಾಖಲೆ ನೀಡುವಂತೆ ಅಧಿಕಾರಿಗಳೊಂದಿಗೆ ಕೆಲಕಾಲ ವಾಗ್ವಾದ ನಡೆಸಿದರು. ಕೆಲ ಹೊತ್ತಿನ ನಂತರ ವಾತಾವರಣ ತಿಳಿಗೊಳಿಸಲು ಮುಂದಾದ ಪೊಲೀಸರು, ಅಂತಿಮವಾಗಿ ಪೊಲೀಸ್ ಕಣ್ಗಾವಲಿನಲ್ಲಿಯೇ ಪುನೀತ್ ಕೆರೆಯಳ್ಳಿ ಅವರನ್ನು ಅಂಜನಾದ್ರಿ ಬೆಟ್ಟಕ್ಕೆ ಕರೆದೊಯ್ಯಲಾಯಿತು. ಪೊಲೀಸರ ಜೊತೆಗೆ ಆಂಜನೇಯ ಸ್ವಾಮಿ ದರ್ಶನ ಮಾಡಿಸಿದರು. ದರ್ಶನ ಮುಗಿದ ಬಳಿಕ ಪೊಲೀಸರು ಅವರನ್ನು ಸುರಕ್ಷಿತವಾಗಿ ಹೊಸಪೇಟೆ ವರೆಗೆ ಕರೆದುಕೊಂಡು ಹೋಗಿ ಬಿಟ್ಟು ಬಂದಿದ್ದಾರೆ ಎನ್ನಲಾಗಿದೆ.

ಅಕ್ರಮ ಜಾನುವಾರು ವಶ: ಪ್ರಕರಣ ದಾಖಲು

◆**ಭಟ್ಕಳ:** ಅಕ್ರಮವಾಗಿ ಜಾನುವಾರು ಸಾಗಾಟ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರ ವಿರುದ್ಧ ಇಲ್ಲಿನ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಆರೋಪಿತರನ್ನು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಹಿರೇಬೆಂಡೆಗೇರಿಯ ನಿವಾಸಿ ಹಜರತ್ ಅಲಿ ತಶೀಲ್ದಾರ ಹಾಗೂ ಧಾರವಾಡ ಜಿಲ್ಲೆಯ ಕಳಘಟಗಿ ತಾಲೂಕಿನ ನಾಲಬಂಧ ಓಣಿಯ ಮೊಹಮ್ಮದ ಆಸೀಫ್ ಎಂದು ಗುರುತಿಸಲಾಗಿದೆ. ಶಿರಾಲಿಯಿಂದ ಭಟ್ಕಳ ಕಡೆಗೆ ಟಾಟಾ ಲಾರಿಯಲ್ಲಿ ಸುಮಾರು 14 ಲಕ್ಷ ರೂ.ಮೌಲ್ಯದ 14 ಜಾನುವಾರುಗಳನ್ನು ಹಿಂಸಾತ್ಮಕವಾಗಿ ಕಟ್ಟಿ, ನೀರು ಮತ್ತು ಹುಲ್ಲು ನೀಡದೆ ವಧೆ ಮಾಡುವ ಉದ್ದೇಶದಿಂದ ಸಾಗಾಟ ಮಾಡಲಾಗುತ್ತಿತ್ತು ಎಂದು ಆರೋಪಿಸಲಾಗಿದೆ. ಪೊಲೀಸರು ಲಾರಿ ಸಹಿತ ಜಾನುವಾರುಗಳನ್ನು ವಶಕ್ಕೆ ಪಡೆದು ಪರಿಶೀಲಿಸುತ್ತಿರುವಾಗ ಯಾವುದೇ ಪರವಾನಿಗೆಯೂ ಸಹ ಇಲ್ಲ ಎನ್ನುವುದು ಬೆಳಕಿಗೆ ಬಂದಿದೆ. ಪರಿಶೀಲನೆ ವೇಳೆ ಹಜರತ್ ಅಲಿ ತಹಶೀಲ್ದಾರ್ ಪರಾರಿಯಾಗಿದ್ದು, ಚಾಲಕ ಮೊಹಮ್ಮದ ಆಸೀಫ್ ವಾಹನ ಸಮೇತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಈ ಸಂಬಂಧ ಎಸ್.ಐ. ಮಲ್ಲಿಕಾರ್ಜುನಯ್ಯ ಕೊರಾಣಿ ಅವರು ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ದೂರು ದಾಖಲಿಸಿದ್ದಾರೆ.

9 ಜಾನುವಾರು ರಕ್ಷಣೆ

◆**ಭಟ್ಕಳ:** ಅಕ್ರಮವಾಗಿ ಜಾನುವಾರುಗಳನ್ನು ಸಾಗಾಟ ಮಾಡುತ್ತಿದ್ದ ಪ್ರಕರಣವನ್ನು ಭಟ್ಕಳ ಗ್ರಾಮೀಣ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ವೆಂಕಟೇಶ ಮುರನಾಳ ಅವರ ನೇತೃತ್ವದಲ್ಲಿ ದಾಳಿ ನಡೆಸಿ ಜಾನುವಾರುಗಳನ್ನು ರಕ್ಷಣೆ ಮಾಡಲಾಯಿತು. ಜಾಗಟೇಬಾಲ್ ಪ್ರದೇಶದ ಮ್ಯಾಂಗೋ ಫಾರ್ಮ್ ಹತ್ತಿರ ವಾಸವಾಗಿರುವ ಮುಸದ್ದೀಕ್ (36) ತಂದೆ ಅಬ್ದುಲ್ ರೆಹಮಾನ ಹಾಗೂ ಇತರರು ಸೇರಿ, ವಧೆ ಮಾಡಿ ಮಾಂಸ ಮಾರಾಟ ಮಾಡುವ ಉದ್ದೇಶದಿಂದ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ಜಾನುವಾರುಗಳನ್ನು ಸಾಗಾಟ ಮಾಡಿರುವ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ದಾಳಿ ನಡೆಸಿ ಜಾನುವಾರುಗಳನ್ನು ವಶಕ್ಕೆ ಪಡೆದಿದ್ದಾರೆ. ಆರೋಪಿತರು ಸುಮಾರು 9 ಲಕ್ಷ ರೂ. ಮೌಲ್ಯದ 9 ಜಾನುವಾರುಗಳನ್ನು ಖರೀದಿ ಮಾಡಿ ಯಾವುದೋ ವಾಹನದಲ್ಲಿ ಭಟ್ಕಳಕ್ಕೆ ಸಾಗಾಟ ಮಾಡಿ ಕಟ್ಟಿ ಹಾಕಿಕೊಂಡಿದ್ದು ಮಾಹಿತಿ ದೊರೆತು ಪೊಲೀಸರು ದಾಳಿ ಮಾಡಿದ ವೇಳೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಈ ಬಗ್ಗೆ ಗ್ರಾಮೀಣ ಠಾಣೆ ಪಿಎಸ್ಐ ಮಲ್ಲಿಕಾರ್ಜುನ ಕೊರಾಣಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸಿದ್ದಾರೆ.

5.26 ಲಕ್ಷ ರೂ. ವಂಚನೆ

◆**ಹುಬ್ಬಳ್ಳಿ:** ಅಪರಿಚಿತ ವ್ಯಕ್ತಿ ನಗರದ ಪ್ರದೀಪ್ ಬಿ ಎಂಬುವರಿಗೆ ಟಾಸ್ಕ್ ಕಂಪ್ಲೀಟ್ ಮಾಡಿ ಲಾಭ ಮಾಡಬಹುದು ಎಂದು ನಂಬಿಸಿ ನಗರದ ವ್ಯಕ್ತಿಗೆ 5.26 ಲಕ್ಷ ರೂ.ವಂಚಿಸಲಾಗಿದೆ. ಹಂತ ಹಂತವಾಗಿ 5.26 ಲಕ್ಷ ರೂಪಾಯಿ ಹಣ ಹಾಕಿಸಿಕೊಂಡು ವಂಚಿಸಲಾಗಿದೆ. ಈ ಕುರಿತು ಹು-ಧಾ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ಸಿದ್ದರಾಮಯ್ಯ ಸೇರಿ ಹಲವು ಸಚಿವರು ಭಾಗಿ: ಸಚಿವ ತಿಮ್ಮಾಪುರ

ಮಾ.23ಕ್ಕೆ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

◆**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆಗೆ ಕಣಕ್ಕೆ ಇಳಿಯಲಿರುವ ಕಾಂಗ್ರೆಸ್ ಅಭ್ಯರ್ಥಿ ಮಾ.23ರಂದು ನಾಮಪತ್ರ ಸಲ್ಲಿಸಲಿದ್ದು, ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಚಿವ ಸಂಪುಟದ ಹಲವು ಸಚಿವರು ಬರಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.



ನಗರದ ಕಾಂಗ್ರೆಸ್ ಕಛೇರಿಯಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 23ರಂದು ಮಧ್ಯಾಹ್ನ 12.30ರಿಂದ 2.30ರ ವೇಳೆಯಲ್ಲಿ ನಾಮಪತ್ರವನ್ನು ಅಭ್ಯರ್ಥಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸುವ ಮುನ್ನ ನವನಗರದ ಕಾಳಿದಾಸ ಸರ್ಕಲ್‌ದಿಂದ ನಡೆಯುವ ಕಾರ್ಯಕರ್ತರ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಾಮಪತ್ರ ಸಲ್ಲಿಸಲಾಗುವುದು ಎಂದು ಹೇಳಿದರು.

ದಿ.ಎಚ್.ವೈ.ಮೇಟಿಯವರ ಕುಟುಂಬದವರಿಗೆ ಟಿಕೆಟ್ ನೀಡಬೇಕು ಎಂದು ಜಿಲ್ಲೆಯ ಎಲ್ಲ ನಾಯಕರು ಪಕ್ಷದ ಹೈ ಕಮಾಂಡ್‌ಗೆ ತಿಳಿಸಿದೆ. ಯಾರೂ ಆಕಾಂಕ್ಷಿಗಳು ಇಲ್ಲ. ಎಐಸಿಸಿ ಅಧ್ಯಕ್ಷರು, ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಸೇರಿಕೊಂಡು ಟಿಕೆಟ್ ಫೈನಲ್ ಮಾಡಲಿದ್ದಾರೆ ಎಂದು ಹೇಳಿದರು.

ದಿ.ಶಾಸಕ ಎಚ್.ವೈ.ಮೇಟಿಯವರು ಮನೆ ಮನೆಯಲ್ಲಿ ಅಭಿವೃದ್ಧಿಯಾಗಬೇಕು. ಕ್ಷೇತ್ರದ ಜನರಿಗೆ ಗೌರವ ಕೊಡುವ ಕೆಲಸ ಮಾಡಿದ್ದರು. ಅವರಂತೆ ಅವರ ಮಕ್ಕಳು ನಡೆದುಕೊಂಡು ಹೋಗಲಿದ್ದಾರೆ. ಶಾಸಕರಾದ ಬಳಿಕ ಹೇಗಿರಬೇಕು ಎಂದು ತೋರಿಸಿಕೊಟ್ಟಿದ್ದಾರೆ. ಈ ಚುನಾವಣೆ ಬಹುತೇಕ ಕಾಂಗ್ರೆಸ್‌ಪಕ್ಷದ ಗೆಲುವಿಗೆ ತೊಂದರೆ ಇಲ್ಲ. ಹಲವಾರು ನಾಯಕರು ಸೇರಿ ಕೆಲಸ ಮಾಡುತ್ತೇವೆ. ಮೇಟಿ ನಡೆದುಕೊಂಡ ಬಂದ ದಾರಿ, ಕಾರ್ಯಕರ್ತರಿಗೆ ಕೊಟ್ಟ ಗೌರವ ಗಮನದಲ್ಲಿಟ್ಟುಕೊಂಡು ಲೆಕ್ಕಾಚಾರ ಮಾಡಿದಾಗ ಚುನಾವಣಾ ಗೆಲುವು ಖಚಿತವಾಗಲಿದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದಿಂದ ಯಾರೂ ಬಿಜೆಪಿಗೆ ಹೋಗುವುದಿಲ್ಲ. ಬಿಜೆಪಿಗೆ ಅಲೆದಾಡುವ ಸ್ಥಿತಿ ಬಂದಿದೆ. ಹೀಗಾಗಿ ಅವರು ಅಲೆದಾಡುತ್ತಿದ್ದಾರೆ. ಎಲ್ಲಾ ನಾಯಕರು ಸೇರಿಕೊಂಡು ಕ್ಷೇತ್ರದಲ್ಲಿ ಪ್ರಚಾರ ನಡೆಸಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುತ್ತೇವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಯುವ ಮುಖಂಡ ಸಂತೋಷ ಹೋಕ್ರಾಣಿ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಯಾವ ಪಕ್ಷಕ್ಕೂ ಹೋಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಚಿತ್ರದುರ್ಗದ ಸಂಸದರು ಸುಳ್ಳು ಹೇಳಿಯೇ ಅಧಿಕಾರಕ್ಕೆ ಬಂದಿದ್ದಾರೆ. ನೀರಾವರಿ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಭಾಗಕ್ಕೆ ಏನು ಕೊಡುಗೆ ನೀಡಿದ್ದಾರೆ. ಮುಖ್ಯಮಂತ್ರಿ ಕುರಿತು ಮಾತನಾಡುವ ನೈತಿಕತೆ ಅವರಿಗಿಲ್ಲ, ಸುಳ್ಳು ಹೇಳುವವರು ನಾವಲ್ಲ ಅವರು ಎಂದರು.

ಬಿಜೆಪಿ ಕಾರ್ಯಕರ್ತರಿಂದ ಮನೆ ಮನೆ ಸಂಪರ್ಕ

◆**ಬಾಗಲಕೋಟೆ:** ಅಭಿವೃದ್ಧಿಗಾಗಿ ಬಾಗಲಕೋಟೆ ಜನ ಈ ಬಾರಿ ಬಿಜೆಪಿಗೆ ಮತ ನೀಡಲು ಸಿದ್ಧರಾಗಿದ್ದು ಉಪಚುನಾವಣೆಯ ಸಮರಕ್ಕೆ ಬಿಜೆಪಿ ಸಂಘಟಿತವಾಗಿ ಸಜ್ಜಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ಹೇಳಿದರು.

ನಗರದ 22,23,15 ಮತ್ತು 2ನೇ ವಾರ್ಡ್‌ನಲ್ಲಿ ಉಪಚುನಾವಣೆನಿಮಿತ್ತ ಬಿಜೆಪಿ ಕಾರ್ಯಕರ್ತರಿಂದ ಮನೆ ಮನೆ ಸಂಪರ್ಕ ಮಾಡಿ ಮತಯಾಚನೆ ಮಾಡಿ ಮಾತನಾಡಿದ ಅವರು, ಬಾಗಲಕೋಟೆ ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಅಭಿವೃದ್ಧಿ ಶೂನ್ಯವಾಗಿದ್ದು, ನಗರದ ಸ್ವಚ್ಛತೆ, ಬಿಟಿಡಿಎಯಲ್ಲಿ ಸಂತ್ರಸ್ತರಿಗೆ ಸಿಗದ ಪರಿಹಾರ, ನಿಂತೂ ಹೋದ ಜನಸಾಮನ್ಯರ ಕೆಲಸಗಳಿಂದಾಗಿ ಜನತೆ ಬೇಸತ್ತು ಹೋಗಿದ್ದಾರೆ. ಈ ಚುನಾವಣೆಯಲ್ಲಿ ಎಲ್ಲಬಾಗಲಕೋಟೆ ಜನ ಬಿಜೆಪಿಗೆ ಮತ ನೀಡಲು ಸಿದ್ದರಾಗಿದ್ದಾರೆ, ಜನಸೇವೆಯೇ ನಮ್ಮ ಗುರಿ, ಉಪಚುನಾವಣೆ ಸಮರಕ್ಕೆ ಬಿಜೆಪಿ ಸಜ್ಜಾಗಿದೆ. ಖಂಡಿತ ಬಿಜೆಪಿ ಗೆಲ್ಲುತ್ತದೆ ಎಂದರು.

ಮನೆ ಮನೆ ಸಂಪರ್ಕದಲ್ಲಿ ಅಂಬಾಜಿ ಜೋಶಿ, ಯಲ್ಲಪ್ಪ ಭಜಂತ್ರಿ, ರಾಜು ಬಾಡದ, ಗಣೇಶ ಲಗಳಿ, ಸುರೇಶ ಪವಾರ, ಬಿ.ಎಲ್ .ಭಜಂತ್ರಿ, ರಮೇಶ ಕಾಂಬಳೆ, ಸುರೇಶ ಲಮಾಣಿ, ಸಂತೋಷ ಪಡಸಲಗಿ, ಅನೀಲ ಚವ್ಹಾಣ, ರವಿ ರಾಠೋಡ, ಸಾಗರ ಚವ್ಹಾಣ, ವಿಠ್ಠಲ್ ಅಂಬಿಗೇರ, ಯಮನೂರಿ ಅಂಬಿಗೇರ, ಕೆ.ಟಿ.ಲಮಾನಿ, ಈರಪ್ಪ ಪೂಜಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.





ಬಾಗಲಕೋಟೆ: ಬಿಜೆಪಿ ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಹಾಗೂ ಜಿಲ್ಲಾಧ್ಯಕ್ಷರಾದ ಶಾಂತಗೌಡ ಪಾಟೀಲ ಅವರು ಬಾಗಲಕೋಟೆ ಉಪ ಚುನಾವಣೆ ಬಿಜೆಪಿ ಅಭ್ಯರ್ಥಿಯಾದ ಡಾ.ವೀರಣ್ಣ ಚರಂತಿಮಠ ಅವರಿಗೆ ಪಕ್ಷದ ಅಧಿಕೃತ ಬಿ.ಫಾರ್ಮ್ ನೀಡಿದರು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಮಹೇಶ ಅಥಣಿ, ಮಹಾಂತೇಶ ತೆಟ್ಟರ, ರಾಜು ಪಾಟೀಲ ಇದ್ದರು.

ಅಮ್ಮಿನಬಾವಿಯಲ್ಲಿ ಧರ್ಮ ಜಾಗೃತಿ ಸಮಾವೇಶ

ಸಾರ್ಥಕ ಜೀವನದಿಂದ ಸಾಕ್ಷಾತ್ಕಾರ ಹೊಂದಿ: ಶ್ರೀಗಳು

◆**ಉಪ್ಪಿನಬೆಟಗೇರಿ:** ಬದುಕಿನ ಆದರ್ಶದ ಮೌಲ್ಯಗಳ ನೆರಳಿನಲ್ಲಿ ಮೊದಲು ಮಾನವನಾಗಲು ರೂಢಿಸಿಕೊಂಡು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ ಎಲ್ಲರಿಗೂ ಸ್ಮರಣೀಯವಾಗುವ ಸಾರ್ಥಕ ಜೀವನದಿಂದ ಸಾಕ್ಷಾತ್ಕಾರ ಹೊಂದಲು ಪ್ರಯತ್ನಿಸಬೇಕೆಂದು ಬಾಳೆಹೊನ್ನೂರಿನ ರಂಭಾಪುರಿ ಪೀಠದ ಶ್ರೀ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ನುಡಿದರು.

ಅವರು ಹತ್ತಿರದ ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಶ್ರೀ ಗುರುಶಾಂತಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ರಾತ್ರಿ ಹಮ್ಮಿಕೊಂಡಿದ್ದ ಧರ್ಮ ಜಾಗೃತಿ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತೀಯರು ಭಗವಂತನೊಂದಿಗೆ ಭಕ್ತಿಯ ಅನುಸಂಧಾನಗೈಯುವ ಚಿಂತನೆ ವಿಶ್ವವ್ಯಾಪಕವಾದದ್ದು. ಭಾರತೀಯ ಸನಾತನ ಸಂಸ್ಕೃತಿಯ ಘನ ಪರಂಪರೆಯನ್ನು ತೆರೆದ ಹೃದಯದಿಂದ ಅವಲೋಕನಗೈದು ದೇಶವಾಸಿಗಳೆಲ್ಲರೂ ಮೊದಲು ದೇಶಕ್ಕಾಗಿ, ನಂತರ ಧರ್ಮ-ಸಂಸ್ಕೃತಿ ಸಂರಕ್ಷಣೆಗಾಗಿ ಕೈಜೋಡಿಸಿ ಶ್ರಮಿಸುವುದನ್ನು ರೂಢಿಸಿಕೊಳ್ಳಬೇಕು. ಅತ್ಯಂತ ಸೀಮಿತ ದೃಷ್ಟಿಕೋನದಿಂದ ಧರ್ಮದ ವಿಶ್ಲೇಷಣೆ ಕುಬ್ಜಗೊಳಿಸದೇ ವಿಶಾಲ ವ್ಯಾಪ್ತಿಯಲ್ಲಿ ಧರ್ಮವನ್ನು ಅರಿತಾಗ ಯಾವ ದ್ವಂದ್ವ-ವೈರುಧ್ಯಗಳಿಗೂ ಅವಕಾಶ ಇರುವದಿಲ್ಲ. ಧರ್ಮ ಉಳಿದಾಗ ಮಾತ್ರ ಮಾನವ ಕುಲ ಉಳಿದು ಬೆಳೆದು ಬಲಗೊಳ್ಳಲು ಸಾಧ್ಯವಾಗುತ್ತದೆ ಎಂದೂ ಡಾ. ವೀರಸೋಮೇಶ್ವರ ಜಗದ್ಗುರುಗಳು ಹೇಳಿದರು.



ಗುರುರಕ್ಷೆ ಗೌರವ

ವಿಜಯನಗರ ಜಿಲ್ಲೆ ಹಂಪಸಾಗರ ನವಲಿಹಿರೇಮಠದ ಅಭಿನವ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಗದಗ ಜಿಲ್ಲೆ ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಬೆಳಗಾವಿ ಜಿಲ್ಲೆ ಸತ್ತಿಗೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಎಲುಬು-ಕೀಲು ತಜ್ಞ ಡಾ. ಶ್ರೀಕಂಠ ರಾಮನಗೌಡರ, ಮಂಜುನಾಥ ಮಕ್ಕಳಗೇರಿ, ನಿಜನಗೌಡ ಪಾಟೀಲ, ಸಂಗೀತ ಕಲಾವಿದರಾದ ವೀರೇಶಕುಮಾರ ಮಳಲಿ ಹಾಗೂ ಮಲ್ಲಿಕಾರ್ಜುನ ಕೆರಕನಹಳ್ಳಿ ಅವರಿಗೆ ರಂಭಾಪುರಿ ಪೀಠದ ಡಾ.ವೀರಸೋಮೇಶ್ವರ ಜಗದ್ಗುರುಗಳು ಗುರುರಕ್ಷೆಯ ಗೌರವ ನೀಡಿ ಆಶೀರ್ವದಿಸಿದರು. ಲೇಖಕ ಗುರುಮೂರ್ತಿ ಯರಗಂಬಳಿಮಠ ಸ್ವಾಗತಿಸಿದರು. ಸೋಮಲಿಂಗಶಾಸ್ತ್ರಿ ಗುಡ್ಡದಮಠ ವಂದಿಸಿದರು. ಅಮ್ಮಿನಬಾವಿ, ಮರೇವಾಡ, ತಿಮ್ಮಾಪೂರ, ಕರಡಿಗುಡ್ಡ, ಕವಲಗೇರಿ, ಚಂದನಮಟ್ಟಿ ಹಾಗೂ ಧಾರವಾಡ ನಗರದ ಭಕ್ತರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಶಿರಕೋಳ ಹಿರೇಮಠದ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ಬೆಳಗಾವಿ ಜಿಲ್ಲೆ ಇನಾಂಹೊಂಗಲ ವಿರಕ್ತಮಠದ ಅಭಿನವ ಸಿದ್ಧಲಿಂಗ ಸ್ವಾಮೀಜಿ, ಸುಳ್ಳದ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಿದರು. ಅಮ್ಮಿನಬಾವಿ ಸಂಸ್ಥಾನ ಪಂಚಗೃಹ ಹಿರೇಮಠದ ಹಿರಿಯ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷತೆವಹಿಸಿದ್ದರು. ಮುಖ್ಯ ಅತಿಥಿಗಳಾಗಿದ್ದ ಉದ್ಯಮಿ, ಸಮಾಜಸೇವಕ ಮಂಜುನಾಥ ಮಕ್ಕಳಗೇರಿ ಹಾಗೂ ಧಾರವಾಡ ಜಿ.ಪಂ. ಮಾಜಿ ಉಪಾಧ್ಯಕ್ಷ ನಿಜನಗೌಡ ಪಾಟೀಲ ಮಾತನಾಡಿದರು.

ಗಮನ ಸೆಳೆದ ನಿತ್ಯಾನಂದ ಸ್ವಾಮಿ ಅನುಯಾಯಿಗಳು

▶**ವಿನಾಯಕ ಶಾಸ್ತ್ರಿ**

ದಿಗಂತ ವಿಶೇಷ

◆**ಗೋಕರ್ಣ:** ಬಿಡದಿಯಲ್ಲಿ ಆಶ್ರಮ ಮಾಡಿಕೊಂಡಿದ್ದ ನಿತ್ಯಾನಂದ ಸ್ವಾಮಿ ಪ್ರಕರಣದೊಂದಿಗೆ ಪರಾರಿಯಾಗಿ ಕೈಲಾಸದಲ್ಲಿ ಇದ್ದು ಸ್ವಯಂಘೋಷಿತ ದೇಶ ಮಾಡಿಕೊಂಡಿರುವ ಬಗ್ಗೆ ಕೇಳಿದ್ದೇವೆ. ಆದರೆ, ಶನಿವಾರ ಅವನ ಅನುಯಾಯಿಗಳು ಇಲ್ಲಿಗೆ ಬಂದಿದ್ದು, ನಿತ್ಯಾನಂದನ ಪಾದುಕೆಯನ್ನ ಮಹಿಳೆ ಹಿಡಿದು ಸಾಗುತ್ತಿದ್ದರೆ, ಪುರುಷ ನಿತ್ಯಾನಂದನ ತ್ರಿಡಿ ಭಾವಚಿತ್ರ ಹಿಡಿದು ಸಾಗುತ್ತಿರುವ ದೃಶ್ಯ ಎಲ್ಲರ ಗಮನ ಸೆಳೆಯಿತು.



ದೂರದಿಂದ ನೋಡಿದರೆ ನಿತ್ಯಾನಂದನೇ ಬಂದು ಕುಳಿತಿರುವಂತೆ ಕಾಣುವ ದೃಶ್ಯ ಎಲ್ಲರ ಗಮನ ಸೆಳೆಯಿತು. ಈ ಬಗ್ಗೆ ಅವರ ಅನುಯಾಯಿ(ಶಿಷ್ಯರನ್ನ)ವಿಚಾರಿಸಿದಾಗ ಆಸ್ಟ್ರೇಲಿಯಾ ದೇಶದ ಪಕ್ಕದಲ್ಲೇ ನಮ್ಮ ದೇಶವಿದ್ದು, ಅಲ್ಲಿಂದ ಬಂದಿದ್ದೇವೆ. ನಾವು ದೇಶ ಪರ್ಯಟನೆ ಮಾಡಿ ಆಧ್ಯಾತ್ಮಿಕ ಒಲವು, ಸಾಧ್ಯವಾದರೆ ನಮ್ಮ ದೇಶದಲ್ಲಿ ನೆಲಸಲು ಕರೆ ನೀಡುವ ಸಂದೇಶ ನೀಡುತ್ತೇವೆ ಎನ್ನುತ್ತಾರೆ.

ಇನ್ನೂ ಜನರಿಗೊಂದು ಆ ದೇಶದ ನಾಗರಿಕತೆ ಪಡೆಯಲು ಬೇಕಾದ ನಿಯಮಾವಳಿಗಳು ಅಲ್ಲಿನ ಚಟುವಟಿಕೆಯ ವಿವರದ ಪುಸ್ತಕವನ್ನ ನೀಡಿ ಭಾವಚಿತ್ರ ತೆಗೆಸಿಕೊಂಡು ತೆರಳುತ್ತಿದ್ದಾರೆ. ಕಳೆದ ಹಲವು ತಿಗಳಿಂದ ಈ ಯಾತ್ರೆ ಆರಂಭಿಸಿದ್ದು ವರ್ಷಗಳ ಕಾಲ ಈ ದೇಶ ಸಂಚಾರ ನಡೆಸಿ ಮರಳುತ್ತೇವೆ ಎನ್ನುತ್ತಾರೆ. ನಿರ್ರಗಳವಾಗಿ ಇಂಗ್ಲಿಷ್ ಮಾತನಾಡುವ ಇವರು ಮೇಲ್ನೋಟಕ್ಕೆ ಉತ್ತರ ಭಾರತದವರಂತೆ ಕಾಣುತ್ತಾರೆ. ಆದರೆ, ತಾವು ಮೂಲ ಯಾವ ರಾಜ್ಯದವರು ಎಂಬುದನ್ನ ತಿಳಿಸದೆ ತೆರಳುತ್ತಾರೆ.

ಹಾನಿಯ ಕುರಿತು ಸಮಗ್ರ ಸಮೀಕ್ಷೆ ನಡೆಸಿ: ಪಾಟೀಲ

◆**ವಿಜಯಪುರ:** ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಆಲಿಕಲ್ಲು ಮಳೆ ಮತ್ತು ಬಿರಯಗಾಳಿಯಿಂದಾಗಿ ಉಂಟಾಗಿರುವ ಹಾನಿಯ ಕುರಿತು ಸಮಗ್ರ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇತ್ತೀಚೆಗೆ ಬೀಸಿದ ಬಿರುಗಾಳಿ ಮತ್ತು ಸುರಿದ ಆಲಿಕಲ್ಲು ಮಳೆಯಿಂದಾಗಿ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಹಾನಿಯಾಗಿವೆ. ಇದರಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆಯಲ್ಲಿ ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಬೆಳೆಹಾನಿ ಕುರಿತು ಸಮೀಕ್ಷೆ ನಡೆಸಬೇಕು. ಈ ಸಮೀಕ್ಷೆಯಲ್ಲಿ ಬೆಳೆ ಹಾನಿಯಾದ ಯಾವುದೇ ರೈತರ ಹೆಸರು ಬಿಟ್ಟು ಹೋಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೃಷಿ ಮತ್ತು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಸಮೀಕ್ಷೆ ನಡೆಸಬೇಕು. ಅಲ್ಲದೇ, ಈ




ಕುರಿತು ಶೀಘ್ರದಲ್ಲಿ ವರದಿ ಸಲ್ಲಿಸುವಂತೆ ಸಚಿವರು ಜಿಲ್ಲಾಧಿಕಾರಿ ಡಾ.ಆನಂದ ಕೆ.ಅವರಿಗೆ ಸೂಚನೆ ನೀಡಿದ್ದಾರೆ.

ಇದೇ ವೇಳೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲ ದೊಡ್ಡಮನಿ ಮತ್ತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರೊಂದಿಗೂ ಮಾತನಾಡಿರುವ ಸಚಿವರು, ಬೆಳೆ ಹಾನಿ ಕುರಿತು ಸಮಗ್ರ ಮತ್ತು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಅಕ್ಕಿ ಚೀಲ ತುಂಬಿದ್ದ ಲಾರಿ ಭಸ್ಮ

◆**ಕಲಾದಗಿ:** ತಾಂತ್ರಿಕ ದೋಷದಿಂದ ಅಕ್ಕಿ ಚೀಲ ತುಂಬಿದ ಲಾರಿಯೊಂದು ಬೆಂಕಿ ಹತ್ತಿ ಉರಿದ ದುರ್ಘಟನೆ ಶುಕ್ರವಾರ ಸಂಜೆ ಹೊತ್ತಿಗೆ ಸಂಭವಿಸಿದ್ದು, ಬಾಗಲಕೋಟೆ ಕಲಾದಗಿ ನಡುವಿನ ಮುಖ್ಯ ರಸ್ತೆಯಲ್ಲಿರುವ ದೇವನಾಳ ಪು.ಕೇ ಬಳಿ ಈ ಘಟನೆ ಸಂಭವಿಸಿದೆ.



ಬಾಗಲಕೋಟೆಯಿಂದ ಮುಧೋಳಕ್ಕೆ ಪಡಿತರ ಅಕ್ಕಿ ಚೀಲಗಳನ್ನು ತುಂಬಿಕೊಂಡು ಹೊರಟಿದ್ದ ಈ ಲಾರಿ ಸಂಚರಿಸುತ್ತಿರುವಾಗಲೇ ವಾಹನದ ಎಂಜೀನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ತಕ್ಷಣ ಚಾಲಕ ಲಾರಿಯನ್ನು ಪಕ್ಕಕ್ಕೆ ನಿಲ್ಲಿಸಿ ಕೆಳಗೆ ಜಿಗಿದು ಜೀವಾಪಾಯದಿಂದ ಪಾರಾಗಿದ್ದಾನೆ. ಸುದ್ದಿ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಲಾರಿಯ ಹಿಂಭಾಗಕ್ಕೆ ಬೆಂಕಿ ವ್ಯಾಪಿಸುವುದನ್ನು ತಡೆಗಟ್ಟಿದ್ದಾರೆ.

ರಾಜಮಾನ್ಯ, ಸಿಂಧೂರಶ್ರೀ ಪ್ರಶಸ್ತಿ ಪ್ರದಾನ

◆**ಸಿದ್ದಾಪುರ:** ಶಿವಲಿಂಗದಲ್ಲಿ ಅದ್ವಿತೀಯ ಶಕ್ತಿಯಿದೆ. ಶಿವನ ಬಣ್ಣ ಶುದ್ಧ ಸ್ಪಟಿಕದ ಬಣ್ಣ ಪಾರದರ್ಶಕವಾದದ್ದು, ಸ್ಪಟಿಕಲಿಂಗ ಆ ಕಾರಣದಿಂದ ಎಲ್ಲಕ್ಕಿಂತ ವಿಶೇಷ. ನಾವು ದೇವರಲ್ಲಿ ಕೋರಬಹುದಾದ ವರವೆಂದರೆ ಸ್ಪಟಿಕದಂಥ ಪರಿಶುದ್ಧ ಮನಸ್ಸನ್ನು ಕರುಣಿಸು ಎನ್ನುವದಾಗಿ ಎಂದು ಶ್ರೀ ರಾಮಚಂದ್ರಾಪುರಮಠದ ರಾಘವೇಶ್ವರಭಾರತೀ ಮಹಾಸ್ವಾಮಿಗಳು ಹೇಳಿದರು.



ಅವರು ತಾಲೂಕಿನ ಕಲಗದ್ದೆಯ ಶ್ರೀ ನಾಟ್ಯವಿನಾಯಕ, ಲಲಿತಾ ರಾಜರಾಜೇಶ್ವರಿ ದೇವಸ್ಥಾನದಲ್ಲಿ ಕಳೆದ 8 ತಿಂಗಳಿನಿಂದ ನಡೆಯುತ್ತ ಬಂದ ಮೋದಕ ಸೇವಾ ಸಂವತ್ಸರದ ಮಹಾ ಸಮಾರೋಪದಲ್ಲಿ ರಾಜಮಾನ್ಯ ಹಾಗೂ ಸಿಂಧೂರಶ್ರೀ ಪ್ರಶಸ್ತಿ ಪ್ರದಾನ ಮಾಡಿ ಆಶೀರ್ವಚನ ನೀಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಶಿರಳಗಿ ಶ್ರೀ ಚೈತನ್ಯ ರಾಜಾರಾಮ ಕ್ಷೇತ್ರದ ಶ್ರೀ ಬ್ರಹ್ಮಾನಂದ ಭಾರತೀ ಶ್ರೀಗಳು ಆಶೀರ್ವಚನ ನೀಡಿದರು.

ರಾಜಮಾನ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಪ್ರಸಕ್ತ ದಿನಮಾನದಲ್ಲಿ ಅಪರಾಧ ಚಟುವಟಿಕೆಗಳು ಹೆಚ್ಚುತ್ತಿರುವುದಕ್ಕೆ ಮುಖ್ಯ ಕಾರಣ ಭಯ, ಭಕ್ತಿ, ಗುರುಹಿರಿಯರ ಋಣದ ಕುರಿತಾದ ತಿಳಿವಳಿಕೆಯ ಕೊರತೆ. ಎಲ್ಲರಿಗೂ ಒಂದಿಲ್ಲೊಂದು ಚಿಂತೆ ಇದ್ದೇ ಇರುತ್ತದೆ. ಹಣದಿಂದ ಮಾತ್ರ ನೆಮ್ಮದಿ ದೊರೆಯುವುದಿಲ್ಲ, ಈವರೆಗೆ ದೊರೆತ ಎಲ್ಲ ಪ್ರಶಸ್ತಿಗಳಿಗಿಂತ ಪಕ್ಷಪಾತ, ಜಾತಿ, ಮತದ ಹಂಗಿಲ್ಲದ ಈ ಪ್ರಶಸ್ತಿ ಮಿಗಿಲಾದದ್ದು ಎಂದು ಭಾವಿಸಿದ್ದೇನೆ. ಉತ್ತರ ಕನ್ನಡ ಜಿಲ್ಲೆ ನನ್ನ ಆತ್ಮೀಯವಾದ ಜಿಲ್ಲೆ, ಈ ಕ್ಷೇತ್ರದ ಅಭಿವೃದ್ಧಿಗೆ ನನ್ನಿಂದಾದ ಸಹಕಾರ ಇರುತ್ತದೆ ಎಂದರು.

ಸಿಂಧೂರಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಹಿರಿಯ ಸಹಕಾರಿ, ಟಿ.ಎಂ.ಎಸ್.ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಮಾತನಾಡಿ, ವಕೀಲ ವೃತ್ತಿಯಲ್ಲಿದ್ದ ನಾನು ಸಹಕಾರಿ ಕ್ಷೇತ್ರಕ್ಕೆ ಕಾಲಿಟ್ಟದ್ದು ಅನೀರಿಕ್ಷಿತವಾಗಿ. ಕೌಟುಂಬಿಕ ನಿರ್ವಹಣೆಗೆ ಸಹಕಾರಿ ಕ್ಷೇತ್ರವನ್ನು ಅವಲಂಬಿಸಿಲ್ಲ, ರೈತ ಬೆಳೆಗಾರರಿಗೆ ನನ್ನಿಂದಾದ ಸಹಕಾರವನ್ನು ಈವರೆಗೂ ನೀಡುತ್ತ ಬಂದಿದ್ದೇನೆ ಎಂದರು.

ಮೋದಕ ಸೇವಾ ಸಮಿತಿ ಅಧ್ಯಕ್ಷ, ಶಾಸಕ ಭೀಮಣ್ಣ ನಾಯ್ಕ, ಮೋದಕ ಸೇವಾ ಸ್ವಾಗತ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ದೊಡ್ಮನೆ ಉಪಸ್ಥಿತರಿದ್ದರು. ಪ್ರಧಾನ ವಿಶ್ವಸ್ಥ ವಿನಾಯಕ ಹೆಗಡೆ ಕಲಗದ್ದೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿದರು. ಗಣಪತಿ ಹೆಗಡೆ ಗುಂಜಗೋಡ ನಿರೂಪಿಸಿದರು. ಮೋಹನ ಹೆಗಡೆ ಹೆರವಟ್ಟಾ, ರಾಘವೇಂದ್ರ ಬೆಟ್ಟಕೊಪ್ಪ ಸನ್ಮಾನಪತ್ರ ವಾಚಿಸಿದರು. ಇದಕ್ಕೂ ಮುನ್ನ ಶ್ರೀಗಳ ಭಿಕ್ಷಾಸೇವೆ, ಮೋದಕ ಹವನದ ಮಹಾಪೂರ್ಣಾಹುತಿ ಹಾಗೂ ರಥೋತ್ಸವ ಜರುಗಿತು.

ತೈಲ ಹೊತ್ತು ಮಂಗಳೂರಿಗೆ ಬಂತು ಬೃಹತ್ ಹಡಗು...!

ಮಂಗಳೂರು: ಅಂತೂ ಇಂತೂ ಮಂಗಳೂರು ಬಂದರಿಗೊಂದು ಬೃಹತ್ ಹಡಗು ಬಂದಿದೆ. ಶನಿವಾರ ರಾತ್ರಿ ಕಚ್ಚಾ ತೈಲ ಹೊತ್ತು ಬಂದ ಈ ಹಡಗಿನಿಂದಾಗಿ ಕರಾವಳಿಯ ಮಂದಿ ನಿಟ್ಟುಸಿರು ಬಿಡುವಂತಾಗಿದೆ. ದೇಶದ ಇಂಧನ ಬೇಡಿಕೆ ಪೂರೈಸುವಲ್ಲಿ ಮಂಗಳೂರಿಗೆ ಬಂದ ಬೃಹತ್ ತೈಲ ಮಹತ್ತರ ಪಾತ್ರ ವಹಿಸಲಿದೆ.

> ಅಕ್ವಾ ಟೈಟಾನ್ ಹಡಗಿನಿಂದ 96 ಸಾವಿರ ಮೆಟ್ರಿಕ್ ಟನ್ ಕಚ್ಚಾ ತೈಲ ಅನ್‌ಲೋಡ್

ಮಧ್ಯಪ್ರಾಚ್ಯ ದೇಶಗಳ ಯುದ್ಧದ ನಡುವೆ ರಷ್ಯಾದಿಂದ ಚೀನಾಕ್ಕೆ ಹೊರಟಿದ್ದ ಅಕ್ವಾ ಟೈಟಾನ್ ಹೆಸರಿನ ಕಚ್ಚಾ ತೈಲ ಹೊತ್ತ ಬೃಹತ್ ಹಡಗು ಮಂಗಳೂರು ಬಂದರಿಗೆ ಆಗಮಿಸಿದ್ದು, ಇದರಿಂದ ಸುಮಾರು 96 ಸಾವಿರ ಮೆಟ್ರಿಕ್ ಟನ್ ನಷ್ಟು ಕಚ್ಚಾ ತೈಲವನ್ನು ಎಂಆರ್‌ಪಿಎಲ್ ತೈಲ ಸಂಸ್ಕರಣಾ ಘಟಕಕ್ಕೆ ಅನ್‌ಲೋಡ್ ಮಾಡಲಾಗುತ್ತಿದೆ. ಈ ಸರಕು ಹಡಗು ಜನವರಿ ಅಂತ್ಯದ ವೇಳೆಗೆ ರಷ್ಯಾದಲ್ಲಿ ಕಚ್ಚಾ ತೈಲವನ್ನು ಲೋಡ್ ಮಾಡಿಕೊಂಡಿತ್ತು. ಚೀನಾಕ್ಕೆ ತೆರಳುವ ಗುರಿ ಹೊಂದಿದ್ದ ಈ ಹಡಗು ಕಾರಣಾಂತರಗಳಿಂದಾಗಿ ಆಗ್ನೇಯ ಏಷ್ಯಾದ ಜಲ ಪ್ರದೇಶಕ್ಕೆ ಬರುತ್ತಿದ್ದಂತೆ ಈ ಹಡಗಿನ ಪಥ ಬದಲಿಸಲಾಗಿದ್ದು, ಮಂಗಳೂರು ತಲುಪಿದೆ.

ಸೂಕ್ತ ವ್ಯವಸ್ಥೆ: ಮಂಗಳೂರು ಬಂದರಿಗಿಂತ ಸ್ವಲ್ಪ ದೂರದಲ್ಲಿ ಸಮುದ್ರ ಮಧ್ಯದಿಂದ ಎಂಆರ್‌ಪಿಎಲ್ ತೈಲ ಶುದ್ಧೀಕರಣ ಘಟಕಕ್ಕೆ ಪೈಪ್‌ಲೈನ್ ಮೂಲಕ ಈ ತೈಲವನ್ನು ಅನ್‌ಲೋಡ್ ಮಾಡಲಾಗುತ್ತದೆ. ಭಾನುವಾರ ಬೆಳಗ್ಗೆ ಈ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಪ್ರಕ್ರಿಯೆ ಮುಗಿಯಲು ಒಂದು– ಒಂದೂವರೆ ದಿನ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷಾರ್ಥಿಗಳಿಗೆ ಪ್ರೋತ್ಸಾಹ: ಸಚಿವ



ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದ ಅಭ್ಯರ್ಥಿಗಳು ಯುಪಿಎಸ್ಸಿ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುತ್ತಿದ್ದು, ಇದು ಉತ್ತಮ ಬೆಳವಣಿಗೆಯಾಗಿದೆ. ಗ್ರಾಮೀಣ ಪ್ರದೇಶದವರಿಗೆ ಮತ್ತಷ್ಟು ಪ್ರೋತ್ಸಾಹ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದ್ದಾರೆ.

ಇಂಡಿಯಾ ಫಾರ್ ಐಎಎಸ್ ಅಕಾಡೆಮಿ ವತಿಯಿಂದ ಸೋಮವಾರ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಆಯೋಜಿಸಿದ್ದ 2025–26 ರ ಯುಪಿಎಸ್ಸಿ ಪರೀಕ್ಷೆಯಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಲ್ಲಿ ಆಯ್ಕೆಯಾದ ರಾಜ್ಯದ 19 ಸಾಧಕರನ್ನು ಅಭಿನಂದಿಸಿ ಮಾತನಾಡಿದ ಅವರು, ನಾಗರಿಕ ಸೇವೆ ಅತ್ಯಂತ ಶ್ರೇಷ್ಠ ಮತ್ತು ಪರಮೋಚ್ಚ ಅವಕಾಶವಾಗಿದೆ. ಪ್ರಧಾನಿ ನೇತೃತ್ವದಲ್ಲಿ ಕೈಗೊಂಡ ತೀರ್ಮಾನವನ್ನು ಆದೇಶದ ಮೂಲಕ ಜಾರಿ ಮಾಡುವವರು ಅಧಿಕಾರಿಗಳು. ಅಧಿಕಾರಿಗಳಿಗೆ ಸಂವಿಧಾನ ಅಷ್ಟೊಂದು ಪರಮಾಧಿಕಾರ ನೀಡಿದೆ.

ನಾಗರಿಕ ಸೇವೆಯಿಂದ ಬಹಳಷ್ಟು ಜನ ಉತ್ತಮ ಕೆಲಸ ಮಾಡಿದ್ದಾರೆ ಎಂದರು. ಅಧಿಕಾರಿಗಳು ಸಾಮಾನ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು. ಜನ ಸಾಮಾನ್ಯರಿಗೆ ಸೇವೆ ಸಲ್ಲಿಸಲು ನಿಮಗೆ ಆಕಾಶವೇ ಮಿತಿಯಾಗಿದೆ. ತಾಳ್ಮೆಯಿಂದ, ವಿವೇಚನೆಯಿಂದ ಕೆಲಸ ಮಾಡಬೇಕು. ಉತ್ತಮ ವಿಧಾನಗಳನ್ನು ಅಳವಡಿಸಿಕೊಂಡರೆ ಉತ್ತಮ ಕೆಲಸ ಮಾಡಲು ನೆರವಾಗಲಿದೆ ಎಂದು ಕಿವಿ ಮಾತು ಹೇಳಿದರು. ಕಾರ್ಯಕ್ರಮದಲ್ಲಿ ಸಂಸ್ಥೆ ಅಧ್ಯಕ್ಷ ಡಾ.ಸಿ.ಎಸ್ ಕೇದಾರ್, ಉಪಾಧ್ಯಕ್ಷ ಡಾ.ಜಿ.ಎನ್ ಶ್ರೀ ಕಂಠಯ್ಯ, ಶ್ರೀ ನಿವಾಸ್ ಪಿ.ಸಿ ಇದ್ದರು.

ಇರಾನ್ ಮೇಲಿನ ತೈಲ ನಿರ್ಬಂಧ ಸಡಿಲಿಸಿದ ಅಮೆರಿಕ

ಪುಟ ೧➔ ಚೀನಾದ ಸ್ವತಂತ್ರ ಸಂಸ್ಕರಣಾಗಾರಗಳಲ್ಲದೆ, ಇರಾನ್ ತೈಲದ ಪ್ರಮುಖ ಗ್ರಾಹಕರಾದ ಭಾರತ, ಜಪಾನ್ ಮತ್ತು ದಕ್ಷಿಣ ಕೊರಿಯಾ ಈಗ ಈ ಪೂರೈಕೆಯನ್ನು ಪಡೆಯುವ ಸಾಧ್ಯತೆಯಿದೆ. ಉತ್ತರ ಕೊರಿಯಾ, ಕ್ಯೂಬಾ ಮತ್ತು ಕ್ರಿಮಿಯಾವನ್ನು ಈ ಪಟ್ಟಿಯಿಂದ ಹೊರಗಿಡಲಾಗಿದೆ. ಈ ಮಾರಾಟದಿಂದ ಬರುವ ಆದಾಯವನ್ನು ಪಡೆಯಲು ಇರಾನ್‌ಗೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ವಿಧಿಸಲಾಗಿದೆ ಎಂದು ತಿಳಿದುಬಂದಿದೆ. ಅಮೆರಿಕದ ಬಂದರುಗಳ ನಡುವೆ ಇಂಧನ ಸಾಗಿಸಲು ವಿದೇಶಿ ಹಡಗುಗಳಿಗೆ ಅನುವು ಮಾಡಿಕೊಡಲು 'ಜೋನ್ಸ್ ಕಾಯ್ದೆ'ಯನ್ನೂ 60 ದಿನಗಳ ಕಾಲ ಸಡಿಲಿಸಲಾಗಿದೆ.

ಹೆಚ್ಚುವರಿ ತೈಲ ಲಭ್ಯತೆ ನಿರಾಕರಿಸಿದ ಇರಾನ್

ಪುಟ ೧➔ ಮಾರ್ಚ್ 20ರ ಮೊದಲು ಹಡಗುಗಳಲ್ಲಿ ತುಂಬಲಾದ ಇರಾನ್ ಮೂಲದ ಕಚ್ಚಾ ತೈಲದ ಮಾರಾಟಕ್ಕೆ ಅಮೆರಿಕದ ಖಜಾನೆ ಇಲಾಖೆ ತಾತ್ಕಾಲಿಕ ಅನುಮತಿ ನೀಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಚೀನಾ ಅಗ್ಗದ ದರದಲ್ಲಿ ಸಂಗ್ರಹಿಸಿಟ್ಟಿರುವ ತೈಲ ಪೂರೈಕೆಯನ್ನು ಮುಕ್ತಗೊಳಿಸುವ ಮೂಲಕ ಜಾಗತಿಕ ಇಂಧನ ಬೆಲೆಗಳನ್ನು ಸ್ಥಿರಗೊಳಿಸುವ ತಂತ್ರ ಇದಾಗಿದೆ ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬಣ್ಣಿಸಿದ್ದರು.

ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು: ಎಂಬಿಎ, ಎಂಸಿಎ, ಎಂಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್ (ಪಿಜಿಸಿಇಟಿ–2026) ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು, ಮಾ.23 ರಿಂದ ಏ. 8ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಶುಲ್ಕ ಪಾವತಿಗೆ ಏ.10 ಕೊನೆ ದಿನ. ವಿವಿಧ ಕೋರ್ಸ್‌ಗಳ ಲಿಖಿತ ಪರೀಕ್ಷೆ ಮೇ 23 ಮತ್ತು 24 ರಂದು ನಡೆಸಲಾಗುವುದು ಎಂದು ಹೇಳಿದ್ದಾರೆ.

ದಿನ ಭವಿಷ್ಯ

ಮೇಷ
ಯಶ ಸಾಧಿಸಲು ತಾಳ್ಮೆ ಅವಶ್ಯ. ದುಡುಕಿನ ನಡೆ ಬೇಡ. ಆರ್ಥಿಕ ಹಿನ್ನಡೆ ಬಾಧಿಸಬಹುದು. ಮನೆಯವರ ಸಂಗದಲ್ಲಿ ಸಮಾಧಾನ.

ವೃಷಭ
ದಿನವಿಡೀ ಕೆಲಸ. ವಿರಾಮ ಸಿಗದು. ಖಾಸಗಿ ವಿಚಾರದಲ್ಲಿ ಪ್ರತಿಕೂಲ ಬೆಳವಣಿಗೆ. ಅದನ್ನು ನಾಜೂಕಿನಿಂದ ಸರಿಪಡಿಸಿ. ಬಂಧು ಜತೆ ವಿರಸ.

ಮಿಥುನ
ನಿಮ್ಮ ಪಾಲಿಗೆ ಶುಭಕರ ಬೆಳವಣಿಗೆ. ಕ್ಲಿಷ್ಟವಾಗಿದ್ದ ಪರಿಸ್ಥಿತಿ ತಿಳಿಯಾಗಲಿದೆ. ಅನಿರೀಕ್ಷಿತ ದಿಕ್ಕಿನಿಂದ ಬೆಂಬಲ. ಆರ್ಥಿಕ ಉನ್ನತಿ.

ಕಟಕ
ಇತರರ ಜತೆ ವ್ಯವಹಾರದಲ್ಲಿ ಇಂದು ಎಚ್ಚರದಿಂದಿರಿ. ಮೋಸ ಹೋಗುವ ಸಾಧ್ಯತೆ. ಭಾವನಾತ್ಮಕ ಏರುಪೇರು ಉಂಟಾದೀತು.

ಸಿಂಹ
ದಿನವಿಡೀ ಏನೇನೋ ಅಡ್ಡಿಗಳು. ಮಹತ್ವದ ಕೆಲಸ ಮುಂದೂಡಿ. ದೊಡ್ಡ ಸಮಸ್ಯೆಗೆ ಸರಳ ಪರಿಹಾರವಿದೆ, ಅತ್ತ ಗಮನ ಹರಿಸಿರಿ.

ಕನ್ಯಾ
ಯಶಸ್ವೀ ದಿನ. ಮೆಚ್ಚಿನ ಹವ್ಯಾಸದಲ್ಲಿ ಆನಂದ ಪಡೆಯುವಿರಿ. ಆರೋಗ್ಯ ಸಮಸ್ಯೆ ನಿವಾರಣೆ. ಕೌಟುಂಬಿಕ ಚಿಂತೆ ಪರಿಹಾರ.

ತುಲಾ
ಕೆಲ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗಲಿದೆ. ಸೂಕ್ತ ನೆರವೂ ಸಿಗಲಿದೆ. ಮನೆಯಲ್ಲಿ ವಾಗ್ವಾದಕ್ಕೆ ಆಸ್ಪದ ನೀಡಬೇಡಿ.

ವೃಶ್ಚಿಕ
ಇಂದು ಅತೃಪ್ತಿ ತರುವ ಬೆಳವಣಿಗೆಯೇ ಹೆಚ್ಚು. ಬಂದುದನ್ನು ಸಮಾಧಾನದಿಂದ ಸ್ವೀಕರಿಸಿ. ದುಡುಕಿನ ವರ್ತನೆ ತೋರದಿರಿ.

ಧನು
ಕೆಲದಿನಗಳ ಕಷ್ಟದ ಬಳಿಕ ಖುಷಿ ತರುವ ಹೊಸ ಬೆಳವಣಿಗೆ. ಕೈಗೊಂಡ ನಿರ್ಧಾರದಲ್ಲಿ ಯಶಸ್ಸು. ಆರ್ಥಿಕ ಸ್ಥಿತಿ ಸಮಾಧಾನಕರ.

ಮಕರ
ಸಮಸ್ಯೆಯೊಂದು ಮನಃಶಾಂತಿ ಕೆಡಿಸಲಿದೆ. ಅದರ ಪರಿಹಾರವೂ ಕಷ್ಟವೆನಿಸುವುದು. ಆತುರ ಬೇಡ. ಕಾದುನೋಡುವ ತಂತ್ರ ಅನುಸರಿಸಿ.

ಕುಂಭ
ಪ್ರತಿಕೂಲ ಪರಿಸ್ಥಿತಿ ಎದುರಿಸಿದರೂ ಅದನ್ನು ನಿಮ್ಮ ಪರವಾಗಿ ಬದಲಿಸಿಕೊಳ್ಳಿ. ಕೌಟುಂಬಿಕ ಸಾಮರಸ್ಯ ಕೆಡದಂತೆ ನೋಡಿಕೊಳ್ಳಿ.

ಮೀನ
ನೆಗೆಟಿವ್ ಚಿಂತನೆ ಬಾಧಿಸಲಿದೆ. ಸಂಗಾತಿ ಜತೆ ಜಗಳಕ್ಕೆ ಆಸ್ಪದ ನೀಡದಿರಿ. ಹೊಂದಾಣಿಕೆ ಬದುಕಿಗೊಳಿತು. ಮಕ್ಕಳ ಸಾಧನೆಯು ತೃಪ್ತಿ.

ರಾಹುಕಾಲ: 4.30–6.00
ಗುಳಿಕಕಾಲ: 3.00–4.30

ಅದೃಷ್ಟ ಸಂಖ್ಯೆ 2,8,0,1

ಶಕಾವತಾರ ಕಾಫಿಟೇಬಲ್ ಪುಸ್ತಕ ಲೋಕಾರ್ಪಣೆ
ಶಿವಾಜಿ ಶ್ರೇಷ್ಠ ಆಡಳಿತಗಾರ

ಬೆಳಗಾವಿ: ವಿಕ್ರಮ ವಾರಪತ್ರಿಕೆ ಹೊರ ತಂದಿರುವ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ರೋಮಾಂಚಕ ಹಾಗೂ ಸ್ಫೂರ್ತಿದಾಯಕ ಬದುಕು ಮತ್ತು ಸಾಧನೆಗಳ ಕುರಿತಾಗಿ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಹೊರ ತರಲಾಗಿರುವ ಶಕಾವತಾರ ವಿಶೇಷ ಕಾಫಿ ಟೇಬಲ್ ಪುಸ್ತಕ ಶನಿವಾರ ಸಂಜೆ

ಕೆ.ಎಲ್.ಇಯ ಡಾ.ಬಿ.ಎಸ್.ಜಿರಗೆ ಸಭಾಭವನದಲ್ಲಿ ನಡೆದ ಸುಂದರ ಸಮಾರಂಭದಲ್ಲಿ ಲೋಕಾರ್ಪಣೆಗೊಂಡಿತು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ಆರ್‌ಎಸ್‌ಎಸ್ ಅಖಿಲ ಭಾರತೀಯ ಸಹ ವ್ಯವಸ್ಥಾ ಪ್ರಮುಖರಾದ ಅನಿಲ್ ಓಕ್ ಛತ್ರಪತಿ ಶಿವಾಜಿ ಅವರ ಜೀವನ, ಯುದ್ಧ ಕೌಶಲ್ಯ, ಆಡಳಿತ ನಿರ್ವಹಣೆ, ಅರ್ಥಶಾಸ್ತ್ರ, ಧರ್ಮ ಸ್ಥಾಪನೆಯಲ್ಲಿ ಅವರ ಪಾತ್ರದ ಕುರಿತಾಗಿ ಸುದೀರ್ಘ ಮಾತನಾಡಿದರು.

ಶಿವಾಜಿ ಅವರ ಯುದ್ಧ ನೀತಿ ಅತಿ ಶ್ರೇಷ್ಠವಾಗಿತ್ತು. ದಾಳಿಯೇ ಅತಿದೊಡ್ಡ ರಕ್ಷಣಾ ತಂತ್ರ ಎಂದು ಅವರು ನಂಬಿದ್ದರು. ಅವರ ಅರ್ಥ ನೀತಿಯೂ ಶ್ರೇಷ್ಠವಾಗಿತ್ತು. ಆಡಳಿತ ಶೈಲಿ ಮಾದರಿಯದ್ದು. ಶಿವಾಜಿಯನ್ನು ಭಾರತದ ನೌಕಾಸೇನೆಯ ಸೃಷ್ಟಿಕರ್ತ ಎನ್ನಲಾಗುತ್ತದೆ. ವಾಣಿಜ್ಯ ನೌಕಾದಳದ ಸೃಷ್ಟಿಕರ್ತರೂ ಹೌದು. ಇಂದಿಗೂ ನೌಕಾದಳದವರು ಶಿವಾಜಿಯನ್ನು ಫಾದರ್ ಆಫ್ ನೌಕಾಸೇನಾ ಎಂದು ನಂಬುತ್ತಾರೆ ಎಂದು ಅನಿಲ್ ಓಕ್ ವರ್ಣಿಸಿದರು. ಬೆಂಗಳೂರಿನ ಗವಿಪುರಂನ ಶ್ರೀ ಗೋಸಾಯಿ ಮಹಾ ಸಂಸ್ಥಾನ ಮಠದ ಪ.ಪೂ ಜಗದ್ಗುರು ವೇದಾಂತಾಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು.



> ದೇಶದ ಕಠಿಣ ಪರಿಸ್ಥಿತಿಯಲ್ಲಿ ಶಿವಾಜಿ ಮಹಾರಾಜರ ಅವತಾರ ಆಗಿತ್ತು. ಧರ್ಮ ವಿರೋಧಿ, ಜನ ವಿರೋಧಿ ಜನರನ್ನು ದಮನಿಸಿ ಧರ್ಮ ರಕ್ಷಿಸಿದ ಕೀರ್ತಿ ಶಿವಾಜಿ ಅವರದ್ದು. ಶಿವಾಜಿ ನಮ್ಮ ರಾಷ್ಟ್ರಪುರುಷ
> ■ ಮಂಜುನಾಥ ಭಾರತಿ ಸ್ವಾಮೀಜಿ

ಮುಖ್ಯ ಅತಿಥಿಗಳಾಗಿ ಪದ್ಮಶ್ರೀ ಪುರಸ್ಕೃತ ಮಾಜಿ ರಾಜ್ಯಸಭಾ ಸದಸ್ಯರಾದ ಪ್ರಭಾಕರ ಕೋರೆ, ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖರಾದ ಮಂಗೇಶ್ ಭೇಂಡೆ ಉಪಸ್ಥಿತರಿದ್ದರು. ಆರ್‌ಎಸ್‌ಎಸ್ ಕರ್ನಾಟಕ ಉತ್ತರದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಪ್ರಾಸ್ತಾವಿಕ ಮಾತನಾಡಿದರು.

ವಿಕ್ರಮ ಸಂಪಾದಕ ರಮೇಶ ದೊಡ್ಡಾಪುರ ಸ್ವಾಗತಿಸಿ ಪರಿಚಯಿಸಿದರು. ಜ್ಞಾನಭಾರತಿ ಪ್ರಕಾಶನದ ನಿರ್ದೇಶಕ ದು.ಗು.ಲಕ್ಷ್ಮಣ ಮಾತನಾಡಿ, ಶಿವಾಜಿ ಕಾಫಿಟೇಬಲ್ ಬುಕ್ ಕುರಿತಾಗಿ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶ್ರೀಗಳಿಗೆ ಪ್ರಭಾಕರ ಕೋರೆ, ಅರವಿಂದರಾವ್ ದೇಶಪಾಂಡೆ ಅವರನ್ನು ದು.ಗು. ಲಕ್ಷ್ಮಣ ಸನ್ಮಾನಿಸಿದರು. ಮಂಗೇಶ ಭೇಂಡೆ, ಅನಿಲ್ ಓಕ್ ಅವರನ್ನು ಪ್ರಭಾಕರ ಕೋರೆ ಸನ್ಮಾನಿಸಿದರು. ದು.ಗು.ಲಕ್ಷ್ಮಣ ಅವರನ್ನು ನಾ.ನಾಗರಾಜ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ವಿವಿಧ ಲೇಖಕರಿಗೆ ಅಥಿತಿಗಳು ಸನ್ಮಾನಿಸಿ ಗೌರವಿಸಿದರು.

ಹೊಸ ದಿಗಂತ ಹುಬ್ಬಳ್ಳಿ ಬ್ಯೂರೊ ಹೆಡ್ ವಿಠ್ಠಲದಾಸ ಕಾಮತ್ ವಂದಿಸಿದರು. ಮಾನಸಿ ಗೋಖಲೆ ಕಾರ್ಯಕ್ರಮ ನಿರ್ವಹಿಸಿದರು. ಪ್ರಾರಂಭದಲ್ಲಿ ಭರತನಾಟ್ಯ, ಸ್ವಾಗತ ಗೀತೆ, ಶಿವಾಜಿ ಕುರಿತಾದ ಕಿರುಚಿತ್ರ ಪ್ರದರ್ಶನ ನಡೆಯಿತು. ಕೊನೆಯಲ್ಲಿ ಚೈತ್ರಾ ಹೆಗಡೆ ವಂದೇ ಮಾತರಂ ಗೀತೆ ಹಾಡಿದರು.

ಬಗೆಹರಿಯದ ಕೈ ಟಿಕೆಟ್ ಗೊಂದಲ

ಪುಟ ೧➔ ಇನ್ನೊಂದೆಡೆ ಈ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಆಡಳಿತ ವಿರೋಧಿ ಅಲೆ ಇದೆ ಎಂದು ಸಾಬೀತುಪಡಿಸಿ, ಹೈಕಮಾಂಡ್‌ನಿಂದ ಭೇಷ್ ಎನ್ನಿಸಿಕೊಂಡು ವಿಶ್ವಾಸ ಉಳಿಸಿಕೊಳ್ಳಬೇಕೆಂಬ ಶತಪ್ರಯತ್ನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇದ್ದಾರೆ. ಬಾಗಲಕೋಟೆ ಕ್ಷೇತ್ರಕ್ಕಿಂತ ದಾವಣಗೆರೆ ಕ್ಷೇತ್ರದ ಟಿಕೆಟ್ ಘೋಷಣೆಯೇ ಕಾಂಗ್ರೆಸ್‌ಗೆ ಸಮಸ್ಯೆಯಾಗಿದೆ, ಇಲ್ಲಿ ಶಾಮನೂರು ಕುಟುಂಬವನ್ನು ಬಿಡುವಂತಿಲ್ಲ, ಮುಸ್ಲಿಂ ನಾಯಕರ ಬೇಡಿಕೆಯನ್ನು ತಳಿ ಹಾಕುವಂತಿಲ್ಲ.

ಮುಸ್ಲಿಂ ಸಮುದಾಯದ ಸಚಿವರು ಮತ್ತು ಶಾಸಕರು ಟಿಕೆಟ್ ಬೇಕೆ, ಬೇಕು ಎಂದು ಬೇಡಿಕೆ ಇಟ್ಟಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಶಾಮನೂರು ಕುಟುಂಬದ ಸಚಿವ ಎಸ್.ಎಸ್ ಮಲ್ಲಿಕಾರ್ಜುನ ಪುತ್ರ ನಾಮಪತ್ರ ಸಲ್ಲಿದ್ದಾರೆ. ಈ ಬಗ್ಗೆಯೂ ಹೈಕಮಾಂಡ್ ಗಮನಕ್ಕೆ ತರಲಾಗಿದೆ. ಲಿಂಗಾಯತ ನಾಯಕರು ಶಾಮನೂರು ಕುಟುಂಬಕ್ಕೆ ಬೆಂಬಲ ಸೂಚಿಸಿರುವುದು ಪಕ್ಷದಲ್ಲಿ ಗೊಂದಲ ಇದೆ ಎಂದು ಸ್ಪಷ್ಟಪಡಿಸಿದೆ.

ಸುರ್ಜೇವಾಲಾ ನೇತೃತ್ವದಲ್ಲಿ ಮಹತ್ವದ ಸಭೆ: ಟಿಕೆಟ್ ಹಂಚಿಕೆ ಸಂಬಂಧ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ರಾಜ್ಯ ನಾಯಕರ ಜೊತೆ ಮಹತ್ವದ ಸಭೆ ನಡೆಸಿದ್ದು, ಈ ಸಭೆಯಲ್ಲಿ ಕಾಂಗ್ರೆಸ್ ನಾಯಕ, ಸಚಿವ ಜಮೀರ್ ಅಹ್ಮದ್ ಸೇರಿದಂತೆ ಹಲವು ಮುಸ್ಲಿಂ ನಾಯಕರು ರಾಜೀನಾಮೆ ಅಸ್ತ್ರ ಪ್ರಯೋಗಿಸಿದ್ದಾರೆ ಎಂದು ಹೇಳಲಾಗಿದೆ.



> ಕಾಂಗ್ರೆಸ್ ಒಂದೇ ಸಮುದಾಯವನ್ನು ನೆಚ್ಚಿಕೊಂಡಿಲ್ಲ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲುವ ವಿಶ್ವಾಸವಿದೆ. ಟಿಕೆಟ್ ಹಂಚಿಕೆಯನ್ನು ಅಂತಿಮವಾಗಿ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ.
> ■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

> ಜಮೀರ್ ಅಹ್ಮದ್ ಅವರು ದಾವಣಗೆರೆಯಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡಬೇಕು. ಇಲ್ಲವಾದರೆ ರಾಜೀನಾಮೆ ಕೊಡುವ ಬೆದರಿಕೆ ಒಡ್ಡಿದ್ದಾರೆ. ಇದಕ್ಕೆ ಕಾಂಗ್ರೆಸ್ ಯಾವುದೇ ಸೊಪ್ಪು ಹಾಕಿಲ್ಲ, ಇದು ಕಾಂಗ್ರೆಸ್ ಅಲ್ಪಸಂಖ್ಯಾತರ ಮೇಲಿನ ಪ್ರೀತಿ ತೋರಿಸುತ್ತದೆ.
> ■ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ಭಾನುವಾರ ಬೆಳಗ್ಗೆ ಟಿಕೆಟ್ ಘೋಷಣೆ ಆಗುತ್ತೆ. ಸೋಮವಾರದವರೆಗೆ ನಾಮಪತ್ರ ಸಲ್ಲಿಕೆಗೆ ಸಮಯವಿದೆ ಎಂದರು.

ಅಧ್ಯಕ್ಷರಾಗಿ ಕಿಶೋರ್ ಆಳ್ವ ನೇಮಕ



ಬೆಂಗಳೂರು: ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಇಂಡಸ್ಟ್ರಿ ಆಫ್ ಇಂಡಿಯಾ 2026–27ರ ಕರ್ನಾಟಕ ರಾಜ್ಯ ಮಂಡಳಿಯ ಅಧ್ಯಕ್ಷರಾಗಿ ಕಿಶೋರ್ ಆಳ್ವ ನೇಮಕಗೊಂಡಿದ್ದಾರೆ. ಮೂರು ದಶಕಗಳಿಗೂ ಹೆಚ್ಚು ಅನುಭವ ಹೊಂದಿರುವ ಅನುಭವಿ ಉದ್ಯಮ ಕಾರ್ಯನಿರ್ವಾಹಕರಾದ ಅವರು, ಇಂಧನ, ಮೂಲಸೌಕರ್ಯ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ಕ್ಷೇತ್ರಗಳಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ. ಕಿಶೋರ್ ಆಳ್ವ ಅವರು ಕೈಗಾರಿಕಾ ಸಂಘಗಳು ಮತ್ತು ಶೈಕ್ಷಣಿಕ ಆಡಳಿತದಲ್ಲಿಯೂ ಪ್ರಮುಖ ಪಾತ್ರವಹಿಸಿದ್ದಾರೆ. 2018–19ರ ಅವಧಿಯಲ್ಲಿ ಬೆಂಗಳೂರು ಕೈಗಾರಿಕಾ ಮತ್ತು ವಾಣಿಜ್ಯ ಮಂಡಳಿಗೆ ಸೇವೆ ಸಲ್ಲಿಸಿದರು. ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಅಲ್ಲಿ ಅವರು ಉದ್ಯಮ ನೇತೃತ್ವದ ಉಪಕ್ರಮಗಳು, ನೀತಿ ಸಂವಾದ ಮತ್ತು ಪಾಲುದಾರರ ನಿಶ್ಚಿತಾರ್ಥವನ್ನು ಸಕ್ರಿಯವಾಗಿ ಉತ್ತೇಜಿಸಿದ್ದಾರೆ. ಪ್ರಸ್ತುತ, ಅವರು ಕರ್ನಾಟಕದಲ್ಲಿ ಅದಾನಿ ಗ್ರೂಪ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದಲ್ಲದೆ, ಅವರು ರಾಜ್ಯದ ವಿಶ್ವವಿದ್ಯಾಲಯ ಮಂಡಳಿಗಳ ಮುಖ್ಯಸ್ಥರಾಗುವ ಮೂಲಕ ಉನ್ನತ ಶಿಕ್ಷಣ ಆಡಳಿತಕ್ಕೆ ಕೊಡುಗೆ ನೀಡಿದ್ದಾರೆ.

ಗೋರಕ್ಷಕ ಬಾಬಾ ಹತ್ಯೆಗೆ ಆಕ್ರೋಶ

ಪುಟ ೧➔ ತನಿಖೆ ಜಾರಿಯಲ್ಲಿದೆ ಎಂದು ಮಥುರಾದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶ್ಲೋಕ್ ಕುಮಾರ್ ಹೇಳಿದ್ದಾರೆ.

ಗೋಶಾಲೆಯಲ್ಲಿ ಅಂತಿಮ ದರ್ಶನ: ಬಾಬಾ ಪಾರ್ಥಿವ ಶರೀರವನ್ನು ಸ್ಥಳೀಯ ಗೋರಕ್ಷಕರು ಬರ್ಸಾನಾದ ಗೋಶಾಲೆಗೆ ಸ್ಥಳಾಂತರಿಸಿದ್ದು, ಸಾರ್ವಜನಿಕರು ಮತ್ತು ಭಕ್ತರ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಸ್ತೆ ಅಪಘಾತವಲ್ಲ, ಹತ್ಯೆ: ಶನಿವಾರ ಮುಂಜಾನೆ 4 ಗಂಟೆಯ ವೇಳೆ ಮಥುರಾದ ನವೀಪುರ ಗ್ರಾಮದಲ್ಲಿ ಗೋರಕ್ಷಕ ಚಂದ್ರಶೇಖರ್ ಅವರ ಹತ್ಯೆ ನಡೆದಿದೆ. ಇದರಿಂದ ಸ್ಥಳೀಯರು, ಬಾಬಾ ಬೆಂಬಲಿಗರು ಮತ್ತು ಸ್ಥಳೀಯ ಗೋರಕ್ಷಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ಇದು ಅಪಘಾತವಲ್ಲ, ಇದು ಗೋವುಗಳ ಕಳ್ಳಸಾಗಾಣಿಕೆಗಾರರು ನಡೆಸಿದ ಹತ್ಯೆಯೆಂದು ಆರೋಪಿಸಿದ್ದಾರೆ.

ಭಯೋತ್ಪಾದನೆಯಲ್ಲಿ ಪಾಕಿಸ್ತಾನ ನಂ.1

ಪುಟ ೧➔ ಇದುವರೆಗೆ ಆ ಸ್ಥಾನದಲ್ಲಿದ್ದ ಬುರ್ಕಿನಾ ಫಾಸೋವನ್ನು ಪಾಕಿಸ್ತಾನ ಹಿಂದಿಕ್ಕಿದೆ. ಇದು ಕೇವಲ ಅಂಕಿಅಂಶಗಳ ಏರಿಳಿತವಲ್ಲ, ಪಾಕಿಸ್ತಾನದ ಒಳಭಾಗದಲ್ಲಿ ಮತ್ತೆ ಬಲಿಷ್ಠವಾಗುತ್ತಿರುವ ಉಗ್ರ ಮೂಲ ವಲಯಗಳ ಪ್ರತಿಬಿಂಬವಾಗಿದೆ.

> **ಏಕೆ ಪಾಕ್ ಮತ್ತೆ ಅಗ್ರ ಸ್ಥಾನಕ್ಕೆ?**
> - ಅಫ್ಘಾನ್ ಗಡಿ ಅಸ್ಥಿರತೆ
> - ಟಿಟಿಪಿ ಪುನರುತ್ಥಾನ
> - ಬಲೂಚ್ ಉಗ್ರ ಚಟುವಟಿಕೆ
> - ಭದ್ರತಾ ವೈಫಲ್ಯ
> - ಪ್ರಾದೇಶಿಕ ರಾಜಕೀಯ ಅಶಾಂತಿ

ವಿಶೇಷವಾಗಿ ಅಫ್ಘಾನಿಸ್ತಾನ ಗಡಿ ಭಾಗ, ಖೈಬರ್ ಪಖ್ತುನ್ಖ್ವಾ ಪ್ರದೇಶ, ಬಲೂಚಿಸ್ತಾನ ಪ್ರದೇಶಗಳಲ್ಲಿ ದಾಳಿಗಳ ಪ್ರಮಾಣ ಹೆಚ್ಚಿರುವುದು ವರದಿಯಲ್ಲಿ ಉಲ್ಲೇಖವಾಗಿದೆ.

ಟಿಟಿಪಿ ದಾಳಿ: ಈ ಏರಿಕೆಯ ಹಿಂದೆ ತೆಹ್ರೀಕ್–ಇ–ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಪ್ರಮುಖ ಕಾರಣವಾಗಿ ಗುರುತಿಸಲಾಗಿದೆ. 2024ರೊಂದಿಗೆ ಹೋಲಿಸಿದರೆ 2025ರಲ್ಲಿ ಟಿಟಿಪಿ ದಾಳಿಗಳು ಗಮನಾರ್ಹವಾಗಿ ಹೆಚ್ಚಿವೆ. ಪಾಕಿಸ್ತಾನದಲ್ಲೇ ನಡೆದ ಈ ದಾಳಿಗಳು ಗಡಿ ಭದ್ರತೆ, ಆಂತರಿಕ ಭದ್ರತಾ ವ್ಯವಸ್ಥೆ ಮತ್ತು ರಾಜಕೀಯ ಸ್ಥಿರತೆ ಮೂರು ಕ್ಷೇತ್ರಗಳ ಮೇಲೂ ಪ್ರಶ್ನಾರ್ಥಕ ಚಿಹ್ನೆ ಎತ್ತಿವೆ. ಜಾಗತಿಕ ಮಟ್ಟದಲ್ಲಿ ನೋಡಿದರೆ, ಉಗ್ರದಾಳಿಗಳಿಂದಾಗುವ ಸಾವುಗಳು ಮತ್ತು ದಾಳಿಗಳ ಸಂಖ್ಯೆ ಕಡಿಮೆಯಾಗಿರುವುದು ಸ್ವಲ್ಪ ಸಮಾಧಾನಕರ ಬೆಳವಣಿಗೆ.

ಜಾಗತಿಕ ಉಗ್ರಸೂಚ್ಯಂಕ 2026

ಅಂಶ	ವಿವರ
ಅತ್ಯಂತ ಬಾಧಿತ ದೇಶ	ಪಾಕಿಸ್ತಾನ
ಪಾಕಿಸ್ತಾನದ ಅಂಕ	8.574
ಪಾಕ್ ಉಗ್ರ ಸಾವು	1,139
ಪಾಕ್ ಗಾಯಾಳುಗಳು	1,595
ಪಾಕ್ ಉಗ್ರ ಘಟನೆಗಳು	1,045
ಜಾಗತಿಕ ಉಗ್ರ ಸಾವು	5,582
ಹಿಂದಿನ ವರ್ಷ	7,714
ಜಾಗತಿಕ ಇಳಿಕೆ	ಸುಮಾರು 28%
ಜಾಗತಿಕ ದಾಳಿಗಳ ಇಳಿಕೆ	ಸುಮಾರು 22%
ಟಿಟಿಪಿ ದಾಳಿಗಳು	481ರಿಂದ 595ಕ್ಕೆ
ಟಿಟಿಪಿ ಏರಿಕೆ	24%
ಬುರ್ಕಿನಾ ಫಾಸೋಗೆ	2ನೇ ಸ್ಥಾನ

ಚಾಮುಂಡೇಶ್ವರಿಗೆ ನಮೋ ಭಕ್ತಿನಮನ

ಪುಟ ೧➔ ಇದರೊಂದಿಗೆ ಕನ್ನಡ ಭಕ್ತಿಗೀತೆಯ ಯೂಟ್ಯೂಬ್ ಲಿಂಕ್ ಹಂಚಿಕೊಂಡಿದ್ದರು. ಇದೇ ವೇಳೆ ಡಾ.ರಾಜ್‌ಕುಮಾರ್ ಹ್ಯಾಶ್‌ಟ್ಯಾಗ್ ಸಹ ಎಕ್ಸ್‌ನಲ್ಲಿ ಟ್ರೆಂಡ್ ಆಗಿದೆ. ಕನ್ನಡ ಭಕ್ತಿಗೀತೆಯನ್ನು ಎಕ್ಸ್ ಪೋಸ್ಟ್‌ನಲ್ಲಿ ಹಂಚಿಕೊಳ್ಳುವ ವೇಳೆ ಸಂದೇಶವನ್ನು ಹಿಂದಿಯಲ್ಲಿ ಬರೆದಿರುವ ಮೋದಿ ಭಕ್ತಿಗೆ ಯಾವುದೇ ಭಾಷೆಯ ವ್ಯತ್ಯಾಸ ಇರುವುದಿಲ್ಲ ಎಂಬ ಸಂದೇಶ ಸಾರಿದ್ದಾರೆ. ಹಲವು ಬಾರಿ ಬಸವಣ್ಣನವರು ಸೇರಿ ಕನ್ನಡ ಸಾಂಸ್ಕೃತಿಕ, ಆಧ್ಯಾತ್ಮಿಕ ಪರಂಪರೆಯನ್ನು ಕೊಂಡಾಡಿರುವ ಮೋದಿ ಕರುನಾಡಿನ ನಾಡದೇವತೆ ಮೇಲಿನ ತಮ್ಮ ಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಶಕ್ತಿ ಉಪಾಸನೆ ಮಹತ್ವ: ಚಾಮುಂಡೇಶ್ವರಿ ಅಮ್ಮನವರ ಕನ್ನಡ ಭಕ್ತಿಗೀತೆ ಹಂಚಿಕೊಳ್ಳುವ ಮೂಲಕ ದೇಶದ ಆಧ್ಯಾತ್ಮಿಕ ಪರಂಪರೆ ಮತ್ತು ಶಕ್ತಿ ಉಪಾಸನೆಯ ಮಹತ್ವವನ್ನು ಮೋದಿ ತಿಳಿಸಿಕೊಟ್ಟಿದ್ದಾರೆ. ಹಾಡಿನಲ್ಲಿ ಚಾಮುಂಡೇಶ್ವರಿ ದೇವಿಯ ಶಕ್ತಿ, ಮಹಿಮೆ ಮತ್ತು ಕರುಣೆಯನ್ನು ಕೊಂಡಾಡುತ್ತದೆ. ಈ ಹಾಡಿನಲ್ಲಿ ದೇವಿಯನ್ನು ಜಗಜ್ಜನನಿ (ವಿಶ್ವಮಾತೆ) ಎಂದು ಕರೆಯಲಾಗಿದೆ.

ಡಾ.ರಾಜ್ ಚಿತ್ರದ ಗೀತೆ!: 1970ರಲ್ಲಿ ಬಿಡುಗಡೆಯಾದ ಡಾ.ರಾಜಕುಮಾರ್ ಅಭಿನಯದ ಶ್ರೀಕೃಷ್ಣದೇವರಾಯ ಚಿತ್ರದ ಗೀತೆ ಇದಾಗಿದ್ದು, ಕನ್ನಡದ ಅತ್ಯಂತ ಜನಪ್ರಿಯ ದೇವಿ ಹಾಡುಗಳಲ್ಲಿ ಇದೂ ಒಂದಾಗಿದೆ. ಚೈತ್ರ ನವರಾತ್ರಿ ಸಂದರ್ಭ ನಾಡದೇವತೆ ಶ್ರೀಚಾಮುಂಡೇಶ್ವರಿ ಆರಾಧಿಸುವ ಮೂಲಕ ಮೋದಿ ಕನ್ನಡ ಕುಲದ ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಜಗತ್ತಿಗೆ ಸಾರುವ ಕೆಲಸ ಮಾಡಿದ್ದಾರೆ. ಅಲ್ಲದೆ ಕನ್ನಡಿಗರ ಆರಾಧ್ಯ ದೈವ ಡಾ.ರಾಜ್ ಅಭಿನಯದ ಚಿತ್ರದ ಹಾಡನ್ನು ಮೋದಿ ಪೋಸ್ಟ್ ಮಾಡಿದ್ದು, ಕನ್ನಡಿಗರ ಮನಸ್ಸು ಗೆದ್ದಿದ್ದಾರೆ.

ಸಂಸದ ಯದುವೀರ್ ಕೃತಜ್ಞತೆ: ಕನ್ನಡ ಭಕ್ತಿಗೀತೆ ಹಂಚಿಕೊಂಡ ಮೋದಿಯವರಿಗೆ ಬಿಜೆಪಿ ಸಂಸದ ಯದುವೀರ್ ಒಡೆಯರ್ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದ್ದಾರೆ. ತಾಯಿ ಚಾಮುಂಡೇಶ್ವರಿ ಕುರಿತ ಅಮೋಘವಾದ ಗೀತೆ ಹಂಚಿಕೊಂಡ ಪ್ರಧಾನಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಎಂದು ಹೇಳಿದ್ದಾರೆ.

ಭಕ್ತರ ಸಾಲಲ್ಲಿ ನಿಂತು ತಿರುಮಲ ದರ್ಶನ ಪಡೆದ ಸಿಎಂ ನಾಯ್ಡು

ಪುಟ ೧➔ ಈ ವೇಳೆ ಟಿಟಿಡಿಯ ಹಲವು ಅಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಹಾಗೂ ಶಾಸಕರು ಅವರ ಜತೆಯಲ್ಲಿದ್ದರು. ಈ ಅಭ್ಯಾಸವನ್ನು ಹಲವು ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದಾರೆ. ಸಾಮಾನ್ಯ ಭಕ್ತನಂತೆ ದರ್ಶನಕ್ಕೆ ಹೋಗುವ ಹಾದಿಯಲ್ಲಿ ಅವರು ಚಂದ್ರಬಾಬು ನಾಯ್ಡು ಅವರು ತಿರುಮಲ ತಿರುಪತಿ ದೇವಸ್ಥಾನಗಳು (ಟಿಟಿಡಿ) ಮಾಡಿದ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಭಕ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಗಮನಿಸಿದರು. ಅವರು ಸರತಿ ಸಾಲಿನಲ್ಲಿ ಪ್ರಸಾದ ವಿತರಣೆ, ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಸೌಲಭ್ಯಗಳನ್ನು ಪರಿಶೀಲಿಸಿದರು. ತಿರುಪತಿ ಮತ್ತು ತಿರುಮಲದಲ್ಲಿ ಯಾತ್ರಿಕರ ವಸತಿ ಸೌಕರ್ಯಗಳನ್ನು ತಕ್ಷಣವೇ ಸುಧಾರಿಸುವಂತೆ ಮುಖ್ಯಮಂತ್ರಿ ನಾರಾ ಚಂದ್ರಬಾಬು ನಾಯ್ಡು ಶುಕ್ರವಾರ ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಉಪನ್ಯಾಸಕರಿಂದ ಅರ್ಜಿ

ಬೆಂಗಳೂರು: ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ 2025–26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಎಂ.ಟೆಕ್ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಶಿಕ್ಷಣಶಾಸ್ತ್ರ ವಿಷಯವನ್ನು ಬೋಧಿಸಲು ಅತಿಥಿ ಉಪನ್ಯಾಸಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಎಂ.ಇಡಿ ಪದವಿ ಅಥವಾ ಶಿಕ್ಷಣ ವಿಷಯದಲ್ಲಿ ಪಿಎಚ್‌ಡಿ ಹೊಂದಿರಬೇಕು. ಎನ್.ಇ.ಟಿ, ಎಸ್.ಎಲ್.ಇ.ಟಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ನೇಮಕಾತಿಯು ಎಐಸಿಟಿಇ / ಯುಜಿಸಿ ನಿಯಮಗಳಿಗನುಸಾರವಾಗಿ ಇರುತ್ತದೆ. ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿಯನ್ನು ವಿವಿ ವೆಬ್‌ಸೈಟ್ www.uvce.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕುಲಸಚಿವರ ಕಚೇರಿ, ಯುವಿಸಿಇ, ಕೆ.ಆರ್. ವೃತ್ತ, ಬೆಂಗಳೂರು ವಿಳಾಸಕ್ಕೆ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮಾ.23ರಂದು ಕೊನೆಯ ದಿನಾಂಕವಾಗಿದೆ. ಸಂದರ್ಶನದ ದಿನಾಂಕವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಅಥವಾ ಅರ್ಹ ಅಭ್ಯರ್ಥಿಗಳಿಗೆ ನೇರವಾಗಿ ತಿಳಿಸಲಾಗುವುದು ಎಂದು ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ಕುಲಸಚಿವರು (ಪ್ರಭಾರ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೀರ್ಥಹಳ್ಳಿ: ಮಂಗನ ಕಾಯಿಲೆಗೆ ಮಹಿಳೆ ಬಲಿ

ಪುಟ ೧➔ ಈ ಮೊದಲು ಕಟಗಾರು ಆಸ್ಪತ್ರೆ ವ್ಯಾಪ್ತಿಯ ಹೊನ್ನೇಕೇರಿಯ ಯುವಕ ಕೆಎಫ್‌ಡಿ ಸೋಂಕಿನಿಂದ ಸಾವಿಗೀಡಾಗಿದ್ದ. ತಾಲೂಕಿನಲ್ಲಿ 29 ಪ್ರಕರಣ ದಾಖಲಾಗಿದ್ದು, ಜನವರಿಯಿಂದ ಈವರೆಗೆ ಇಬ್ಬರು ಮೃತಪಟ್ಟಿದ್ದಾರೆ. ಪ್ರಸ್ತುತ ಸರ್ಕಾರಿ ಜೆಸಿ ಆಸ್ಪತ್ರೆಯಲ್ಲಿ 5 ಮತ್ತು ಮಣಿಪಾಲ ಆಸ್ಪತ್ರೆಯಲ್ಲಿ ಮೂವರು ಸೋಂಕಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಾಲೂಕು ವೈದ್ಯಾಧಿಕಾರಿ ಡಾ. ಅನಿಕೇತನ್ ತಿಳಿಸಿದ್ದಾರೆ.

ಜೆಸಿ ಆಸ್ಪತ್ರೆಯಲ್ಲಿ 5 ರೋಗಿಗಳಿದ್ದು, ಗುಣಮುಖರಾಗಿ ಮನೆಗೆ ಹೋಗಿದ್ದ ಇಬ್ಬರು ಮತ್ತೆ ಜ್ವರ ಮರುಕಳಿಸಿದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಜೆಸಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಅರವಿಂದ್ ತಿಳಿಸಿದ್ದಾರೆ.

ಎಐ ನ್ಯಾಯಾಂಗ ಆಳಬಾರದು: ಸಿಜೆಐ

ಪುಟ ೧➔ ತೀರ್ಪು ಪ್ರಕಟಿಸುವಿಕೆಯ ಹಂತದ ಮೇಲೆ ಎಐ ಸಾಧನಗಳಿಗೆ ಹಿಡಿತ ಸಾಧಿಸಲು ಆಸ್ಪದ ಮಾಡಿಕೊಟ್ಟರೆ ಪಾರದರ್ಶಕವಲ್ಲದ ಹಾಗೂ ಉತ್ತರದಾಯಿಯಲ್ಲದ ವ್ಯವಸ್ಥೆ ನಿರ್ಮಾಣವಾಗಲು ನಾವು ಅವಕಾಶ ಮಾಡಿ ಕೊಟ್ಟಂತಾಗುತ್ತದೆ ಎಂದು ಎಚ್ಚರಿಸಿದರು. ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ನ್ಯಾಯಾಂಗ ವ್ಯವಸ್ಥೆಯನ್ನು ಎಐ ಪ್ರವೇಶಿಸಿರುವ ಈ ಸಂದರ್ಭದಲ್ಲಿ, ಮನುಷ್ಯನ ನಿರ್ಧಾರ ತಳೆಯುವ ಶಕ್ತಿಗೆ ಎಐ ಸಹಾಯಕನಂತೆ ವರ್ತಿಸುತ್ತಿದೆಯೇ ಅಥವಾ ಮನುಷ್ಯನ ಉಪಸ್ಥಿತಿಯ ಅಗತ್ಯವೇ ಇಲ್ಲದ ಪರ್ಯಾಯದಂತೆ ಗೋಚರಿಸುತ್ತಿದೆಯೇ, ಇದು ಜನರಿಗೆ ನ್ಯಾಯಿಕ ವ್ಯವಸ್ಥೆಯನ್ನು ಇನಷ್ಟು ಸುಲಭವಾಗಿ ಲಭ್ಯವಾಗಿಸುತ್ತದೆಯೇ ಅಥವಾ, ಹೊಸ ಸ್ವರೂಪದ ಅಸಮಾನತೆ ಗಳನ್ನು ಹಾಗೂ ಅಪಾರದರ್ಶಕತೆಯನ್ನು ಉಂಟು ಮಾಡುತ್ತದೆಯೇ? ಎನ್ನುವ ಪ್ರಶ್ನೆಗಳು ಈಗ ಎದುರಾಗಿವೆ ಎಂದರು. ನ್ಯಾಯಾಂಗ ಸ್ವಾತಂತ್ರ್ಯ, ಪಾರದರ್ಶಕತೆ ಹಾಗೂ ಕಾನೂನುಬದ್ಧತೆಯ ಅಂಶಗಳು ಈಗ ಅತ್ಯಂತ ಪ್ರಮುಖವಾಗಿ ಪರಿಣಮಿಸಿವೆ. ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಎಐ ಬಳಕೆಯು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ತತ್ವಗಳು ಹಾಗೂ ಸೂಕ್ತ ರಕ್ಷಣೆಗಳೊಂದಿಗೆ ನಿರ್ದೇಶಿತವಾಗಬೇಕು. ವಕೀಲರು ಕೂಡ ಎಐ ಟೂಲ್‌ಗಳ ಮಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ನ್ಯಾಯಾಂಗ ವ್ಯವಸ್ಥೆಯ ಪ್ರಧಾನ ಘಟಕಗಳಾದ ಪ್ರಾಮಾಣಿಕತೆ ಮತ್ತು ಜವಾಬ್ದಾರಿಗಳು ಅಬಾಧಿತವಾಗಿ ಮುಂದುವರಿಯಬೇಕು ಎಂದರು.

ನ್ಯಾಯಾಂಗ ಸುಧಾರಣಾ ಆಯೋಗ ರಚಿಸಿ

ನ್ಯಾಯಾಲಯಗಳಲ್ಲಿ ಹೆಚ್ಚುತ್ತಿರುವ ಬಾಕಿ ಪ್ರಕರಣಗಳನ್ನು ಕಡಿಮೆ ಮಾಡಲು ನ್ಯಾಯಾಂಗ ಸುಧಾರಣಾ ಆಯೋಗ ರಚಿಸಬೇಕು. ಒಬ್ಬ ವಕೀಲ ಅಥವಾ ವಕೀಲರು ವಿಚಾರಣೆ ಮುಂದೂಡಿಕೆ ಮತ್ತು ಮುಂದೂಡಿಕೆಯನ್ನು ಇಷ್ಟಪಡುತ್ತಾರೆ. ಏಕೆಂದರೆ ಅವರು ವಿಚಾರಣೆಯ ಪ್ರತಿ ಹಾಜರಾತಿಯಿಂದ ಪ್ರಯೋಜನ ಪಡೆಯುತ್ತಾರೆ. ಸರ್ಕಾರಿ ಇಲಾಖೆಯು ಸೋಲನ್ನು ಒಪ್ಪಿಕೊಳ್ಳುವ ಬದಲು ಮೇಲ್ಮನವಿ ಸಲ್ಲಿಸುವ ಮೂಲಕ ಅಧಿಕಾರಶಾಹಿ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಸುಪ್ರೀಂ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ಎಐನಿಂದ ಸ್ಥಳೀಯ ಭಾಷೆಗೆ ಅನುವಾದ: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ ಅಧ್ಯಕ್ಷ ಪ್ರಶಾಂತ್ ಕುಮಾರ್ ಮಾತನಾಡಿ, ಎಐ ತಂತ್ರಜ್ಞಾನದಿಂದಾಗಿ ನ್ಯಾಯಾಲಯದ ತೀರ್ಪುಗಳನ್ನು ತ್ವರಿತವಾಗಿ ಸ್ಥಳೀಯ ಭಾಷೆಗಳಿಗೆ ಅನುವಾದ ಮಾಡುವುದು ಸಾಧ್ಯವಾಗುತ್ತಿದ್ದು, ಇದರಿಂದಾಗಿ ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಆಸಕ್ತಿಯಿರುವ ಹಳ್ಳಿಯ ಜನರೂ ಓದಬಹುದಾಗಿದೆ. ಇದು ವಕೀಲರಿಗೆ ತಮ್ಮ ಕಕ್ಷಿದಾರರೊಂದಿಗೆ ವ್ಯವಹರಿಸಲು ಅನುಕೂಲ ಕಲ್ಪಿಸಲಿದೆ ಎಂದರು.

ಸುಪ್ರಿಂ ಕೋರ್ಟ್‌ನ ನಿ.ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ ಶೆಟ್ಟಿ, ಯುಐಎ ಇಂಡಿಯಾ ಅಧ್ಯಕ್ಷ ಎ.ಕೆ. ಗಂಗೂಲಿ ಉಪಸ್ಥಿತರಿದ್ದರು.

ಮನುಷ್ಯರದೇ ನಿರ್ಣಾಯಕ ಪಾತ್ರವಿರಲಿ: ನ್ಯಾಯಾಂಗ ಪ್ರಕ್ರಿಯೆಯ ಅಂತಿಮ ಘಟ್ಟವಾದ ತೀರ್ಪು ಪ್ರಕಟಿಸುವಿಕೆಯಲ್ಲಿ ಮನುಷ್ಯರೇ ನಿರ್ಣಾಯಕ ಪಾತ್ರ ವಹಿಸುವಂತಿರಬೇಕು. ಅಂದರೆ, ನ್ಯಾಯಮೂರ್ತಿಗಳು ಮತ್ತು ನ್ಯಾಯಾಧೀಶರುಗಳೇ ತರ್ಕ ಶಕ್ತಿ ಹಾಗೂ ಅನುಭವಗಳ ವಿಶ್ಲೇಷಣೆಯ ಬೆಳಕಿನಲ್ಲಿ ತೀರ್ಪುಗಳನ್ನು ಪ್ರಕಟಿಸಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ತರುವ ಪ್ರಯೋಜನಗಳು ಮಾರ್ಗಗಳಾಗಿ ಮಾತ್ರವೇ ಬಳಕೆಯಾಗಬೇಕು. ಆದರೆ, ಯಾವ ದಿಕ್ಕಿನತ್ತ ಸಾಗಬೇಕು ಎಂಬ ದಿಕ್ಸೂಚಿಯ ಪಾತ್ರವನ್ನು ಮನುಷ್ಯನ ಬುದ್ಧಿಯೇ ನಿರ್ಧರಿಸಬೇಕು ಎಂದು ನ್ಯಾ.ಸೂರ್ಯಕಾಂತ್ ಅಭಿಪ್ರಾಯಪಟ್ಟರು.

ವ್ಯಕ್ತಿತ್ವ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗವು 2023–24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಒಟ್ಟು 384 ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳಿಗೆ ಸಂಬಂಧಿಸಿದಂತೆ ನಡೆಸಲು ಉದ್ದೇಶಿಸಿದ್ದ ವ್ಯಕ್ತಿತ್ವ ಪರೀಕ್ಷೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸದ್ಯಕ್ಕೆ ಮುಂದೂಡಲಾಗಿದೆ ಎಂದು ಆಯೋಗ ತಿಳಿಸಿದೆ.

ಕಳೆದ ಮಾ.10 ರಂದು ಆಯೋಗದ ಜಾಲತಾಣದಲ್ಲಿ ಪ್ರಕಟಿಸಲಾಗಿದ್ದ ವೇಳಾಪಟ್ಟಿಯಂತೆ, ಅರ್ಹ ಅಭ್ಯರ್ಥಿಗಳಿಗೆ ಮಾ.23 ರಿಂದ ಮೇ 4 ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲು ನಿರ್ಧರಿಸಲಾಗಿತ್ತು. ಆದರೆ, ಅನಿವಾರ್ಯ ಆಡಳಿತಾತ್ಮಕ ಕಾರಣಗಳಿಂದಾಗಿ ಈ ವೇಳಾಪಟ್ಟಿಯನ್ನು ಈಗ ಹಿಂಪಡೆಯಲಾಗಿದೆ. ವ್ಯಕ್ತಿತ್ವ ಪರೀಕ್ಷೆಯ ಪರಿಷ್ಕೃತ ದಿನಾಂಕಗಳು ಮತ್ತು ಸಮಯದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ಆಯೋಗದ ವೆಬ್‌ಸೈಟ್‌ನಲ್ಲಿ ಶೀಘ್ರವಾಗಿ ಪ್ರಕಟಿಸಲಾಗುವುದು ಎಂದು ಆಯೋಗದ ಕಾರ್ಯದರ್ಶಿ ಜ್ಯೋತಿ ಕೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಇಂಗಿತ

ಮುಸಲ್ಮಾನರ ವಿರೋಧಿಗಳಲ್ಲ

• **ಬೆಂಗಳೂರು:** ಬಿಜೆಪಿ ಬಗ್ಗೆ ಮುಸ್ಲಿಂರಿಗೆ ಬೇಸರ ಇರಬಹುದು, ಆದರೆ ನಾವು ಮುಸಲ್ಮಾನರ ವಿರೋಧಿಗಳಲ್ಲ, ಕಾಂಗ್ರೆಸ್ ಅವರ ತಲೆಯಲ್ಲಿ ಬಿಟ್ಟ ಹುಳಗಳು ಇನ್ನೂ ಸತ್ತಿಲ್ಲ ಎಂದ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಶನಿವಾರ ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿ, ಅವರು ನಮಗೆ ಮತ ಕೊಡುವುದು ಬೇಕಿಲ್ಲ, ಅದು ಅವರಿಗೆ ಬಿಟ್ಟ ವಿಷಯ, ನಾವು ಇಡೀ ದೇಶದಲ್ಲಿ



ಅಧಿಕಾರದಲ್ಲಿದ್ದೇವೆ ಎಂದರು. ದೇಶವನ್ನಾಳುವ ಮೋದಿ ಅವರು ದೊಡ್ಡ ಸಮುದಾಯದವರಲ್ಲ, ಅವರು ಕೂಡ ಹಿಂದುಳಿದವರೇ. ಯಾವ ರೀತಿ ಸಿದ್ದರಾಮಯ್ಯನವರು ನಾನು ಅಹಿಂದ ಎಂದು ಅಂದುಕೊಳ್ಳುತ್ತಾರೋ ಅದೇ ರೀತಿ ಮೋದಿ ಅವರು ಅಹಿಂದವೇ ಎಂದು ಹೇಳಿದರು.

ಹಿಂದೆ ಕಾಂಗ್ರೆಸ್ಸಿನಲ್ಲಿ ಮಂಡ್ಯ ಹೊರತುಪಡಿಸಿ ಇತರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮುಸಲ್ಮಾನ್ ಬಂಧುಗಳಿಗೇ ಟಿಕೆಟ್ ಕೊಡುತ್ತಿದ್ದರು. ಈಗ ಎಲ್ಲ ಕಡೆಯಲ್ಲಿ ಅವರಿಗೆ ಕಾಂಗ್ರೆಸ್ ಕೊಕ್ ಕೊಡುತ್ತ ಬಂದಿದೆ. ಮುಸಲ್ಮಾನರು ನಮ್ಮ ಗುಲಾಮರು, ಅವರಿಗೆ ಟಿಕೆಟ್ ಕೊಡದಿದ್ದರೂ ಬಿಜೆಪಿಯನ್ನು ತೋರಿಸಿದರೆ ಸಾಕು, ಬಾಲ ಮುದುರಿಕೊಂಡು ಬಂದು ನಮಗೆ ಮತ ಕೊಡುತ್ತಾರೆಂಬ ಪ್ರವೃತ್ತಿಯನ್ನು ಕಾಂಗ್ರೆಸ್ ಬೆಳೆಸಿಕೊಂಡಿದೆ ಎಂದು ಟೀಕಿಸಿದರು.

ಮುಸಲ್ಮಾನರಲ್ಲೂ ಕೆಲವು ಮುಖಂಡರಿದ್ದಾರೆ. ಅವರು ಕೊನೆವರೆಗೆ ಕೇಳಿ ನೋಡುತ್ತಾರೆ. ಆಗಲಿಲ್ಲ ಎಂದರೆ ಬಾಲ ಮುದುರಿಕೊಂಡು ಬಂದು ಬಿದ್ದಿರ್ತಾರೆ ಎಂಬ ಕಾಂಗ್ರೆಸ್ ಅನಿಸಿಕೆಯಂತೆ ಬಾಲ ಮುದುರಿಕೊಂಡು ಹೋಗಿ ಇರುತ್ತಾರೆ. ಅದೇ ಕಾರಣದಿಂದ ಕಾಂಗ್ರೆಸ್ ಮಾಡುವುದೂ ಸರಿ ಇದೆ, ಇವರು ಮಾಡುವುದೂ ಹಾಗೇ ಇದೆ ಎಂದರು. ಮಲ್ಲಿಕಾರ್ಜುನ್ ಸಚಿವರು, ಪತ್ನಿ ಸಂಸದೆ. ಮಗನಿಗೆ ಒಂದು ಅವಕಾಶ ಕೊಡಿಸಬೇಕು ಎಂದು ಕಾಂಗ್ರೆಸ್‌ಗೆ ಸವಾಲು ಹಾಕಿ ಅವರು ನಾಮಪತ್ರ ಸಲ್ಲಿಸಿದ್ದಾರೆ. ಈಗ ಕಾಂಗ್ರೆಸ್ ಅನಿವಾರ್ಯವಾಗಿ ಅವರಿಗೆ ಟಿಕೆಟ್ ಕೊಡಬೇಕಾಗಬಹುದು ಎಂದರು.



ಮಂಗಳೂರಿನ ಆಳ್ವಾಸ್ ಕಾಲೇಜಿನಲ್ಲಿ ಶನಿವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಲಾವಿದರಿಂದ ನೃತ್ಯ ಪ್ರದರ್ಶನ.

ಮಸೀದಿ ಅಕ್ರಮ ನಿರ್ಮಾಣ: 24ಕ್ಕೆ ತಿಪಟೂರು ಬಂದ್‌ಗೆ ಬಿಜೆಪಿ ಕರೆ

• **ತಿಪಟೂರು:** ನಗರದಲ್ಲಿ ಅನ್ಯಕೋಮಿನ ನಡುವೆ ಎರಡು ಪ್ರತ್ಯೇಕ ಘಟನೆಗಳು ನಡೆದ ಹಿನ್ನೆಲೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು ಹಿಂದುಪರ ಕಾರ್ಯಕರ್ತರು ಮತ್ತು ಬಿಜೆಪಿ ಮುಖಂಡರು ಪ್ರತಿಭಟನೆ ನಡೆಸಿದ್ದಾರೆ.

ರಂಜಾನ್ ಆಚರಣೆಯ ದಿನದಂದೇ ಎರಡು ಪ್ರತ್ಯೇಕ ಘಟನೆಗಳು ನಡೆದಿದ್ದು, ನಗರದ ಮಾವಿನತೋಪಿನಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಿರುವ ಬಗ್ಗೆ ಹಾಗೂ ಜಾನುವಾರು ಅಕ್ರಮ ಸಾಗಣೆ ಮಾಡುತ್ತಿದ್ದ ಪ್ರಕರಣ ಸಂಬಂಧ ಹಿನ್ನೆಲೆಯಲ್ಲಿ ಮಾ.24ರಂದು ತಿಪಟೂರು ಬಂದ್‌ಗೆ ಕರೆ ನೀಡಲಾಗಿದೆ.

ಮಾವಿನತೋಪಿನಲ್ಲಿ ಮಸೀದಿ ನಿರ್ಮಾಣ ವಿವಾದ: ತಿಪಟೂರು ನಗರಸಭೆಯ ವಾರ್ಡ್ ನಂ.5ರ ಮಾವಿನತೋಪಿನ ಸರ್ವೆ ನಂ.366ರಲ್ಲಿ 2004ರಲ್ಲಿ ಅಂಜುಮನ್ ಶಾಲೆಗೆ ನೀಡಲಾಗಿದ್ದ ಸ್ಥಳದಲ್ಲಿ ಅಕ್ರಮವಾಗಿ ಮಸೀದಿ ನಿರ್ಮಾಣ ಮಾಡಲಾಗುತ್ತಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಶುಕ್ರವಾರ ರಾತ್ರಿ ಈ ವಿಚಾರವಾಗಿ ಎರಡು ಸಮುದಾಯಗಳ ನಡುವೆ ವಾಗ್ವಾದ ನಡೆದು ಉದ್ವಿಗ್ನತೆ ಉಂಟಾಯಿತು.

ಶನಿವಾರ ಬೆಳಗ್ಗೆ ಕೆಲವು ಸಂಘಟನೆಗಳ ಕಾರ್ಯಕರ್ತರು ಅಕ್ರಮ ಮಸೀದಿ ನಿರ್ಮಾಣ ನಡೆಯಬಾರದು ಎಂದು ಪಟ್ಟುಹಿಡಿದ ಹಿನ್ನೆಲೆ ಪರಿಸ್ಥಿತಿ ಮತ್ತಷ್ಟು ತೀವ್ರಗೊಂಡಿತು. ಪರಿಸ್ಥಿತಿ ಗಂಭೀರವಾಗುತ್ತಿದ್ದಂತೆ ನಗರ ಪೊಲೀಸ್ ಠಾಣೆಯ ಅಧಿಕಾರಿ ರವಿಕುಮಾರ್ ನೇತೃತ್ವದಲ್ಲಿ ಸ್ಥಳಕ್ಕೆ ಪೊಲೀಸರು ತೆರಳಿ ಶಾಂತಿ ಕಾಪಾಡಿದರು.

ಕಸಾಯಿಖಾನೆಗೆ ಅಕ್ರಮವಾಗಿ ಜಾನುವಾರುಗಳನ್ನು ಸಾಗಿಸುತ್ತಿದ್ದರೆಂದು ಆರೋಪಿಸಿ ಒಂದು ವಾಹನವನ್ನು ಬಜರಂಗದಳದ ಕಾರ್ಯಕರ್ತರು ತಡೆದು ತಪಾಸಣೆ ನಡೆಸಿದ ವೇಳೆ ಬಜರಂಗದಳದ ಕಾರ್ಯಕರ್ತರ ಮೇಲೆ ಮುಸ್ಲಿಂ ಗುಂಪೊಂದು ಧಾವಿಸಿ ಹಲ್ಲೆ ನಡೆಸಿದ ಪರಿಣಾಮ ಕೆಲವರು ಗಾಯಗೊಂಡಿದ್ದು ಗಾಯಾಳುಗಳನ್ನು ತಿಪಟೂರು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಮಾ.25ರಂದು ವಿಧಾನಸೌಧದ ಮುಖ್ಯದ್ವಾರ ಉದ್ಘಾಟನೆ

• **ಮಂಗಳೂರು:** ವಿಧಾನಸೌಧದ ಮುಖ್ಯ ದ್ವಾರವನ್ನು ಮಾ.25 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಈ ಪ್ರವೇಶ ದ್ವಾರವು ಕರ್ನಾಟಕ ಶೈಲಿಯ ಅತ್ಯಂತ ಸುಂದರವಾದ ಕೆತ್ತನೆಗಳನ್ನು ಹೊಂದಿದ್ದು, ಅರಣ್ಯ ಅಭಿವೃದ್ಧಿ ನಿಗಮ ಮತ್ತು ಲೋಕೋಪಯೋಗಿ ಇಲಾಖೆ ಮೂಲಕ ಅಭಿವೃದ್ಧಿಪಡಿಸಲಾಗಿದೆ. ವಿಧಾನಸೌಧದ ಭವ್ಯ ಮೆಟ್ಟಿಲುಗಳ ಬಳಿ ಮತ್ತು ಹೈಕೋರ್ಟ್ ಪೀಠ ಕಡೆಯಿಂದ ಪ್ರವೇಶ ದ್ವಾರಗಳನ್ನು ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ವಿಧಾನಸೌಧಕ್ಕೆ ಭಾಗಶಃ ವಿದ್ಯುತ್ ಪೂರೈಸುವ ಸೌರ ಫಲಕಗಳನ್ನೂ ಮಾ. 25 ರಂದು ಉದ್ಘಾಟಿಸಲಾಗುವುದು ಎಂದು ರಾಜ್ಯ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಮಂಗಳೂರಿನಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ವಿಧಾನಸೌಧದ ಆವರಣದಲ್ಲಿರುವ ಬೀದಿ ನಾಯಿಗಳಿಗೆ ಶ್ವಾನ ಆಶ್ರಯ ತಾಣ ನಿರ್ಮಿಸುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ನಮ್ಮ ಅಭಿಪ್ರಾಯ ಮತ್ತು ಯೋಜನೆಗಳನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದೇವೆ. ಈ ಬಗ್ಗೆ ಸರಕಾರವೇ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಹೇಳಿದರು.

ಅಮಾನತುಗೊಂಡ ಚಾಲಕನಿಂದ ಬಸ್ ಕಳ್ಳತನ!

• **ಯಾದಗಿರಿ:** ಕರ್ತವ್ಯ ಲೋಪದಿಂದ ನೌಕರಿಯಿಂದ ವಜಾಗೊಂಡಿರುವ ಕೆಕೆಆರ್‌ಟಿಸಿ ಚಾಲಕ ಕಂ ನಿರ್ವಾಹಕನೊಬ್ಬ ಬಸ್ ಅನ್ನೆ ಕಳ್ಳತನ ಮಾಡಿದ ಅಪರೂಪದ ಘಟನೆ ಯಾದಗಿರಿ ತಾಲೂಕಿನ ಸೈದಾಪುರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ಕಳೆದ ಮಾ.19ರಂದು ಈ ಘಟನೆ ನಡೆದಿದೆ. ಸೇವೆಯಿಂದ ವಜಾಗೊಂಡಿರುವ ಚಾಲಕ ಕಂ ನಿರ್ವಾಹಕನಾಗಿದ್ದ ಮಹಿಪಾಲರೆಡ್ಡಿ ಎಂಬುವವನೇ ಈ ಕೃತ್ಯ ಎಸಗಿದ್ದಾನೆ. ಸೈದಾಪುರ ಬಸ್ ನಿಲ್ದಾಣದಿಂದ ಬಸ್ ಕಳ್ಳತನ ಮಾಡಿ ತೆಗೆದುಕೊಂಡು ಹೋಗುವ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ ಸೇರಿದ ಬಸ್ ಇದಾಗಿದೆ. ಈ ಹಿಂದೆ ಕೂಡಾ ಒಂದೆರಡು ಸಲ ಕರ್ತವ್ಯ ಲೋಪ ಹಿನ್ನಲೆ ಅಮಾನತು ಮಾಡಲಾಗಿತ್ತು. ತನ್ನ ಊರಾದ ರಾಚನಳ್ಳಿಗೆ ಹೋಗಲು ಯಾವುದೇ ವಾಹನಗಳು ಇಲ್ಲದಕ್ಕೆ, ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ ಬಸ್ ಚಾಲನೆ ಮಾಡಿಕೊಂಡು ಕದ್ದೊಯ್ದಿದ್ದಾನೆ. ಬಸ್ ಕಳ್ಳತನ ಮಾಡಿ ಊರಿನ ದೇವಸ್ಥಾನ ಮುಂಭಾಗದಲ್ಲಿ ನಿಲ್ಲಿಸಲಾಗಿದೆ. ಸೈದಾಪುರ ಪೊಲೀಸ್ ಠಾಣೆಯಲ್ಲಿ ಇತನ ವಿರುದ್ಧ ಕೇಸ್ ದಾಖಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಆತ್ಮಹತ್ಯೆ

• **ಪಾವಗಡ:** ಸಮಾಜಕಲ್ಯಾಣಇಲಾಖೆಯತಾಲೂಕು ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ್(60) ಕಚೇರಿಯಲ್ಲೇ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿರುವಘಟನೆ ಪಾವಗಡ ಪಟ್ಟಣದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಮೂಲತಃ ಪಾವಗಡತಾಲೂಕಿನ ಗುಂಡಾರ್ಲಹಳ್ಳಿ ಗ್ರಾಮಕ್ಕೆ ಸೇರಿದ ಮಲ್ಲಿಕಾರ್ಜುನ್, ಪಟ್ಟಣದ ಸಮಾಜಕಲ್ಯಾಣಇಲಾಖೆಯಲ್ಲಿ ಕಳೆದ 3 ವರ್ಷಗಳಿಂದ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದರು. ಈ ತಿಂಗಳ ಮಾ.31ಕ್ಕೆ ನಿವೃತ್ತರಾಗಲಿದ್ದರು, ಕಚೇರಿಯಲ್ಲಿ ಆತ್ಮಹತ್ಯೆಗೂ ಮುನ್ನ ನನ್ನ ಸಾವಿಗೆ ಮೇಲಾಧಿಕಾರಿ ಜೆಂಟಿ ನಿರ್ದೇಶಕ ಕೃಷ್ಣಪ್ಪನ ಕಿರುಕುಳವೇ ಕಾರಣ ಎಂದು ವಿಡಿಯೋ ಮಾಡಿ ಸಿಬ್ಬಂದಿಗೆ ಶೇರ್ ಮಾಡಿದ್ದಾರೆ. ಘಟನೆ ತಿಳಿದು ಪಾವಗಡ ಪೊಲೀಸರು ಹಾಗೂ ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಠಾಣೆಯಲ್ಲಿ ದೂರು ದಾಖಲಾಗಿದೆ.

ನೀರಾನೆ ದಾಳಿಯಿಂದ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಸಾವಿನ ಪ್ರಕರಣ

ಕುಟುಂಬಸ್ಥರ ಅನುಮಾನ

• **ಶಿವಮೊಗ್ಗ:** ಇಲ್ಲಿನ ಸಿಂಹಧಾಮದಲ್ಲಿನ ನೀರಾನೆ ದಾಳಿಗೆ ಒಳಗಾಗಿ ಮೃತಪಟ್ಟ ಡಾ. ಸಮೀಕ್ಷಾ ರೆಡ್ಡಿ ಅವರ ಸಾವಿನ ಪ್ರಕರಣ ಜಟಿಲವಾಗುತ್ತಿದ್ದು, ತಡ ರಾತ್ರಿ 11.30ರ ಸುಮಾರಿಗೆ ಅವರನ್ನು ಯಾರಾದರೂ ಕಳಿಸಿದ್ದರೆ? ಅಥವಾ ಸ್ವಯಂಪ್ರೇರಿತವಾಗಿ ಹೋಗಿದ್ದರೆ? ಎಂಬ ಅನುಮಾನ ಇಲಾಖೆ ವಲಯದಲ್ಲಿಯೇ ವ್ಯಕ್ತವಾಗಿದೆ.



ಯಾವುದೇ ವನ್ಯ ಪ್ರಾಣಿಗಳಿಗೆ ಚಿಕಿತ್ಸೆ ನೀಡಲು ತೆರಳುವಾಗ ಒಬ್ಬರು ಇಬ್ಬರು ಹೋಗುವಂತಿಲ್ಲ. ಆ ಪ್ರಾಣಿಗೆ ಸಂಬಂಧಿಸಿದ ಕೇರ್‌ಟೇಕರ್‌ನಿಂದ ಹಿಡಿದು, ಸಂಬಂಧಿಸಿದ ಫಾರೆಸ್ಟರ್, ವೈದ್ಯರ ಸಹಾಯಕರು, ಅರವಳಿಗೆ ತಜ್ಞರು, ಅಟೆಂಡರ್ ಇರಬೇಕು. ಆದರೆ ಇಲ್ಲಿ ಇವರ ಯಾರ ಪಾತ್ರವೂ ಇಲ್ಲ.

ನೀರಾನೆ (ಹಿಪ್ಪೋಪಟಾಮಸ್) ದೈತ್ಯ ಕಾಯದ ಪ್ರಾಣಿ. ಕಾಡುಕೋಣ, ಆನೆ, ಘೇಂಡಾ ಮೃಗಗಳ ರೀತಿಯೇ ಇರುವ ಹಾಗೂ ಸ್ವಭಾವದಲ್ಲೂ ಅದೇ ರೀತಿ ಇರುವ ಪ್ರಾಣಿ. ಈ ಪ್ರಾಣಿ ಇಲ್ಲಿಯ ಪರಿಸರದ್ದೇ ಅಲ್ಲ, ಆದರೆ ಮನುಷ್ಯ ಪಳಗಿಸಿದ ಮಾತ್ರಕ್ಕೆ ಈ ವಾತಾವರಣಕ್ಕೆ ಹೊಂದಿಕೊಂಡಿರುವ ಪ್ರಾಣಿ. ಅದರಲ್ಲೂ ಟ್ರೈನಿ ವೈದ್ಯಗೆ ಇದರ ಸ್ವಭಾವ ಗೊತ್ತಿರಲಿಕ್ಕಿಲ್ಲ. ಪ್ರತಿದಿನ ಸಂಜೆ 5 ಗಂಟೆ ಮೇಲೆ ಇಡೀ ಸಫಾರಿ ಬಂದ್ ಆಗುತ್ತದೆ. ಪ್ರವಾಸಿಗರು ಯಾರೂ ಇರುವುದಿಲ್ಲ, ಸಿಬ್ಬಂದಿ ಮಾತ್ರ ಇರುತ್ತಾರೆ. ಇರುವ ಸಿಬ್ಬಂದಿಗಳೂ ಕೂಡ ರಾತ್ರಿ ಗಸ್ತು ಮಾಡುವುದು, ಪ್ರಾಣಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕಿದೆ. ಅದರಲ್ಲೂ ಗರ್ಭಾವಸ್ಥೆಯಲ್ಲಿರುವ ಪ್ರಾಣಿಗಳ ಮೇಲೆ ಹೆಚ್ಚಿನ ನಿಗಾ ಇಡಲಾಗುತ್ತದೆ.

ಹಂಸಿಣಿಯ (ನೀರಾನೆ) ಕೇರ್ ಟೇಕರ್ ಪವನ್ ಸಂಜೆ 6 ಗಂಟೆಗೆ ಬೀಗ ಹಾಕಿಕೊಂಡು ತಾನು ಹೋಗಿರುವುದಾಗಿ ಈಗಾಗಲೇ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದಾರೆ. ತರಬೇತಿ ವೈದ್ಯೆ ಸಮೀಕ್ಷಾ ಹೋಗಿರುವುದು ತಮ್ಮ ಗಮನಕ್ಕೆ ಬಂದಿಲ್ಲ, ತಮ್ಮ ಫೋನ್ ಸ್ವಿಚ್ ಆಫ್ ಆಗಿತ್ತು ಎಂದು ಹೇಳಿದ್ದಾರೆ.

ಕೇರ್ ಟೇಕರ್ ಸಂಬಂಧಿಸಿದ ಪ್ರಾಣಿಯ ಕೇಜ್‌ನ ಲಾಕ್ ಓಪನ್ ಮಾಡಿ ಕೊಟ್ಟ ಬಳಿಕವೇ ಚಿಕಿತ್ಸೆ ನೀಡುವುದು ನಿಯಮ. ಇದಕ್ಕೆ ಬೇಕಾದ ಮುಂಜಾಗ್ರತೆ ತೆಗೆದುಕೊಳ್ಳಬೇಕಿತ್ತು. ಯಾವುದೇ ವನ್ಯ ಪ್ರಾಣಿ ಮರಿ ಹಾಕುವ ಸಮಯದಲ್ಲಿ ನಿಗಾ ಇಡಬಹುದೇ ವಿನಃ ಚಿಕಿತ್ಸೆ ನೀಡಿ ಸುಖ ಪ್ರಸವ ಮಾಡಿಸುವುದು ವನ್ಯ ಪ್ರಾಣಿಗಳ ವಿಚಾರದಲ್ಲಿ ಕಷ್ಟವೆನ್ನಲಾಗುತ್ತದೆ. ಆದರೂ ಸಮೀಕ್ಷಾ ಉಷ್ಣತೆ ಚೆಕ್ ಮಾಡಲು ಮುಂದಾಗಿದ್ದರು ಎನ್ನಲಾಗಿದೆ.



ಅನುಮಾನಗಳಿವೆ – ತನಿಖೆಯಾಗಲಿ


ವೈದ್ಯೆಯ ಸಂಬಂಧಿಕರು ಕೂಡ ಈ ಸಂಬಂಧ ಮಾಧ್ಯಮಗಳಲ್ಲಿ ಮಾತನಾಡಿದ್ದು, ಸಮೀಕ್ಷಾ ಮೃತಪಟ್ಟಿರುವ ಕಾರಣ ವಿವಾದ ಸೃಷ್ಟಿಸಲಾಗುತ್ತಿದೆ. ಆಕೆ ಈಗ ಇಲ್ಲ ಎಂಬ ಕಾರಣದಿಂದ ಈಗ ಏನೇನೋ ಹೇಳುತ್ತಿದ್ದಾರೆ. ಚಿಕಿತ್ಸೆ ನೀಡಲು ಕಳಿಸಿದವರು ಈಗ ಬಾಯಿ ಬಿಡುತ್ತಿಲ್ಲ. ಹಾಗಿದ್ದರೆ ಕೇಜ್‌ನ ಬೀಗ ತೆಗೆದವರಾರು? ಬೀಗ ತೆಗೆಯಲು ಅನುಮತಿ ನೀಡಿದವರಾರು? ಇದೆಲ್ಲವೂ ಪ್ರಶ್ನಾರ್ಹವಾಗಿದೆ. ಈ ಸಂಬಂಧ ಸೂಕ್ತ ತನಿಖೆ ನಡೆಯಬೇಕೆಂದು ಆಗ್ರಹಿಸಿದ್ದಾರೆ.

ಮೃಗಾಲಯ ಪ್ರಾಧಿಕಾರದ ಅಧ್ಯಕ್ಷರ ಭೇಟಿ: ತನಿಖೆ

• **ಶಿವಮೊಗ್ಗ:** ಘಟನೆಯ ಹಿನ್ನೆಲೆಯಲ್ಲಿ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಕೆ.ರಂಗಸ್ವಾಮಿ ತ್ಯಾವರೆಕೊಪ್ಪ ಸಿಂಹಧಾಮಕ್ಕೆ ಶನಿವಾರ ಭೇಟಿ ನೀಡಿ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ನಂತರ ಮಾತನಾಡಿ, ತರಬೇತಿ ಪಶುವೈದ್ಯೆ ಡಾ. ಸಮೀಕ್ಷಾ ರಾತ್ರಿ ಏಕಾಂಗಿಯಾಗಿ ಮೃಗಾಲಯದ ನೀರಾನೆ ಆರೋಗ್ಯ ತಪಾಸಣೆಗೆ ಮುಂದಾಗಿದ್ದು ಏಕೆ? ಆಕೆಗೆ ಯಾರು ಅಂತಹ ಆದೇಶ ನೀಡಿದ್ದರೆಂಬುದನ್ನು ಪತ್ತೆ ಮಾಡಲು ಸೂಕ್ತ ತನಿಖೆ ನಡೆಸುವುದಾಗಿ ಹೇಳಿದರು. ಸರ್ಕಾರ ಏನೇ ಪರಿಹಾರ ನೀಡಿದರೂ ಪಾಲಕರ ಶೋಕ ತಣಿಸಲು ಸಾಧ್ಯವಿಲ್ಲ. ಯುವ ವೈದ್ಯೆಯ ಸಾವು ದುರದೃಷ್ಟಕರ. ಅರಣ್ಯ ಸಚಿವರು ಇಲಾಖಾ ತನಿಖೆಗೆ ಸೂಚಿಸಿದ್ದಾರೆ. ಪೊಲೀಸ್ ತನಿಖೆಯೂ ನಡೆಯುತ್ತಿದೆ. ನಿಜಾಂಶ ತಿಳಿಯಲಿದೆ. ಮಾರ್ಗಸೂಚಿ ಉಲ್ಲಂಘಿಸಿದವರಿಗೆ ಶಿಕ್ಷೆ ನಿಶ್ಚಿತ ಎಂದರು. ಇಬ್ಬರು ಸಿಬ್ಬಂದಿಯೊಂದಿಗೆ ಡಾ. ಸಮೀಕ್ಷಾ ಪರೀಕ್ಷೆಗೆ ತೆರಳಿದ್ದರು ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡಿದ್ದರು. ಸಿಸಿ ಕ್ಯಾಮರವನ್ನು ಪೊಲೀಸರು ಕೊಂಡೊಯ್ದಿದ್ದಾರೆ. ಮಾರ್ಗಸೂಚಿ ಉಲ್ಲಂಘನೆಯಾಗಿದೆಯೇ? ಎಂಬುದನ್ನು ಗಮನಿಸಲಾಗುವುದು ಎಂದು ಹೇಳಿದ್ದ.

ಸ್ವಯಂಪ್ರೇರಿತವಾಗಿ ಬಿಡುಗಡೆ ಇಲ್ಲ: ಹೈ

• **ಬೆಂಗಳೂರು:** ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿಯು 20 ವರ್ಷ ಜೈಲು ಶಿಕ್ಷೆ ಪೂರೈಸಿದ ಬಳಿಕ ಸ್ವಯಂ ಪ್ರೇರಿತವಾಗಿ ಬಿಡುಗಡೆ ಮಾಡುವ ಯಾವುದೇ ತೆರನಾದ ಕಾನೂನಾತ್ಮಕ ಹಕ್ಕಿಲ್ಲ ಎಂದು ಕರ್ನಾಟಕ ಹೈಕೋರ್ಟ್ ತೀರ್ಪಿತ್ತಿದೆ.



ಮೈಸೂರು ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ನಗರದ ಕೋರಮಂಗಲ ಮೂಲದ ಕಿಶನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಕ್ಷಮಾದಾನ ಅಥವಾ ಅವಧಿಗೂ ಮುನ್ನ ಅಪರಾಧಿಯನ್ನು ಬಿಡುಗಡೆ ಮಾಡುವ ಪ್ರಶ್ನೆಯು ಶಾಸನಬದ್ಧ ನಿಬಂಧನೆ ಮತ್ತು ನೀತಿಯ ಅಡಿ ಸೂಕ್ತ ಸರ್ಕಾರಕ್ಕೆ ಮಾತ್ರ ಇದೆ ಎಂದು ನ್ಯಾಯಾಲಯ ತಿಳಿಸಿದೆ.

ಅಪರಾಧಿಯು 20 ವರ್ಷ ಶಿಕ್ಷೆ ಪೂರೈಸಿದ ಬಳಿಕ ಜೀವಾವಧಿ ಶಿಕ್ಷೆಗೆ ಗುರಿಯಾದವನನ್ನು ಬಿಡುಗಡೆ ಮಾಡಬಹುದಾಗಿ ಐಪಿಸಿ ಸೆಕ್ಷನ್ 57 ಹೇಳುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಕಾನೂನಿನ ಅಡಿ ಪರಿವರ್ತನೆ, ಕ್ಷಮಾದಾನ ಸಿಗದ ಹೊರತು ಜೈಲು ಶಿಕ್ಷೆಯನ್ನು ಸೀಮಿತಗೊಳಿಸುವ ನಿರ್ದಿಷ್ಟ ನ್ಯಾಯಾಂಗ ನಿರ್ದೇಶನದ ಗೈರಿನ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ವಿಧಿಸಿರುವ ಜೀವಾವಧಿಶಿಕ್ಷೆಯನ್ನು ಬದುಕಿರುವವರೆಗಿನ ಶಿಕ್ಷೆ ಎಂದು ಪರಿಗಣಿಸಬೇಕಾಗುತ್ತದೆ ಎಂದೂ ಪೀಠ ಹೇಳಿದೆ.

ಅಪರಾಧಿ ಕಿಶನ್ ಜೈಲಿನಲ್ಲಿ 20 ವರ್ಷ ಕಳೆದಿರುವುದರಿಂದ ಸರ್ಕಾರಕ್ಕೆ ಕ್ಷಮಾದಾನ ಕೋರಿಕೆ ಸಲ್ಲಿಸಲು ಅರ್ಹರಾಗಿದ್ದಾರೆ. ಸರ್ಕಾರ ಕ್ಷಮಾದಾನ ನೀತಿ ಮತ್ತು ಸೂಕ್ತ ಶಾಸನಬದ್ಧ ನಿಬಂಧನೆಗಳ ಅಡಿ ಕ್ಷಮಾದಾನಕೋರಬಹುದಾಗಿದೆ. ಇಂತಹ ಅರ್ಜಿ ಸಲ್ಲಿಸಿದರೆ ಶಿಕ್ಷೆ ಪರಿಶೀಲನಾ ಮಂಡಳಿಯು ಪ್ರಕರಣದ ಆಧಾರದ ಮೇಲೆ ಅಪರಾಧಿಯು ಶಿಕ್ಷೆ ಅನುಭವಿಸಿರುವ ಅವಧಿ, ಅರ್ಜಿದಾರನ ನಡತೆ, ಅಪರಾಧದ ಸ್ವರೂಪ, ಸಂತ್ರಸ್ತರ ಹಿತಾಸಕ್ತಿ, ಅನ್ವಯಿಸುವ ನೀತಿಯನ್ನು ಪರಿಗಣಿಸಿ ನಿರ್ಧರಿಸಬಹುದು ಎಂದು ಹೇಳಿದೆ.

ಪ್ರಕರಣದ ಹಿನ್ನೆಲೆ

ಇಬ್ಬರು ಮಕ್ಕಳನ್ನು ಅಪಹರಿಸಿ ಕೊಲೆ ಮಾಡಿದ ಪ್ರಕರಣದಲ್ಲಿ ಅರ್ಜಿದಾರ ಕಿಶನ್ ಸೇರಿ ಮೂವರಿಗೆ ಬೆಂಗಳೂರಿನ ಸತ್ರ ನ್ಯಾಯಾಲಯವು ಮರಣದಂಡನೆ ವಿಧಿಸಿತ್ತು. ಈ ಪ್ರಕರಣದ ಮೇಲ್ಮನವಿ ಪ್ರಕ್ರಿಯೆಯು 2013 ರಲ್ಲಿ ಪೂರ್ಣಗೊಂಡಿದ್ದು, ಹೈಕೋರ್ಟ್ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿತ್ತು. ಐಪಿಸಿ ಸೆಕ್ಷನ್ 57ರ ಅಡಿ 14 ವರ್ಷ ಜೈಲು ಶಿಕ್ಷೆ ಪೂರ್ಣಗೊಂಡ ಬಳಿಕ ಶಿಕ್ಷೆಯ ಅವಧಿಯಲ್ಲಿ ಯಾವುದೇ ಕಡಿತ ಇರುವುದಿಲ್ಲ ಎಂಬ ಸ್ಪಷ್ಟ ನಿರ್ದೇಶನವನ್ನೂ ನ್ಯಾಯಾಲಯ ನೀಡಿತ್ತು. 2025 ರ ಜ. 15 ರಂದು 20 ವರ್ಷ ಶಿಕ್ಷೆ ಪೂರೈಸಿದ್ದ ಕಿಶನ್, ಐಪಿಸಿ ಸೆಕ್ಷನ್ 57ರ ಅಡಿ ಕ್ಷಮಾದಾನಕ್ಕೆ ಅರ್ಹವಾಗಿರುವುದರಿಂದ ಬಿಡುಗಡೆ ಮಾಡುವಂತೆ ಕೋರಿದ್ದರು.

ಶ್ರೀನಿವಾಸ ದಾಸಕರಿಯಪ್ಪರಿಂದ 5.76 ಕೋಟಿ ರೂ. ಚರಾಸ್ತಿ ಘೋಷಣೆ

• **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ ದಾಸಕರಿಯಪ್ಪ ಒಟ್ಟು 5.76 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರಾಸ್ತಿ ಘೋಷಿಸಿಕೊಂಡಿದ್ದಾರೆ.



ಚುನಾವಣಾಧಿಕಾರಿಗೆ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ತಮ್ಮ ಹೆಸರಿನಲ್ಲಿ 34.79 ಲಕ್ಷ ರೂ. ಮೌಲ್ಯದ ಚರಾಸ್ತಿ ಹಾಗೂ 5.41 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಇರುವುದಾಗಿ ಘೋಷಿಸಿದ್ದಾರೆ. ಸ್ಥಿರಾಸ್ತಿಯಲ್ಲಿ 1.13 ಕೋಟಿ ರೂ. ಮೌಲ್ಯದ ಪಿತ್ರಾರ್ಜಿತ ಕೃಷಿ ಭೂಮಿ ಹಾಗೂ 4.27 ಕೋಟಿ ರೂ. ಮೌಲ್ಯದ ಸ್ವಯಾರ್ಜಿತ ಆಸ್ತಿಗಳು ಸೇರಿವೆ. ಕೈಯಲ್ಲಿ 3.60 ಲಕ್ಷ ರೂ. ನಗದು ಇದ್ದು, ತುಂಬಿಗೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 2.96 ಲಕ್ಷ ರೂ. ಸಾಲ ಇರುವುದಾಗಿ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಸಮರ್ಥ್ 4.25 ಕೋಟಿ ರೂ. ಶ್ರೀಮಂತ ಪಕ್ಷೇತರ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಸಮರ್ಥ್ ಶಾಮನೂರು 4.25 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿ ಹೊಂದಿರುವುದಾಗಿ ಘೋಷಿಸಿಕೊಂಡಿದ್ದಾರೆ.

27 ವರ್ಷದ ಯುವ ಉದ್ಯಮಿ ಸಮರ್ಥ್‌ಗೆ 2.17 ಕೋಟಿ ಮೌಲ್ಯದ ಚರ ಆಸ್ತಿ ಹಾಗೂ 2.08 ಕೋಟಿ ಮೌಲ್ಯದ ಕೃಷಿ ಭೂಮಿ ಸೇರಿದಂತೆ ಸ್ಥಿರ ಆಸ್ತಿ ಇದೆ. ಸಮರ್ಥ್ ಹೆಸರಿನಲ್ಲಿ 8.35 ಲಕ್ಷ ರೂ. ನಗದು ಹಣವಿದ್ದು, ವಿವಿಧ ಬ್ಯಾಂಕ್ ಖಾತೆಗಳಲ್ಲಿ ಹೂಡಿಕೆ ಹಾಗೂ 14.45 ಲಕ್ಷ ಮೌಲ್ಯದ ಚಿನ್ನಾಭರಣ ಹೊಂದಿದ್ದಾರೆ.

ದಾವಣಗೆರೆ ತಾಲೂಕಿನ ಆನೆಕೊಂಡ ಮತ್ತು ಬೇತೂರು ಗ್ರಾಮಗಳಲ್ಲಿ ಒಟ್ಟು 6 ಎಕರೆ 14 ಗುಂಟೆ ಕೃಷಿ ಭೂಮಿ ಹೊಂದಿದ್ದಾರೆ. ಆಸ್ತಿಯ ಜೊತೆಗೆ ಸಮರ್ಥ್ ಹೆಸರಿನಲ್ಲಿ ಒಟ್ಟು 3.52 ಕೋಟಿ ಮೊತ್ತದ ಸಾಲ ಹಾಗೂ ಹೊಣೆಗಾರಿಕೆಗಳಿವೆ ಎಂದು ಅಫಿಡವಿಟ್‌ನಲ್ಲಿ ಉಲ್ಲೇಖಿಸಲಾಗಿದೆ. 2024–25ನೇಸಾಲಿನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಅವರು 96.05 ಲಕ್ಷ ರೂ. ವಾರ್ಷಿಕ ಆದಾಯ ತೋರಿಸಿದ್ದಾರೆ.

ಬಸ್ ಟಿಕೆಟ್ ದರ ಹೆಚ್ಚಿಸಲ್ಲ: ರಾಮಲಿಂಗಾರೆಡ್ಡಿ

• **ಬೆಂಗಳೂರು:** ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದ್ದರೂ ರಾಜ್ಯದಲ್ಲಿ ಬಸ್ ಟಿಕೆಟ್ ದರವನ್ನು ಹೆಚ್ಚಿಸುವುದಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಪ್ರಾಚ್ಯ ಯುದ್ಧದ ಪರಿಣಾಮವಾಗಿ ಡೀಸೆಲ್ ದರಗಳು ಏರಿಕೆಯಾಗಿದ್ದು, ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಡೀಸೆಲ್ ಖರೀದಿ ಮಾಡುತ್ತಿರುವುದರಿಂದ ವೆಚ್ಚದ ಒತ್ತಡ ಹೆಚ್ಚಾಗಿದೆ. ಆದರೂ, ಈ ಭಾರವನ್ನು ಪ್ರಯಾಣಿಕರ ಮೇಲೆ ಹಾಕುವ ಉದ್ದೇಶ ಇಲ್ಲ ಎಂದರು. ಯುದ್ಧದ ಪರಿಣಾಮವಾಗಿ ಇಂಧನ ದರಗಳಲ್ಲಿ ಏರಿಕೆ ಆಗಿದೆ. ಡೀಸೆಲ್ ದರ ಏರಿಕೆಯಿಂದ ಖರ್ಚು ಹೆಚ್ಚಾಗಿದೆ. ಆದರೆ ಯಾವುದೇ ಕಾರಣಕ್ಕೂ ಬಸ್ ಟಿಕೆಟ್ ದರ ಏರಿಕೆ ಮಾಡುವುದಿಲ್ಲ. ಯುದ್ಧ ನಿಂತರೆ ಬೆಲೆಗಳು ತಾನಾಗಿಯೇ ಕಡಿಮೆಯಾಗುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕೋರಮಂಗಲದಲ್ಲಿ ಬಯೋ ಗ್ಯಾಸ್: ಕೋರಮಂಗಲದ ನಿವಾಸಿಗಳಿಂದ ಸಂಗ್ರಹಿಸಿದ ಸಂಪೂರ್ಣ ಹಸಿ ಕಸವನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ, ಬೆಂಗಳೂರಿನ ಮೊದಲ ಬಯೋ ಗ್ಯಾಸ್ ಪ್ಲಾಂಟ್ (2018 ರಲ್ಲಿ ಪ್ರಾರಂಭವಾದ 8 ಟನ್ ಸಾಮರ್ಥ್ಯದ ಘಟಕ) ಇದರೊಂದಿಗೆ, ಹೆಚ್ಚುವರಿಯಾಗಿ ನಿರ್ಮಿಸಲಾದ ದಿನಕ್ಕೆ 5 ಟನ್ ಸಾಮರ್ಥ್ಯದ ಜೈವಿಕ ಅನಿಲ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಕೋರಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಮೊಟ್ಟಮೊದಲ ಬಾರಿಗೆ ಬಯೋ ಗ್ಯಾಸ್ ಆರಂಭವಾಗಿದ್ದಕ್ಕೆ ಹಾಗೂ ಅದರ ಲಾಭವನ್ನು ಹತ್ತಿರದ ಹೋಟೆಲ್‌ಗಳು ಪಡೆದುಕೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಎಲ್ಲಾ ವಿಧಾನಸಭಾ ಕ್ಷೇತ್ರದಲ್ಲೂ ಬಯೋಗ್ಯಾಸ್ ಉತ್ಪಾದನಾ ಘಟಕ ಶುರುಮಾಡಿದರೆ, ಗ್ಯಾಸ್ ಸಮಸ್ಯೆ ಜತೆ ಕಸದ ಸಮಸ್ಯೆ ಕೂಡ ಮುಕ್ತಿ ಸಿಗಲಿದೆ ಎಂದರು.



ಡಾ.ಸಮೀಕ್ಷಾ ಅವರ ಆತ್ಮಕ್ಕೆ ಶಾಂತಿ ಸಿಗಲಿ

ಮೂಕಪ್ರಾಣಿಗಳ ನೋವಿಗೆ ಸ್ಪಂದಿಸಲೆಂದೇ ಪಶುವೈದ್ಯಕೀಯ ವೃತ್ತಿ ಆಯ್ದುಕೊಂಡಿದ್ದ ಆನೇಕಲ್ಲ ಹೆಮ್ಮೆಯ ಪುತ್ರಿ, ಡಾ.ಸಮೀಕ್ಷಾ ರೆಡ್ಡಿ ಅವರ ನಿಧನದ ಸುದ್ದಿ ತಿಳಿದು ಅತೀವ ದುಃಖವಾಯಿತು. ಗರ್ಭಿಣಿ ನೀರಾನೆಯ ಜೀವ ಉಳಿಸಲು ಹೋದಾಗ ಸಂಭವಿಸಿದ ದುರಂತ ನಿಜಕ್ಕೂ ವಿಧಿಯ ಕ್ರೂರ ಆಟವಾಗಿದೆ. ತನ್ನ 27 ನೇ ವಯಸ್ಸಿನಲ್ಲೇ ಸಮಾಜಕ್ಕೆ ಮಾದರಿಯಾಗಿದ್ದ ಈ ಚೇತನ ಅಕಾಲಿಕವಾಗಿ ಮೃತಪಟ್ಟಿರುವುದು. ಸಕಲವಾರ ಗ್ರಾಮಕ್ಕೆ ಮತ್ತು ಇಡೀ ನಮ್ಮ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದ್ದು, ಡಾ.ಸಮೀಕ್ಷಾ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಎಂದು ಹೇಳಿದ್ದಾರೆ.

ನಕಲಿ ಸಿಬಿಐ ಡೈರೆಕ್ಟರ್‌ನಿಂದ ಬಹುಕೋಟಿ ವಂಚನೆ ಪ್ರಕರಣ

ವೃದ್ಧನಿಗೆ ₹15.45 ಕೋಟಿ ಪಂಗನಾಮ

• **ಬೆಳಗಾವಿ:** ಸಿಬಿಐ ಡೈರೆಕ್ಟರ್ ಹೆಸರಿನಲ್ಲಿ ನಗರದ ವೃದ್ಧ ನಾಗರಿಕರೊಬ್ಬರಿಗೆ ಕರೆ ಮಾಡಿದ ಆನ್‌ಲೈನ್ ಅಪರಾಧಿಗಳು ಬರೋಬ್ಬರಿ 15.45ಕೋಟಿ ರೂ.ಗಳನ್ನು ಆರ್‌ಟಿಜಿಎಸ್ ಮೂಲಕ ಲಪಟಾಯಿಸಿರುವ ಮಾಹಿತಿ ತಡವಾಗಿ ಹೊರಬಿದ್ದಿದೆ.

ಕೇಂದ್ರ ತನಿಖಾ ದಳದ ನಿರ್ದೇಶಕ ಕೆ.ಸುಬ್ರಹ್ಮಣ್ಯಂ ಎಂದು ಹೇಳಿಕೊಂಡು ನಗರದ ಹಿರಿಯ ನಾಗರಿಕರಾದ ಇಲ್ಲಿನ ಟಿಳಕವಾಡಿ ಆಗರಕರ ರಸ್ತೆಯ ಅಜಿತ ಗೋಪಾಲಕೃಷ್ಣ ಸರಾಫ್ (81) ಎಂಬುವವರಿಗೆ ಕಳೆದ ಫೆ.5ರಂದು ಕರೆ ಮಾಡಿ ಬ್ಲ್ಯಾಕ್ ಮೇಲ್ ಮಾಡಿ ಹೆದರಿಸಿರುವ ಪ್ರಕರಣ ಬೆಳಕಿಗೆ ಬಂದಿದೆ. ಫೆಬ್ರವರಿ 5ರ ಬೆಳಗ್ಗೆ ಸಿಬಿಐ ಕಚೇರಿಯಿಂದ ಫೋನ್ ಮಾಡುತ್ತಿರುವುದಾಗಿ ವಂಚನೆಗೊಳಗಾದ ಅಜಿತ ಗೋಪಾಲಕೃಷ್ಣ ಸರಾಫ್ ಎಂಬುವವರ ಮೊಬೈಲ್‌ಗೆ ಕರೆ ಮಾಡಿ ನಿಮ್ಮ ಬಳಿ ಎರಡು ಸಿಮ್ ಕಾರ್ಡ್ ಆಕ್ಟೀವ್ ಇವೆ.

ಅವುಗಳಿಂದ ಜೆಟ್ ಏರವೇಸ್ ಸಿಇಓ ನರೇಶ್ ಗೋಯಲ್ ಅವರಿಗೆ ಕರೆ ಮಾಡಿ ಸಂಪರ್ಕ ಹೊಂದಿದ್ದೀರಿ ಎಂದು ಕಥೆ ಕಟ್ಟಿ ಹೆದರಿಸಿದ್ದು, ಸದ್ಯ ನರೇಶನನ್ನು ಬಂಧಿಸಲಾಗಿದ್ದು ನೀವು ನರೇಶನೊಂದಿಗೆ ಮನಿಲಾಂಡ್‌ರಿಂಗ್‌ನಲ್ಲಿ ತೊಡಗಿ 25 ಲಕ್ಷ ಹಣ ಕೆನರಾ ಬ್ಯಾಂಕ್ ಕೊಟ್ಟು 5 ಲಕ್ಷ ಕಮಿಷನ್ ಪಡೆದಿದ್ದೀರಿ ಎಂದು ದೂರುದಾರರಿಗೆ ಹೆದರಿಸಿದ್ದಾರೆ.

ಸಿಬಿಐ ಹೆಸರಿನಲ್ಲಿ ಆನ್‌ಲೈನ್ ವಂಚನೆ

ಆನ್‌ಲೈನ್ ಅಪರಾಧಿಗಳು ದೂರುದಾರರ ಎಫ್‌ಡಿ ಹಣ ಹಾಗೂ ಷೇರುಗಳ ಬಗ್ಗೆ ಮಾಹಿತಿ ಪಡೆದು ದೂರುದಾರರು ಮೋತಿಲಾಲ ಓಸ್ವಾಲ್ ಕಂಪನಿಯಲ್ಲಿ ಹೊಂದಿದ್ದ ಹೂಡಿಕೆ ಷೇರುಗಳನ್ನು ಮಾರಿಸಿ ವಂಚನೆಗೊಳಗಾದ ದೂರುದಾರನಿಂದ 15.45ಕೋಟಿ ಹಣವನ್ನು ಆರ್‌ಟಿಜಿಎಸ್ ಮೂಲಕ ಫೆ.7ರಂದು ಮತ್ತು ಮಾ.9ರವರೆಗೆ ಲಪಟಾಯಿಸಿದ್ದಾರೆ.

ಸಿಬಿಐ ನಿರ್ದೇಶಕ, ಕೆ.ಸುಬ್ರಹ್ಮಣ್ಯಂ, ಸಿಬಿಐ ಚೀಫ್ ಶಿವಾ ಸುಬ್ರಹ್ಮಣ್ಯ ಹಾಗೂ ಆರ್‌ಬಿಐ ವೀಕ್ಷಣಾಧಿಕಾರಿ ಜಾರ್ಜ್ ಮ್ಯಾಥ್ಯೂ ಹೆಸರಿನ ವಂಚಕರು ಬೃಹತ್ ಹಣಕಾಸಿನ ಅಪರಾಧ ಎಸಗಿರುವುದ ಬೆಳಗಾವಿ ಪೊಲೀಸರ ನಿದ್ದೆಗೆಡಿಸಿದೆ. ಮಾಹಿತಿ ತಂತ್ರಜ್ಞಾನ ಕಾಯ್ದೆ 2008ರ 66ಡಿ, 66ಸಿ, ಬಿಎನ್‌ಎಸ್ 2023ರ 318(4), 319(2) ರ ಅಡಿ ಪ್ರಕರಣ ಮಾ.18ರಂದು ನಗರದ ಟಿಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳಗಾವಿ ಸಿಇಎನ್ ಠಾಣೆ ಪೊಲೀಸ್ ಇನ್ಸಪೆಕ್ಟರ್ ಶ್ರೀಶೈಲ್ ಗಾಬಿ ಅವರು ತನಿಖೆ ಮುಂದುವರಿಸಿದ್ದಾರೆ.

ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ಹೇಳಿಕೆ

ನವೀಕರಿಸುವ ವಿದ್ಯುತ್ ಬಳಕೆಯಲ್ಲಿ ಮುಂಚೂಣಿ

• **ಹೊಸದಿಲ್ಲಿ /ಬೆಂಗಳೂರು:** ಭವಿಷ್ಯದ ವಿದ್ಯುತ್ ಅಗತ್ಯತೆಗಳಿಗೆ ಸಜ್ಜಾಗಿರುವ ಗ್ರಿಡ್ ನಿರ್ಮಾಣ, ಭೌಗೋಳಿಕ ಸವಾಲುಗಳು ಹಾಗೂ ಸಪ್ಲೇ ಚೈನ್ ನಿರ್ವಹಣೆಯನ್ನು ಕರ್ನಾಟಕ ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತಿದೆ. ರಾಜ್ಯ ನವೀಕರಿಸಬಹುದಾದ ವಿದ್ಯುತ್ ಬಳಕೆಯಲ್ಲಿ ಮುಂಚೂಣಿಯಲ್ಲಿದೆ. ಇದನ್ನು ಇನ್ನಷ್ಟು ವಿಸ್ತರಿಸುವ ನಿಟ್ಟಿನಲ್ಲಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಹೊಸದಿಲ್ಲಿಯಲ್ಲಿ ನಡೆದ ಪ್ರತಿಷ್ಠಿತ ಭಾರತ್ ಎಲೆಕ್ಟ್ರಿಕ್ ಸಿಟಿ ಸಮ್ಮಿಟ್–2026 ರಲ್ಲಿ ಭಾಗವಹಿಸಿ ಮಾತನಾಡಿ, ಕರ್ನಾಟಕ ರಾಜ್ಯದ ಒಟ್ಟು 31,000 ಮೆ.ವ್ಯಾ ವಿದ್ಯುತ್ ಸಾಮರ್ಥ್ಯದಲ್ಲಿ ಸರಿಸುಮಾರು 21,000 ಮೆ.ವ್ಯಾ (ಶೇ.57ರಷ್ಟು) ವಿದ್ಯುತ್ ಅನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಪಡೆಯಲಾಗುತ್ತಿದೆ. ಹೆಚ್ಚಿನ ಬಿಸಿಲಿನಿಂದಾಗಿ ಉತ್ತರ ಕರ್ನಾಟಕವು ನವೀಕರಿಸಬಹುದಾದ ವಿದ್ಯುತ್ ಉತ್ಪಾದನೆಯ ಕೇಂದ್ರವಾಗಿದ್ದರೆ, ವಿದ್ಯುತ್ ಬೇಡಿಕೆಯ ಬಹುಪಾಲು ದಕ್ಷಿಣ ಭಾಗಗಳಲ್ಲಿ (ಬೆಂಗಳೂರು) ಕೇಂದ್ರೀಕೃತವಾಗಿದೆ. ಈ ಭೌಗೋಳಿಕ ಸವಾಲನ್ನು ನಿಭಾಯಿಸಲು ಕೆಪಿಟಿಸಿಎಲ್ ಈಗಾಗಲೇ 7,000 ಮೆ.ವ್ಯಾ ಸಾಮರ್ಥ್ಯವನ್ನು ನಿರ್ವಹಿಸುವ ಗ್ರೀನ್ ಎನರ್ಜಿ ಕಾರಿಡಾರ್‌ನ 1 ಮತ್ತು 2ನೇ ಹಂತಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ ಎಂದು ತಿಳಿಸಿದ್ದಾರೆ.



19 ಗಿ.ವ್ಯಾ ಬೃಹತ್ ಕಾರಿಡಾರ್ ಯೋಜನೆ: ಈ ಎರಡೂ ಹಂತಗಳ ಯಶಸ್ಸಿನ ಹಿನ್ನಲೆಯಲ್ಲಿ, ರಾಜ್ಯದ ವಿದ್ಯುತ್ ಪ್ರಸರಣ ಜಾಲವನ್ನು ಮತ್ತಷ್ಟು ಬಲಪಡಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ, ಉತ್ತರ ಭಾಗದಿಂದ ದಕ್ಷಿಣ ಭಾಗಕ್ಕೆ ವಿದ್ಯುತ್ ಒದಗಿಸಲು ನಾವು 19 ಗಿಗಾವ್ಯಾಟ್ ಗ್ರೀನ್ ಎನರ್ಜಿ ಕಾರಿಡಾರ್ ಯೋಜನೆಯನ್ನು ರೂಪಿಸುತ್ತಿದ್ದೇವೆ. ಈ ಮಹತ್ವಾಕಾಂಕ್ಷೆಯ ಯೋಜನೆಯು ಮೂರು 765 ಕೆ.ವಿ ಸ್ಟೇಷನ್‌ಗಳು, ಇಪ್ಪತ್ತನಾಲ್ಕು 400 ಕೆ.ವಿ ಸಬ್‌ಸ್ಟೇಷನ್‌ಗಳು, ಸುಮಾರು 500 ಸರ್ಕ್ಯೂಟ್ ಕಿಲೋಮೀಟರ್ ಪ್ರಸರಣ ಮಾರ್ಗಗಳ ಸ್ಥಾಪನೆಯನ್ನು ಒಳಗೊಂಡಿರಲಿದೆ, ಎಂದು ವಿವರಿಸಿದ್ದಾರೆ. ಕೆಪಿಟಿಸಿಎಲ್ ಪ್ರಸ್ತುತ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್ಸ್ ಮತ್ತು ಪಂಪ್ಡ್ ಸ್ಟೋರೇಜ್ ಹೈಡ್ರೋ ಗಳತ್ತ ಹೆಚ್ಚಿನ ಗಮನ ಹರಿಸುತ್ತಿದೆ. ಇದು ಪೀಕ್ ಲೋಡ್ ನಿರ್ವಹಣೆಯ ವೆಚ್ಚವನ್ನು ಗಣನೀಯವಾಗಿ ಇಳಿಸುತ್ತದೆ ಎಂದರು.

> ವಿದ್ಯುತ್ ಉಪಕರಣಗಳನ್ನು ಉತ್ಪಾದಿಸುವ ಸ್ಥಳೀಯ ತಯಾರಕರಿಗೆ ನಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ನಿಟ್ಟಿನಲ್ಲಿ ಅಗತ್ಯ ನೀತಿ ರೂಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದೇವೆ.
>
> ■ ಡಾ. ರಾಮ್ ಪ್ರಸಾತ್ ಮನೋಹರ್, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ದುರ್ಲಭವಾದ ಚತುರ್ಭದ್ರಗಳು ಯಾವುವು?

ಉ. ಪ್ರಿಯವಾದ ಮಾತಿನಿಂದ ಕೂಡಿದ ದಾನ, ಗರ್ವರಹಿತವಾದ ಜ್ಞಾನ, ಕ್ಷಮಾದಿಂದ ಕೂಡಿದ ಶೌರ್ಯ ಮತ್ತು ತ್ಯಾಗದಿಂದ ಕೂಡಿದ ವಿತ್ತ.

ಈ ಹಿಂದಿನ ಪ್ರಶ್ನೋತ್ತರದಲ್ಲಿ ಚತುರ್ಭದ್ರ ಅಂದರೆ ಯಾವುವು? ಎಂಬ ವಿಷಯವನ್ನು ವಿವರಿಸಲಾಗಿತ್ತು. ನಾಲ್ಕು ಪುರುಷಾರ್ಥಗಳೇ ಚತುರ್ಭದ್ರಗಳು ಎಂಬ ವಿವರಣೆ ಅಲ್ಲಿತ್ತು. ಇದಕ್ಕೂ ಮುಂದುವರಿದ ಪ್ರಶ್ನೆ ಇದಾಗಿದೆ. ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂದು. ಅಂದರೆ ಇಲ್ಲಿ ಹೇಳಿದ ನಾಲ್ಕು ಸಂಗತಿಗಳು ನಾಲ್ಕು ಪುರುಷಾರ್ಥಗಳನ್ನು ಪಡೆಯಲು ಅತ್ಯಂತ ಸಹಕಾರಿಗಳು ಎಂಬುದು ಎರಡು ಪ್ರಶ್ನೋತ್ತರಗಳನ್ನು ಗಮನಿಸಿದಾಗ ತಿಳಿದುಬರುವ ಅಂಶವಾಗಿದೆ. ಹಾಗಾಗಿ ಈ ಉತ್ತರದಲ್ಲಿ ಚತುರ್ಭದ್ರವನ್ನು ಸಾಧಿಸಲು ಬೇಕಾದ ದುರ್ಲಭವಾದ ಚತುರ್ಭದ್ರಗಳು ಯಾವುವು? ಎಂಬುದನ್ನು ತಿಳಿಯಬೇಕಾದ ಸಂದರ್ಭವಿದೆ.

ದಾನ ಮಾಡಬೇಕು. ಆದರೆ ದಾನವನ್ನು ಮಾಡುವಾಗ ಪ್ರಿಯವಾದ ಮಾತಿನಿಂದ ದಾನ ಮಾಡಬೇಕು. ಅಂದರೆ ದಾನವನ್ನು ಕೊಡುವ ಸಂದರ್ಭದಲ್ಲಿ ಸ್ವೀಕರಿಸುವವನ ಮನಸ್ಸು ಮೃದುವಾಗಿರಬೇಕು; ಅಂತಹ ಮನಸ್ಸನ್ನು ನಿರ್ಮಿಸಬೇಕು; ಅಂತಹ ಮನಸ್ಸನ್ನು ನಿರ್ಮಿಸಲು ಇರುವ ಉತ್ತಮ ಸಾಧನವೇ ಪ್ರಿಯವಾದ ಮಾತು. ಪ್ರಿಯವಾದ ಮಾತಿನಿಂದ ದಾನ ಮಾಡಿದಾಗ ದಾನಕ್ಕೆ ಹೆಚ್ಚಿನ ಮತ್ತು ಬರುತ್ತದೆ ಎಂಬುದು ಇದರ ಅರ್ಥ. ಜ್ಞಾನವು ಗರ್ವದಿಂದ ರಹಿತವಾಗಿದ್ದಾಗ ಶೋಭಿಸುತ್ತದೆ. ಇದಕ್ಕೆ ಸಂಬಂಧಪಟ್ಟ ಒಂದು ಸುಭಾಷಿತ ಹೀಗಿದೆ – ವಿದ್ಯಾ ವಿನಯೇನ ಶೋಭತೇ ಎಂಬುದಾಗಿ. ವಿನಯ ಎಂದರೆ ಗರ್ವ ಇಲ್ಲದಿರುವುದು. ಜ್ಞಾನವು ಎತ್ತರದಲ್ಲಿರುವ ವಿಷಯ. ಅದು ನಮ್ಮಲ್ಲಿಗೆ ಬರಬೇಕಾದರೆ ಬಾಗುವಿಕೆ ಅತ್ಯಂತ ಅನಿವಾರ್ಯ. ಈ ಬಾಗುವಿಕೆಯೇ ವಿನಯ ಎಂಬುದಾಗಿ ಕರೆಸಿಕೊಳ್ಳುತ್ತದೆ. ಹಾಗಾಗಿ ಜ್ಞಾನದ ಹರಿವು ವಿನಯದಲ್ಲಿ ನೆಲೆನಿಲ್ಲುತ್ತದೆ. ವಿನಯವಂತಿಕೆ ಜ್ಞಾನವನ್ನು ಇನ್ನಷ್ಟು ಪರಿಶೋಭಿಸುತ್ತದೆ. ಶೌರ್ಯ ಎಂಬುದು ಬಹಳ ದೊಡ್ಡ ಗುಣ. ಅದು ಶರೀರ, ಇಂದ್ರಿಯ, ಮನಸ್ಸು ಇವುಗಳು ಬಲಿಷ್ಠವಾದಾಗ ರೂಪುಗೊಳ್ಳುವಂಥದ್ದು. ಈ ಗುಣವು ಪರಿಪೂರ್ಣವಾಗಬೇಕಾದರೆ ಅದಕ್ಕೆ ಕ್ಷಮಾ ಎಂಬ ಗುಣವು ಬೇಕು. ಸಹನೆ ಎಂಬುದು ಇದರ ಅರ್ಥ. ಶೌರ್ಯದಿಂದ ಕೂಡಿರುವ ವ್ಯಕ್ತಿಯು ಬಲಹೀನನಾದವನ ಮೇಲೆ ತನ್ನ ಬಲವನ್ನು ಪ್ರಯೋಗಿಸಬಾರದು; ಅದಕ್ಕೆ ಅವನಿಗೆ ಸಹನ ಅಥವಾ ಕ್ಷಮ ಎಂಬ ಗುಣ ಅತ್ಯಂತ ಆವಶ್ಯಕ. ಯಾರ ಮೇಲೆ ಬಲಪ್ರಯೋಗಿಸಬೇಕು? ಯಾರ ಮೇಲೆ ಬಲಪ್ರಯೋಗವನ್ನು ಮಾಡಬಾರದು? ಎಂಬ ವಿವೇಕವನ್ನು ಕ್ಷಮಾ ಗುಣವು ಶೌರ್ಯ ಇದ್ದವನಿಗೆ ಕಲಿಸುತ್ತದೆ.

ಮನುಷ್ಯನು ಧನವನ್ನು ಸಂಪಾದನೆ ಮಾಡಬೇಕಾದದ್ದು ಅತ್ಯಂತ ಅನಿವಾರ್ಯ. ಧನವಿಲ್ಲದಿದ್ದರೆ ಅವನ ಜೀವನ ಸಾರ್ಥಕವಲ್ಲ. ಧನವಿಲ್ಲದ ಜೀವನ ಉಸಿರಿಲ್ಲದ ಶವದಂತೆ. ಆದರೆ ಸಂಪಾದನೆ ಮಾಡಿದ ಧನವು ಉಳಿಯಬೇಕಾದರೆ ಅದು ತ್ಯಾಗದಿಂದ ಮಾತ್ರ ಸಾಧ್ಯ. ಅದಕ್ಕೆ ದಾಸರು ಹೇಳುವುದು ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ ಎಂಬುದಾಗಿ. ಇಟ್ಟು ಇಟ್ಟು ಧನವು ಹಾಳಾಗುತ್ತದೆ. ನಿಂತ ನೀರು ಕೆಡುತ್ತದೆ. ಹರಿಯುವ ನೀರು ಶುದ್ಧವಾಗಿರುತ್ತದೆ. ಸಂಪಾದಿಸಿದ ವಿತ್ತವು ತ್ಯಾಗದಿಂದ ಶುದ್ಧವಾಗುತ್ತದೆ. ಮತ್ತು ಶುದ್ಧವಾದ ಧನ – ಸಂಪತ್ತು ಅವನನ್ನು ಸಂರಕ್ಷಿಸುತ್ತದೆ. ಹಾಗಾಗಿ ತ್ಯಾಗದಿಂದ ಕೂಡಿದ ಧನವು ಆ ವ್ಯಕ್ತಿಯಲ್ಲಿ ವ್ಯಕ್ತಿತ್ವವನ್ನು ರೂಪಿಸುತ್ತದೆ. ಹೀಗೆ ದಾನ, ಜ್ಞಾನ, ಶೌರ್ಯ ಮತ್ತು ಧನ ಈ ನಾಲ್ಕು ಸಂಪತ್ತುಗಳು ಉಳಿಯಬೇಕಾದರೆ ಏನು ಮಾಡಬೇಕು ಎಂಬ ಉತ್ತರ ಈ ಪ್ರಶ್ನೋತ್ತರದಲ್ಲಿ ಇದೆ ಎಂಬುದನ್ನು ನಾವು ಗಮನಿಸಬೇಕು.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನೊಂದಿಗೆ ಮಾತಿನ ಚಕಮಕಿ

ಜರಾಸಂಧನು ಹೀಗಂದನು: ಸ್ನಾತಕವ್ರತವನ್ನು ಮುಗಿಸಿ ಬಂದ ವಿಪ್ರರು ವೇಷವಿರೋಧಿಯಾದ ಆಚಾರವುಳ್ಳವರಾಗಿ ಹೊರಗೆ ತೋರುವಂತೆ ಹೀಗೆ ಮಾಲಾಧಾರಣ –ಚಂದನ–ಲೇಪನಗಳನ್ನು ಮಾಡಿಕೊಳ್ಳುವುದಿಲ್ಲ, ಇದು ಎಲ್ಲರಿಗೂ ತಿಳಿದಿರುವಂತಹುದೇ ಸರಿ. ಆದರೆ ತಾವುಗಳು ಪುಷ್ಪಮಾಲೆಗಳನ್ನು ಧರಿಸಿದ್ದೀರಿ. ಅಷ್ಟೇ ಅಲ್ಲ, ತಮ್ಮ ತೋಳುಗಳಲ್ಲಿ ಬಿಲ್ಲಿನ ಹುರಿಯ ಚಿಹ್ನೆಗಳಿವೆ. ಹಾಗಿರಲು ನಿಜವಾಗಿ ನೀವು ಯಾರು? ಕ್ಷತ್ರಿಯರಿಗೆ ಸಲ್ಲುವ ಓಜಸ್ಸನ್ನು ಹೊಂದಿದ್ದೀರಿ. ಆದರೆ ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿದ್ದೀರಿ. ಬೇರೆ ಬೇರೆ ಬಣ್ಣಗಳನ್ನು ಹೊಂದಿರುವ ವಸ್ತ್ರಗಳನ್ನು ಧರಿಸಿರುವಿರಿ. ಹೊರಗೆ ಮಾಲ್ಯಾನುಲೇಪನಗಳನ್ನು – ಎಂದರೆ ಹಾರಚಂದನಗಳನ್ನು ಧರಿಸಿರುವಿರಿ. ನೀವು ಯಾರೆಂಬುದನ್ನು ಸತ್ಯವಾಗಿ ಹೇಳಿರಿ. ರಾಜರಿಗೆ ಶೋಭಿಸತಕ್ಕದ್ದು ಸತ್ಯವೇ ಸರಿ. ಅಷ್ಟೇ ಅಲ್ಲ, ಬರುವಾಗ ಚೈತ್ಯಪರ್ವತದ ಶಿಖರಗಳನ್ನು ಒಡೆದುಹಾಕಿದ್ದೀರಿ. ಅದು ರಾಜಾಪಚಾರವಲ್ಲವೇ? ಅದಕ್ಕಾಗಿ ನಿಮ್ಮಲ್ಲಿ ಭಯವಿರಬೇಡವೇ? ಛದ್ಮವೇಷವನ್ನು ಧರಿಸಿರುವಿರಲ್ಲದೆ ಅದ್ವಾರದಿಂದ ಪ್ರವೇಶಮಾಡಿದ್ದೀರಿ! ಯಾವ ಕಾರಣಕ್ಕಾಗಿ? ಮಾತನಾಡಿ.

ಬ್ರಾಹ್ಮಣರಾದವರಿಗಂತೂ ತಮ್ಮ ಮಾತಿನಲ್ಲೇ ವೀರ್ಯವೆಂಬುದು ನೆಲೆಗೊಂಡಿರುವುದು. ನಿಮ್ಮ ಕರ್ಮವು ವಿಲಿಂಗಸ್ಥವಾದದ್ದು. ಅರ್ಥಾತ್, ನಿಮ್ಮ ಬಾಹ್ಯ ಚಿಹ್ನಗಳಿಗೆ ಹೊಂದತಕ್ಕದ್ದಲ್ಲ; ವಾಸ್ತವವಾಗಿ ಅದಕ್ಕೆ ವಿರುದ್ಧವಾದದ್ದೇ ಸರಿ! ಇರಲಿ. ಒಟ್ಟಿನಲ್ಲಿ ನಿಮ್ಮ ಧ್ಯೇಯವೇನು? ನನ್ನ ಬಳಿಗೇನೋ ಬಂದಿದ್ದೀರಿ. ಆದರೆ ವಿಧ್ಯುಕ್ತವಾಗಿ ನಾವು ನಿಮಗೆ ಅರ್ಪಿಸಿದ ಆದರವನ್ನು ಸ್ವೀಕರಿಸದೆಯೇ ನಿಂತಿದ್ದೀರಿ. ಇದಕ್ಕೆ ಕಾರಣವೇನು? ನಮ್ಮಲ್ಲಿಗೆ ನೀವು ಬರುವುದರ ಹಿಂದಿನ ಉದ್ದೇಶವಾದರೂ ಏನಾಗಿದೆ? ಜರಾಸಂಧನು ಹೀಗೆ ನುಡಿಯಲಾಗಿ, ಮಹಾಮನಸ್ಕನಾದ ಕೃಷ್ಣನು ಉತ್ತರವಿತ್ತನು. ವಾಕ್ಯವಿಶಾರದನಾದ ಆತನ ಮಾತು ಸ್ನಿಗ್ಧವೂ ಗಂಭೀರವೂ ಆಗಿದ್ದಿತು. ಕೃಷ್ಣನು ಹೀಗೆ ಹೇಳಿದನು: ರಾಜನೇ, ನಮ್ಮನ್ನು ನೀನು ಸ್ನಾತಕ ಬ್ರಾಹ್ಮಣರೆಂದೇ ಭಾವಿಸಿಕೋ, ಪರವಾಯಿಲ್ಲ. ಆದರೆ ಸ್ನಾತಕ ವ್ರತಿಗಳೆಂದರೆ ಬ್ರಾಹ್ಮಣರು ಮಾತ್ರವಲ್ಲದೆ, ಕ್ಷತ್ರಿಯರೂ ವೈಶ್ಯರೂ ಆಗಬಹುದಷ್ಟೆ. ಸ್ನಾತಕರೆನಿಸಿಕೊಂಡವರಿಗೆಲ್ಲಾ ಅನ್ವಯಿಸುವ ಸಾಮಾನ್ಯ ನಿಯಮಗಳೂ ಇವೆ. ಜೊತೆಗೆ ವಿಶೇಷ ನಿಯಮಗಳೂ ಇರುತ್ತವೆಯಷ್ಟೆ? ವಿಶೇಷ ನಿಯಮಗಳನ್ನು ಸತತವಾಗಿ ಅನುಸರಿಸತಕ್ಕ ಕ್ಷತ್ರಿಯನು ಯಾರುಂಟೋ ಆತನು ಲಕ್ಷ್ಮಿಯನ್ನು ಹೊಂದುವನೇ ಸರಿ. ಯಾರು ಪುಷ್ಪ ಧಾರಣೆಯನ್ನು ಮಾಡುವರೋ ಅವರಲ್ಲಿ ಲಕ್ಷ್ಮಿಯು ನೆಲಸುವಳು. ಆ ಕಾರಣಕ್ಕಾಗಿಯೇ ನಾವು ಪುಷ್ಪವಂತರಾಗಿದ್ದೇವೆ. ಕ್ಷತ್ರಿಯನೆಂದರೆ ಬಾಹುವೀರ್ಯವುಳ್ಳವನು. ಕ್ಷತ್ರಿಯನು ಅದೆಷ್ಟು ಬಾಹುವೀರ್ಯವುಳ್ಳವನೋ ಅಷ್ಟೊಂದು ವಾಕ್ಯವೀರ್ಯವುಳ್ಳವನಲ್ಲ. ಎಂದೇ ಓ ಬೃಹದ್ರಥಪುತ್ರನಾದ ಜರಾಸಂಧನೇ, ಕ್ಷತ್ರಿಯನ ಮಾತಿನಲ್ಲಿ ದಾರ್ಷ್ಟ್ಯವು ಹೆಚ್ಚಿರುವುದಿಲ್ಲ. ಸೃಷ್ಟಿಮಾಡುವಾಗ ಬ್ರಹ್ಮನು ಕ್ಷತ್ರಿಯರ ಬಲವೆಂಬುದನ್ನು ಅವರ ತೋಳುಗಳಲ್ಲಿಯೇ ತುಂಬಿಸಿಟ್ಟಿರುವನು. ಅದನ್ನು ನೀ ನೋಡಬಯಸುವೆಯಾದರೆ, ಓ ರಾಜನೇ, ಇಂದು ನಿಸ್ಸಂಶಯವಾಗಿಯೂ ನೋಡುವೆ. ಇದರಲ್ಲಿ ಸಂಶಯವೇ ಇಲ್ಲ. ಮಿತ್ರಗೃಹವನ್ನು ಪ್ರವೇಶಿಸುವಾಗ ದ್ವಾರದ ಮೂಲಕ ಪ್ರವೇಶಿಸತಕ್ಕದ್ದು; ಆದರೆ ಶತ್ರುಗೃಹವನ್ನು ಪ್ರವೇಶಿಸುವಾಗ ಅದ್ವಾರದ ಮೂಲಕವೇ ಪ್ರವೇಶಿಸತಕ್ಕದ್ದು. ಇದು ಧೀರರ ನಡೆ. ಹೀಗಿರುವುವು ಶತ್ರು–ಮಿತ್ರರುಗಳ ದ್ವಾರಗಳು ಎಂಬುದಾಗಿ ಧರ್ಮ ದೃಷ್ಟಿಯಿಂದ ಹೇಳಲಾಗಿದೆ. ನಮ್ಮ ಕೆಲಸದ ಮೇರೆಗೇ ನಾವು ನಿನ್ನ ಮನೆಗೆ ಬಂದಿರುವುದು. ಶತ್ರುವಿನಿಂದ ನಾವು ಆದರ ಸತ್ಕಾರಗಳನ್ನು ಸ್ವೀಕರಿಸುವವರಲ್ಲ. ಇದುವೇ ನಮ್ಮ ಶಾಶ್ವತ ವ್ರತವಾಗಿದೆ ಎಂದನು ಶ್ರೀಕೃಷ್ಣ.

ಸುಧಾರಣೆಯಾಗದ ಕೆಪಿಎಸ್‌ಸಿ

ತನ್ನ ಹಿಂದಿನ ತಪ್ಪುಗಳನ್ನು ತಿದ್ದಿಕೊಳ್ಳದೆ, ಅಭ್ಯರ್ಥಿಗಳ ಕನಸುಗಳೊಂದಿಗೆ ಚೆಲ್ಲಾಟವಾಡುತ್ತಿರುವ ಕೆಪಿಎಸ್ಸಿಯು ಕೆಟ್ಟ ಕಾರಣಗಳಿಗಾಗಿಯೇ ಸದಾ ಸುದ್ದಿಯಲ್ಲಿರುತ್ತದೆ. ಕೆಪಿಎಸ್ಸಿಯಲ್ಲಿ ಪಾರದರ್ಶಕತೆ ತಂದು ಸುಧಾರಣೆಗೊಳಿಸುವ ನಿಟ್ಟಿನಲ್ಲಿ ಯುಪಿಎಸ್ಸಿಯ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ಸಮಿತಿಯು 2013ರ ಆಗಸ್ಟ್‌ನಲ್ಲೇ ಮಾಡಿರುವ ಶಿಫಾರಸುಗಳನ್ನು, ಅಂದಿನಿಂದ ಇಂದಿನವರೆಗೆ ಸರಕಾರಗಳಾವುವೂ ಗಂಭೀರವಾಗಿ ಪರಿಗಣಿಸಿ ಜಾರಿಗೆ ತರದೆ, ಕೇವಲ 'ರಾಜಕಾರಣ' ಮಾಡಿಕೊಂಡೇ ಬಂದಿವೆ. ಕೆಪಿಎಸ್ಸಿ ಸುಧಾರಣೆಯನ್ನೇನೂ ಕಾಣಲಿಲ್ಲ, ಅಕ್ರಮ, ಅವ್ಯವಹಾರ, ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತ ಮುಂದುವರಿದವೇ ಹೊರತು ನಿಲ್ಲಲಿಲ್ಲ. ಉಚ್ಚ ನ್ಯಾಯಾಲಯವು 2011ನೇ ಸಾಲಿನ ಕೆಪಿಎಸ್ಸಿಯ ಪತ್ರಾಂಕಿತ ಅಧಿಕಾರಿಗಳ ಆಯ್ಕೆ ಪಟ್ಟಿ ರದ್ದುಪಡಿಸಿದರೂ, 2022ರಲ್ಲಿ ಕಾಯ್ದೆಯೊಂದನ್ನು ಜಾರಿಗೆ ತರುವ ಮೂಲಕ, ಸರ್ಕಾರವೇ 'ಅಕ್ರಮ' ಪಟ್ಟಿಗೆ ಅಧಿಕೃತವಾಗಿ 'ಸಕ್ರಮ'ದ ಮುದ್ರೆಯೊತ್ತಿಬಿಡುತ್ತದೆ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಕೆಪಿಎಸ್ಸಿಯ ನಾಲ್ಕು ಕಾರ್ಯದರ್ಶಿಗಳು ವರ್ಗಾವಣೆಗೊಂಡರೂ, ಪರೀಕ್ಷೆಗಳಲ್ಲಿನ ಲೋಪಕ್ಕೆ ನಿಯಂತ್ರಕರೇ ಕಾರಣರೆಂದು ಶಾಸಕರೇ ವಿಧಾನ ಸಭೆಯಲ್ಲಿ ಆಪಾದಿಸಿದರೂ, ನಾಲ್ಕು ವರ್ಷಗಳಿಂದ ಆ ಹುದ್ದೆಯಲ್ಲೇ ಮುಂದುವರೆದಿರುವ ಅವರನ್ನು ಕದಲಿಸಲಾಗದಿರುವುದು, ಕೆಪಿಎಸ್ಸಿಯಲ್ಲಿ ಎಲ್ಲವೂ ಸರಿಯಿಲ್ಲ ಮತ್ತು ಕಾಣದ ಕೈಗಳು ಅದನ್ನು ನಿಯಂತ್ರಿಸುತ್ತಿವೆ ಎಂಬುದಕ್ಕೆ ತಾಜಾ ಉದಾಹರಣೆ.

–ಶಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಪತ್ರ ಮಿತ್ರ

ಬಾಯ್ ಮಾತು

ವಕ್ರದೃಷ್ಟಿ

• ಎನ್. ರಾಮನಾಥ್
anakuramanath@gmail.com

'ವರ್ಲ್ಡ್ ಓರಲ್ ಹೆಲ್ತ್ ಡೇ' ಡಾಕ್ಟರ್ ಪಾಂಡುವಿಗೆ ಶುರುವಾಗಿದ್ದೇ ವಿಚಿತ್ರವಾಗಿ.

"ಬಾಯಿಯ ಆರೋಗ್ಯ ನೋಡಿಕೊಳ್ಳಿ" ಎಂದರು ಡಾಕ್ಟರ್.

"ಮೀನಾಬಾಯಿಯದೇ? ಅವಳು ನನ್ನ ಅಸಿಸ್ಟೆಂಟ್ ಡಾಕ್ಟ್ರೇ. ಅವಳ ಕಡೆ ಗಮನ ಕೊಟ್ಟಿದ್ದಕ್ಕೇ ಮನೆಯ ಆರೋಗ್ಯ ಹಾಳಾಗಿರೋದು" ಎಂದ ಸೀನು.

"ಬಾಯ್ಕಡೆ ಹೆಚ್ಚಿನ ಗಮನ ಕೊಡಿ" ಎಂದರು ನೆಕ್ಸ್ಟ್ ಪೇಷೆಂಟ್‌ಗೆ.

"ಶೂರ್ ಡಾಕ್ಟ್ರೇ. ಸ್ವಲ್ಪ ನಮ್ಮ ಪೇರೆಂಟ್ಸ್‌ಗೂ ಹೇಳ್ಬಿಡಿ. ನಾನು ಡೇಟಿಂಗ್ ಹೋಗ್ತೀನೀಂದ್ರೆ, ಅವರು ಬಿಪಿ ಕೌಂಟಿಂಗ್ ಏರಿಸ್ಕೋತಾರೆ" ಎಂದಳು ಶಮ್ಮಿ.

"ನಿಮ್ಮ ಮೌತ್ ಕಡೆ ಸ್ವಲ್ಪ ಅಟೆನ್ಷನ್ ಕೊಡಿ," ಪಾಂಡು ಮಧ್ಯವಯಸ್ಕರಿಗೆ ನುಡಿದರು.

"ನೋ ಪ್ರಾಬ್ಲಂ ಡಾಕ್ಟರ್. ಇಂಶೂರೆನ್ಸ್ ಮಾಡ್ಸಿದೀನಿ, ವಿಲ್ ಬರ್ದಿದೀನಿ. ಮೌತ್ (ಸಾವು) ಯಾವಾಗ ಬಂದರೂ ವೆಲ್ಕಂ ಮಾಡಕ್ಕೆ ಸಿದ್ಧ" ಎಂದರವರು.

'ಬಾಯಿಯ ಸ್ವಾಸ್ಥ್ಯವನ್ನು ನೋಡಿಕೊಳ್ಳಿ' ಎಂದು ಹೇಳುವುದೇ ಇಷ್ಟು ಕಷ್ಟವಾಗಿರುವಾಗ ಅದರ ಸ್ವಾಸ್ಥ್ಯವೇನು ಸುಲಭದ ಮಾತೇ? ನನಗಂತೂ ನನ್ನ ಮೌತು ಪಾರ್ಟ್ ಬೈ ಪಾರ್ಟ್ ತೊಂದರೆ ಕೊಡುತ್ತಲೇ ಇರುತ್ತದೆ.

ಮೌತ್ ಟ್ರಬಲ್ ಶುರುವಾಗುವುದು ತೊಟ್ಟಿಲಲ್ಲಿರುವ ಕಾಲದಿಂದಲೇ ಎನಿಸುತ್ತದೆ. ಮಗುವಿಗೆ ಅದು ತೊಂದರೆ ಎನಿಸದಿದ್ದರೂ, ಕಿಟ್ ಕಿಟ್ ಕಿಟಾರ್ ಎಂದೋ, ಛಿಟ್ ಛಿಟ್ ಛಿಟಾರ್ ಎಂದೋ ಮಲಗಿದ್ದಲ್ಲಿಂದಲೇ ಕಂಠಸಿರಿಯ ನಾದವನ್ನು ಮನೆಯ ಮೂಲೆಮೂಲೆಗೂ ತಲುಪಿಸಿದ ಕೂಡಲೆ ಹಿರಿಕಿರಿಕಿರಿಯರು "ಸುಮ್ನಿರೋ ಬಾಯ್ಮಾಡ್ಬೇಡ" ಎಂದು ಪ್ರೀತಿಯಿಂದ ಗದರುತ್ತಾರೆ. ಕಂಠದ ತಪ್ಪನ್ನು ತನ್ನದಾಗಿಸಿಕೊಂಡ ಬಾಯಿಯ ಮೊದಲ ಕಷ್ಟ ಶುರುವಾಗುವುದು ಕಕ್ಕುವಿಕೆಯು ಮೊದಲಾದಾಗ. ಜೇಡವು ತನ್ನ ಬಾಯಿಯಿಂದ ಹೊರಡಿಸಿದ ಜೊಲ್ಲು ಯಾವುದಾದರೂ ವಸ್ತುವನ್ನು ತಲುಪುವವರೆಗೆ ಬೆಳೆಯುವಂತೆಯೇ, ಮಗುವಿನ ಜೊಲ್ಲೂ ಮಗುವಿನದೇ ಮಂಡಿಯನ್ನೋ, ಅಂಗಿಯನ್ನೋ ಅಥವಾ ಎತ್ತಿಕೊಂಡವರ ಭುಜವನ್ನೋ ಮುಟ್ಟುವವರೆಗೆ ಬೆಳೆದು 'ಜೊಲ್ಲುಸೇತುವೆ'ಯನ್ನು ನಿರ್ಮಿಸುತ್ತದೆ. ಆಗಾಗ್ಗೆ ಒಸರುವ ಜೊಲ್ಲನ್ನು ಒರೆಸುವುದರಿಂದ ಕಪೋಲಕ್ಕೆ ಗುಲಾಬಿಯ ರಂಗು ಮೂಡುತ್ತದೆ.

ಮೌತ್ ಟ್ರಬಲ್‌ನಲ್ಲಿ ಮೂರು ವಿಧಗಳಿವೆ – ತುಟಿಗಳದು, ನಾಲಿಗೆಯದು ಮತ್ತು ಹಲ್ಲಿನದು. ನಾಲಿಗೆಯದರಲ್ಲಿ ಮತ್ತೆರಡು ವಿಧಗಳು – ಫಿಸಿಕಲ್ ಮತ್ತು ವರ್ಬಲ್.

ಮೊದಲಿಗೆ ತುಟಿಗಳ ತೊಂದರೆಗಳನ್ನು ಗಮನಿಸೋಣ. ಇವುಗಳು ಒಬ್ಬೊಬ್ಬರಿಗೆ ಒಂದೊಂದು ವಿಧದಲ್ಲಿ ಇರುತ್ತವೆಂದು ಕವಿಗಳು ನುಡಿಯುತ್ತಾರೆ. "ಅಳುವ ಕಂದನ ತುಟಿಯು ಹವಳದ ಕುಡಿಹಂಗ" ಎಂದು ಜನಪದರು ಹಾಡಿದ್ದಾರೆ. 'ಹವಳ ಬೆಲೆ ಬಾಳುತ್ತದೆ. ಅದಕ್ಕೆ ವಿಮೆ ಮಾಡಿಸಿ' ಎನ್ನುತ್ತಾ ವಿಮಾ ಏಜೆಂಟನೊಬ್ಬನು ಮೆಟರ್ನಿಟಿ ಹೋಂನ ಮುಂದೆಯೇ ಝಂಡಾ ಹೂಡಿದ್ದಾನಂತೆ. ಅವನನ್ನು ತಪ್ಪಿಸಿಕೊಂಡು ಬರುವುದೇ ಕಷ್ಟವಂತೆ.

"ಅಧರಂ ಮಧುರಂ" ಎನ್ನುತ್ತದೆ ಸುಭಾಷಿತ. "ರಂ ಎಂದ ಮೇಲೆ ಅದು ಮಧುವೇ" ಎಂದು ಕುಡುಕರು 'ಮಧುರಂ' ಅದನ್ನು ವಿಶ್ಲೇಷಿಸುತ್ತಾ, 'ಮೊದಲ ಪದವು 'ಆಧಾ ರಂ' ಎಂದಾಗಬೇಕು. ಹಾಫ್ ಬಾಟಲ್ ರಂ ಸಾಕಷ್ಟು ಕಿಕ್ ಕೊಡತ್ತೆ' ಎಂದೂ ನುಡಿದಿದ್ದಾರೆ. ಇವುಗಳ ಮೇಲೆ ಸತ್ಯವು ಮನೆ ಮಾಡಿರುತ್ತದೆ ಎನ್ನುವುದಕ್ಕೆ 'ಹೋಟೋಂಪೇ ಸಚ್ಚಾಯೀ ರೆಹತೀ ಹೈ' ಹಾಡೇ ಸಾಕ್ಷಿ. ಸತ್ಯ ಕಿಂತಲೂ ಟ್ರಬಲ್ ಉಂಟೀ ಜಗದೊಳ್! ತುಟಿಗಳಲ್ಲಿರುವ ಸತ್ಯವನ್ನು ನಾಲಿಗೆಯು ಹೊತ್ತು ನುಡಿದರೆ ಎದೆಯೊಳು ಖಚಿತ ಎನ್ನಲು 'ಇದ್ದಿದ್ದಂಗ್ ಹೇಳಿದ್ರೆ, ಎದ್ದೊದೆದಂಗಿದ್ದಂತ' ಎಂಬ ಗಾದೆಯೇ ಇದೆ.

"ನಮ್ಮ ತುಟಿಗಳು ಹೆಚ್ಚಿಂದ ಸೀಳಿಯಾಗಿ, ಧೂಮಪಾನದಿಂದ ಕಪ್ಪಾದವು. ಇತರ ತುಟಿಗಳಿಂದರೆ ನಮಗೆ ತೊಂದರೆ" ಎಂದರೊಮ್ಮೆಯೇ ರಂಗಣ್ಣ.

"ಇತರ ತುಟಿಗಳೆಂದರೆ?"

"ಸಿನಿಮಾ ನಟಿಯರ ಕ್ಲೋಸಪ್‌ನಲ್ಲಿ ಕಾಣುವ ಅರೆಬಿರಿದ ತುಟಿಗಳು; ಕಾಲೇಜ್ ಕನ್ಯೆಯರ ಬಿಂಬಾಧರಗಳು, ಆ ತುಟಿಗಳು ಹೊರಡಿಸುವ ಪಿಸುಮಾತುಗಳು; ಇವೆಲ್ಲವೂ ಹುಡುಗರು ಇನ್‌ಸೋಮ್ನಿಯಾದಿಂದ ಬಳಲಲು ಕಾರಣವಾಗಿವೆ" ರಂಗಣ್ಣ ಉವಾಚ. ತುಟಿಸೀಳು, ಸೀಳುತುಟಿ, ತುಟಿಪುಡಿ (ಒಣಗಿದ ಚರ್ಮವು ಪುಡಿಯಾಗಿ ಉದುರುವುದು) ಇವಕ್ಕೆಲ್ಲ ವೈದ್ಯರಲ್ಲಿ ಪರಿಹಾರವಿದೆ. ಆದರೆ ಪ್ರೇಮವೆಂಬ 'ಅದುರುಹೃದಯರೋಗ'ವನ್ನು ಹರಡುವ 'ತುಟಿವೈರಸ್' ಅನ್ನು ನಿಯಂತ್ರಿಸಲು ಸುಂದರಾಧರೆ ಪ್ರೇಯಸಿಯಾಗುವುದೊಂದೇ ಔಷಧಿಯಂತೆ.

ತುಟಿಗಳನ್ನು ದಾಟಿಕೊಂಡು ನಾಲಿಗೆಯ ಸಾಮ್ರಾಜ್ಯಕ್ಕೆ ಬರೋಣ. 'ನಾಲಿಗೆಗೆ ಪಲ್ಯ ಮತ್ತು ಚಹಾ ಎರಡೂ ಬಹಳ ಪ್ರಿಯ. ಆದ್ದರಿಂದಲೇ 'ಜಿಹ್ವಾಚಾಪಲ್ಯ' ಎಂಬ ಪದಪುಂಜವು ಮೂಡಿರುವುದು' ಎಂದು 'ಪದಾರ್ಥ ಚಿಂತಾಗ್ರಣಿ'ಯೊಬ್ಬರು 'ನನ್ನ ಪ್ರಕಾರ' ಎಂಬ ವೆಬ್‌ಸೈಟಲ್ಲಿ ಬರೆದಿದ್ದಾರೆ. 'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂದು ದಾಸರು ಹೇಳಿದ್ದಾರೆ. ಆದರೆ "ನೀಚ ಎನ್ನುವುದು ಉಚ್ಚ ಎನ್ನುವುದಕ್ಕೆ ವಿರುದ್ಧ ಪದ. ನೀಚ ಎಂದರೆ ಕೆಳಗೆ ಎಂದರ್ಥ. ಬಾಯಿಯಲ್ಲಿ ಮೇಲೆ ಅಂಗುಳವೂ, ಕೆಳಗೆ ನಾಲಿಗೆಯೂ ಇರಬೇಕಾದ್ದು ಸರಿಯಾದ ಕ್ರಮ. ದಾಸರು ಹೇಳಿದರೆಂದು ಬಾಯಿಯ ಮೇಲ್ಭಾಗದಿಂದ ನಾಲಿಗೆಯು ಅಲುಗಾಡುತ್ತಿದ್ದರೆ ಚೆನ್ನವೂ ಅಲ್ಲ, ಕೆಲಸಕ್ಕೂ ಬಾರದು. 'ನೀಚೇ' ಇರುವವರದು 'ಊಂಚಾ' ಬುದ್ಧಿ ಆಗುವುದು ಸಾಧ್ಯವೇ?" ಎಂದು ನಾಲಿಗೆಪ್ರಿಯರ ಒಕ್ಕೂಟವು ಪ್ರಶ್ನಿಸಿದೆಯಂತೆ.

ನಾಲಿಗೆಯು ನುಡಿಯುವಾಗ ಪಾಂಡವರ ಬಗ್ಗೆಯೂ, ಕೃಷ್ಣನ ಬಗ್ಗೆಯೂ ಒಳ್ಳೆಯ ನುಡಿಗಳನ್ನೇ ಆಡಿದರೂ ಅದಕ್ಕೆ ನಿಜಕ್ಕೂ ಕೌರವರ ಮೇಲೆಯೇ ಹೆಚ್ಚು ಪ್ರೀತಿ. ಆದ್ದರಿಂದಲೇ ಆಗಾಗ್ಗೆ ನಾಲಿಗೆಯ ಮೇಲೆ 'ಕುರು'ಗಳು ಬಂದು ಆಶ್ರಯ ಪಡೆಯುವುದು. (ನಾನಂತೂ ದೊಡ್ಡ ಕುರುವನ್ನು 'ದುರ್ಯೋಧನ' ಎಂದೂ, ಕಾಣದ ಜಾಗದಲ್ಲಾದ ಕುರುವನ್ನು 'ಧೃತರಾಷ್ಟ್ರ' ಎಂದೂ ಕರೆಯುತ್ತೇನೆ.) ಬಂದಂತಹ ಕುರುಗಳಿಗೆ ಜೇನುತುಪ್ಪ ಸವರಿ, ಅಲೋವೆರಾದಿಂದ ಅಭಿಷೇಕ ಮಾಡಿ, ಬೆಚ್ಚನೆಯ ನೀರಿಗೆ ಉಪ್ಪು ಬೆರೆಸಿದ ಪಾನಕವನ್ನು ನೀಡಿ ಸತ್ಕರಿಸಿ, ವಾರ–ಎರಡುವಾರ ಆತಿಥ್ಯ ನೀಡಿದ ಮೇಲೆಯೇ ನಾಲಿಗೆಯು ಕುರುವಿಗೆ ಬೀಳ್ಕೊಡುವುದು ಸಾಮಾನ್ಯ ಸಂಪ್ರದಾಯ. 'ನಾಲಿಗೆಯದು ಕುಡುಕರ ನಡಿಗೆ. ಆದ್ದರಿಂದಲೇ ಆಗಾಗ್ಗೆ ತಪ್ಪುತ್ತಿರುತ್ತದೆ' ಎಂದು ಕೆಲವರು ನುಡಿದರೆ, 'ನಾಲಿಗೆ ಇರುವುದೇ ಒದ್ದೆ ಜಾಗದಲ್ಲಿ. ಒದ್ದೆ ಇರುವಲ್ಲಿ ಜಾರಿಕೆ ಸಹಜ' ಎಂದು ಸಮರ್ಥಿಸಿಕೊಳ್ಳುವವರೂ ಇದ್ದಾರೆ.

ಮಾಸ್ಟರ್ ಹಿರಣ್ಣಯ್ಯನವರಿಗೆ ನಾಲಿಗೆಯ ಮಹತ್ವದ ಮೇಲೆ ಅಪರಿಮಿತ ಗೌರವ. ತತ್ಕಾರಣವೇ ನಾಲಿಗೆಯ ಬಗ್ಗೆ ಆಗಾಗ್ಗೆ ಉಲ್ಲೇಖಿಸುತ್ತಿದ್ದರು. 'ಮೂರಿಂಚು ನಾಲಿಗೆ ಆರಡಿ ಮನುಷ್ಯನನ್ನು ಅಲ್ಲಾಡಿಸಿ ಕೆಡವಿಬಿಡುತ್ತದೆ', 'ನಾಯಿಯನ್ನು ಯಾರು ಬೇಕಾದರೂ ಸಾಕಬಹುದು. ನಾಲಿಗೆಯನ್ನು ಸಾಕಬೇಕು. ನಾಯಿಯನ್ನು ಸಾಕಿದರೆ ಮನೆಯನ್ನು ಕಾಯುತ್ತದೆ. ನಾಲಿಗೆಯನ್ನು ಸಾಕಿದರೆ ಮನೆತನವನ್ನೇ ಕಾಯುತ್ತದೆ' ಎನ್ನುತ್ತಿದ್ದರವರು. ಅವರು ಮಂಡಿಸುತ್ತಿದ್ದ 'ನಾಲಿಗೆ ಮತ್ತು ಹಲ್ಲುಗಳ ನಡುವಿನ ಸಂಭಾಷಣೆ'ಯೊಂದು ಹೀಗಿದೆ:

"ನೀನು ಒಂಟಿ. ನಾವು ಮೂವತ್ತೆರಡು. ಇದು ಪ್ರಜಾಪ್ರಭುತ್ವದ ಕಾಲ. ನಾವು ಹೇಳಿದಂತೆ ನೀನು ಕೇಳಿಕೊಂಡಿರಬೇಕು" ಎಂದವು ಹಲ್ಲುಗಳು.

"ಸಂಖ್ಯೆ ಕಟ್ಕೊಂಡೇನ್ಮಾಡ್ತೀರೀ! ಪ್ರಭಾವ ಮುಖ್ಯ. ನಾನೇನಾದರೂ ಆಡಬಾರದ ಜಾಗದಲ್ಲಿ ಆಡಬಾರದ ಒಂದೇ ಒಂದು ಮಾತನ್ನು ಆಡಿಬಿಟ್ಟರೆ ನಿಮ್ಮ ಸಂಖ್ಯಾಬಲವಾದ ಮೂವತ್ತೆರಡನ್ನೂ ಜನರು ಉದುರಿಸಿ ಹೊರಗಿಟ್ಟುಬಿಡುತ್ತಾರೆ" ಎಂದಿತು ನಾಲಿಗೆ!

ನಾಲಿಗೆ, ತುಟಿಗಳದು ಅದರ ಮಾಲಿಕರಿಗಷ್ಟೇ ತೊಂದರೆ ನೀಡುವ ಚಾಯಮಾನವಾದರೆ ಹಲ್ಲುಗಳು ಪರರಿಗೂ ಸಂಕಟ ನೀಡಬಲ್ಲವು. ಬಂದ ಸಂಬಳದ ಕೊಂಚ ಅಂಶವನ್ನು 'ಸೇವಿಂಗ್ಸ್ ಬ್ಯಾಂಕ್'ನಲ್ಲಿ ಡಿಪಾಸಿಟ್ ಮಾಡುವ ಮಂದಿಯಂತೆಯೇ ಹಲ್ಲುಗಳೂ ಬಾಯಿಗೆ ಸಂದ ಆಹಾರದಲ್ಲಿ ಕೆಲವನ್ನು ತಮ್ಮ ಸಂದಿಗಳಲ್ಲಿ ಡಿಪಾಸಿಟ್ ಮಾಡಿಕೊಳ್ಳುತ್ತವೆ. ಅವನ್ನು ದಿನಕ್ಕೆರಡು ಬಾರಿ ಬ್ರಷ್ಷು, ಪೇಸ್ಟು, ಮೌತ್‌ವಾಷ್‌ಗಳ ಮೂಲಕ ಖಾಲಿ ಮಾಡದಿದ್ದರೆ ಅದೇ ಡಿಪಾಸಿಟ್ಟುಗಳೇ 'ಫಿಕ್ಸೆಡ್ ಡಿಪಾಸಿಟ್'ಗಳಾಗಿಬಿಡುತ್ತವೆ. ಅಂತಹ ಡಿಪಾಸಿಟ್‌ಗಳಿಗೆ 'ಬಾಯಿಬ್ಯಾಂಕ್'ನ ಸಹಕಾರದಿಂದ 'ಬ್ಯಾಡ್ ಬ್ರೆತ್' ಎಂಬ ಬಡ್ಡಿಯನ್ನೂ ಕಂತಿನಲ್ಲಿ ಹೊರಬಿಡುತ್ತವೆ. ಈ ಬಡ್ಡಿಗಳೇ ಬಾಯಿಯ ಬಳಿ ಬಂದ ಇತರ ಮೂತಿಗಳು 'ಹೇಳಿನೋ ಹರಿ ತಾಳಿನೋ; ಹುಳುಕು ದಂತದೊಳಿದ್ದು ಹೊಟ್ಟೆ ತೊಳಸೋ ವಿಷ್ಯಾನ; ಹೇಳಿನೋ ಹರಿ ತೇಳಿನೋ' ಎಂದು ಒಳಗೊಳಗೇ ನರಳುವಂತಾಗಿಸಿ, 'ಪರಕಷ್ಟಪ್ರದಾಯಕ'ವಾಗುತ್ತವೆ.

ದಂತರೋಗದ ಬಗ್ಗೆ ಇನ್ನೊಂದು ಲೇಖನವನ್ನೇ ಬರೆಯುವೆ. ಸದ್ಯದಲ್ಲಿ ಓರಲ್ ಹೆಲ್ತಿನ ಓವರಾಲ್ ಲುಕ್ಕಿಗಷ್ಟೇ ಈ ಲೇಖನವನ್ನು ಸೀಮಿತಗೊಳಿಸುವೆ. ನನಗೆ ಅತ್ಯಂತ ಕಷ್ಟ ನೀಡುವ 'ಓರಲ್ ಟ್ರಬಲ್' ಎಂದರೆ ಕೊರವಣಿಗೆ. ಕೇಳುಗರ ಕಿವಿಗಳನ್ನು ಅಪ್ಪಳಿಸಿ, ನಾಸ್ತಿಕರೂ 'ಪಾರುಗಾಣಿಸೈ ಪ್ರಭುವೆ' ಎನ್ನುವಂತೆ ಕೊರೆಯುವ ಡ್ರಿಲ್ಲಿಂಗ್ ಮಾಸ್ಟರ್‌ಗಳಿಂದ ಪಾರು ಮಾಡಲು ಒಂದು 'ಆಡಿಯೆನ್ಸ್ ವ್ಯಾಕ್ಸಿನ್' ಅತ್ಯಗತ್ಯ. 'ಓರಲ್ ಹೆಲ್ತ್ ದಿನ'ದಂದು ಮೆಡಿಕಲ್ ಮಂದಿ ಈ ಅತಿಘೋರ ಕರ್ಣಕಠೋರ 'ಭಾಷಣರೋಗ'ಕ್ಕೂ ಒಂದು ಮದ್ದು ಕಂಡುಹಿಡಿಯಲೆಂದು ಆಶಿಸೋಣ.

ಅಲ್ಲಿಯವರೆಗೆ, ವಿಶ್ ಯೂ 'ಗುಡ್ ಬಾಯ್'!

ಕೃತಕ ಬುದ್ಧಿಮತ್ತೆಯು ಪ್ರಯೋಜನಕಾರಿಯಾದಂತೆಯೆ ಅಪಾಯಕಾರಿಯೂ ಆಗಬಲ್ಲುದು. ಆದರೆ ಎಐ ಬೆಳವಣಿಗೆ ತಡೆಯುವ ಶಕ್ತಿ ನಮ್ಮಲ್ಲಿಲ್ಲ, ಬದಲಾಗಿ ಅದರ ಅಪಾಯ ತಡೆಯುವ ನಿಟ್ಟಿನಲ್ಲಿ ಎಚ್ಚರ ವಹಿಸುವುದು ಮುಖ್ಯ.

ಎಐ ಕ್ರಾಂತಿ ಮತ್ತು ಸೈಬರ್ ಸುರಕ್ಷತೆಯ ಸಮರ

▶ ಡಾ. ಅನಂತ ಪ್ರಭು

ಅಲನ್ ಟೂರಿಂಗ್ 1950ರಲ್ಲಿ ತಮ್ಮ 'ಕಂಪ್ಯೂಟಿಂಗ್ ಮೆಶಿನರಿ ಇಂಟೆಲಿಜೆನ್ಸ್' ಪ್ರಬಂಧದಲ್ಲಿ ಒಂದು ಪ್ರಶ್ನೆ ಕೇಳಿದ್ದರು – ಯಂತ್ರಗಳು ಚಿಂತಿಸಬಲ್ಲವೆ? ಇದನ್ನು ಪರೀಕ್ಷಿಸಲು ಅವರು 'ಟೂರಿಂಗ್ ಟೆಸ್ಟ್' ಎಂಬ ಪ್ರಯೋಗ ನಡೆಸಿದ್ದರು. ಯಂತ್ರವು ಕೂಡಾ ಮನುಷ್ಯನಂತೆಯೇ ವ್ಯವಹರಿಸಬಲ್ಲುದೆ ಹಾಗೂ ಯಂತ್ರ ಮತ್ತು ಮನುಷ್ಯನ ನಡುವೆ ವ್ಯತ್ಯಾಸ ಗೊತ್ತಾಗದ ರೀತಿಯಲ್ಲಿ ವರ್ತಿಸಬಲ್ಲುದೆ ಎಂಬುದನ್ನು ಕಂಡುಕೊಳ್ಳುವುದು ಅವರ ಉದ್ದೇಶವಾಗಿತ್ತು. ಕೆಲ ವರ್ಷಗಳ ಬಳಿಕ ಅಂದರೆ 1956ರಲ್ಲಿ ಸಂಶೋಧನಾ ಸಮ್ಮೇಳನವೊಂದರಲ್ಲಿ ಕೃತಕ ಬುದ್ಧಿಮತ್ತೆ (ಎಐ) ಪದ ಬಳಕೆಗೆ ಬಂದಿತು. ಅಂದು ಸೈದ್ಧಾಂತಿಕ ಚರ್ಚೆಯಾಗಿ ಆರಂಭವಾದ ಕೃತಕ ಬುದ್ಧಿಮತ್ತೆ ವಿಷಯವು ಈಗ ನಮ್ಮ ಕಾಲದ ಅತ್ಯಂತ ಶಕ್ತಿಶಾಲಿ ತಂತ್ರಜ್ಞಾನ ಕ್ರಾಂತಿಯಾಗಿ ಬೆಳೆದು ನಿಂತಿದೆ. ಕೃತಕ ಬುದ್ಧಿಮತ್ತೆಯು ಇತ್ತೀಚಿನ ವಿದ್ಯಮಾನವೆಂಬಂತೆ ಕಂಡುಬರಬಹುದಾದರೂ ಅದರ ಮೂಲವು ದಶಕಗಳ ಹಿಂದೆಯೇ ಇದೆ.

ಕೃತಕ ಬುದ್ಧಿಮತ್ತೆ ವರ್ತಿಸುವ ರೀತಿ

ಕೃತಕ ಬುದ್ಧಿಮತ್ತೆಯನ್ನು ಉದಾಹರಣೆಯೊಂದರ ಮೂಲಕ ಅರ್ಥ ಮಾಡಿಕೊಳ್ಳೋಣ. ವಿಶ್ವದಲ್ಲಿ 336 ಬಗೆಯ ನಾಯಿ ತಳಿಗಳಿವೆ. ನಾವೆಲ್ಲರೂ ಬಹುತೇಕವಾಗಿ 30ರಿಂದ 40 ತಳಿಗಳನ್ನಷ್ಟೇ ನೋಡಿರಬಹುದು. ಈಗ ನೀವೊಂದು ರಸ್ತೆಯಲ್ಲಿ ಸಾಗುತ್ತಿರುವಾಗ ಹಠಾತ್ತನೆ ನಿಮ್ಮ ಮುಂದೆ ಈ ವರೆಗೆ ನೋಡಿರದ ಪ್ರಾಣಿಯೊಂದು ಓಡುತ್ತಾ ಬಂತೆಂದುಕೊಳ್ಳೋಣ. ಆ ತಳಿಯನ್ನು ನೀವು ಈ ವರೆಗೆಗೆ ನೋಡಿರದಿದ್ದರೂ ಒಂದೇ ಕ್ಷಣದಲ್ಲಿ ಅದು ನಾಯಿ ಎಂಬುದಾಗಿ ನೀವು ಅರಿತುಕೊಳ್ಳುತ್ತೀರಿ. ನಿಮ್ಮ ಮನಸ್ಸು ಅದನ್ನು ನಾಯಿಯೆಂದು ಅದರ ಕೆಲವು ಗುಣಲಕ್ಷಣಗಳಿಂದಲೇ ತೀರ್ಮಾನಿಸಿಬಿಡುತ್ತದೆ. ಅದರ ಬಾಲ, ಅದರ ಚಲನ, ಅದು ವರ್ತಿಸುವ ರೀತಿ ಇವೆಲ್ಲವೂ ನಿಮ್ಮ ಅನುಭವದ ಆಧಾರದಲ್ಲಿ ಅದನ್ನು ನಾಯಿ ಎಂದು ತೀರ್ಮಾನಿಸುತ್ತದೆ. ಇಷ್ಟು ಕ್ಷಿಪ್ರವಾಗಿ ಈ ತೀರ್ಮಾನಕ್ಕೆ ಬರುವುದನ್ನು ಬುದ್ಧಿಮತ್ತೆ ಎನ್ನುತ್ತೇವೆ.

ನೀವೀಗ ಕಂಪ್ಯೂಟರ್ ಪ್ರೋಗ್ರಾಂ ಒಂದನ್ನು ಬರೆಯುತ್ತಿದ್ದೀರಿ ಎಂದುಕೊಳ್ಳೋಣ. ನೀವು ಅದಕ್ಕೆ 30 ನಾಯಿ ತಳಿಗಳ ಚಿತ್ರಗಳನ್ನು ಫೀಡ್ ಮಾಡಿ 31ನೇ ತಳಿಯ ಚಿತ್ರವೊಂದನ್ನು ಅದಕ್ಕೆ ತೋರಿಸುತ್ತೀರಿ. ಹಳೆಯ ಪ್ರೋಗ್ರಾಂ ವ್ಯವಸ್ಥೆಯಲ್ಲಿ ಕಂಪ್ಯೂಟರ್ ಅದನ್ನು ಪತ್ತೆ ಹಚ್ಚಲು ವಿಫಲವಾಗುತ್ತದೆ. ಅದರ ಕುರಿತಂತೆ ನಿಮ್ಮ ಪ್ರೋಗ್ರಾಂನಲ್ಲಿ ವಿವರಗಳನ್ನು ನೀಡದ ಹೊರತು ಅದಕ್ಕೆ ಅದನ್ನು ಗುರುತು ಹಿಡಿಯಲು ಸಾಧ್ಯವಾಗದು. ಸಾಂಪ್ರದಾಯಿಕ ಕಂಪ್ಯೂಟರ್‌ಗಳು ನಾವು ಅದಕ್ಕೆ ಏನನ್ನು ಫೀಡ್ ಮಾಡಿರುತ್ತೇವೆಯೋ ಅಷ್ಟನ್ನೇ ಯೋಚಿಸುತ್ತದೆ. ಅದು ಕೇವಲ ಸೂಚನೆಯಷ್ಟೇ ಪಾಲಿಸುತ್ತದೆ. ತನ್ನ ಪ್ರೋಗ್ರಾಂನಿಂದ ಹೊರತಾಗಿ ತನ್ನದೇ ಆದ ಸ್ವಂತ ನಿರ್ಧಾರ ತಾಳಲು ಅದು ಹೋಗುವುದಿಲ್ಲ, ಕೃತಕ ಬುದ್ಧಿಮತ್ತೆಯು ಈ ಅಂತರವನ್ನು ತುಂಬಲು ಯತ್ನಿಸುತ್ತದೆ. ಯಂತ್ರಕ್ಕೆ ಪ್ರತಿಯೊಂದು ಹೆಜ್ಜೆಯ ಸೂಚನೆಯನ್ನು ನೀಡುವ ಬದಲಾಗಿ ಅದುವೇ ಪೂರ್ವ ನಿದರ್ಶನಗಳಿಂದ ಕಲಿಯುವಂತೆ ಮಾಡಲಾಗುತ್ತದೆ. ನಾವು ಅದಕ್ಕೆ ಡೇಟಾವನ್ನು ನೀಡುತ್ತೇವೆ. ಅದುವೇ ಅದರಲ್ಲಿ ನಿರ್ದಿಷ್ಟ ಪ್ಯಾಟರ್ನ್ ಕಂಡುಕೊಳ್ಳುತ್ತದೆ.

ತಂತ್ರಜ್ಞಾನವು ನಾವು ಕಲ್ಪಿಸಿಕೊಳ್ಳುವುದಕ್ಕಿಂತಲೂ ವೇಗವಾಗಿ ಬೆಳೆಯುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಕೃತಕ ಬುದ್ಧಿಮತ್ತೆ ಕುರಿತು ಹೆದರುವ ಸಮಯ ಇದಲ್ಲ, ಅದನ್ನು ಅರ್ಥ ಮಾಡಿಕೊಂಡು ಹೊಣೆಗಾರಿಕೆಯಿಂದ ಬಳಸಿಕೊಳ್ಳುವುದೇ ನಮ್ಮ ಮುಂದಿರುವ ಸವಾಲು. ಇನ್ನು ಮುಂದಕ್ಕೆ ಎಐ ಮತ್ತು ಸೈಬರ್ ಸೆಕ್ಯುರಿಟಿಯು ನಮ್ಮ ಖಾಸಗಿ ಭದ್ರತೆ, ನಮ್ಮ ಆರ್ಥಿಕ ಸುರಕ್ಷತೆ ಮತ್ತು ರಾಷ್ಟ್ರೀಯ ಸ್ಥಿರತೆಯನ್ನು ನಿರ್ಧರಿಸಬಲ್ಲುದು. ಸ್ಮಾರ್ಟ್ ಯಂತ್ರಗಳು ಮುಂದಕ್ಕೆ ಬರಲಿರುವುದು ಖಂಡಿತವಾಗಿದೆ. ಅವು ತಮ್ಮ ಆಂತರಿಕ ವ್ಯವಸ್ಥೆಯನ್ನು ಕಾಲಕ್ಕೆ ತಕ್ಕಂತೆ ಹೊಂದಿಸಿಕೊಳ್ಳಬಲ್ಲವು. ತಾವು ಹಿಂದೆ ನೋಡಿದ ವಿಷಯಕ್ಕೆ ಸಂಬಂಧಿಸಿದ ಹೊಸ ವಿಷಯಗಳನ್ನು ಕಂಡುಕೊಳ್ಳಬಲ್ಲವು. ಸರಳವಾಗಿ ಹೇಳಬೇಕೆಂದರೆ ಕೃತಕ ಬುದ್ಧಿಮತ್ತೆ ಎಂದರೆ ಯಂತ್ರಗಳು ಸುಮ್ಮನೆ ಆದೇಶಗಳನ್ನು ಪಾಲಿಸುವ ಬದಲಾಗಿ ತಮ್ಮ ಅನುಭವದಿಂದ ಪಾಠ ಕಲಿಯುವಂತೆ ಮಾಡುವುದು.

ಆಧುನಿಕ ಕೃತಕ ಬುದ್ಧಿಮತ್ತೆಯ ಹಿಂದಿರುವ ಪ್ರಮುಖ ತಂತ್ರಜ್ಞಾನವೆಂದರೆ ನರವ್ಯೂಹ ಜಾಲಗಳು. ಇದು ನಮ್ಮ ಮೆದುಳಿನಲ್ಲಿರುವ ನ್ಯೂರಾನ್‌ಗಳಿಂದ ಪ್ರೇರಿತವಾಗಿದೆ. ಡೇಟಾ ಸಂಗ್ರಹವನ್ನು ಬಳಸಿಕೊಂಡು ಅವು ಮುಖಗಳನ್ನು ಗುರುತಿಸಬಲ್ಲವು, ಭಾಷೆಯನ್ನು ತರ್ಜುಮೆ ಮಾಡಬಲ್ಲವು, ವಂಚನೆಯನ್ನು ಗುರುತಿಸಬಲ್ಲವು, ವೈದ್ಯರಿಗೆ ರೋಗ ಪತ್ತೆ ಹಚ್ಚಲು ನೆರವೀಯಬಲ್ಲವು.

ಜನರೇಟಿವ್ ಎಐ

ಈಗ ನಾವು ಬಳಸುತ್ತಿರುವ ಕೃತಕ ಬುದ್ಧಿಮತ್ತೆ ಸರಳವಾದುದು. ಅದು ನಿರ್ದಿಷ್ಟ ಕೆಲಸವನ್ನು ಅತ್ಯಂತ ಪರಿಣಾಮಕಾರಿಯಾಗಿ ಮಾಡುತ್ತದೆ. ಉದಾಹರಣೆಗೆ ಸ್ಪಾಮ್ ಫಿಲ್ಟರ್ ಅನವಶ್ಯ ಇಮೇಲ್‌ಗಳನ್ನೆಲ್ಲಾ ಗುರುತಿಸುತ್ತದೆ. ನೇವಿಗೇಷನ್ ಆ್ಯಪ್ ಟ್ರಾಫಿಕ್‌ನ್ನು ಊಹಿಸುತ್ತದೆ. ಬ್ಯಾಂಕಿಂಗ್ ವ್ಯವಸ್ಥೆಯು ಶಂಕಾಸ್ಪದ ಹಣದ ವಿನಿಮಯವನ್ನು ಗುರುತಿಸುತ್ತದೆ. ನಂತರ ಬಂದುದು ಜನರೇಟಿವ್ ಕೃತಕ ಬುದ್ಧಿಮತ್ತೆ.



ಭಾರತ ಸರಕಾರವು ಈಗ ಎಐಯನ್ನು ಹೊಣೆಯರಿತು, ಸುರಕ್ಷಿತವಾಗಿ ಮತ್ತು ನೈತಿಕವಾಗಿ ಬಳಸುವಂತೆ ಮಾಡುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣಗಳಿಗೆ ಹಲವಾರು ನಿಯಮ ನಿಬಂಧನೆಗಳನ್ನು ಹೇರಿರುವುದು ಗಮನಾರ್ಹವಾಗಿದೆ.

ಚಾಟ್ ಜಿಪಿಟಿಯಂತಹ ಎಐ ವ್ಯವಸ್ಥೆ ಪ್ರಬಂಧ ಬರೆಯಬಲ್ಲದು. ಪ್ರಶ್ನೆಗಳಿಗೆ ಉತ್ತರಿಸಬಲ್ಲದು. ಸಂಭಾಷಣೆಯನ್ನು ಮುಂದುವರಿಸಬಲ್ಲದು. ಇಮೇಲ್ ಬರೆಯಬಲ್ಲದು ಅಥವಾ ಸರಳ ವಿವರಣೆಯಿಂದಲೇ ದೊಡ್ಡ ಚಿತ್ರವನ್ನು ಬಿಡಿಸಬಲ್ಲದು. ಅಪಾರ ಪ್ರಮಾಣದ ಡೇಟಾಗಳನ್ನು ಆಧರಿಸಿ ಇವುಗಳಿಗೆ ತರಬೇತಿ ಕೊಡಲಾಗಿದೆ. ಅವು ಭಾಷೆ ಮತ್ತು ದೃಶ್ಯಕ ವಿಷಯದಲ್ಲಿ ಹುದುಗಿರುವ ಅಂಶಗಳನ್ನು ಗ್ರಹಿಸಬಲ್ಲವು.

ಅದರ ನಂತರದ ಪರಿಕಲ್ಪನೆ ಸೂಪರ್ ಎಐ. ಇದು ಎಲ್ಲಾ ವಿಧದಲ್ಲೂ ಮನುಷ್ಯನನ್ನು ಮೀರಿಸಬಲ್ಲ ಸೈದ್ಧಾಂತಿಕ ಕೃತಕ ಬುದ್ಧಿಮತ್ತೆ. ಸದ್ಯಕ್ಕೆ ಇದು ಕಲ್ಪನೆ ಮತ್ತು ಸಂಶೋಧನೆಯ ಸ್ಥಿತಿಯಲ್ಲಿದೆಯಷ್ಟೆ. ಆದರೆ ಇದು ನೈತಿಕತೆ ಮತ್ತು ಆಡಳಿತದ ಕುರಿತಂತೆ ಗಂಭೀರ ಪ್ರಶ್ನೆಗಳನ್ನೆತ್ತಿರುವುದು ನಿಜ.

ಸೈಬರ್ ಅಪರಾಧದಲ್ಲಿ ಎಐ ಬಳಕೆ

ಈಗ ಎಐ ಜನರ ಜೀವನದಲ್ಲಿ ಬಹಳಷ್ಟು ಬಳಕೆಯಾಗುತ್ತಿದೆ. ನಾವು ಗ್ರಹಿಸಿದ್ದಕ್ಕಿಂತಲೂ ಹೆಚ್ಚು ಎಐ ಜತೆ ವ್ಯವಹರಿಸುತ್ತೇವೆ. ರೈತರು ಮಣ್ಣಿನ ಫಲವತ್ತತೆ ಮತ್ತು ಬೆಳೆಯ ಆರೋಗ್ಯ ತಿಳಿಯಲು ಎಐ ಸಾಧನಗಳನ್ನು ಬಳಸುತ್ತಾರೆ. ಉದ್ಯಮಿಯೊಬ್ಬ ವಿಡಿಯೋ ಕಾಲ್ ಮಾಡುತ್ತಿದ್ದಾನೆಂದುಕೊಳ್ಳಿ. ಸ್ಕ್ರೀನ್‌ನಲ್ಲಿ ಕಾಣುವ ವ್ಯಕ್ತಿ ಫೈನಾನ್ಸ್ ಮ್ಯಾನೇಜರ್‌ನಂತೆಯೇ ಕಂಡುಬರಬಹುದು. ಧ್ವನಿಯೂ ಆತನನ್ನೇ ಹೋಲಬಹುದು. ತಕ್ಷಣವೇ ಹಣವನ್ನು ವರ್ಗಾಯಿಸ ಬೇಕೆಂಬ ಬೇಡಿಕೆ ಆತನಿಂದ ಬರಬಹುದು. ಉದ್ಯಮಿ ಯಾವುದೇ ಅನುಮಾನವಿಲ್ಲದೆ ಹಣ ವರ್ಗಾಯಿಸುತ್ತಾನೆ. ಬಳಿಕ ಆತನಿಗೆ ತನ್ನ ಫೈನಾನ್ಸ್ ಮ್ಯಾನೇಜರ್ ಬೇರೆಲ್ಲೋ ಇದ್ದಾನೆಂದು ತಿಳಿದುಬರುತ್ತದೆ. ಅಷ್ಟರಲ್ಲಾಗಲೆ ಆವನ ಹಣ ಹೋಗಿರುತ್ತದೆ. ಆ ವಿಡಿಯೋವನ್ನು ಡೀಪ್ ಫೇಕ್ ತಂತ್ರಜ್ಞಾನದಿಂದ ಸೃಷ್ಟಿಸಲಾಗಿರುತ್ತದೆ.

ಇದು ಸೈಬರ್ ಅಪರಾಧದ ನೂತನ ಅವತಾರ. ಮುಕ್ತ ಎಐ ಸಾಧನಗಳಿಂದ ಯಾರೂ ಬೇಕಾದರೂ ಏನನ್ನೂ ಸೃಷ್ಟಿಸಬಹುದಾದ ಪರಿಸ್ಥಿತಿ ಏರ್ಪಟ್ಟಿದೆ. ಈ ಮುಕ್ತ ಅವಕಾಶವು ಅಪರಾಧಿಗಳಿಗೆ ಅಪರಾಧ ವೆಸಗಲೂ ಅನುವು ಕಲ್ಪಿಸುತ್ತದೆ. ಈಗ ತಂತ್ರಜ್ಞಾನದ ಕುರಿತಂತೆ ಅಲ್ಪಜ್ಞಾನವುಳ್ಳವನೂ ಎಐ ಮಾರ್ಗದರ್ಶನದ ಮೂಲಕ ಸಂಕೀರ್ಣ ಹಾಗೂ ಆಧುನಿಕ ಸೈಬರ್ ದಾಳಿಗಳನ್ನು ನಡೆಸಬಹುದಾಗಿದೆ. ಭವಿಷ್ಯದತ್ತ ನೋಡುವುದಾದರೆ ಸೈಬರ್ ಬೆದರಿಕೆಯು ಇನ್ನು ಮುಂದೆ ಹೆಚ್ಚೆಚ್ಚು ವ್ಯಕ್ತಿಗತವಾಗಬಹುದು. ಎಐ ವ್ಯಕ್ತಿಯೊಬ್ಬನ ಕುರಿತಂತೆ ಸಾಕಷ್ಟು ಖಾಸಗಿ ಮಾಹಿತಿಗಳನ್ನು ಸಂಗ್ರಹಿಸಬಲ್ಲದು. ಹಾಗೂ ಆತನನ್ನು ವಂಚಿಸಲು ಪೂರಕವಾದ ಸಂದೇಶಗಳನ್ನು ಕಳಿಸಬಲ್ಲದು. ಧ್ವನಿ ಅನುಕರಣಾ ತಂತ್ರಜ್ಞಾನದಿಂದಾಗಿ ಯಾರದೇ ಧ್ವನಿಯನ್ನು ಈಗ ನಕಲು ಮಾಡಬಹುದಾಗಿದೆ. ನಿಮ್ಮ ವಾಸ್ತವಿಕ ಮಾಹಿತಿಗಳನ್ನೊಳಗೊಂಡ ನಕಲಿ ಸಂದೇಶವೊಂದು ಬಂದರೆ ಅದು ಸಾಚಾ ಎಂದೇ ಕಂಡುಬರುತ್ತದೆ. ಈ ಮೂಲಕ ವಂಚಕರು ಮಾನಸಿಕ ಒತ್ತಡ ಹೇರಿ ನಿಮ್ಮನ್ನು ಏಮಾರಿಸುತ್ತಾರೆ.

ಪಾರದರ್ಶಕತೆ ಮತ್ತು ದಾಯಿತ್ವ

ಎಐ ಈಗ ರಾಷ್ಟ್ರೀಯ ಆಯಾಮವನ್ನೂ ಪಡೆದಿದೆ. ವಿವಿಧ ರಾಷ್ಟ್ರಗಳು ಎಐ ಕುರಿತಂತೆ ಹೆಚ್ಚೆಚ್ಚು ಸಂಶೋಧನೆ ನಡೆಸಿ ಅದನ್ನು ತಮ್ಮ ಲಾಭಕ್ಕೆ ಬಳಸಲು ಯೋಚಿಸುತ್ತಿವೆ. ಎಐ ಆಧಾರಿತ ನಿಗಾ ವ್ಯವಸ್ಥೆ, ಸ್ವಯಂಚಾಲಿತ ವ್ಯವಸ್ಥೆ, ಸೈಬರ್ ಸಮರ ಸಾಮರ್ಥ್ಯ ಮುಂತಾದವು ದೇಶದ ಭದ್ರತೆಗೆ ಮತ್ತು ರಾಷ್ಟ್ರೀಯ ವ್ಯೂಹಾತ್ಮಕ ರಣತಂತ್ರಕ್ಕೆ ಮಹತ್ವದ್ದಾಗಿದೆ.

ಡಿಜಿಟಲ್ ಚಿತ್ರಣವನ್ನು ಎಐ ಮರುರೂಪಿಸುತ್ತಿದೆ. ಜನರೇಟಿವ್ ಎಐ ಪ್ರೇರಿತವಾದ ಅಪಪ್ರಚಾರವು ದೊಡ್ಡ ಮಟ್ಟದಲ್ಲಿ ಜನಾಭಿಪ್ರಾಯವನ್ನು ರೂಪಿಸಬಲ್ಲುದು. ಡಿಜಿಟಲ್ ಸಮರಾಂಗಣವು ಈಗ ಕೇವಲ ಸೈನಿಕರನ್ನು ಒಳಗೊಂಡಿರುವುದಲ್ಲ, ಅಲ್ಗರಿಥಮ್ ಮತ್ತು ನರೇಟಿವ್‌ಗಳನ್ನೂ ಒಳಗೊಂಡಿದೆ. ಇಂತಹ ಬೆಳವಣಿಗೆಯ ಸಂದರ್ಭದಲ್ಲಿ ನೈತಿಕತೆಯೆಂಬುದು ಅತ್ಯಂತ ಪ್ರಮುಖ ವಿಷಯವಾಗುತ್ತದೆ. ತಪ್ಪು ಮಾಹಿತಿಯ ಕಾರಣದಿಂದಾಗಿ ಎಐ ವ್ಯವಸ್ಥೆಯು ಗ್ರಾಹಕನೊಬ್ಬನಿಗೆ ಸಾಲ ನೀಡಲು ನಿರಾಕರಿಸಿದರೆ ಅದಕ್ಕೆ ಯಾರು ಹೊಣೆ? ಮುಖ ಗುರುತು ಹಿಡಿಯುವ ವ್ಯವಸ್ಥೆಯು ತಪ್ಪಾಗಿ ಯಾರನ್ನಾದರೂ ಗುರುತಿಸಿದರೆ ಅದಕ್ಕೆ ಯಾರು ಹೊಣೆ? ಎಐ ವ್ಯವಸ್ಥೆಯು ತನಗೆ ನೀಡಿದ ಮಾಹಿತಿಯನ್ನು ಆಧರಿಸಿಯೇ ವರ್ತಿಸುತ್ತದೆ. ಅದಕ್ಕೆ ನೀಡಿದ ಮಾಹಿತಿಯಲ್ಲಿಯೇ ಪೂರ್ವಗ್ರಹಪೀಡಿತ ತಪ್ಪುಗಳಿದ್ದರೆ ಅದರ ಪರಿಣಾಮ ಗಂಭೀರವಾದೀತು. ಆದ್ದರಿಂದಲೇ ಎಐ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ, ವಿವರಣೆ ಮತ್ತು ದಾಯಿತ್ವವಿರಬೇಕು ಎಂದು ಹೇಳುವುದು. ನಾವು ಈ ವ್ಯವಸ್ಥೆಯನ್ನು ನಿಗೂಢ 'ಬ್ಲಾಕ್‌ಬಾಕ್ಸ್'ನಂತೆ ಪರಿಗಣಿಸಲಾಗುವುದಿಲ್ಲ.

ಉದ್ಯೋಗದ ವಿಷಯವನ್ನೂ ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಎಐ ಒಂದೇ ದಿನ ಉದ್ಯೋಗವಕಾಶಗಳನ್ನು ಕಿತ್ತು ಹಾಕುವುದಿಲ್ಲ. ಅದು ಉದ್ಯೋಗದ ಸ್ವರೂಪ ಬದಲಿಸುತ್ತದಷ್ಟೆ. ಪುನರಪಿ ಮಾನಸಿಕ ಕೆಲಸಗಳು ಕಡಿಮೆಯಾಗಬಹುದು. ಕ್ರಿಯಾಶೀಲ ಉದ್ಯೋಗಗಳು ಹೆಚ್ಚಬಹುದು. ಭವಿಷ್ಯದ ಉದ್ಯೋಗಶಕ್ತಿಯು ಎಐ ಜತೆಗೆ ಸಮನ್ವಯ ಸಾಧಿಸಿಕೊಂಡು ಹೋಗಬೇಕೇ ಹೊರತು ಸ್ಪರ್ಧಿಸಬಾರದು. ಪರಿಸ್ಥಿತಿಗೆ ಹೊಂದಿಕೊಳ್ಳುವುದು ಮತ್ತು ನಿರಂತರ ಕಲಿಕೆ ವೃತ್ತಿಪರ ಯಶಸ್ಸಿಗೆ ಮಾನದಂಡ. ಜನರು ಎಐ ಸಾಧನಗಳನ್ನು ಉಪಯೋಗಿಸುವುದಷ್ಟೇ ಅಲ್ಲದೆ, ಅವುಗಳ ಮಿತಿಯನ್ನೂ ಅರಿತುಕೊಳ್ಳಬೇಕು. ಆಟೋಮೇಟೆಡ್ ಫಲಿತಾಂಶಗಳನ್ನು ಪರಾಮರ್ಶಿಸುವ, ಪ್ರಶ್ನಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಅಲ್ಗರಿಥಮ್ ನಿರ್ಧಾರಗಳ ಮೇಲೆ ಕುರುಡು ನಂಬಿಕೆ ಅಪಾಯಕಾರಿಯಾದೀತು.

ಸುರಕ್ಷತಾ ವ್ಯವಸ್ಥೆ

ಇದೀಗ ಭದ್ರತೆಯ ಕುರಿತು ಗಮನಹರಿಸೋಣ. ಪ್ರತಿಯೊಂದು ಕಂಪ್ಯೂಟರ್ ಅಥವಾ ಮೊಬೈಲ್‌ನಲ್ಲಿಯೂ ಭದ್ರತಾ ಸಾಫ್ಟ್‌ವೇರ್ ಅಳವಡಿಸುವುದು ಮತ್ತು ಅದನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡುವುದು ಅತ್ಯಗತ್ಯ. ಕಂಪ್ಯೂಟರ್ ವ್ಯವಸ್ಥೆಯನ್ನು ಕೂಡಾ ಸಕಾಲದಲ್ಲಿ ಅಪ್‌ಡೇಟ್ ಮಾಡುತ್ತಲೇ ಇರಬೇಕಾಗುತ್ತದೆ. ಸಾರ್ವಜನಿಕ ವೈಫೈ ಜಾಲವನ್ನು ಬಳಸುವಾಗ ಹೆಚ್ಚು ಎಚ್ಚರಿಕೆ ವಹಿಸಬೇಕು. ಮುಖ್ಯವಾಗಿ ಹಣಕಾಸು ವ್ಯವಹಾರ ನಡೆಸುವಾಗ ಸಾರ್ವಜನಿಕ ವೈಫೈ ಬಳಸದಿರುವುದೇ ಸೂಕ್ತ. ಪ್ರತಿಯೊಂದು ಡಿವೈಸಿಗೂ ಕಠಿಣ ಪಾಸ್‌ವರ್ಡ್ ಇಟ್ಟುಕೊಳ್ಳಬೇಕು.

ಭಾರತದ ನಾಗರಿಕರಿಗೆ ಹಲವಾರು ರಕ್ಷಣಾ ವ್ಯವಸ್ಥೆಯ ಅವಕಾಶವಿದೆ. ರಾಷ್ಟ್ರೀಯ ಸೈಬರ್ ಕ್ರೈಂ ಹೆಲ್ಪ್‌ಲೈನ್ 1930 ಆರ್ಥಿಕ ವಂಚನೆಯ ಕುರಿತು ಗಮನಹರಿಸುತ್ತದೆ.

ವಂಚನೆ ನಡೆದ ತಕ್ಷಣವೇ ದೂರು ನೀಡುವುದರಿಂದ ಬಹಳಷ್ಟು ಬಾರಿ ಹಣದ ವಂಚನೆಯನ್ನು ತಡೆಯಬಹುದು. ಆನ್‌ಲೈನ್‌ನಲ್ಲೇ ದೂರು ಸಲ್ಲಿಸಲೂ ಅವಕಾಶಗಳಿವೆ. ಸಂಚಾರ್ ಸಾಥಿ ಆ್ಯಪ್ ಜನರಿಗೆ ತಮಗೆ ಬಂದ ಕರೆಗಳ ಮಾಹಿತಿ ನೀಡುತ್ತದೆ ಹಾಗೂ ಫೋನ್‌ಗಳು ಕಳೆದುಹೋದರೆ ಅಥವಾ ಕಳವಾದರೆ ಅವುಗಳು ಕಾರ್ಯಾಚರಿಸದಂತೆ ಬ್ಲಾಕ್ ಮಾಡುತ್ತದೆ.

ಡೇಟಾ ಕಳ್ಳತನ ಕೂಡಾ ಅತ್ಯಂತ ಗಂಭೀರ ಅಪಾಯ. ವಿಶ್ವಾದ್ಯಂತ ದೊಡ್ಡ ದೊಡ್ಡ ಸಂಘಟನೆಗಳು, ಕಂಪೆನಿಗಳು ಇಂತಹ ಅಪಾಯ ಎದುರಿಸಿವೆ. ಇದರಿಂದಾಗಿ ಕೋಟ್ಯಂತರ ಬಳಕೆದಾರರ ದಾಖಲೆಗಳು ಬಹಿರಂಗವಾದುದಿದೆ. ಎಐ ಒಂದು ಮ್ಯಾಜಿಕ್ ಅಲ್ಲ, ಅದು ಒಂದು ರೀತಿಯಲ್ಲಿ ಉತ್ಕೃಷ್ಟ ಮಟ್ಟದಲ್ಲಿ ನಡೆಯುವ ಡೇಟಾ ಮತ್ತು ಗಣಿತದ ವ್ಯವಹಾರ. ಬ್ಯಾಂಕ್‌ಗಳು ಇದೇ ಎಐಯನ್ನು ತಮ್ಮ ಭದ್ರತೆಗೂ ಬಳಸಿಕೊಳ್ಳುತ್ತವೆ. ಹಣದ ಸಂಶಯಾಸ್ಪದ ವಿನಿಮಯ ನಡೆದ ಕೂಡಲೇ ಬ್ಯಾಂಕ್‌ಗಳಿಗೆ ಅರಿವಾಗುವಲ್ಲೂ ಎಐ ಕೊಡುಗೆಯಿದೆ.

ಜನರ ಅರಿವಿಗಿಂತ ಹೆಚ್ಚು ವೇಗದಲ್ಲಿ ತಂತ್ರಜ್ಞಾನವು ಅಭಿವೃದ್ಧಿಯಾಗುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಸವಾಲಿರುವುದು ಎಐ ಕುರಿತಂತೆ ಭೀತಿಪಡುವುದರಲ್ಲಲ್ಲ, ಅದಕ್ಕಿಂತಲೂ ಅದನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಜವಾಬ್ದಾರಿಯುತವಾಗಿ ಬಳಸಿಕೊಳ್ಳುವಲ್ಲಿ. ಮುಂದಿನ ದಿನಗಳಲ್ಲಿ ಎಐ ಹೆಚ್ಚೆಚ್ಚು ಪ್ರಗತಿ ಸಾಧಿಸಿದಂತೆಯೇ ಸೈಬರ್ ಸೆಕ್ಯೂರಿಟಿ ನಮ್ಮ ವೈಯಕ್ತಿಕ ಭದ್ರತೆ, ನಮ್ಮ ಆರ್ಥಿಕತೆ ಮತ್ತು ನಮ್ಮ ರಾಷ್ಟ್ರೀಯ ಸ್ಥಿರತೆಯ ವಿಷಯವನ್ನೂ ಒಳಗೊಳ್ಳಲಿದೆ. ಒಟ್ಟಿನಲ್ಲಿ ಸ್ಮಾರ್ಟ್ ಯಂತ್ರಗಳ ಆವಿಷ್ಕಾರಗಳನ್ನು ತಡೆಯಲಾಗದು. ಅದು ಅನಿವಾರ್ಯ ಪ್ರಕ್ರಿಯೆ. ಪ್ರಶ್ನೆಯಿರುವುದು ನಾವು ಕುಶಲ ಡಿಜಿಟಲ್ ನಾಗರಿಕರಾಗಬಲ್ಲೆವೆ ಎಂಬ ಕುರಿತು.

ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪ | ಅಮೆರಿಕ–ಬ್ರಿಟನ್ ಜಂಟಿ ಸೇನಾನೆಲೆ ಮೇಲೆ ದಾಳಿಗೆ ಯತ್ನ

ವಿಶ್ವದ ಗಮನಸೆಳೆದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ | ಇರಾನ್ ಕ್ಷಿಪಣಿಗಳ ಘೋಷಿತ ಸಾಮರ್ಥ್ಯ 2,000 ಕಿ.ಮೀ.

4,000 ಕಿ.ಮೀ. ದೂರ ಇರಾನ್ ಕ್ಷಿಪಣಿ ದಾಳಿ!

ಹೊಸದಿಲ್ಲಿ: ಅಮೆರಿಕ ಮತ್ತು ಬ್ರಿಟನ್ ಜಂಟಿ ಸೇನಾನೆಲೆಯಾದ ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪದ ಮೇಲೆ ಇರಾನ್ ಎರಡು ಮಧ್ಯಂತರ-ಶ್ರೇಣಿಯ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಇರಾನ್ ಕ್ಷಿಪಣಿಗಳ ಅಘೋಷಿತ ದೂರ ಸಾಮರ್ಥ್ಯವು ವಿಶ್ವದ ಗಮನಸೆಳೆದಿದೆ.

ತನ್ನಲ್ಲಿ ಕೇವಲ 2,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳಷ್ಟೇ ಇವೆಯೆಂದು ಘೋಷಿಸಿಕೊಂಡ ಇರಾನ್, 4,000 ಕಿ.ಮೀ. ದೂರವ್ಯಾಪ್ತಿಯ ಕ್ಷಿಪಣಿಗಳನ್ನು ಬಹುಶಃ ರಹಸ್ಯವಾಗಿಟ್ಟಿತ್ತು. ಹಿಂದು ಮಹಾಸಾಗರದಲ್ಲಿರುವ ಡೀಗೋ ಗಾರ್ಸಿಯಾ ದ್ವೀಪವು ಇರಾನ್‌ನಿಂದ 4,000 ಕಿ.ಮೀ. ದೂರದಲ್ಲಿದೆ.

ಇರಾನ್ ಕಳುಹಿಸಿದ ಎರಡು ಕ್ಷಿಪಣಿಗಳಲ್ಲಿ ಒಂದು ವಿಫಲವಾಗಿದ್ದು, ಇನ್ನೊಂದು ಕ್ಷಿಪಣಿಯನ್ನು ಹೊಡೆದುರುಳಿಸಲಾಗಿದೆ. ಎರಡನೇ ಕ್ಷಿಪಣಿ ಗುರಿ ಮುಟ್ಟುವಲ್ಲಿ ಯಶಸ್ವಿಯಾಗಿದ್ದರಿಂದ ಇರಾನ್ ಕ್ಷಿಪಣಿಗಳ ದೂರ ಸಾಮರ್ಥ್ಯ ಬಯಲಾಗಿದೆ. ಎರಡೂ ಕ್ಷಿಪಣಿಗಳು ವಿಫಲವಾಗಿದ್ದರೆ ಇದು ತಿಳಿಯುತ್ತಿರಲಿಲ್ಲ.

ಪರಿಣಾಮವೇನು?: ಇರಾನ್ ಕ್ಷಿಪಣಿಗಳು ಹಿಂದು ಮಹಾಸಾಗರ ಮತ್ತು ದಕ್ಷಿಣ ಯುರೋಪ್ ತಲುಪುವ ಸಾಮರ್ಥ್ಯವನ್ನೂ ಹೊಂದಿರುವುದು ಬಹಿರಂಗವಾಗಿದೆ. ಇರಾನ್ ಕ್ಷಿಪಣಿಗಳ ಬಗ್ಗೆ ನೆರೆಯ ಗಲ್ಫ್ ರಾಷ್ಟ್ರಗಳು ಮತ್ತು ಇಸ್ರೇಲ್ ತಮ್ಮ ವಾಯು ರಕ್ಷಣಾ ವ್ಯವಸ್ಥೆ ಸಾಮರ್ಥ್ಯ ಕುರಿತು ಅವಲೋಕನ ನಡೆಸುವ ಅಗತ್ಯ ವಿದೆ. ಮಧ್ಯಪ್ರಾಚ್ಯ ಯುದ್ಧವು ಹಿಂದು ಮಹಾಸಾಗರವನ್ನು ಪ್ರವೇಶಿಸಿದೆ.

ಡೀಗೋ ಗಾರ್ಸಿಯಾದಲ್ಲಿ ಏನಿದೆ?: ಹಿಂದು ಮಹಾಸಾಗರ ದಲ್ಲಿರುವ ಈ ದ್ವೀಪವು ಅಮೆರಿಕದ ಹೆವಿ ಬಾಂಬರ್ ಮತ್ತು ಕಣ್ಗಾವಲು ವಿಮಾನಗಳ ನೆಲೆಯಾಗಿದೆ. ಮಧ್ಯಪ್ರಾಚ್ಯದಲ್ಲಿ ಯಾವುದೇ ಸೇನಾ ಕಾರ್ಯಾಚರಣೆ ನಡೆಸಲು ಈ ಸೇನಾನೆಲೆಯನ್ನು ಅಮೆರಿಕ ಬಳಸುತ್ತದೆ. ಬಿ–52 ಬಾಂಬರ್ಸ್, ಅಣ್ವಸ್ತ್ರ ಸಾಮರ್ಥ್ಯದ ಸಬ್‌ಮೆರೀನ್‌ಗಳು ಮತ್ತು ಇತರ ಯುದ್ಧ ವಿಮಾನಗಳಿಗೆ ಇದು ನೆಲೆಯಾಗಿದೆ. ಇದು ಪ್ರವಾಸಿ ತಾಣವಲ್ಲ, ಸೇನಾ ಸಿಬ್ಬಂದಿಗೆ ಮಾತ್ರ ಪ್ರವೇಶವಿದೆ.

ಪ್ರಾದೇಶಿಕ ದಾಳಿಗಳು ಮತ್ತು ಭದ್ರತೆ

ಇರಾಕ್‌ನ ಬಾಗ್ದಾದ್‌ನಲ್ಲಿರುವ ರಾಷ್ಟ್ರೀಯ ಗುಪ್ತಚರ ಸಂಸ್ಥೆಯ ಪ್ರಧಾನ ಕಚೇರಿಯ ಮೇಲೆ ಡ್ರೋನ್ ದಾಳಿ ನಡೆದಿದೆ. ಇದೇ ವೇಳೆ, ಸೌದಿ ಅರೇಬಿಯಾ ತನ್ನ ತೈಲ ಸಮೃದ್ಧ ಪೂರ್ವ ವಲಯದಲ್ಲಿ ಎರಡೇ ಗಂಟೆಗಳಲ್ಲಿ 20 ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ವರದಿ ಮಾಡಿದೆ. ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಪ್ರಾದೇಶಿಕ ಏಕತೆಗೆ ಕರೆ ನೀಡಿದ್ದು, ಭಿನ್ನಾಭಿಪ್ರಾಯಗಳಿಂದ ಇಸ್ರೇಲ್‌ಗೆ ಮಾತ್ರ ಲಾಭವಾಗುತ್ತದೆ, ಎಂದು ತಿಳಿಸಿದ್ದಾರೆ. ಪವಿತ್ರ ನಗರ ಕೋಮ್‌ನಲ್ಲಿ ಇಸ್ರೇಲ್ ದಾಳಿಗೆ ಬಲಿಯಾದ ಗುಪ್ತಚರ ಸಚಿವ ಇಸ್ಮಾಯಿಲ್ ಖತೀಬ್ ಮತ್ತು ರೆವಲ್ಯೂಷನರಿ ಗಾರ್ಡ್ ವಕ್ತಾರ ಅಲಿ ಮೊಹಮ್ಮದ್ ನೈನಿ ಅಂತ್ಯಕ್ರಿಯೆ ಶನಿವಾರ ನಡೆದಿದೆ.

ರಾಜತಾಂತ್ರಿಕ ಮಾತುಕತೆಗಳು: ಇಂಧನ ಸಾಗಣಿಕಾ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಟೆಹ್ರಾನ್ ನೊಂದಿಗೆ ವಿವಿಧ ಹಂತದ ಮಾತುಕತೆಗಳನ್ನು ಆರಂಭಿಸಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಜಪಾನಿನ ಹಡಗುಗಳ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೀಡಿದ ಹೇಳಿಕೆಯ ಬೆನ್ನಲ್ಲೇ ಈ ಮಾತುಕತೆ ನಡೆಯುತ್ತಿದೆ.

913 ಪ್ರಜೆಗಳು ಭಾರತಕ್ಕೆ ವಾಪಸ್

ಇರಾನ್‌ನಲ್ಲಿ ಸಿಲುಕಿರುವ 913 ಭಾರತೀಯ ಪ್ರಜೆಗಳು ನೆರೆಯ ದೇಶಗಳ ಮೂಲಕ ಭೂ ಮಾರ್ಗಗಳ ಮೂಲಕ ಭಾರತಕ್ಕೆ ಮರಳಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಭಾರತೀಯ ರಾಯಭಾರ ಕಚೇರಿಗಳ ಸಹಾಯದಿಂದ ಸ್ಥಳಾಂತರಿಸುವ ಪ್ರಕ್ರಿಯೆಯು ಮುಂದುವರೆದಿದೆ ಎಂದು ಹೇಳಿದೆ.



ಭಾರತಕ್ಕೆ ಬರಲಿವೆ ಇನ್ನೂ 2 ಎಲ್‌ಪಿಜಿ ಹಡಗುಗಳು

ಹೊಸದಿಲ್ಲಿ: ಇನ್ನೂ ಎರಡು ಭಾರತೀಯ ಎಲ್‌ಪಿಜಿ ಕ್ಯಾರಿಯರ್ ಹಡಗುಗಳು ಹಾರ್ಮುಜ್ ಜಲಸಂಧಿ ದಾಟಿ ಸ್ವದೇಶಕ್ಕೆ ಮರಳುವ ಸಿದ್ಧತೆ ಯಲ್ಲಿವೆ. ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಶಾರ್ಜಾದಲ್ಲಿ ಲಂಗರು ಹಾಕಿರುವ ಭಾರತ್ ಪೆಟ್ರೋಲಿಯಂನ ಪೈನ್ ಗ್ಯಾಸ್ ಮತ್ತು ಇಂಡಿಯನ್ ಆಯಿಲ್‌ನ ಜಗ್ ವಸಂತ್ ಹಡಗುಗಳು ಶೀಘ್ರ ಭಾರತಕ್ಕೆ ಮರಳಲಿವೆ. ಹಾರ್ಮುಜ್ ಜಲಸಂಧಿಯನ್ನು ಹಲವು ರಾಷ್ಟ್ರಗಳಿಗೆ ಮುಚ್ಚಲಾಗಿದ್ದು, ಭಾರತೀಯ ಮತ್ತು ಭಾರತದ ರಾಷ್ಟ್ರಧ್ವಜವುಳ್ಳ ಇತರ ಹಡಗುಗಳಿಗೆ ಹಾರ್ಮುಜ್ ದಾಟಲು ಇರಾನ್ ಅವಕಾಶ ನೀಡುತ್ತಿದೆ. ಮಾ.2ರಂದೇ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿತ್ತು. ಆದರೆ ಕಳೆದ ವಾರವೂ ಭಾರತೀಯ ಹಡಗುಗಳಿಗೆ ಇರಾನ್ ಜಲಸಂಧಿಯಲ್ಲಿ ಹಾದುಹೋಗಲು ಅವಕಾಶ ನೀಡಿದೆ. ಭಾರತ 22 ಹಡಗುಗಳು ಗಲ್ಫ್‌ನಲ್ಲಿವೆ. ಈ ಹಡಗುಗಳ ಸುರಕ್ಷತೆ ಖಚಿತಪಡಿಸಲು ಪ್ರಧಾನಿ ನರೇಂದ್ರ ಮೋದಿಯವರು ವಿಶ್ವ ನಾಯಕನರ ಜತೆ ಸಂಪರ್ಕದಲ್ಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಶುಕ್ರವಾರ ಹೇಳಿದ್ದರು.

22 ದೇಶಗಳಿಂದ ಖಂಡನೆ

ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ವಿಧಿಸಿರುವ ದಿಗ್ಬಂಧನದ ವಿರುದ್ಧ ಜಗತ್ತಿನ ಸುಮಾರು 22ಕ್ಕೂ ಹೆಚ್ಚು ದೇಶಗಳು ಖಂಡಿಸಿವೆ. ಈ ಜಲಸಂಧಿಯನ್ನು ಮುಕ್ತಮಾಡಬೇಕು, ಎಲ್ಲ ದೇಶಗಳ ತೈಲ ಟ್ಯಾಂಕರ್‌ಗಳ ಓಡಾಟಕ್ಕೆ ಅವಕಾಶ ನೀಡಬೇಕು ಎಂದು ಈ ದೇಶಗಳು ಆಗ್ರಹಿಸಿವೆ. ಹಾರ್ಮುಜ್ ಸಂಧಿಯಲ್ಲಿನ ತೈಲ ಹಡಗುಗಳ ಸರಾಗ ಓಡಾಟಕ್ಕೆ ಅನುವಾಗುವಂತೆ ನ್ಯಾಟೋ ದೇಶಗಳು ಮತ್ತು ಯುರೋಪ್ ದೇಶಗಳು ಭದ್ರತೆ ಒದಗಿಸಬೇಕು ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬೇಡಿಕೆಯನ್ನು ಮೊದಲಿಗೆ ಈ ಎಲ್ಲ ದೇಶಗಳು ತಿರಸ್ಕರಿಸಿದ್ದವು. ಆದರೆ, ಟ್ರಂಪ್ ಆಡಳಿತದ ಮನವೊಲಿಕೆ ಮೇರೆಗೆ ಜಪಾನ್, ಆಸ್ಟ್ರೇಲಿಯಾ, ಇಂಗ್ಲೆಂಡ್ ಸೇರಿದಂತೆ 22ಕ್ಕೂ ಹೆಚ್ಚು ದೇಶಗಳು ಒಪ್ಪಿಗೆ ನೀಡಿವೆ. ಈ ಎಲ್ಲ ದೇಶಗಳು ಹಡಗುಗಳ ಸುರಕ್ಷಿತ ಓಡಾಟಕ್ಕೆ ಅನುವು ಮಾಡಿಕೊಡಲಿವೆ ಎಂದೇ ಹೇಳಲಾಗುತ್ತಿದೆ.

ಹಿಜ್ಬುಲ್ಲಾ ನೆಲೆಗಳ ಮೇಲೆ ದಾಳಿ

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸೇನಾ ಕಾರ್ಯಾಚರಣೆಗಳನ್ನು ಕಡಿತಗೊಳಿಸುವ ಮುನ್ಸೂಚನೆ ನೀಡುತ್ತಿರುವ ಬೆನ್ನಲ್ಲೇ, ಇರಾನ್ ಜೊತೆಗಿನ ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ಅಮೆರಿಕ ಹೆಚ್ಚಿನ ಯುದ್ಧನೌಕೆಗಳು ಮತ್ತು ನೌಕಾಪಡೆಗಳನ್ನು ಈ ವಲಯಕ್ಕೆ ನಿಯೋಜಿಸಿದೆ. ಶನಿವಾರ ಮುಂಜಾನೆ ಇಸ್ರೇಲ್ ಸೇನೆ, ಟೆಹ್ರಾನ್ ಮತ್ತು ಬೈರುತ್‌ನ ಹಿಜ್ಬುಲ್ಲಾ ನೆಲೆಗಳ ಮೇಲೆ ಹೊಸದಾಗಿ ದಾಳಿ ನಡೆಸಿದೆ.

ಸಾಮಾನ್ಯ ಸ್ಥಿತಿಗೆ ಕುಂಠಿತವಾಗಿದ್ದ ಎಲ್‌ಪಿಜಿ ಗ್ಯಾಸ್ ಪೂರೈಕೆ

ವಾಣಿಜ್ಯ ಎಲ್ಪಿಜಿ ಹಂಚಿಕೆ ಶೇ.50ಕ್ಕೆ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ನಡೆದ ಮೂರು ವಾರಗಳ ಯುದ್ಧದ ಪರಿಣಾಮವಾಗಿ ಅಸ್ತವ್ಯಸ್ತಗೊಂಡಿದ್ದ ಇಂಧನ ಪೂರೈಕೆ ಪರಿಸ್ಥಿತಿ ಈಗ ಹಂತ ಹಂತವಾಗಿ ಸಾಮಾನ್ಯ ಸ್ಥಿತಿಗೆ ಮರಳುತ್ತಿರುವ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆಯ ಎಲ್‌ಪಿಜಿ ಹಂಚಿಕೆಯನ್ನು ಶೇ.50ಕ್ಕೆ ಹೆಚ್ಚಿಸಿದೆ.

ಈ ಹಿಂದೆ ಗೃಹ ಬಳಕೆಯ ಅಡುಗೆ ಅನಿಲ ಪೂರೈಕೆಗೆ ಆದ್ಯತೆ ನೀಡುವ ಉದ್ದೇಶದಿಂದ ಹೋಟೆಲ್, ರೆಸ್ಟೋರೆಂಟ್ ಸೇರಿದಂತೆ ವಾಣಿಜ್ಯ ಬಳಕೆದಾರರಿಗೆ ಎಲ್‌ಪಿಜಿ ಪೂರೈಕೆಯನ್ನು ಕಡಿತಗೊಳಿಸಲಾಗಿತ್ತು. ಬಳಿಕ ಹಂತ ಹಂತವಾಗಿ ಪೂರೈಕೆ ಪುನರ್ ಸ್ಥಾಪನೆಗೊಂಡು, ಈಗ ಹೆಚ್ಚುವರಿ ಶೇ.20 ಹಂಚಿಕೆಯನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮಂಜೂರು ಮಾಡಲಾಗಿದೆ.

ಈ ಹೆಚ್ಚುವರಿ ಎಲ್‌ಪಿಜಿ ಹಂಚಿಕೆ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ಕೈಗಾರಿಕಾ ಕ್ಯಾಂಟೀನ್‌ಗಳು, ಆಹಾರ ಸಂಸ್ಕರಣ ಘಟಕಗಳು, ಸಮುದಾಯ ಅಡುಗೆ ಕೇಂದ್ರಗಳು ಮತ್ತು ಸಬ್ಸಿಡಿ ಆಹಾರ ವಿತರಣೆ ಕೇಂದ್ರಗಳಿಗೆ ನೆರವಾಗಲಿದೆ. ಜತೆಗೆ ವಲಸೆ ಕಾರ್ಮಿಕರಿಗೆ ವಿತರಣೆಯ ಮೂಲಕ ಸಹಾಯ ಒದಗಿಸುವುದಕ್ಕೂ ಕ್ರಮ ಕೈಗೊಳ್ಳಲಾಗಿದೆ.

ಆದರೆ, ಈ ಹೆಚ್ಚುವರಿ ಹಂಚಿಕೆ ಪಡೆಯಲು ವಾಣಿಜ್ಯ ಸಂಸ್ಥೆಗಳು ತೈಲ ಕಂಪನಿಗಳಲ್ಲಿ ನೋಂದಣಿ ಮಾಡಿಸಿಕೊಂಡು ಪೈಪ್ ನೈಸರ್ಗಿಕ ಅನಿಲ(ಪಿಎನ್‌ಜಿ) ಸಂಪರ್ಕಕ್ಕೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ತೈಲ ಕಾರ್ಯದರ್ಶಿಗಳು ರಾಜ್ಯಗಳಿಗೆ ತಿಳಿಸಿರುವ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರದ ಪ್ರಕಾರ, ದೇಶೀಯ ಎಲ್‌ಪಿಜಿ ಪೂರೈಕೆ ಸ್ಥಿರವಾಗಿದ್ದು, ವಿತರಣೆ ಕೇಂದ್ರಗಳಲ್ಲಿ ಯಾವುದೇ ಕೊರತೆ ವರದಿಯಾಗಿಲ್ಲ, ಸಾಮಾನ್ಯವಾಗಿ ಡೆಲಿವರಿ ಪ್ರಕ್ರಿಯೆಗಳು ಮುಂದುವರಿದಿವೆ. ಪ್ಯಾನಿಕ್ ಬುಕ್ಕಿಂಗ್‌ಗಳು ಕಡಿಮೆಯಾಗಿದ್ದು, ಜನರು ಗಾಬರಿಯಾಗದ ಮನೆಮಟ್ಟದ ವಿತರಣೆ ಸೇವೆಯನ್ನು ಬಳಸುವಂತೆ ಸಲಹೆ ನೀಡಲಾಗಿದೆ. ಇನ್ನೊಂದೆಡೆ, ಪೂರೈಕೆ ಒತ್ತಡವನ್ನು ಕಡಿಮೆ ಮಾಡಲು ವಾಣಿಜ್ಯ ಬಳಕೆದಾರರನ್ನು ಪೈಪ್ ನೈಸರ್ಗಿಕ ಅನಿಲ ಬಳಕೆಗೆ ಉತ್ತೇಜಿಸಲಾಗುತ್ತಿದೆ. ನಗರ ಅನಿಲ ವಿತರಣಾ ಜಾಲದ ಅನುಮೋದನೆಗಳನ್ನು ವೇಗಗೊಳಿಸಲು ರಾಜ್ಯಗಳಿಗೆ ಸೂಚನೆ ನೀಡಲಾಗಿದೆ. ಸಮಾನಾಂತರವಾಗಿ, ದೇಶದ ಎಲ್ಲಾ ರಿಫೈನರಿಗಳು ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಸಮರ್ಪಕವಾಗಿ ಲಭ್ಯವಿದೆ. ಇಂಧನ ಕೊರತೆ ಎಲ್ಲಿಯೂ ವರದಿಯಾಗಿಲ್ಲವೆಂದು ಸರ್ಕಾರ ಸ್ಪಷ್ಟಪಡಿಸಿದೆ.

ನೈಸರ್ಗಿಕ ಅನಿಲ ಪೂರೈಕೆ ಗೃಹ ಬಳಕೆ ಪಿಎನ್‌ಜಿ ಮತ್ತು ಸಿಎನ್‌ಜಿ ಸಾರಿಗೆ ವಿಭಾಗಗಳಿಗೆ ಪೂರ್ಣ ಪ್ರಮಾಣದಲ್ಲಿ ಮುಂದುವರಿದಿದ್ದು, ಕೈಗಾರಿಕಾ ಬಳಕೆದಾರರಿಗೆ ಸದ್ಯಕ್ಕೆ ಸುಮಾರು ಶೇ.80 ಪೂರೈಕೆ ನೀಡಲಾಗುತ್ತಿದೆ.

ಅದರ ಜತೆಗೆ, ದೇಶೀಯ ಎಲ್‌ಪಿಜಿ ಉತ್ಪಾದನೆ ಹೆಚ್ಚಿಸುವುದು, ಬುಕ್ಕಿಂಗ್ ಅವಧಿ ವಿಸ್ತರಣೆ ಮತ್ತು ಪರ್ಯಾಯವಾಗಿ ಸೀಮೆಎಣ್ಣೆ ಹಂಚಿಕೆ ಹೆಚ್ಚಿಸುವ ಕ್ರಮಗಳನ್ನೂ ಸರ್ಕಾರ ಕೈಗೊಂಡಿದೆ.

ಅಕ್ರಮ ಸಂಗ್ರಹಣೆ ಮತ್ತು ಕಳ್ಳಬಜಾರ್ ತಡೆಯಲು ದೇಶಾದ್ಯಂತ 3,500 ಕ್ಕೂ ಹೆಚ್ಚು ದಾಳಿ ನಡೆಸಲಾಗಿದ್ದು, ಸುಮಾರು 1,400 ಎಲ್‌ಪಿಜಿ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಹುತೇಕ ರಾಜ್ಯಗಳು ನಿಯಂತ್ರಣ ಕೊಠಡಿಗಳು ಹಾಗೂ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಗಳನ್ನು ಸ್ಥಾಪಿಸಿವೆ.

ಮುಖ್ಯಾಂಶಗಳು

- ವಾಣಿಜ್ಯ ಎಲ್‌ಪಿಜಿ ಹಂಚಿಕೆ: ಶೇ.50ಕ್ಕೆ ಏರಿಕೆ
- ಹೆಚ್ಚುವರಿ ಹಂಚಿಕೆ: ಶೇ.20
- ದಾಳಿ ಸಂಖ್ಯೆ: 3,500+
- ವಶಪಡಿಸಿಕೊಂಡ ಸಿಲಿಂಡರ್‌ಗಳು: 1,400
- ಕೈಗಾರಿಕಾ ಅನಿಲ ಪೂರೈಕೆ: ಶೇ.80

ಇರಾನ್ ಅಧ್ಯಕ್ಷರ ಜತೆ ಮೋದಿ ಚರ್ಚೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದಲ್ಲಿ ಹೊತ್ತಿಕೊಂಡಿರುವ ಸಂಘರ್ಷ ದಿನೇದಿನೇ ಗಂಭೀರ ತಿರುವು ಪಡೆಯುತ್ತಿರುವ ನಡುವೆ, ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್ ಅಧ್ಯಕ್ಷ ಮಸೂದ್ ಪೆಝೆಶ್ಕಿಯನ್ ಅವರೊಂದಿಗೆ ಶನಿವಾರ ದೂರವಾಣಿ ಮಾತುಕತೆ ನಡೆಸಿ, ಪ್ರಮುಖ ಮೂಲಸೌಕರ್ಯಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ಕಟುವಾಗಿ ಖಂಡಿಸಿದರು. ಜಾಗತಿಕ ಸರಬರಾಜು ಸರಪಳಿ ಕುಸಿಯುವ ಅಪಾಯ ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಸಾಗಣೆ ಮಾರ್ಗಗಳು ಯಾವುದೇ ಅಡಚಣೆ ಇಲ್ಲದೆ ತೆರೆದೂ ಸುರಕ್ಷಿತವಾಗಿಯೂ ಇರಬೇಕೆಂದು ಅವರು ಕಠಿಣವಾಗಿ ಎಚ್ಚರಿಸಿದರು.

ಈದ್ ಹಾಗೂ ನವರೋಜ್ ಹಬ್ಬಗಳ ಶುಭಾಶಯಗಳನ್ನು ತಿಳಿಸಿದ ಮೋದಿ, ಪಶ್ಚಿಮ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ನೆಲೆಸಬೇಕೆಂಬ ಆಶಯ ವ್ಯಕ್ತಪಡಿಸಿದರೂ, ನೆಲದ ವಾಸ್ತವ ಸ್ಥಿತಿ ಆತಂಕಕಾರಿ ಎಂಬುದನ್ನು ಸ್ಪಷ್ಟಪಡಿಸಿದರು. 'ಮೂಲಸೌಕರ್ಯಗಳ ಮೇಲೆ ದಾಳಿಗಳು ಪ್ರದೇಶದ ಸ್ಥಿರತೆಯನ್ನು ಸಂಪೂರ್ಣವಾಗಿ ಕದಡುತ್ತಿವೆ. ಇದು ಜಾಗತಿಕ ಸರಬರಾಜು ವ್ಯವಸ್ಥೆಗೆ ನೇರ ಹೊಡೆತ,' ಎಂಬ ಸಂದೇಶವನ್ನು ಪ್ರಧಾನಿ ಸ್ಪಷ್ಟವಾಗಿ ನೀಡಿದ್ದಾರೆ. ಸಾಗಣೆ ಮಾರ್ಗಗಳ ಸ್ವಾತಂತ್ರ್ಯಕ್ಕೆ ಯಾವುದೇ ಧಕ್ಕೆಯಾಗಬಾರದು, ಹಡಗು ಸಂಚಾರ ನಿರ್ಬಂಧಿಸುವ ಯಾವುದೇ ಪ್ರಯತ್ನಗಳು ಅಸ್ವೀಕಾರಾರ್ಹವೆಂದು ಅವರು ಪುನರುಚ್ಚರಿಸಿದರು.

ಇರಾನ್‌ನಲ್ಲಿರುವ ಭಾರತೀಯರ ಸುರಕ್ಷತೆ ವಿಚಾರದಲ್ಲಿ ನೀಡುತ್ತಿರುವ ಸಹಕಾರವನ್ನು ಮೋದಿ ಮೆಚ್ಚಿದರೂ, ಪ್ರಸ್ತುತ ಪರಿಸ್ಥಿತಿಯ ಗಂಭೀರತೆಯನ್ನು ಸೂಚಿಸುವ ರೀತಿಯಲ್ಲಿ ಮಾತುಕತೆ ನಡೆದಿರುವುದು ಗಮನಾರ್ಹ.

ಫೆಬ್ರವರಿ 28ರಿಂದ ಉಲ್ಬಣಗೊಂಡಿರುವ ಸಂಘರ್ಷದ ಬಳಿಕ, ಮೋದಿ ಪೆಝೆಶ್ಕಿಯನ್ ನಡುವೆ ಇದು ಎರಡನೇ ನೇರ ಸಂಪರ್ಕ. ಮಾ.12ರಂದು ನಡೆದ ಮಾತುಕತೆಯಲ್ಲಿ, ಇರಾನ್ ಅಧ್ಯಕ್ಷರು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದರೆ, ಭಾರತ ತನ್ನ ಸ್ಥಿರ ನಿಲುವಾದ ಸಂವಾದವೇ ಪರಿಹಾರ ಎಂಬುದನ್ನು ಸ್ಪಷ್ಟಪಡಿಸಿತ್ತು. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಯಿಂದ ಪ್ರಾರಂಭವಾದ ಈ ಸಂಘರ್ಷಕ್ಕೆ ಪ್ರತಿಯಾಗಿ ಇರಾನ್ ನಡೆಸಿದ ಪ್ರತಿದಾಳಿ ಈಗ ಸಂಪೂರ್ಣ ಪ್ರದೇಶವನ್ನು ಅಸ್ಥಿರತೆಯ ಅಂಚಿಗೆ ತಳ್ಳಿದೆ.

- ಮೂಲಸೌಕರ್ಯಗಳ ಮೇಲಿನ ದಾಳಿಗೆ ಪ್ರಧಾನಿ ಖಂಡನೆ
- ಟ್ಯಾಂಕರ್‌ಗಳಿಗೆ ಅನುಮತಿ ನೀಡಿದ್ದಕ್ಕೆ ವಂದನೆ

ಕಿರುಸುದ್ದಿ

ಅಪರಿಚಿತರಿಂದ ಮತ್ತೊಬ್ಬ ಭಯೋತ್ಪಾದಕನ ಹತ್ಯೆ

ಲಾಹೋರ್: ಇಲ್ಲಿನ ಮುರಿದ್ಕೆಯಲ್ಲಿರುವ ಲಷ್ಕರ್–ಎ–ತೈಬಾ ಸಂಘಟನೆಯ ಪ್ರಮುಖ ಕೇಂದ್ರ ಮರ್ಕಜ್ ತೈಬಾ ಆವರಣದಲ್ಲೇ ಈದ್ ನಮಾಜಿನ ತಕ್ಷಣ ಉಗ್ರ ಕಮಾಂಡರ್ ಬಿಲಾಲ್ ಆರಿಫ್ ಸಲಾಫಿಯನ್ನು ಹತ್ಯೆ ಮಾಡಲಾಗಿದೆ. ಇಬ್ಬರು ಅಪರಿಚಿತರು ಚೂರಿಯಿಂದ ಇರಿದು, ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ. ಶನಿವಾರ ನಡೆದ ಈದ್ ಸಮೂಹ ನಮಾಜಿನಲ್ಲಿ ಮೌಲಾನಾ ಅಬು ಝುರ್, ಮೌಲಾನಾ ಅಬ್ದುಲ್ ರೆಹಮಾನ್ ಅಬಿದ್ ಸೇರಿದಂತೆ ಸಂಘಟನೆಯ ಹಲವು ಉಗ್ರರು ಭಾಗಿಯಾಗಿದ್ದರು. ನಮಾಜು ಮುಗಿದು ಕೆಲವೇ ಕ್ಷಣಗಳಲ್ಲಿ ಹೊರಬರುತ್ತಿದ್ದ ಸಲಾಫಿ ಮೇಲೆ ಇಬ್ಬರು ದಾಳಿ ನಡೆಸಿದ್ದಾರೆ ಎನ್ನಲಾಗಿದೆ. ಒಬ್ಬನು ಸಮೀಪದಿಂದ ಗುಂಡು ಹಾರಿಸಿದ್ದರೆ, ಮತ್ತೊಬ್ಬ ಮಹಿಳೆ ಚೂರಿಯಿಂದ ಇರಿದು ಕೊಲೆಗೈದಿದ್ದಾಳೆ. ಬಿಲಾಲ್ ಆರಿಫ್ ಸಲಾಫಿ ಯಾರು? 2005ರಿಂದ ಲಷ್ಕರ್–ಎ–ತೈಬಾ ಸಂಘಟನೆಯೊಂದಿಗೆ ನಂಟು ಹೊಂದಿದ್ದ ಸಲಾಫಿ, ಹಣ ಸಂಗ್ರಹ, ಜಾಲ ವಿಸ್ತರಣೆ ಮತ್ತು ಕಾರ್ಯಾಚರಣೆ ಸಮನ್ವಯದಲ್ಲಿ ಸಕ್ರಿಯನಾಗಿದ್ದನೆಂದು ಹೇಳಲಾಗುತ್ತಿದೆ.

ಏ.3ಕ್ಕೆ ತಾರಾಗಿರಿ ಸ್ವದೇಶಿ ಯುದ್ಧನೌಕೆ ನಿಯೋಜನೆ

ಹೊಸದಿಲ್ಲಿ: ಸೂಪರ್‌ಸೋನಿಕ್ ಕ್ಷಿಪಣಿಗಳ ಸಹಿತ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆ ಹೊಂದಿರುವ ಸ್ವದೇಶಿ ಯುದ್ಧನೌಕೆ ತಾರಾಗಿರಿಯನ್ನು ಏ.3ರಂದು ಭಾರತೀಯ ನೌಕಾಪಡೆಯಲ್ಲಿ ನಿಯೋಜಿಸಲು ಸಕಲ ಸಿದ್ಧತೆಗಳು ನಡೆಯುತ್ತಿವೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ವಿಶಾಖಪಟ್ಟಣದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ತಾರಾಗಿರಿ ನಿಯೋಜನೆ ಕಾರ್ಯಕ್ರಮ ನಡೆಯಲಿದೆ. ನೌಕಾಪಡೆ ಸಂಪೂರ್ಣ ಆತ್ಮನಿರ್ಭರ (ಸ್ವಾವಲಂಬಿ) ಶಕ್ತಿಯಾಗುವತ್ತ ಸಾಗುತ್ತಿದೆ ಎಂಬುದಕ್ಕೆ ಇದು ಬಲವಾದ ಸಾಕ್ಷಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇಕ್ ಇನ್ ಇಂಡಿಯಾದ ಸ್ಫೂರ್ತಿಯ ಸೆಲೆ: ನೀಲಗಿರಿ (ಪ್ರಾಜೆಕ್ಟ್ 17ಎ) ವರ್ಗದ 4ನೇ ಶಕ್ತಿಶಾಲಿ ಯುದ್ಧನೌಕೆ ತಾರಾಗಿರಿಯೊಂದು ಹಡಗು ಮಾತ್ರವಲ್ಲ; ಇದು 6,670 ಟನ್ ಭಾರದ ಮೇಕ್ ಇನ್ ಇಂಡಿಯಾ ಉಪಕ್ರಮದ ಸ್ಫೂರ್ತಿಯ ಸೆಲೆ ಮತ್ತು ನಮ್ಮ ಸ್ವದೇಶಿ ಹಡಗು ನಿರ್ಮಾಣ ಶಿಪ್‌ಯಾರ್ಡ್‌ಗಳ ಅತ್ಯುನ್ನತ ಇಂಜಿನಿಯರಿಂಗ್ ಸಾಮರ್ಥ್ಯದ ಪ್ರತಿರೂಪ ಎಂದು ನೌಕಾಪಡೆ ವಕ್ತಾರರು ತಿಳಿಸಿದ್ದಾರೆ. ಮಜಗಾನ್ ಡಾಕ್ ಶಿಪ್‌ಬಿಲ್ಡಿಂಗ್ ಲಿಮಿಟೆಡ್ (ಎಂಡಿಎಲ್) ನಿರ್ಮಿಸಿದ ಮೂರನೇ ಹಡಗು ತಾರಾಗಿರಿ (ಯಾರ್ಡ್ 12653) ಅನ್ನು ಕಳೆದ ವರ್ಷ ನ.28ರಂದು ಮುಂಬೈನಲ್ಲಿ ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು. ಇದರ ಸ್ವದೇಶಿ ವಿನ್ಯಾಸ ಮತ್ತು ನಿರ್ಮಾಣವು ಆತ್ಮನಿರ್ಭರತೆ ಸಾಧಿಸುವತ್ತ ಪ್ರಮುಖ ಮೈಲಿಗಲ್ಲಾಗಿದೆ.

ತಾರಾಗಿರಿಯಲ್ಲಿ ಶೇ.75ರಷ್ಟು ದೇಸಿ ಉಪಕರಣಗಳನ್ನು ಬಳಸಲಾಗಿದೆ. ಇದರಲ್ಲಿ ಸೂಪರ್‌ಸೋನಿಕ್ ಕ್ಷಿಪಣಿಗಳಲ್ಲದೆ, ಸಬ್‌ಮೆರೀನ್ ವಿರೋಧಿ ಅಂಡರ್ ವಾಟರ್ ಕ್ಷಿಪಣಿಗಳನ್ನೂ ಅಳವಡಿಸಲಾಗಿವೆ.

ಡಿಜಿಟಲ್ ಅರೆಸ್ಟ್ ಸೈಬರ್ ವಂಚನೆಗೆ ಕೇಂದ್ರ ಬ್ರೇಕ್

ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ 'ಡಿಜಿಟಲ್ ಅರೆಸ್ಟ್' ಸೈಬರ್ ವಂಚನೆಗೆ ತಡೆ ಹಾಕಲು ಕೇಂದ್ರ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದು, ವಂಚನೆಗೆ ಬಳಸಲಾಗುತ್ತಿರುವ ಡಿವೈಸ್ ಐಡಿಗಳನ್ನು ಬ್ಲಾಕ್ ಮಾಡಲು ವಾಟ್ಸ್‌ಆ್ಯಪ್ ಗೆ ಸರ್ಕಾರ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ಕ್ರಮವು ಗೃಹ ಸಚಿವಾಲಯದ ಸೈಬರ್ ವಿಭಾಗವಾದ ವರದಿ ನಂತರ ಕೈಗೊಳ್ಳಲಾಗಿದೆ. ವರದಿಯಲ್ಲಿ ಡಿಜಿಟಲ್ ಅರೆಸ್ಟ್ ಮಾದರಿಯ ವಂಚನೆ ಪ್ರಕರಣಗಳು ವೇಗವಾಗಿ ಹೆಚ್ಚುತ್ತಿರುವುದಾಗಿ ಎಚ್ಚರಿಸಲಾಗಿದೆ.

ವಂಚಕರು ಹೊಸ ಖಾತೆಗಳನ್ನು ನಿರಂತರವಾಗಿ ಸೃಷ್ಟಿಸಿ ತಮ್ಮ ಚಟುವಟಿಕೆ ಮುಂದುವರಿಸುತ್ತಿರುವ ಹಿನ್ನೆಲೆಯಲ್ಲಿ, ಕೇವಲ ಖಾತೆ ಮಟ್ಟದಲ್ಲಲ್ಲದೆ ಡಿವೈಸ್ ಮಟ್ಟದಲ್ಲೇ ನಿರ್ಬಂಧ ಹೇರಲು ಸರ್ಕಾರ ಚಿಂತನೆ ನಡೆಸಿದೆ. ಜೊತೆಗೆ ವಾಟ್ಸ್‌ಆ್ಯಪ್ ಸೇರಿದಂತೆ ಇತರ ಪ್ಲಾಟ್‌ಫಾರ್ಮ್‌ಗಳಲ್ಲಿ ಹೊಸ ಸುರಕ್ಷತಾ ವೈಶಿಷ್ಟ್ಯಗಳನ್ನು ಪರಿಚಯಿಸುವ ಸಾಧ್ಯತೆಯನ್ನೂ ಪರಿಶೀಲಿಸಲಾಗುತ್ತಿದೆ.

ಇನ್ನೊಂದೆಡೆ, 2021ರ ಐಟಿ ನಿಯಮಗಳಲ್ಲಿ ಅಳಿಸಲಾದ ಖಾತೆಗಳ ಮಾಹಿತಿಯನ್ನು ಕನಿಷ್ಠ 180 ದಿನಗಳವರೆಗೆ ಸಂಗ್ರಹಿಸುವ ಅಗತ್ಯವಿದೆ ಎಂದು ಅಧಿಕಾರಿಗಳು ಒತ್ತಾಯಿಸಿದ್ದಾರೆ. ಇದರಿಂದ ತನಿಖಾ ಸಂಸ್ಥೆಗಳು ಅಗತ್ಯ ಮಾಹಿತಿಯನ್ನು ಸುಲಭವಾಗಿ ಪಡೆಯಲು ನೆರವಾಗುತ್ತದೆ ಎಂಬುದು ಅವರ ಅಭಿಪ್ರಾಯ.

ಅದೇ ವೇಳೆ, ದುಷ್ಪ್ರಯೋಜನೆಗೆ ಬಳಸಲಾಗುತ್ತಿರುವ ನಕಲಿ ಎಪಿಕೆ ಫೈಲ್‌ಗಳು ಮತ್ತು ಅಪ್ಲಿಕೇಶನ್‌ಗಳನ್ನು ಗುರುತಿಸಿ ಬ್ಲಾಕ್ ಮಾಡುವ ದೊಡ್ಡ ಮಟ್ಟದ ಯೋಜನೆಯನ್ನೂ ಸರ್ಕಾರ ರೂಪಿಸುತ್ತಿದೆ.

ರತ್ನಮ್ಮ ಹಿತ್ತಲಿನ ಕೊಳವೆ ಬಾವಿಯಲ್ಲಿ ಅನಿಲ!

ತಿರುವನಂತಪುರಂ: ಹಾರ್ಮುಜ್ ಜಲಸಂಧಿ ಮುಚ್ಚಿರುವ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ಇಂಧನ ಮತ್ತು ಅಡುಗೆ ಅನಿಲ ಪೂರೈಕೆ ವ್ಯತ್ಯಯ ಉಂಟಾಗಿದ್ದು, ಎಲ್‌ಪಿಜಿ ಬೆಲೆ ಏರಿಕೆ ಆತಂಕ ಹೆಚ್ಚಿಸಿದೆ. ಆದರೆ ಕೇರಳದ ರತ್ನಮ್ಮ ಅವರ ಕುಟುಂಬಕ್ಕೆ ಇದ್ಯಾವುದರ ಚಿಂತೆಯಿಲ್ಲ.

ಆಲಪ್ಪುಳದ ಆರಾಟ್ಟುವಳಿ ಗ್ರಾಮದ ರತ್ನಮ್ಮ ಅವರು ಕಳೆದ ಒಂದು ದಶಕದಿಂದಲೂ ಒಂದು ವಿಶಿಷ್ಟ ಹಾಗೂ ಸಂಪೂರ್ಣ ಸ್ಥಳೀಯ ತೈಲ ಮೂಲವನ್ನು ಬಳಸುತ್ತಿದ್ದಾರೆ. ಅವರ ಮನೆ ಹಿಂಭಾಗದ ಕೊಳವೆಬಾವಿಯಿಂದ ಹೊರಹೊಮ್ಮುವ ನೈಸರ್ಗಿಕ ಅನಿಲವನ್ನು ಬಳಸುತ್ತಿದ್ದಾರೆ. ವಾರ್ಷಿಕ 10,000 ರೂ. ಉಳಿತಾಯ ಮಾಡುತ್ತಿದ್ದಾರೆ.

2011ರಲ್ಲಿ ಶುದ್ಧ ಕುಡಿಯುವ ನೀರಿನ ಮೂಲದ ಹುಡುಕಾಟದಲ್ಲಿ ರತ್ನಮ್ಮ ಕುಟುಂಬ ಕೊಳವೆಬಾವಿಯನ್ನು ತೋಡಿಸಿತ್ತು. 75 ಅಡಿ ಆಳದವರೆಗೆ ತೋಡಿದರೂ ಕೇವಲ ಕೆಸರಿನ ನೀರು ಮಾತ್ರ ಸಿಕ್ಕಿತ್ತು. ವೆಚ್ಚ ಹೆಚ್ಚಾದ ಕಾರಣ ಅವರು ಆ ಪ್ರಯತ್ನವನ್ನು ಕೈಬಿಟ್ಟಿದ್ದರು. ಆದರೆ, ನಂತರ ಅಚ್ಚರಿಯ ಘಟನೆ ಸಂಭವಿಸಿದೆ. ಪ್ಲಂಬರ್ ಕೊಳವೆಬಾವಿಯನ್ನು ಮುಚ್ಚಲು ಪ್ರಯತ್ನಿಸಿದ್ದಾಗ, ಹತ್ತಿರದಲ್ಲಿದ್ದ ಒಬ್ಬ ವ್ಯಕ್ತಿ ಬೆಂಕಿಕಡ್ಡಿ ಹಚ್ಚಿದಾಗ ಕೊಳವೆಬಾವಿಯ ಬಾಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದೆ. ಮೊದಲಿಗೆ ಆತಂಕ ಉಂಟಾದರೂ, ಅಲ್ಲಿ ಬೆಂಕಿ ಸುಲಭವಾಗಿ ಹೊತ್ತಿ ಉರಿಯುವ ಅನಿಲವಿದೆ ಎಂದು ಕುಟುಂಬಕ್ಕೆ ತಿಳಿಯಿತು. ಪ್ಲಂಬರ್ ಸಹಾಯದಿಂದ ಕೊಳವೆಬಾವಿಯಿಂದ ಅಡುಗೆಮನೆಯ ಒಲೆಗೆ ಪೈಪ್ ಜೋಡಿಸಿದ್ದರು. ಬ್ಲ್ಯಾಕ್ ಕಾಫಿ ಮಾಡುವುದರ ಮೂಲಕ ಅಡುಗೆ ಆರಂಭಿಸಿದ್ದರು.

ಸರ್ಕಾರಿ ಸುಪರ್ದಿಗೆ ಅಲ್ ಫಲಾ ವಿವಿ

ಹೊಸದಿಲ್ಲಿ: ದಿಲ್ಲಿ ಕೆಂಪು ಕೋಟೆ ಉಗ್ರ ದಾಳಿ ವೇಳೆ ಭಯೋತ್ಪಾದಕರಿಗೆ ದಾಳಿ ನಡೆಸಲು ಸಹಾಯ ಮಾಡಿದ ಹಲವು ವೈಟ್ ಕಾಲರ್ ಟೆರರ್ ಮಾಡ್ಯೂಲ್‌ನ ಅಕ್ರಮ ಬಯಲಿಗೆ ಬಂದ ಬೆನ್ನಲ್ಲೇ ಇದೀಗ ಹರ್ಯಾಣ ಸರ್ಕಾರವು ಫರಿದಾಬಾದ್‌ನಲ್ಲಿರುವ ಅಲ್–ಫಲಾ ವಿಶ್ವವಿದ್ಯಾನಿಲಯವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ವಿಶ್ವವಿದ್ಯಾನಿಲಯದ ಕಾರ್ಯನಿರ್ವಹಣೆಯಲ್ಲಿ ಅಕ್ರಮಗಳನ್ನು ಗುರುತಿಸಿದ ತನಿಖೆ ಬಳಿಕ ಹಿರಿಯ ಐಎಎಸ್ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಿದೆ. ಹಿರಿಯ ಐಎಎಸ್ ಅಧಿಕಾರಿ ಅಮಿತ್ ಅಗರವಾಲ್ ಅವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದ್ದು, ಅವರು ವಿಶ್ವವಿದ್ಯಾಲಯದ ಹಣಕಾಸು ಮತ್ತು ಆಡಳಿತಾತ್ಮಕ ವ್ಯವಹಾರಗಳ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ. ಜನವರಿಯಲ್ಲಿ, ಇಡಿ ವಿವಿಗೆ ಸೇರಿದ ಸುಮಾರು 140 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿತ್ತು.

ಅಮೆರಿಕ ಧಾರ್ಮಿಕ ಸ್ವಾತಂತ್ರ್ಯ ವರದಿ ವಿರುದ್ಧ ತೀವ್ರ ಆಕ್ರೋಶ | 275 ನಿವೃತ್ತ ನ್ಯಾಯಾಧೀಶರು, ಅಧಿಕಾರಿಗಳ ಜಂಟಿ ಹೇಳಿಕೆ

ಆರ್‌ಎಸ್‌ಎಸ್ ನಿಷೇಧ ಶಿಫಾರಸು ಪೂರ್ವಾಗ್ರಹ ಪೀಡಿತ

ಹೊಸದಿಲ್ಲಿ: ಅಮೆರಿಕದ ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್‌ಸಿಐಆರ್‌ಎಫ್) ಇತ್ತೀಚೆಗೆ ಹೊರಡಿಸಿದ ವರದಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್) ನಿಷೇಧಕ್ಕೆ ಶಿಫಾರಸು ಮಾಡಿರುವ ಕ್ರಮಕ್ಕೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. 25 ನಿವೃತ್ತ ನ್ಯಾಯಮೂರ್ತಿಗಳು, 119 ನಿವೃತ್ತ ಆಡಳಿತಾಧಿಕಾರಿಗಳು ಹಾಗೂ 131 ನಿವೃತ್ತ ಸೈನಿಕ ಅಧಿಕಾರಿಗಳು ಸೇರಿ ಒಟ್ಟು 275 ಗಣ್ಯರು ಈ ವರದಿಯನ್ನು ಖಂಡಿಸಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಈ ವರದಿಯನ್ನು ಅವರು 'ಅತ್ಯಂತ ಪೂರ್ವಾಗ್ರಹಪೂರಿತ ಹಾಗೂ ಬೌದ್ಧಿಕ ದಿವಾಳಿತನದ ಪ್ರತಿಬಿಂಬ' ಎಂದು ವರ್ಣಿಸಿದ್ದಾರೆ. ಆರ್‌ಎಸ್‌ಎಸ್‌ಗೆ ಸಂಬಂಧಿಸಿದ ಭಾರತೀಯರ ಆಸ್ತಿ ಸ್ಥಗಿತಗೊಳಿಸುವುದು, ಸಂಚಾರಕ್ಕೆ ನಿರ್ಬಂಧ ಹೇರುವುದು ಹಾಗೂ ಸಂಘದೊಂದಿಗೆ ಸಂಬಂಧ ಹೊಂದಿದವರ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಯುಎಸ್‌ಸಿಐಆರ್‌ಎಫ್ ಶಿಫಾರಸುಗಳು ದುರುದ್ದೇಶಪೂರಿತವಾಗಿವೆ ಎಂದು ಹೇಳಿದ್ದಾರೆ.

ಜಂಟಿ ಹೇಳಿಕೆಯಲ್ಲಿ, ಯುಎಸ್‌ಸಿಐಆರ್‌ಎಫ್ ವರದಿಗೆ ಕೊಡುಗೆ ನೀಡಿದವರ ಹಿನ್ನೆಲೆಯ ಬಗ್ಗೆ ಅಮೆರಿಕ ಸರ್ಕಾರ ಕಟ್ಟುನಿಟ್ಟಿನ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ. ಅಮೆರಿಕದ ತೆರಿಗೆದಾರರ ಹಣದಿಂದ ನಡೆಯುವ ಸಂಸ್ಥೆಯೊಂದು, ಭಾರತ ವಿರೋಧಿ ಗುಪ್ತ ಅಜೆಂಡಾ ಹೊಂದಿದ ಹಿತಾಸಕ್ತಿಪರ ಗುಂಪುಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಆತಂಕಕಾರಿಯಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಹೇಳಿಕೆಯಲ್ಲಿ ಯುಎಸ್‌ಸಿಐಆರ್‌ಎಫ್ ಮೇಲೆ ಮತ್ತೊಂದು ಗಂಭೀರ ಆರೋಪವೂ ಮಾಡಲಾಗಿದೆ. ಭಾರತೀಯ ರಾಜ್ಯ ಸಂಸ್ಥೆಗಳು ಹಾಗೂ ಆರ್‌ಎಸ್‌ಎಸ್‌ನಂತಹ ಸಾಂಸ್ಕೃತಿಕ–ಸಾಮಾಜಿಕ ಸಂಘಟನೆಗಳನ್ನು ಸಮಗ್ರ ಸಂದರ್ಭವಿಲ್ಲದೆ ನಿರಂತರವಾಗಿ ಋಣಾತ್ಮಕ ಬೆಳಕಿನಲ್ಲಿ ಚಿತ್ರಿಸುವ ಪ್ರವೃತ್ತಿ ಈ ಸಂಸ್ಥೆಯಲ್ಲಿ ಕಾಣಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಿಮರ್ಶೆ ಅಗತ್ಯವಿದ್ದರೆ ಅದು ದೃಢವಾದ ಸಾಕ್ಷ್ಯಾಧಾರಗಳ ಮೇಲೆ ನಿಲ್ಲಬೇಕೇ ಹೊರತು ಸಾಮಾನ್ಯೀಕರಣಗಳ ಮೇಲೆ ಅಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತವು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ದೀರ್ಘಕಾಲದ ನ್ಯಾಯಾಂಗ ವ್ಯವಸ್ಥೆ, ಚುರುಕು ಪ್ರಜಾತಾಂತ್ರಿಕ ಸಂಸ್ಥೆಗಳು ಹಾಗೂ ಸಂಸತ್ತಿನ ಮೇಲ್ವಿಚಾರಣೆ ಇರುವ ಹಿನ್ನೆಲೆಯಲ್ಲಿ ಧಾರ್ಮಿಕ ಹಕ್ಕುಗಳ ಉಲ್ಲಂಘನೆಗಳು ನಿರ್ಲಕ್ಷ್ಯಕ್ಕೆ ಒಳಗಾಗುವ ಅವಕಾಶ ಅತೀ ಕಡಿಮೆ ಎಂದು ಗಣ್ಯರು ಹೇಳಿದ್ದಾರೆ. ಈ ಜಂಟಿ ಹೇಳಿಕೆಗೆ ಸಹಿ ಹಾಕಿದವರಲ್ಲಿ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಮೂರ್ತಿಗಳಾದ ಆದರ್ಶ್ ಕುಮಾರ್ ಗೋಯಲ್ ಮತ್ತು ಹೇಮಂತ್ ಗುಪ್ತಾ, ಮಾಜಿ ಮುಖ್ಯ ಚುನಾವಣಾ ಆಯುಕ್ತರಾದ ಒ.ಪಿ. ರಾವತ್ ಹಾಗೂ ಸುನೀಲ್ ಅರೋರಾ, ಮಾಜಿ ವಿದೇಶ ಕಾರ್ಯದರ್ಶಿ ಕನ್ವಲ್ ಸಿಬಲ್, ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ ಸೇರಿದಂತೆ ಹಲವಾರು ನಿವೃತ್ತ ಐಎಎಸ್, ಐಪಿಎಸ್ ಹಾಗೂ ಸಶಸ್ತ್ರ ಪಡೆ ಅಧಿಕಾರಿಗಳು ಸೇರಿದ್ದಾರೆ.

ಪ್ರಮುಖಾಂಶಗಳು

- 275 ಗಣ್ಯರ ಜಂಟಿ ಹೇಳಿಕೆ, ಯುಎಸ್‌ಸಿಐಆರ್‌ಎಫ್ ವರದಿಗೆ ತೀವ್ರ ವಿರೋಧ
- 25 ನಿವೃತ್ತ ನ್ಯಾಯಾಧೀಶರು, 119 ನಿವೃತ್ತ ಆಡಳಿತಾಧಿಕಾರಿಗಳು, 131 ನಿವೃತ್ತ ಸೈನಿಕ ಅಧಿಕಾರಿಗಳು
- ಆರ್‌ಎಸ್‌ಎಸ್ ನಿಷೇಧ ಶಿಫಾರಸು 'ದುರುದ್ದೇಶಪೂರಿತ' ಎಂದು ಟೀಕೆ
- ವರದಿ ರಚನೆಗೆ ಕಾರಣಕರ್ತರಾದವರ ಹಿನ್ನೆಲೆ ಪರಿಶೀಲನೆಗೆ ಅಮೆರಿಕ ಸರ್ಕಾರಕ್ಕೆ ಆಗ್ರಹ
- ಭಾರತದ ಪ್ರಜಾಪ್ರಭುತ್ವ ಹಾಗೂ ನ್ಯಾಯಾಂಗ ವ್ಯವಸ್ಥೆಯನ್ನು ಉಲ್ಲೇಖಿಸಿ ವರದಿಯ ವಿಶ್ವಾಸಾರ್ಹತೆಯನ್ನೇ ಪ್ರಶ್ನೆ

ಸಹಿ ಹಾಕಿದ ಪ್ರಮುಖರು

- ನ್ಯಾ.ಆದರ್ಶ್ ಕುಮಾರ್ ಗೋಯಲ್
- ನ್ಯಾ.ಹೇಮಂತ್ ಗುಪ್ತಾ
- ಮಾಜಿ ಮುಖ್ಯ ಚುನಾವಣಾ ಆಯುಕ್ತರು ಒ.ಪಿ. ರಾವತ್, ಸುನೀಲ್ ಅರೋರಾ
- ಮಾಜಿ ವಿದೇಶಾಂಗ ಕಾರ್ಯದರ್ಶಿ ಕನ್ವಲ್ ಸಿಬಲ್
- ಮಾಜಿ ಎನ್‌ಐಎ ನಿರ್ದೇಶಕ ಯೋಗೇಶ್ ಚಂದರ್ ಮೋದಿ

ಯುಎಸ್‌ಸಿಐಆರ್‌ಎಫ್‌ನ ಉಪಾಧ್ಯಕ್ಷನ ಮೂಲ ಪಾಕ್

ಅಮೆರಿಕದ ಈ ಧಾರ್ಮಿಕ ಸ್ವಾತಂತ್ರ್ಯಗಳ ಸಂಸ್ಥೆಗೂ ಪಾಕಿಸ್ತಾನಕ್ಕೂ ಅವಿನಾಭಾವ ನಂಟಿದೆ. ಹೀಗಾಗಿಯೇ ಈ ಸಂಸ್ಥೆ ರಾ ಮತ್ತು ಆರ್‌ಎಸ್‌ಎಸ್ ಅನ್ನು ಗುರಿಯಾಗಿಸಿಕೊಂಡಿದೆ ಎಂಬ ಆರೋಪಗಳೂ ಇವೆ. ಅಂದರೆ, ಈ ಸಂಸ್ಥೆಯ ಉಪಾಧ್ಯಕ್ಷನ ಹೆಸರು ಡಾ.ಆಸೀಫ್ ಮಹಮ್ಮದ್. ಈತ ಪಾಕಿಸ್ತಾನದ ಮೂಲದವನಾಗಿದ್ದು, 1990ರಲ್ಲಿ ಅಮೆರಿಕಕ್ಕೆ ತೆರಳಿದ್ದ. ಈಗ ಈ ಸಂಸ್ಥೆಯ ಉಪಾಧ್ಯಕ್ಷನಾಗಿದ್ದು, ಇಂಥದ್ದೊಂದು ವರದಿ ನೀಡಲು ಕಾರಣವಾಗಿದ್ದಾನೆ ಎಂಬ ಮಾತುಗಳಿವೆ.

ಪಾಕ್‌ನ ಹಿಂದುಗಳು ಎಲ್ಲಿ?

ಭಾರತದ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಮಾತನಾಡುವವರು, ಪಾಕ್‌ನಲ್ಲಿನ ಹಿಂದುಗಳು ಎಲ್ಲಿ ಹೋದರು ಎಂಬ ಪ್ರಶ್ನೆಯನ್ನೂ ನಿವೃತ್ತ ನ್ಯಾಯಮೂರ್ತಿಗಳು, ಅಧಿಕಾರಿಗಳು ಪ್ರಶ್ನೆ ಮಾಡಿದ್ದಾರೆ. ಸ್ವಾತಂತ್ರ್ಯ ಬಂದಾಗ ಅವಿಭಜಿತ ಪಾಕಿಸ್ತಾನದಲ್ಲಿ ಶೇ.20–22ರಷ್ಟು ಹಿಂದೂಗಳಿದ್ದರು. ಈಗ ಪಾಕ್‌ನಲ್ಲಿ ಶೇ.1.5ರಿಂದ ಶೇ.2ರಷ್ಟಿದ್ದರೆ, ಬಾಂಗ್ಲಾದಲ್ಲಿ ಶೇ.7ರಿಂದ 8ರಷ್ಟಿದ್ದಾರೆ. ಉಳಿದವರು ಎಲ್ಲಿ ಹೋದರು ಎಂದೂ ಪ್ರಶ್ನೆ ಮಾಡಿದ್ದಾರೆ.

ಕಿರುಸುದ್ದಿ

ಎಲ್ಲರಿಗೂ ಟಿಕೆಟ್ ಕೇಳುವ ಹಕ್ಕಿದೆ: ಎಂ.ಬಿ.ಪಾಟೀಲ



ವಿಜಯಪುರ: ಉಪ ಚುನಾವಣೆಯಲ್ಲಿ ಪ್ರತಿ ಧರ್ಮ, ಪ್ರತಿ ಜಾತಿಯರಿಗೂ ಟಿಕೆಟ್ ಕೇಳುವ ಹಕ್ಕಿದೆ. ಆದರೆ ಅಂತಿಮವಾಗಿ ಪಕ್ಷ, ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು. ನಗರದಲ್ಲಿ ಉಪ ಚುನಾವಣೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಬಗ್ಗೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ಉಪ ಚುನಾವಣೆ ಟಿಕೆಟ್ ವಿಚಾರದಲ್ಲಿ ಪಕ್ಷದ ಹೈಕಮಾಂಡ್, ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರು ಅವರು ನಿರ್ಣಯ ಮಾಡುತ್ತಾರೆ. ಯಾರನ್ನು ಅವರು ನಿರ್ಧಾರ ಮಾಡಿ ಅಭ್ಯರ್ಥಿ ಮಾಡುತ್ತಾರೆ ಎಲ್ಲರೂ ಅವರನ್ನು ಬೆಂಬಲಿಸುತ್ತಾರೆ. ಎರಡೂ ಕಡೆಗಳಲ್ಲಿ ನಮ್ಮ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲ್ಲುತ್ತಾರೆ ಎಂದರು.

ಶ್ರೀ ಜಗಜ್ಯೋತಿ ಬಸವೇಶ್ವರ ಬಸ್ ನಿಲ್ದಾಣ ನಾಮಕರಣಕ್ಕೆ ಆಗ್ರಹ



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣಕ್ಕೆ ಶ್ರೀ ಜಗಜ್ಯೋತಿ ಬಸವೇಶ್ವರ ಬಸ್ ನಿಲ್ದಾಣ ಎಂದು ಹೆಸರು ನಾಮಕರಣ ಮಾಡಬೇಕು ಎಂದು ಅಂಬಣ್ಣವರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಸದಸ್ಯರು ಶಾಸಕ ಅರವಿಂದ ಬೆಲ್ಲದ ಅವರಿಗೆ ಮನವಿ ಸಲ್ಲಿಸಿದರು. ಈ ವಿಳೆ ಬಡಾವಣೆಯ ಸಂಘದ ವತಿಯಿಂದ ಶಾಸಕರಿಗೆ ಸನ್ಮಾನಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಎಲ್.ಸಿ.ಹೊಸಮನಿ, ಸಂಘದ ಪದಾಧಿಕಾರಿಗಳಾದ ಮಹೇಶ ಕುರಹಟ್ಟಿ ,ಎಂ.ಐ. ಕುರುವಿನಶೆಟ್ಟಿ, ಬಸವರಾಜ ಹಿರೇಹೊಳಿ, ಬಸವರಾಜ ನಾಲವಾಡ, ವಿನಾಯಕ ಶಿರಗುಪ್ಪಿ, ಮಂಜುನಾಥ ಮಂಟೂರ, ಅನಿಲ ರೂಗಿ ಉಪಸ್ಥಿತರಿದ್ದರು.

ಬೈಪಾಸ್ ಅಗಲೀಕರಣ ಕಾಮಗಾರಿ ತಾತ್ಕಾಲಿಕ ಬಂದ್



ಧಾರವಾಡ: ನಗರದ ನರೇಂದ್ರ ಕ್ರಾಸ್‌ನಿಂದ ಹುಬ್ಬಳ್ಳಿ ಗಬ್ಬೂರವರೆಗೆ ನಡೆಯುವ ಬೈಪಾಸ್ ರಸ್ತೆ ಅಗಲೀಕರಣ ಕಾಮಗಾರಿ ಪೈಕಿ ಕೆಲಗೇರಿಯ ಕೆಂಪಗೇರಿ ನಾಲಾ ಕಾಮಗಾರಿ ಅವೈಜ್ಞಾನಿಕವಾಗಿದೆ ಎಂದು ಗ್ರಾಮಸ್ಥರು, ಲೇಔಟ್ ಪ್ರಮುಖರು ಪ್ರತಿಭಟಿಸಿದ ಹಿನ್ನೆಲೆ ಕಾಮಗಾರಿ ತಾತ್ಕಾಲಿಕವಾಗಿ ಬಂದ್ ಮಾಡಿದರು. ಅನಾದಿ ಕಾಲದಿಂದಲೂ ಮೇಲಿನ ಪ್ರದೇಶದಿಂದ ನೈಸರ್ಗಿಕವಾಗಿ ನೀರು ಹರಿದು ಕೆಂಪಗೇರಿಗೆ ಸೇರುತ್ತಿತ್ತು. ಹೆಚ್ಚುವರಿ ನೀರು ಈಗ ಬೈಪಾಸ್ ರಸ್ತೆಗೆ ನಿರ್ಮಿಸಿರುವ ಕೆಳಸೇತುವೆ ಮೂಲಕ ಹರಿದು ಮುಂದಿನ ಪ್ರದೇಶಕ್ಕೆ ಹೋಗುತ್ತಿತ್ತು. ಆದರೆ ಈಗ 38 ಗುಂಟೆ ಜಾಗದಲ್ಲಿದ್ದ ಕೆಂಪಗೇರಿ ಬಹುತೇಕ ಬೈಪಾಸ್ ರಸ್ತೆಯೇ ನುಂಗಿದ್ದು, ಕೇವಲ ಎಂಟು ಗುಂಟೆ ಮಾತ್ರ ಉಳಿದಿದೆ. ಈ ಕೆರೆಗೆ ಹರಿದು ಬರುವ ನೀರನ್ನು ರಸ್ತೆಯ ಕೆಳಗಡೆಯಿಂದ ನಾಲಾ ಮಾಡುವ ಮೂಲಕ ಜನವಸತಿ ಪ್ರದೇಶಕ್ಕೆ ಹರಿದು ಬಿಡಲಾಗುತ್ತಿದೆ. ಒಂದು ವೇಳೆ ಈ ನಾಲಾ ಮೂಲಕ ಕೆರೆ ನೀರು ಹಾಗೂ ಮೇಲಿನ ಪ್ರದೇಶದ ನೀರು ಬಂದರೆ, ಕೆಳಗಿನ ಜನವಸತಿ ಪ್ರದೇಶಗಳಾದ ಸಿದ್ಧಗಂಗಾ ಲೇಔಟ್, ನೀಲ್ ಲೇಔಟ್, ವ್ಯಾಸವಿಹಾರ ಬಡಾವಣೆ, ಮಾಣಿಕ ಲೇಔಟ್, ಮೇಸ್ತ್ರಿ ಲೇಔಟ್‌ಗಳು, ಇಟ್ಟಿಗೆ ಬಟ್ಟಿಗಳು, ಹೊಲಗಳೂ ಸಹ ಇವೆ. ಈಗ ಈ ನಾಲಾ ನಿರ್ಮಿಸಿದರೆ ಮಳೆಗಾಲದಲ್ಲಿ ರಭಸವಾಗಿ ನೀರು ಬಂದರೆ ಕೆಳಗಿನ ಜನವಸತಿ ಪ್ರದೇಶಗಳ ಮನೆಗಳಿಗೆ ನೀರು ನುಗ್ಗಲಿದೆ. ಈಗಾಗಲೇ ಕಳೆದ ವರ್ಷ ಇಲ್ಲಿಂದ ಹೋದ ನೀರು ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿತ್ತು. ಕೆಲಗೇರಿಯ ಕೆಂಪಗೇರಿಯ ಚೈನೇಜ್ 430 ನಾಲಾ ಕಾಮಗಾರಿಯನ್ನು ಕೂಡಲೇ ಬಂದ್ ಮಾಡಬೇಕೆಂದು ಪ್ರತಿಭಟನೆ ಮಾಡಿದ್ದರ ಫಲವಾಗಿ ಸದ್ಯಕ್ಕೆ ನಾಲಾ ಕಾಮಗಾರಿ ಬಂದ್ ಮಾಡಿದ್ದಾರೆ. ಈ ಕುರಿತಾಗಿ ನಾವು ನ್ಯಾಯಾಲಯಕ್ಕೂ ಹೋಗಿದ್ದೇವೆ ಎಂದು ಸ್ಥಳೀಯರಾದ ವಿಜಯಕುಮಾರ ಹೆಸರೂರು ಹೇಳಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರಾದ ನಾಗೇಶ ತಲವಾಯಿ, ಗಣೇಶ ಕದಂ, ಗಂಗಯ್ಯ ಗುಡ್ಡದಮಠ, ರವೀಂದ್ರ ಕಟೋಡಿ ಇದ್ದರು.

ತುಂಗಭದ್ರಾ ಜಲಾಶಯಕ್ಕೆ ಸಣ್ಣ ನೀರಾವರಿ ಸಚಿವ ಭೋಸರಾಜು ಭೇಟಿ

ಮೇ ಅಂತ್ಯದೊಳಗೆ ಗೇಟ್ ಅಳವಡಿಕೆ ಪೂರ್ಣ

ಕೊಪ್ಪಳ: ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯವನ್ನು ಮೇ ಅಂತ್ಯದೊಳಗೆ ಪೂರ್ಣಗೊಳಿಸಿ, ರೈತರಿಗೆ ಅನುಕೂಲ ಮಾಡಿಕೊಡಲಾಗುವುದು ಎಂದು ಸಣ್ಣ ನೀರಾವರಿ ಎನ್.ಎಸ್.ಭೋಸರಾಜು ಹೇಳಿದರು.

ಶುಕ್ರವಾರ ಕೊಪ್ಪಳ ಜಿಲ್ಲೆಯ ಮುನಿರಾಬಾದ್ ತುಂಗಭದ್ರಾ ಜಲಾಶಯದ ಅಣೆಕಟ್ಟಿನ ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿಯ ಪರಿವೀಕ್ಷಣೆ ಮಾಡಿ, ಮಾಧ್ಯಮದವರೊಂದಿಗೆ ಮಾಹಿತಿ ನೀಡಿದರು.

ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಮಾರ್ಚ್ ಅಂತ್ಯದ ವೇಳೆಗೆ ಒಟ್ಟು 23 ಗೇಟ್‌ಗಳ ಕೆಲಸ ಮುಗಿಯುವ ನಿರೀಕ್ಷೆಯಿದೆ. ಎಕ್ಸ್‌ಪರ್ಟ್ ಟೀಮ್ ಮತ್ತು ಚೀಫ್ ಎಂಜಿನಿಯರ್‌ಗಳ ಪ್ರಕಾರ, ಗೇಟ್ ಬದಲಾವಣೆಯ ಸಮಯದಲ್ಲಿ ಹಳೆಯ ಅಣೆಕಟ್ಟಿನ ರಚನೆಗೆ ಯಾವುದೇ ತೊಂದರೆಯಾಗಿಲ್ಲ. ಏಪ್ರಿಲ್ ತಿಂಗಳಿನಲ್ಲಿ ಉಳಿದ 10 ಗೇಟ್‌ಗಳನ್ನು ಅಳವಡಿಸಿ, ಮೇ ಅಂತ್ಯದೊಳಗೆ ಎಲ್ಲಾ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪೂರ್ಣಗೊಳ್ಳುವ ಭರವಸೆ ಇದೆ. ಕಾಮಗಾರಿಯು ನಿರೀಕ್ಷಿತ ಸಮಯಕ್ಕಿಂತ ವೇಗವಾಗಿ ಸಾಗುತ್ತಿದ್ದು, ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣ ಸಿದ್ಧವಾಗಲಿದೆ ಎಂಬ ವಿಶ್ವಾಸವಿದೆ ಎಂದರು.



ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನ ಸಮಸ್ಯೆಗೆ ಪರಿಹಾರವಾಗಿ 'ನವಲಿ' ಯೋಜನೆಯ ಪ್ರಸ್ತಾವನೆಯನ್ನು ಮಂಡಳಿ ಮತ್ತು ಸಂಬಂಧಿತ ರಾಜ್ಯ ಸರ್ಕಾರಗಳಿಗೆ ಕಳುಹಿಸಲಾಗಿದೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರಿಗೂ ಸಹ ಪತ್ರ ವ್ಯವಹಾರ ನಡೆಸಲಾಗಿದೆ. ಸಂಬಂದಪಟ್ಟ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆಯುತ್ತಿದೆ. ತೆಲಂಗಾಣ ಸರ್ಕಾರದೊಂದಿಗೂ ಸಮನ್ವಯ ಸಾಧಿಸಲು ಪ್ರಯತ್ನಿಸಲಾಗುತ್ತಿದ್ದು, ವಿವಿಧ ತಾಂತ್ರಿಕ ಕಾರಣಗಳಿಂದ ವಿಳಂಬವಾಗುತ್ತಿದೆ ಎಂದರು.

ಈ ತಾಂತ್ರಿಕ ಸಮಸ್ಯೆಗಳು ಬಗೆಹರಿದ ನಂತರ ಪೂರ್ಣ ಸಹಕಾರ ಸಿಗುವ ನಿರೀಕ್ಷೆಯಿದೆ. ಈ ಬಗ್ಗೆ ನಮ್ಮ ರಾಜ್ಯದ ವಿವಿಧ ಚುನಾಯಿತ ಪ್ರತಿನಿಧಿಗಳ ನಿಯೋಗವು ನವದೆಹಲಿಯಲ್ಲಿ ಜಲಶಕ್ತಿ ಸಚಿವಾಲಯದ ಅಧಿಕಾರಿಗಳು ಮತ್ತು ವಿವಿಧ ರಾಜ್ಯಗಳ ಸಂಸದರೊಂದಿಗೆ ಮಹತ್ವದ ಚರ್ಚೆ ನಡೆಸಲಾಗಿದೆ. ಕೇಂದ್ರ ಸಚಿವರು ಮತ್ತು ಅಧಿಕಾರಿಗಳು ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಚುನಾವಣಾ ನೀತಿ ಸಂಹಿತೆಯ ಪ್ರಕ್ರಿಯೆಗಳ ನಂತರ ಮತ್ತೊಂದು ಸುತ್ತಿನ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

> **ಈಗಾಗಲೇ ತುಂಗಭದ್ರಾ ಜಲಾಶಯದ 18 ನೂತನ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 5 ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಮಳೆಗಾಲದ ವೇಳೆಗೆ ಜಲಾಶಯವು ಸಂಪೂರ್ಣ ಸಿದ್ಧವಾಗಲಿದೆ.**
> ■ ಎನ್.ಎಸ್. ಭೋಸರಾಜು, ಸಣ್ಣ ನೀರಾವರಿ ಸಚಿವ

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಬಸವನಗೌಡ ತುರುವಿಹಾಳ, ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹೇಮಂತ್ ಕುಮಾರ್, ಟಿಬಿ ಬೋರ್ಡ್ ಹಾಗೂ ಕೆ.ಎನ್.ಎನ್.ಎಲ್. ಅಧಿಕಾರಿ ಮುಖ್ಯ ಇಂಜಿನಿಯರ್ ಶ್ರೀನಿವಾಸ ಮಲ್ಲಿಗಿವಾಡ, ಎಇಇ ಧರ್ಮರಾಜ್ ಹಾಗೂ ಜ್ಞಾನೇಶ್ವರ, ಸೆಕ್ಷನ್ ಅಧಿಕಾರಿಗಳಾದ ಜಿ.ಕಿರಣ, ಪಂಪಾಪತಿ ಡಿ.ಕೆ. ಮತ್ತು ಹುಲಿರಾಜ್ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಆಸಕ್ತಿ, ದೃಢ ನಿಶ್ಚಯ, ನಿರಂತರ ಅಭ್ಯಾಸ ಯಶಸ್ಸಿಗೆ ಕಾರಣ: ಎಸ್ಪಿ



ಗದಗ: ನಗರದ ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಆತ್ಮವಿಶ್ವಾಸ, ಸ್ಪರ್ಧಾತ್ಮಕ ಪರೀಕ್ಷಾ ಕೋಶದ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಕಾರ್ಯಾಗಾರ ಜರುಗಿತು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ ಮಾತನಾಡಿ, ಆಸಕ್ತಿ, ದೃಢವಾದ ನಿಶ್ಚಯ ಹಾಗೂ ನಿರಂತರ ಮತ್ತು ವ್ಯವಸ್ಥಿತ ಅಭ್ಯಾಸವೇ ಯಶಸ್ಸಿನ ಮುಖ್ಯ ಅಂಶಗಳಾಗಿವೆ. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳತ್ತ ಗಂಭೀರ ಮನೋಭಾವದಿಂದ ತಯಾರಾಗಬೇಕು ಹಾಗೂ ಸಮಯ ನಿರ್ವಹಣೆ ಮತ್ತು ಶಿಸ್ತನ್ನು ತಮ್ಮ ದೈನಂದಿನ ಅಭ್ಯಾಸದ ಭಾಗವನ್ನಾಗಿಸಿಕೊಳ್ಳಬೇಕು ಎಂದರು.

ಕೇವಲ ತರಗತಿ ಮಾರ್ಗದರ್ಶನಕ್ಕೆ ಮಾತ್ರ ಸೀಮಿತವಾಗದೆ, ಸ್ವ-ಅಧ್ಯಯನದ ಮೂಲಕ ವಿಷಯದ ಆಳವಾದ ಅರ್ಥೈಸುವಿಕೆ, ನಿರಂತರ ಪುನರಾವಲೋಕನ ಹಾಗೂ ಸರಿಯಾದ ಮಾರ್ಗದರ್ಶನದ ಸಂಯೋಜನೆ ಅತ್ಯಂತ ಅವಶ್ಯಕವಾಗಿದೆ. ಇದೇ ಯಶಸ್ಸಿನ ದಾರಿಯಾಗಿದೆ. ವಿದ್ಯಾರ್ಥಿಗಳು ಸ್ಪಷ್ಟ ಗುರಿ ನಿಗದಿ ಮಾಡಿಕೊಂಡು ಯೋಜಿತವಾಗಿ ಹಾಗೂ ನಿರಂತರ ಪರಿಶ್ರಮದಿಂದ ತಯಾರಾದರೆ ಯಾವುದೇ ಸಾಧನೆ ಅಸಾಧ್ಯವಲ್ಲ ಎಂದರು.

ವಿಶ್ವವಿದ್ಯಾಲಯದ ಕುಲಪತಿ (ಪ್ರಭಾರ) ಹಾಗೂ ಕುಲಸಚಿವ ಪ್ರೊ.ಡಾ.ಸುರೇಶ್ ನಾಡಗೌಡ್ರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಗಾರದಲ್ಲಿ ಭಾಗವಹಿಸಿದ ಸಂಪನ್ಮೂಲ ವ್ಯಕ್ತಿಗಳು, ಪೊಲೀಸ್, ಬ್ಯಾಂಕಿಂಗ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ವಿಧಾನ, ಅಧ್ಯಯನ ಯೋಜನೆ, ಪ್ರಶ್ನಾಪತ್ರಿಕೆಯ ಸ್ವರೂಪ ಹಾಗೂ ಸಮಯ ನಿರ್ವಹಣೆ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾರ್ಗದರ್ಶನ ನೀಡಿದರು. ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ವಿಶೇಷ ಅಧಿಕಾರಿ ಎಂ.ಬಿ.ಚೆನ್ನಪ್ಪಗೌಡ್ರ, ಆತ್ಮವಿಶ್ವಾಸ ಸ್ಪರ್ಧಾತ್ಮಕ ಪರೀಕ್ಷಾ ಕೋಶದ ಸಂಯೋಜಕ ಪ್ರವೀಣ್ ಅಂಕಲಕೋಟಿ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳು ಇದ್ದರು.

ಭರತನಾಟ್ಯ ಕಾರ್ಯಕ್ರಮ ಇಂದು



ಹುಬ್ಬಳ್ಳಿ: ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ವತಿಯಿಂದ ನೃತ್ಯ ಸಾಕ್ಷಾತ್ಕಾರ ಭರತನಾಟ್ಯ ಕಾರ್ಯಕ್ರಮವನ್ನು ಮಾ.22 ರಂದು ಸಂಜೆ 4ಕ್ಕೆ ಸವಾಯಿ ಗಂಧರ್ವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಲಾ ಕೇಂದ್ರದ ಅಧ್ಯಕ್ಷ ಪ್ರದೀಪ ಭಟ್ಟ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅತಿಥಿಗಳಾಗಿ ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ, ಬ್ರಿಗೇಡಿಯರ್ ಸುಧೀಂದ್ರ ಇಟ್ನಾಳ ಪಾಲ್ಗೊಳ್ಳಲಿದ್ದಾರೆ. ಹಿಮ್ಮೇಳದಲ್ಲಿ ಡಾ. ಸಹನಾ ಭಟ್ಟ, ಬಾಲಸುಬ್ರಹ್ಮಣ್ಯ ಶರ್ಮಾ, ಪಂಚಮ ಉಪಾಧ್ಯಾಯ, ಅರುಣಕುಮಾರ, ರಘುಸಿಂಹ ಭಾಗವಹಿಸಲಿದ್ದಾರೆ ಎಂದರು.

ಕಲಾ ಕೇಂದ್ರದ ನೃತ್ಯ ಗುರು ಡಾ. ಸಹನಾ ಭಟ್ಟ ಅವರ ಶಿಷ್ಯೆಯರಾದ ವಿದುಷಿ ಡಾ. ಶೃತಿ ಹೆಗಡೆ ಹಾಗೂ ವಿದುಷಿ ಪ್ರಿಯಾಂಕಾ ಪಾವಟೆ ಅವರು ಪುಷ್ಪಾಂಜಲಿ, ಗಣೇಶ ಸ್ತುತಿ, ದುರ್ಗಾ ಸ್ತುತಿ, ಅಷ್ಟಲಕ್ಷ್ಮೀ, ಸರಸ್ವತಿ ಸ್ತುತಿ, ದೇವರನಾಮ ಮತ್ತು ತಿಲ್ಲಾನಗಳನ್ನು ಪ್ರಸ್ತುತಪಡಿಸಲಿದ್ದಾರೆ. ಇದೇ ವೇಳೆ ನಾನು ರಚಿಸಿದ ಮೋಹಿನಿ ಭಸ್ಮಾಸುರ ಎಂಬ ವಿಶೇಷ ನೃತ್ಯ ರೂಪಕವನ್ನು ಕಲಾವಿದೆಯರು ಪ್ರದರ್ಶಿಸಲಿದ್ದಾರೆ ಎಂದರು. ಡಾ. ಶೃತಿ ಹೆಗಡೆ, ಪ್ರಿಯಾಂಕ ಪಾವಟೆ, ಈಶ್ವರ ಪಾವಟೆ ಇದ್ದರು.

ಸಂಭ್ರಮದಲ್ಲೂ ಸಂಸ್ಕಾರ ಕೊಡುವ ಹಬ್ಬವೇ ಯುಗಾದಿ : ಸು.ರಾಮಣ್ಣ

ಮಂಗಳೂರು: ನಮ್ಮ ದೇಶದ ಹಬ್ಬಗಳು ಮೋಜು ಮಸ್ತಿಗೆ ಆಚರಿಸುವಂತಹದ್ದಲ್ಲ, ಬದಲಿಗೆ ಸಂಭ್ರಮದಲ್ಲೂ ಸಂಸ್ಕಾರ ಕೊಡುವಂಥದ್ದು. ಶಾಲಿವಾಹನನ ಮೂಲಕ ದೇಶದ ಸ್ವಂತಿಕೆ, ಸಾಮರ್ಥ್ಯ, ಪೌರುಷವನ್ನು ಪುನಸ್ಥಾಪಿಸಿದ ಮಹತ್ತಿನ ಜೊತೆಗೆ ವಾತಾವರಣದಲ್ಲಿ ಹೊಸತನ, ಬದುಕಿನ ಕಷ್ಟ-ಸುಖಗಳನ್ನು ಸ್ವೀಕರಿಸುವ ಮನೋದಾರ್ಢ್ಯತೆಗಳನ್ನು ಸಂಕೇತಿಸುವ ಹಬ್ಬ ಯುಗಾದಿ ಎಂಬುದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕ ಸು.ರಾಮಣ್ಣ ಅವರು ಅಭಿಪ್ರಾಯಪಟ್ಟಿದ್ದಾರೆ.

ಅವರು ನಗರದ ಉರ್ವ ಮೈದಾನದಲ್ಲಿ ಜರಗಿದ ಯುಗಾದಿ ಉತ್ಸವದಲ್ಲಿ ಅವರು ಮಾತನಾಡಿದರು. ಭಾರತದ ಮೇಲಿನ ಪರಕೀಯ ಆಕ್ರಮಣವನ್ನು ಹಿಮ್ಮೆಟ್ಟಿಸಿದ ಹಿನ್ನೆಲೆಯಲ್ಲಿ ವಿಜಯದ ಆರಾಧನೆ ಮಾಡುವಂಥದ್ದು ನಮ್ಮ ದೇಶದ ಅಸ್ಮಿತೆಯಾಗಿದೆ. ಬದುಕಿನಲ್ಲಿ ಕಷ್ಟಗಳು ಬರುವುದು ಸಹಜ. ಆದರೆ, ಕಷ್ಟ ಕಳೆದು ಸುಖ ಬರುವುದು ಕೂಡ ಅಷ್ಟೇ ಸಹಜ. ಕಷ್ಟ ಬಂದಾಗ ಕುಗ್ಗದೆ , ಸುಖ ಬಂದಾಗ ಮೈಮರೆಯದೆ ಬೇವು-ಬೆಲ್ಲಗಳ ಮೂಲಕ ಸಮತೋಲನದ ಬದುಕು ನಮ್ಮದಾಗಬೇಕೆಂಬ ಸಂದೇಶವನ್ನು ಯುಗಾದಿ ನೀಡುತ್ತದೆ ಎಂದರು.



ಸಂಘಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಜನಿಸಿದ್ದು ಕೂಡ ಈ ದಿನದಂದೇ. ಶಾಲಿವಾಹನ ಮಾಡಿದಂತಹ ಕ್ರಾಂತಿಯನ್ನು ಕೇಶವ ಮುಂದುವರಿಸಿದ. ಹೇಗೆ ಬದುಕಬೇಕೆಂದು ಕಳಿಸದ ಹಿರಿಯರು ಅದನ್ನು ವಾರಸಿಕೆಯಾಗಿ ಬಿಟ್ಟು ಹೋದರು. ಅನೇಕ ಮಹಾನುಭಾವರು ಅದನ್ನು ಮುಂದುವರಿಸಿಕೊಂಡು ಬಂದಿದ್ದು, ಸಂಕ್ರಾಂತಿಯನ್ನು ಈಗ ಕಾಣುತ್ತಿದ್ದೇವೆ. ಡಾ.ಹೆಡಗೇವಾರ್ ಅವರದ್ದು ಸ್ವತ್ವದಿಂದ ಕ್ರಿಯಾಸಿದ್ಧಿ ಪ್ರಾಪ್ತಿ ಮಾಡಿಕೊಂಡಂತಹ ಮಹಾನ್ ವ್ಯಕ್ತಿತ್ವ. ದೇಶದಲ್ಲಿ ಹಿಂದುಗಳು ಸಂಘಟಿತರಾಗುವುದಿಲ್ಲವೋ ಅಲ್ಲಿಯವರೆಗೆ ದೇಶದಲ್ಲಿ ಸಾಮರಸ್ಯ ಪದಕ್ಕೆ ಅರ್ಥ ಬರುವುದಿಲ್ಲ. ಇದನ್ನು ಅರಿತೇ ಹೆಡಗೇವಾರ್ ಅವರು ಸಂಘ ಸ್ಥಾಪನೆ ಮಾಡಿದ್ದು. ಹಿಂದುಗಳಿಗೆ ನಾನು ಎಂಬುದರ ಬದಲಿಗೆ ನಾವು ಎಂಬ ಅರಿವನ್ನು ಜಾಗೃತಗೊಳಿಸಿದವರು ಅವರು. ಆದರೆ, ನಾನು ಮಾಡಿದ್ದು ಎಂಬುದಾಗಿ ಎಲ್ಲೂ ಹೇಳದ ಅವರು ನೀವೆಲ್ಲ ಸೇರಿ ಮಾಡಿದ್ದು ಎಂದೇ ಹೇಳುವ ಮೂಲಕ ಧ್ಯೇಯ ನಿಷ್ಠೆಯನ್ನು ಸ್ವಯಂಸೇವಕರಿಗೆ ಕಲಿಸಿಕೊಟ್ಟರು. ಇದರಂತೆ ಇಂದು ಹಿಂದು ಸಂಘಟಿತನಾಗುತ್ತಿದ್ದಾನೆ ಎಂದರು.

ರೋಬೋ ಸಾಫ್ಟ್‌ನ ರೋಹಿತ್ ಭಟ್ ಅಧ್ಯಕ್ಷತೆ ವಹಿಸಿ ಶುಭಕೋರಿದರು. ಕ್ಷೇತ್ರೀಯ ಸಂಘಚಾಲಕ್ ಡಾ.ಪಿ.ವಾಮನ್ ಶೆಣೈ, ಮಹಾನಗರ ಸಂಘಚಾಲಕ್ ಡಾ.ಸತೀಶ್ ರಾವ್ ಉಪಸ್ಥಿತರಿದ್ದರು.

ದತ್ತಿ ಉಪನ್ಯಾಸದಿಂದ ಕನ್ನಡ ಬೆಳವಣಿಗೆ



ಬಳ್ಳಾರಿ: ದತ್ತಿ ಉಪನ್ಯಾಸಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಪರಿಚಯಿಸುವುದರೊಂದಿಗೆ ಹೊಸ ವಿಚಾರಗಳನ್ನು ತಿಳಿಸಿ ಕನ್ನಡತನವನ್ನು ಬೆಳೆಸುವ ಕಾರ್ಯ ಮಾಡುತ್ತದೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಭಾಷ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬಳ್ಳಾರಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರೊ. ಕೆ.ಬಿ.ಹನುಮಂತರಾಯ, ಲಿಂ.ಟಿ.ಸಾವಿತ್ರಮ್ಮ ಸ್ಮಾರಕ, ಲಿಂ.ಕೆ.ಲಿಂಗನಗೌಡ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಕನ್ನಡ ಭಾಷೆ ಇಂದು ಜಾತಿ, ಧರ್ಮ ಹಾಗೂ ಗಡಿಯನ್ನು ಮೀರಿ ಬೆಳೆದಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಕನ್ನಡ ಸಾಹಿತ್ಯ ಪರಿಷತ್ತು. ತನ್ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿ, ಕಲೆ, ಸಾಹಿತ್ಯವನ್ನು ನಿರಂತರವಾಗಿ ಪೋಷಿಸುತ್ತ ವಿವಿಧ ಕಾರ್ಯಕ್ರಮ ಮೂಲಕ ಮುಂದಿನ ತಲೆಮಾರಿಗೆ ಕನ್ನಡದ ಶ್ರೇಷ್ಠತೆಯನ್ನು ಪರಿಚಿಸುವ ಕೆಲಸವನ್ನು ಮಾಡುತ್ತಿದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು, ಕವಿಗೋಷ್ಠಿ ಇನ್ನಿತರ ಕಾರ್ಯಕ್ರಮಗಳು ನಡೆದು ಕನ್ನಡ ಭಾಷೆ ಇನ್ನೂ ಬೆಳವಣಿಗೆ ಕಾಣುವುದರೊಂದಿಗೆ ಕನ್ನಡ ಭಾಷೆ ತನ್ನ ಅಸ್ಮಿತೆಯನ್ನು ಕನ್ನಡಿಗರಿಗೆ ತೋರಿಸಲಿ ಎಂದರು.


ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಿಷ್ಠಿರುದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ನೈತಿಕ ಮೌಲ್ಯಗಳನ್ನು ರೂಢಿಸಿಕೊಳ್ಳುವಲ್ಲಿ ವಚನಗಳ ಪಾತ್ರ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತು ಅಖಂಡ ಬಳ್ಳಾರಿ ಜಿಲ್ಲೆಯ ಅಧ್ಯಕ್ಷರಾದ ಡಾ.ನಿಷ್ಠಿರುದ್ರಪ್ಪ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಡಾ.ಕೆ.ವಿ.ಪ್ರಜ್ಞಾ, ಕೆಪಿಎಸ್ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ.ಶ್ರೀನಿವಾಸಮೂರ್ತಿ, ದತ್ತಿ ದಾನಿಗಳಾದ ಕೆ.ಬಿ.ಸಂಜೀವಪ್ರಸಾದ್, ಟಿ.ಸಿ.ಗೌಡ, ಕೆ.ಸಿದ್ಧರಾಮಪ್ಪ, ಡಾ.ಕೆ.ಮಲ್ಲಿಕಾರ್ಜುನ, ಡಾ.ಲೋಕೇಶ್, ಕೆ.ವಿ.ಚಂದ್ರಹಾಸ, ಮುಂಡಾಸದ ಮಲ್ಲಿಕಾರ್ಜುನ, ಎಮ್ಮಿಗನೂರು ಜಡೇಶ, ಕಪ್ಪಗಲ್ಲು ಚಂದ್ರಶೇಖರ್ ಆಚಾರ್ ಇತರರಿದ್ದರು.

ಇಂದು ಸಂಗೀತ ಪರಂಪರಾ ಉತ್ಸವ

ಹುಬ್ಬಳ್ಳಿ: ಮೂರುಸಾವಿರ ಮಠ ಹಾಗೂ ಗದಗ ಶ್ರೀ ಗುರು ಪಂಚಾಕ್ಷರಿ ಸೇವಾ ಸಮಿತಿ ಸಹಯೋಗದಲ್ಲಿ ಮೂರುಸಾವಿರಮಠದ ಆವರಣದಲ್ಲಿ ಗಾನಯೋಗಿ ಪಂಚಾಕ್ಷರಿ ಸಂಗೀತ ಪರಂಪರಾ ಉತ್ಸವ, ಪಂಚಾಕ್ಷರಿ ಗದಗ ಘರಾನಾ ಸಮ್ಮೇಳನ, ಗುರು ಪಂಚಾಕ್ಷರಿ ಸಮ್ಮಾನ-2026 ಪ್ರದಾನ ಸಮಾರಂಭ ಮಾ. 22 ರಂದು ಬೆಳಗ್ಗೆ 10 ರಿಂದ ರಾತ್ರಿ 10 ರ ವರೆಗೆ ಹಮ್ಮಿಕೊಳ್ಳಲಾಗಿದೆ ಸೇವಾ ಸಮಿತಿ ಅಧ್ಯಕ್ಷ ಪಂ. ರಾಜಗುರು ಗುರುಸ್ವಾಮಿ ಕಲಿಕೇರಿ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪದ್ಮಶ್ರೀ ಪಂ. ವೆಂಕಟೇಶಕುಮಾರ ಅವರು ಅಂದು ಬೆಳಗ್ಗೆ 10 ಕ್ಕೆ ಪಂಚಾಕ್ಷರಿ ಘರಾನಾ ಸಮ್ಮೇಳನಕ್ಕೆ ಚಾಲನೆ ನೀಡುವರು. ಮೂರುಸಾವಿರ ಮಠದ ಗುರುಸಿದ್ಧರಾಜಯೋಗಿಂದ್ರ ಸ್ವಾಮೀಜಿ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಸಾನ್ನಿಧ್ಯ ವಹಿಸುವರು. ಬೆಳಗ್ಗೆ 11 ರಿಂದ ಸಂಜೆ 6 ರವರೆಗೆ ಘರಾನಾ ಸಮ್ಮೇಳನ ಜರುಗಲಿದ್ದು, ಸಂಜೆ 6ಕ್ಕೆ ಗುರುಕುಮಾರ ಪಂಚಾಕ್ಷರಿ ರಾಷ್ಟ್ರೀಯ ಸಮ್ಮಾನ ಸಮಾರಂಭ ನಡೆಯಲಿದೆ. ಡಾ. ವಿನಾಯಕ ತೊರವಿ ಅವರಿಗೆ ಗುರುಕುಮಾರ ಪಂಚಾಕ್ಷರಿ ಸಮ್ಮಾನ-2026 ನೀಡಿ ಸನ್ಮಾನಿಸಲಾಗುವುದು. ಸಾನ್ನಿಧ್ಯವನ್ನು ಮೂರುಸಾವಿರ ಮಠದ ಗುರುಸಿದ್ಧರಾಜಯೋಗಿಂದ್ರ ವಹಿಸುವರು. ನೇತೃತ್ವವನ್ನು ಲಿಂಗನಾಯುನಕಹಳ್ಳಿ ಜಂಗಮ ಕ್ಷೇತ್ರ ಚನ್ನವೀರ ಸ್ವಾಮೀಜಿ ವಹಿಸುವರು. ಸಮ್ಮುಖವನ್ನು ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ವಹಿಸುವರು. ಡಾ. ಪಂ. ರಾಜಗುರು ಗುರುಸ್ವಾಮಿ ಕಲಿಕೇರಿ ಅಧ್ಯಕ್ಷತೆ ವಹಿಸುವರು. ಶಾಸಕ ಮಹೇಶ ಟೆಂಗಿನಕಾಯಿ, ಮೇಯರ್ ಜ್ಯೋತಿ ಪಾಟೀಲ, ವಿನಾಯಕ ಹಬೀಬ್, ಶಂಕರಸಾ ಬದಿ ಭಾಗವಹಿಸಲಿದ್ದಾರೆ ಎಂದರು.

ಸೇವಾ ಸಮಿತಿ ಉಪಾಧ್ಯಕ್ಷ ಮಹೇಶ್ವರ ಸ್ವಾಮೀಜಿ, ಶಿವಲಿಂಗಯ್ಯ ಶಾಸ್ತ್ರಿ, ಮಲ್ಲಯ್ಯ ಶಿರೋಳಮಠ, ಪ್ರತಾಪ ಬಹುರೂಪಿ ಇದ್ದರು.



ಅನಧಿಕೃತ ಗಾಳಿಯಂತ್ರ ಸ್ಥಗಿತಕ್ಕೆ ಆಗ್ರಹ



ಶಿರಹಟ್ಟಿ: ಸೆರೆಂಟಿಕಾ ವಿಂಡ್ ಕಂಪನಿಯವರು ಪಟ್ಟಣದ ಛಬ್ಬಿ ರಸ್ತೆಯ ಕಡೆ ಕಾನೂನು ಉಲ್ಲಂಘಿಸಿ ಅನಧಿಕೃತ ಗಾಳಿಯಂತ್ರ ತಲೆ ಎತ್ತುತ್ತಿದ್ದು, ಅಧಿಕಾರಿಗಳು ತಕ್ಷಣ ಫ್ಯಾನ್ ಕಾರ್ಯವನ್ನು ಸ್ಥಗಿತಗೊಳಿಸಬೇಕು ಎಂದು ರೈತ ಯಲ್ಲಪ್ಪ ಕೊಡ್ಲಿ ಆಗ್ರಹಿಸಿದರು.

ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಅಕ್ರಮವಾಗಿ ತಲೆ ಎತ್ತುತ್ತಿರುವ ಗಾಳಿಯಂತ್ರ ಸ್ಥಗೀತಗೊಳಿಸುವಂತೆ ಆಗ್ರಹಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿ ಮಾತನಾಡಿ, ಗಾಳಿಯಂತ್ರದ ಸಂಪೂರ್ಣ ನೆರಳು ಅಕ್ಕಪಕ್ಕದ ಜಮೀನುಗಳ ಮೇಲೆ ಬೀಳುತ್ತಿದ್ದು. ರಸ್ತೆಯ ಧೂಳು ಸಹ ಫಸಲಿಗೆ ಬಡೆದು ಬೆಳೆ ಹಾನಿಯಾಗುವ ಮತ್ತು ಇಳುವರಿ ಕುಂಟಿತಗೊಳ್ಳುವ ಸಂಭವವಿದೆ. ಗಾಳಿಯಂತ್ರ ವೇಗವಾಗಿ ತಿರುಗುವುದರಿಂದ ಭಾರೀ ಪ್ರಮಾಣದಲ್ಲಿ ಸದ್ದು ಹೊರಹೊಮ್ಮಲಿದ್ದು, ಉಳುಮೆ ಸಮಯದಲ್ಲಿ ದನ-ಕರುಗಳು ಭಯದಿಂದ ಜಮೀನಿಗೆ ಬಾರದಂತಾಗುತ್ತದೆ. ಭೂಮಿಯ ಅಂತರ್ಜಲ ಮಟ್ಟ ಕುಸಿತ ಮತ್ತು ತೇವಾಂಶ ಕಡಿಮೆಯಾಗುತ್ತದೆ. ಗಾಳಿಯಂತ್ರದಿಂದ ಕೇವಲ 100 ರಿಂದ 120 ಮೀಟರ್ ಅಂತರದ ಒಳಗೆ ಇರುವ ಸಣ್ಣ ರೈತರ ಮತ್ತು ಕೃಷಿ ಭೂಮಿ ಸಂರಕ್ಷಣೆಗೆ ಸರ್ಕಾರ ಮುಂದಾಗಬೇಕು ಎಂದು ಆಗ್ರಹಿಸಿದರು.

ಈ ವೇಳೆ ರೈತರಾದ ಶಿವಾನಂದ ಕುಳಗೇರಿ, ಎನ್. ಎ. ತೇಲಿ, ಹಸನ ತಹಶೀಲ್ದಾರ, ಬಸವರಾಜ ಬೋರಣ್ಣಿ, ಮಂಜುನಾಥ ಏರಿಮನಿ, ಅಶೋಕ ಹುಬ್ಬಳ್ಳಿ, ಪ್ರಶಾಂತ ಹುಬ್ಬಳ್ಳಿ, ಮಂಜುನಾಥ ಲಮಾಣಿ, ಮಂಜುನಾಥ ಮೂರಶಿಳ್ಳಿ, ಕಿರಣ ಸೇರಿದಂತೆ ಸುತ್ತಮುತ್ತಲಿನ ರೈತರು ಇದ್ದರು.

ಮಹಿಳೆ ಸಮಾಜದ ಪ್ರತಿಬಿಂಬ: ಡಿಸಿ ಸ್ನೇಹಲ್



ಧಾರವಾಡ: ಕುಟುಂಬದ ನೋವು ನುಂಗಿ, ನಲಿವು ಮಾತ್ರ ತೋರಿಸುವ ಮಹಿಳೆ ಸಮಾಜದ ಪ್ರತಿಬಿಂಬ ಇದ್ದಂತೆ. ಮಹಿಳಾ ಸಾಧನೆ ಗುರುತಿಸಿ, ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದ ಅವರು, ಮಹಿಳಾ ಸಶಕ್ತೀಕರಣ ಅಗತ್ಯವಿದೆ ಎಂದರು. ಸಮಾಜದಲ್ಲಿ ಮಹಿಳಾ ಪಾತ್ರ ಬದಲಾಗಿದೆ. ಶಿಕ್ಷಣ, ಕ್ರೀಡೆ, ಸರ್ಕಾರಿ ಉದ್ಯೋಗ, ಸಮಾಜ ಸೇವೆ ಎಲ್ಲ ಕ್ಷೇತ್ರದಲ್ಲೂ ಮಹಿಳೆ ಮುಂಚೂಣಿಯಲಿದ್ದು, ತಂತ್ರಜ್ಞಾನ, ವಿಜ್ಞಾನ ರಂಗದಲ್ಲೂ ಮುನ್ನುಗ್ಗುತ್ತಿದ್ದಾರೆ ಎಂದರು.

ಉದ್ಘಾಟಿಸಿದ ಖಾಯಂ ಜನತಾ ನ್ಯಾಯಾಲಯದ ಅಧ್ಯಕ್ಷೆ ಸುವರ್ಣಾ ಕೆ.ಮಿರ್ಜಿ ಮಾತನಾಡಿ, ಸ್ವಾತಂತ್ರ್ಯ ಪೂರ್ವ ಮಹಿಳಾ ಅವಕಾಶಗಳು ಕಡಿಮೆ ಇದ್ದವು. ಇಂದು ನಗರ-ಗ್ರಾಮೀಣದಲ್ಲೂ ಸಮಾನತೆ ಕಾಣುತ್ತಿದ್ದೇವೆ ಎಂದರು. ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಅಧಿಕಾರಿಗಳಾದ ಡಾ. ಎಚ್. ಎಚ್.ಕುಕನೂರ, ವಿಜಯಲಕ್ಷ್ಮೀ ಪಾಟೀಲ, ಸುಮಿತ್ರಾ ನಾಡಿಗೇರ, ವಿದ್ಯಾ ಬಡಿಗೇರ, ಡಾ. ಸಂಗೀತಾ ಮಾನೆ, ಅತೀಕಾ ಸಿದ್ದಕ್ಕಿ, ಉಮಾ ಬೆಳ್ಳೊಳ್ಳಿ ಇದ್ದರು.

ವಾರಕ್ಕೊಮ್ಮೆ ಕುಡಿಯುವ ನೀರು ನೀಡಲು ಒತ್ತಾಯ

ನರಗುಂದ: ಅಧಿಕಾರಿಗಳ ನಿರ್ಲಕ್ಷ್ಯದಿಂದ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ದಿನವೀಡಿ ಅಲೆದಾಡುವಂತಾಗಿದೆ. ಸಾರ್ವಜನಿಕ ನಳಗಳಿಲ್ಲ, ನೀರಿಗಾಗಿ ಎಲ್ಲೆಂತ ಅಲೆದಾಡಬೇಕು. ಹಲವಾರು ಬಾರಿ ಮನವಿ ಮಾಡಲಾಗಿದೆ. ಯಾವಾಗಲೊಮ್ಮೆ ಮಧ್ಯರಾತ್ರಿ ನೀರು ಬಿಡುತ್ತಾರೆ. ನಮ್ಮ ಪರಿಸ್ಥಿತಿ ಕೇಳೋರು ಇಲ್ಲದಂತಾಗಿದೆ. ದಯವಿಟ್ಟು ಕುಡಿಯೋಕೆ ನೀರು ನೀಡಿ ಎಂದು ಶಿಲ್ಪಾ ಸುಣಗಾರ ಆಗ್ರಹಿಸಿದರು.

ಇತ್ತೀಚೆಗೆ ಪುರಸಭೆ ಆವರಣದಲ್ಲಿ ಪಟ್ಟಣದ 17 ಮತ್ತು 19ನೇ ವಾರ್ಡ್‌ಗಳ ಕೆಲವು ಪ್ರದೇಶಗಳಿಗೆ ಸಂಭಂದಿಸಿದ ನಾಗರಿಕರು ಪುರಸಭೆಗೆ ಮುತ್ತಿಗೆ ಹಾಕಿ ಕುಡಿಯುವ ನೀರಿಗಾಗಿ ಆಗ್ರಹಿಸಿ ಪುರಸಭೆ ಅಧಿಕಾರಿಗಳಿಗೆ ಮನವಿ ಅರ್ಪಿಸಿ ಮಾತನಾಡಿದರು.

ಕುಡಿಯುವ ನೀರಿನ ಜೊತೆಗೆ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ದುಡಿಯದೇ ಇದ್ದರೆ ನಮ್ಮ ಜೀವನ ನಡೆಯಲ್ಲ. ದುಡಿದು ಮನೆಗೆ ಬಂದಾಗ ಕುಡಿಯೋಕೆ ನೀರೇ ಇಲ್ಲದಿದ್ದಾಗ ನಾವು ಬದುಕೋದು ಹೇಗೆ? ಮಧ್ಯರಾತ್ರಿ ನೀರು ಬಿಡದೇ ವಾರಕ್ಕೊಮ್ಮೆಯಾದರೂ ಕುಡಿಯುವ ನೀರು ನೀಡಿ ಎಂದು ಮನವಿ ಮಾಡಿಕೊಂಡರು.

ಗುರುನಾಥಕೆಂಗಾರಕರಮಾತನಾಡಿ, ಪಟ್ಟಣದಲ್ಲಿನ ವಿವೇಕಾನಂದ ನಗರ, ಮಾರುತಿ ನಗರ, ರಾಚಯ್ಯ ನಗರ ಸೇರಿದಂತೆ ಅನೇಕ ಕಡೆಗಳಲ್ಲಿ 15 ದಿನಕ್ಕೊಮ್ಮೆ ರಾತ್ರಿ 11 ಗಂಟೆಗೆ, 12 ಗಂಟೆಗೆ ನೀರು ಬಿಟ್ಟರೆ, ಇಂತಹ ಹೊತ್ತಲ್ಲಿ ಕೆಲವರು ನಿದ್ರೆಗೆ ಜಾರಿರುತ್ತಾರೆ. ಆಗ ಕುಡಿಯಲು ನೀರು ಸಿಗಲ್ಲ. ಬೇಸಿಗೆ ಸಮಯ ಆಗಿದ್ದರಿಂದ ನೀರಿನ ಸಮಸ್ಯೆ ಬಹಳ ಆಗುತ್ತಿದೆ. ಜೊತೆಗೆ ಚರಂಡಿ ಇಲ್ಲ, ಸ್ವಚ್ಚತೆಯಂತೂ ಇಲ್ಲವೇ ಇಲ್ಲ. ಪ್ರಾಣಿಗಳು ಸತ್ತರೆ ಓಣಿಯ ಪ್ರದೇಶವೆಲ್ಲವೂ ಗಬ್ಬೆದ್ದು ನಾರುತ್ತದೆ. ಬೀದಿ ದೀಪಗಳ ವ್ಯವಸ್ಥೆ ಸರಿಯಿಲ್ಲ. ಒಟ್ಟಿನಲ್ಲಿ ಹೇಳಬೇಕೆಂದರೆ ಚಂದ್ರಗೌಡ ಪ್ಲಾಟನ ಜನವಸತಿ ಪ್ರದೇಶವು ಸಮಸ್ಯೆಗಳ ಕೇಂದ್ರವಾಗಿದೆ ಎಂದರು. ನವಿಲು ತೀರ್ಥ ಡ್ಯಾಂನಿಂದ ಸರಬರಾಜು ಆಗುತ್ತಿರುವ ನೀರಿನ ಪೈಪ್‌ಲೈನ್‌ನ್ನು ಮಾರ್ಗ ಮಧ್ಯದ ಗ್ರಾಮಗಳಾದ ಹಳಕಟ್ಟಿ, ಹೂಲಿ, ಇನ್ನಿತರೆ ಗ್ರಾಮಗಳ ಜನರು ಪೈಪ್‌ಲೈನ್ ಸಂಪರ್ಕವನ್ನು ಯಾವ್ಯಾವದೋ ಉಪಯೋಗಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಕಾರಣ ನರಗುಂದ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ಆಗುತ್ತಿದೆ ಎನ್ನುತ್ತಾರೆ ಅಧಿಕಾರಿಗಳು.



ಖಂಡೂಬಾ ಮೋಟೆ, ಕಿರಣ ಜೋಗಣ್ಣವರ, ರೇಣುಕಾ ದ್ಯಾವನೂರ, ಶಿಲ್ಪಾ ಸುಣಗಾರ, ಪಾರ್ವತಿ ಸುಣಗಾರ, ರೋಷನಬೀ ನದಾಫ್, ರಿಯಾನಬೀ ನದಾಫ್, ಅಕ್ಕಮ್ಮ ದ್ಯಾವನೂರ, ರಾಜವ್ವ ಹೂಲಿಗೇರಿ, ಬಸವ್ವ ಗೊಂದಿ, ಜನ್ನತಬೀ ಬೀಳಗಿ, ನಾಗವ್ವ ಜಾಲಿಕಟ್ಟಿ, ಗಿರೀಜವ್ವ ದಾಟನಾಳ, ಲಕ್ಷ್ಮೀ ದಾಟನಾಳ, ದ್ಯಾಮವ್ವ ಕದಂ, ಪಾರವ್ವ ಕದಂ, ಸವಿತಾ ಕದಂ ಸೇರಿದಂತೆ ಅನೇಕರಿದ್ದರು.

ಖಾಲಿ ಗಾಡಾ ಓಡಿಸುವ ಸ್ಪರ್ಧೆ ಇಂದು

ಹುಬ್ಬಳ್ಳಿ: ತಾಲೂಕಿನ ಬ್ಯಾಹಟ್ಟಿ ಗ್ರಾಮದಲ್ಲಿ ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ರಾಜ್ಯ ಮಟ್ಟದ ಜಂಗೀ ನಿಲಾಲಿ ಕುಸ್ತಿ ಪಂದ್ಯಾವಳಿ ಹಾಗೂ ಮಾ.22 ರಂದು ಹೆಬಸೂರ ರಸ್ತೆಯಲ್ಲಿ ಖಾಲಿ ಗಾಡಾ ಓಡಿಸುವ ಸ್ಪರ್ಧೆ ಏರ್ಪಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಶಿವಾನಂದ ಕರಿಗಾರ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3ಕ್ಕೆ ನಿಕಾಲಿ ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ 31 ಜೋಡಿ ಪೈಲ್ವಾನರು ಭಾಗವಹಿಸುವರು. ವಿಜೇತರಿಗೆ ಬಹುಮಾನ ವಿತರಿಸಲಾಗುವುದು, ಮಾಜಿ ಪೈಲ್ವಾನರಿಗೆ ಸನ್ಮಾನ ಮಾಡಲಾಗುವುದು ಎಂದರು. ಖಾಲಿಗಾಡಾ ಓಡಿಸುವ ಸ್ಪರ್ಧೆ ಮಾರ್ಚ್ 22 ರಂದು ಆಯೋಜಿಸಿದ್ದು, ಒಂದು ನಿಮಿಷದ ಅವಧಿ ಇರಲಿದೆ. ಮೊದಲ ಬಹುಮಾನ 71,000, ದ್ವಿತೀಯ ಬಹುಮಾನ 50,000, ತೃತೀಯ ಬಹುಮಾನ 40,000, ನಾಲ್ಕನೇ ಬಹುಮಾನ 25,000 ಹೀಗೆ ಪ್ರಶಸ್ತಿ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದು ಹೇಳಿದರು.

ಅಶೋಕ ಚಿಲ್ಲಣ್ಣವರ, ಸಿದ್ದು ಮಲ್ಹಾರಿ, ರುದ್ರಪ್ಪ ಕುಂಬಾರ, ಮಂಜುನಾಥ ಮಲ್ಹಾರಿ, ಬಸವರಾಜ ಕುರುಬರ, ವಿಶ್ವನಾಥ ಕರಿಗಾರ ಇದ್ದರು.



ಕಿರುಸುದ್ದಿ

ಗೋಡೆ ನಾರಾಯಣ ಹೆಗಡೆಗೆ ಪ್ರಶಸ್ತಿ ಪ್ರದಾನ



◆**ಸಿದ್ದಾಪುರ:** ತಾಲೂಕಿನ ಕಲಗದ್ದೆಯ ಶ್ರೀ ನಾಟ್ಯವಿನಾಯಕ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮೋದಕ ಸೇವಾ ಸಂವತ್ಸರದ ಮಹಾ ಸಮಾರೋಪದಲ್ಲಿ ಮಂಗಳೂರಿನ ಅರೆಹೊಳೆ ನಂದಗೋಕುಲ ತಂಡದಿಂದ ನೃತ್ಯ ವೈಭವದ ಸಮರ್ಪಣೆ ನಡೆಯಿತು. ಅರೆಹೊಳೆ ಶ್ವೇತಾ ನಿರ್ದೇಶನದ ನೃತ್ಯಗಳು ನೆರೆದವರ ಗಮನ ಸೆಳೆದವು. ಕಾರ್ಯಕ್ರಮದ ಅಂಗವಾಗಿ ಶಂಭುಶಿಷ್ಯ ಯಕ್ಷಗಾನ ಪ್ರತಿಷ್ಠಾನದಿಂದ 'ಗದಾಯುದ್ಧ' ಆಖ್ಯಾನ ನಡೆಯಿತು. ಹಿಮ್ಮೇಳದಲ್ಲಿ ಕೇಶವ ಹೆಗಡೆ ಕೊಳಗಿ, ಶಂಕರ ಭಾಗವತ, ಗಣೇಶ ಗಾಂವಕರ್ ಸಹಕರಿಸಿದರೆ, ಮುಮ್ಮೇಳದಲ್ಲಿ ಗೋಡೆ ನಾರಾಯಣ ಹೆಗಡೆ, ವಿನಾಯಕ ಹೆಗಡೆ ಕಲಗದ್ದೆ, ಅಶೋಕ ಭಟ್ಟ ಸಿದ್ದಾಪುರ, ವಿನಯ ಬೇರೊಳ್ಳಿ, ವೆಂಕಟೇಶ ಬೊಗ್ರಿಮಕ್ಕಿ, ವಿನಯ ಹೊಸ್ತೋಟ ಹಾಗೂ ತುಳಸಿ ಹೆಗಡೆ ಭಾಗವಹಿಸಿದ್ದರು. ಇದೇ ವೇಳೆ ಯಕ್ಷಗಾನ ರಂಗದ ಹಿರಿಯ ಕಲಾವಿದ ಗೋಡೆ ನಾರಾಯಣ ಹೆಗಡೆ ಅವರಿಗೆ 'ಯಕ್ಷನಾಟ್ಯ ಅನುಗ್ರಹ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಸಮಾರಂಭದಲ್ಲಿ ಸಹಕಾರಿ ರತ್ನ ಆರ್.ಎಂ.ಹೆಗಡೆ ಬಾಳೇಸರ, ಶಾಸನ ತಂತ್ರದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ ಹೆರವಟ್ಟಾ, ಧಾರವಾಡ ಹಾಲು ಒಕ್ಕೂಟದ ಉಪಾಧ್ಯಕ್ಷ ಸುರೇಶ್ಚಂದ್ರ ಹೆಗಡೆ ಕೆಶಿನ್ಮನೆ, ವಿ.ಶೇಷಗಿರಿ ಭಟ್ಟ ಗುಂಜಗೋಡ, ದೇವಾಲಯದ ವಿಶ್ವಸ್ಥ ವಿನಾಯಕ ಹೆಗಡೆ ಕಲಗದ್ದೆ, ಕೊಳಗಿ ಕೇಶವ ಭಾಗವತ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಗುಂಜಗೋಡ ಗಣಪತಿ ಹೆಗಡೆ ಕಾರ್ಯಕ್ರಮ ನಿರ್ವಹಿಸಿ, ಸನ್ಮಾನ ಪತ್ರ ವಾಚಿಸಿದರು.

ಇಬ್ಬರ ಬಂಧನ

◆**ಹುಬ್ಬಳ್ಳಿ:** ಹದಿನೈದು ವರ್ಷದ ಬಾಲಕ ನಮೀಷ್ ಸಂಗಳದ ರೀಲ್ಸ್ ಮಾಡಲು ಹೋಗಿ ಅಪಘಾತದಲ್ಲಿ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾನಗರ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಮಧ್ಯ ಪ್ರದೇಶದಿಂದ ಕಾರು ಖರೀದಿಸಿದ ಅಕ್ಷಯ ಪಾರ್ಕ್ ನಿವಾಸಿ ನಾಗರಾಜ ರಾಯ್ಕರ್ ಮತ್ತು ಅವರ ಪುತ್ರ ಬಂಧಿತರು. ಇಬ್ಬರನ್ನು ಶನಿವಾರ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಯುತ್ತಿದೆ. ಉತ್ತರ ಪ್ರದೇಶದ ವ್ಯಕ್ತಿಯಿಂದ ಕಾರು ಯಾವಾಗ ಖರೀದಿಸಿದ್ದರು, ಯಾರ ಹೆಸರಲ್ಲಿ ನೋಂದಣಿಯಾಗಿದೆ. ಇಲ್ಲಿಗೆ ಯಾವಾಗ ತರಲಾಗಿತ್ತು. ಯಾವೆಲ್ಲ ಕಾಗದ ಪತ್ರಗಳು ಇವೆ ಎನ್ನುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಡಿಸಿಪಿ ರವೀಶ್ ಸಿ.ಆರ್. ತಿಳಿಸಿದರು. ಓಡಿ ಕಾರು ಉತ್ತರ ಪ್ರದೇಶದ ನೋಂದಣಿಯದ್ದು, ಉತ್ತರ ಪ್ರದೇಶದ ಅನಿಲಕುಮಾರ ಎಸ್.ಅವರ ಹೆಸರಲ್ಲಿ 2013ರ ನವೆಂಬರ್ 13ರಂದು ಓಡಿ ಕಾರು ನೋಂದಣಿಯಾಗಿದೆ. 2028ರ ನವೆಂಬರ್ ವರೆಗೂ ಕಾರಿನ ಫಿಟ್ನೆಸ್ ಇದೆ. ಆದರೆ, 2022ರ ಡಿಸೆಂಬರ್‌ನಲ್ಲಿಯೇ ಇನ್ಸೂರೆನ್ಸ್ ಮುಕ್ತಾಯವಾಗಿದೆ. ನಾಗರಾಜ ಅವರು ಉತ್ತರ ಪ್ರದೇಶದ ಕಾರು ಖರೀದಿಸಿದ್ದು, ಇನ್ನೂ ಅವರ ಹೆಸರಿಗೆ ನೋಂದಣಿಯಾಗಿಲ್ಲ ಎಂದು ತಿಳಿದು ಬಂದಿದೆ.

ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸರ್ವರೂ ಸಹಕರಿಸಲಿ: ಜಯಶ್ರೀ

◆**ಗದಗ:** ಬದುಕು ಹಸನಾಗಬೇಕಾದರೆ ಪ್ರತಿಯೊಬ್ಬರೂ ಯಾವುದಾದರೊಂದು ಕೆಲಸವನ್ನು ಮಾಡಬೇಕು. ಒಬ್ಬರಿಂದಲೇ ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ, ಪ್ರತಿಯೊಬ್ಬರೂ ಯಾವುದಾದರೊಂದು ಕಾಯಕದಲ್ಲಿ ತೊಡಗಿಸಿಕೊಳ್ಳುವುದು ಜೀವನಮಟ್ಟ ಸುಧಾರಣೆಗೆ ರಹದಾರಿ ಇದ್ದಂತೆ, ಯಾವುದೇ ಕೆಲಸವಾಗಲಿ ಪ್ರಾಮಾಣಿಕತೆ, ನಿಷ್ಠೆ, ಕಾಳಜಿ, ಶಿಸ್ತು, ತಾಳ್ಮೆಯಿಂದ ಮಾಡಬೇಕು ಎಂದು ಸಮಾಜ ಸೇವಕಿ ಜಯಶ್ರೀ ಹಿರೇಮಠ ಹೇಳಿದರು.

ನಗರದ ಕೆ.ಎಲ್.ಇ.ಸಂಸ್ಥೆಯ ಜಗದ್ಗುರು ತೋಂಟದಾರ್ಯ ಮಹಾವಿದ್ಯಾಲಯದ ಮಹಿಳಾ ಸಬಲೀಕರಣ ಘಟಕದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಾಧಕ ಮಹಿಳೆಯರಿಗೆ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಇದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ. ಓದುವುದು ಸರ್ಕಾರಿ ನೌಕರಿಗಾಗಿ ಎಂಬ ಧೋರಣೆಯಿಂದ



ಹೊರಬಂದು, ಓದು ನಮ್ಮ ಭವಿಷ್ಯದ ಬದುಕು ರೂಪಿಸಿಕೊಳ್ಳುವುದಕ್ಕೆ ಎಂಬ ತಿಳುವಳಿಕೆಯನ್ನು ಹೊಂದಿ ಶಕ್ತಿ ಇದ್ದಾಗ, ವಯಸ್ಸಿದ್ದಾಗ ಜೀವನ ರೂಪಿಸಿಕೊಳ್ಳಬೇಕು ಎಂದರು.

ಕೃಷಿ ಕ್ಷೇತ್ರದ ಸಾಧಕಿ ಲಕ್ಷ್ಮವ್ವ ಶಿರಹಟ್ಟಿ ಮಾತನಾಡಿದರು. ಪ್ರಾಚಾರ್ಯ ಪಿ.ಜಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಹಸನ್ಮುಖಿ ಸಂಸ್ಥೆಯ ಅಧ್ಯಕ್ಷೆ ಸುಲೋಚನಾ ಕಟಗಿ, ಅಸುಂಡಿಯ ಸೂಲಗಿತ್ತಿ ಮತ್ತು ಸಮಾಜ ಸೇವಕಿ ರೇಣವ್ವ ಪೂಜಾರ್ ಅವರನ್ನು ಗೌರವಿಸಲಾಯಿತು. ಡಾ.ಲಕ್ಷ್ಮೀ ಕಿಲ್ಲೇದಾರ್ ಸ್ವಾಗತಿಸಿ, ಪರಿಚಯ ಮಾಡಿಕೊಟ್ಟರು. ದಿವ್ಯಾ ಬೇಲೇರಿ ಪ್ರಾರ್ಥಿಸಿದರು. ಐಶ್ವರ್ಯ ವಂದಿಸಿದರು. ಪಾರ್ವತಿ ರಗಟಿ ನಿರೂಪಿಸಿದರು.

ಆಲಿಕಲ್ಲು ಮಳೆಗೆ ಉದುರಿ ಬಿದ್ದ ಭತ್ತದ ಕಾಳು

◆**ಕುರುಗೋಡು:** ನಿನ್ನೆ ತಡರಾತ್ರಿ ತಾಲೂಕಿನ ಕೆಲ ಗ್ರಾಮಗಳ ಭಾಗದಲ್ಲಿ ಆಲಿಕಲ್ಲು ಮಳೆ ಬಿದ್ದಿದ್ದು, 37ಮಿ.ಮೀ.ಮಳೆ ಅಂದಾಜಿಸಲಾಗಿದೆ. ಈ ಆಲಿಕಲ್ಲು ಮಳೆಯಿಂದ ಕಲಕಂಭ, ಸೋಮಲಾಪುರ, ಕೆರೆಕೆರೆ, ಚಿಟಗಿನಹಾಳು, ವೀರಾಪುರ, ಗುತ್ತಿಗನೂರು, ಪಟ್ಟಣಸೆರಗು, ಬಾದನಹಟ್ಟಿ, ಸಿದ್ದಮ್ಮನಹಳ್ಳಿ, ಇತರೆ ಗ್ರಾಮಗಳಲ್ಲಿ ಬೋರ್, ಪಂಪ್ ಸೆಟ್ ಗಳಿಗೆ, ಬಾವಿ ನೀರಿಗೆ, ಹಳ್ಳದ ನೀರಿಗೆ, ಇತರೆ ನೀರಾವರಿ ಮೂಲಗಳಿಂದ ಭತ್ತದ ಬೆಳೆ ಹಾಕಿದ್ದ ರೈತರ ಜಮೀನುಗಳಲ್ಲಿ, ನಾಟಿಯಾಗಿದ್ದ ಸಮೃದ್ಧ ಭತ್ತದ ಬೆಳೆಯು ಆಲಿಕಲ್ಲು ಮಳೆಯಿಂದಾಗಿ, ಕೆಲ ಗದ್ದೆಗಳಲ್ಲಿ ಕಾಳು ಉದುರಿ ನೆಲದ ಪಾಲಾಗಿದೆ.

ಬೇಸಿಗೆ ಬೆಳೆಗೆ ಕಾಲುವೆ ನೀರು ಇಲ್ಲದಿದ್ದರೂ, ಇತರೆ ಮೂಲಗಳಿಂದ ನೀರಾವರಿ ಹೊಂದಿಸಿಕೊಂಡು, ಅದರಲ್ಲೂ ಕೆಲ ರೈತರು ಬೇರೆಯವರಿಂದ ನೀರು ಎರವಲು ಪಡೆದು ಕಷ್ಟಪಟ್ಟು ಭತ್ತ ಬೆಳೆದಿದ್ದರು. ರೈತರ ಕಷ್ಟಕ್ಕೆ ತಕ್ಕಂತೆ



ಬೆಳೆಯು ಉತ್ತಮವಾಗಿ ಬಂದಿತ್ತು. ಕಾಳು ಬಿಟ್ಟ ಸಮಯದಲ್ಲಿ ಆಲಿಕಲ್ಲು ಮಳೆ ಬೂತದಂತೆ ಎರಗಿ ಭತ್ತದ ಕಾಳು ನೆಲದ ಪಾಲಾಗುವಂತೆ ಮಾಡಿದೆ. ಭತ್ತ ಬೆಳೆಯಲು ಎಕರೆಗೆ 30 ರಿಂದ 35,000 ರೂ. ವರೆಗೆ ಖರ್ಚು ಮಾಡಿದ ರೈತರಿಗೆ ಆಲಿಕಲ್ಲು ಮಳೆಯು ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಸ್ಥಿತಿ ತಂದೊಡ್ಡಿ ಅನ್ನದಾತರಿಗೆ ನಿರಾಶೆ ಮಾಡಿದೆ.

ಮನುಷ್ಯರಿಗೆ ಕಷ್ಟ -ಸುಖ ಸಾಮಾನ್ಯ: ಡಾ. ಸೋಮನಾಥ



◆**ಉಪ್ಪಿನಬೆಟಗೇರಿ:** ಶ್ರೀ ಗುರು ವಿರೂಪಾಕ್ಷೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಲವಣಗಿರಿ ಉತ್ಸವದಲ್ಲಿ ನಂದಿಕೇಶ್ವರ ಪಂಡಿತ ವೀರೇಶ್ವರ ಶಾಸ್ತ್ರಿಗಳು ಏಳನೇ ದಿನದ ಅಜಗಣ್ಣ ಮುಕ್ತಾಯಕ್ಕಾ ಶರಣರ ಜೀವನ ದರ್ಶನ ಪ್ರವಚನ ಮಾಡಿದರು.

ಡಾ. ಸೋಮನಾಥ ಲೋಕಾಪುರಮಠ ಮಾತನಾಡಿ, ಮಠ ಮಂದಿರಗಳು ಚಿಕ್ಕದಾದರೆ ಅಲ್ಲಿ ಸ್ವಾಮೀಜಿಯವರು ದೊಡ್ಡವರಾಗಿರುತ್ತಾರೆ. ಮಾನವರಿಗೆ ಕಷ್ಟ -ಸುಖ ಸರ್ವ ಸಾಮಾನ್ಯ. ಅವುಗಳನ್ನು ಎದುರಿಸುವ ಶಕ್ತಿ ನಮ್ಮಲ್ಲಿರಬೇಕು. ಜೀವನ ಅಂದರೆ ಬಂಡಿ ಗಾಲಿ ಚಕ್ರ ಇದ್ದಂತೆ. ಅವು ಸಮನಾಗಿ ಸಾಗಿದರೆ ಮಾತ್ರ ನಮ್ಮ ಸಂಸಾರ ಸುಗಮವಾಗಿ ನಡೆಯಲು ಸಾಧ್ಯ. ಎಲ್ಲಿಯವರಗೆ ಮಹಿಳೆಯರಿಗೆ ಸ್ವಾತಂತ್ರ್ಯ ನೀಡುವುದಿಲ್ಲವೂ ಅಲ್ಲಿಯವರೆಗೆ ಸಮಾಜ ವಿಕಲಾಂಗವಾಗುತ್ತದೆ ಎಂದು ಬಸವಣ್ಣನವರು ಹೇಳಿದ ಮಾತು ಈಗ ಅವರ ಕನಸು ನನಸಾಗಿದೆ. ಈ ಜಗತ್ತಿನಲ್ಲಿ ಸಾಮಾನ್ಯರು ಜನಿಸಿದರು. ಆದರೆ ಅಸಾಮಾನ್ಯರು ಅವತಿಸಿದರು. ಮನುಷ್ಯನಿಗೆ ಮತ್ತು ದೇವರಿಗೆ ಬಹಳ ವ್ಯತ್ಯಾಸವಿದ್ದು, ಅದನ್ನು ನಾವು ಅರಿಯಬೇಕು. ಮಣ್ಣು ಗೆದ್ದಲು ತುಂಬಿದ ಉಪ್ಪಿನಬೆಟಗೇರಿ ಮಠ ಈಗ ಪರಿಮಳಯುಕ್ತ ಸುಗಂಧ ಮಠವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಪುಡಕಲಕಟ್ಟಿ ಆತ್ಮಾನಂದ ಆಶ್ರಮದ ಈರಣ್ಣಾ ಸತ್ಯಣ್ಣವರ ಮಾತನಾಡಿ, ನಮ್ಮನ್ನು ತಾವು ಮೊದಲು ಅರಿಯಬೇಕು. ಅಂದಾಗ ಮಾತ್ರ ಮನಸ್ಸಿಗೆ ನೆಮ್ಮದಿ, ಸುಖ, ಶಾಂತಿ ಸಿಗಲಿದೆ. ಬದುಕಿನಲ್ಲಿ ಮಹಾತ್ಮರ ಮಾರ್ಗದರ್ಶನದಿಂದ ಜ್ಞಾನದ ಅರಿವು ದೊರೆಯುತ್ತವೆ ಎಂದರು.

ಹುಬ್ಬಳ್ಳಿ ಖ್ಯಾತ ಜಾನಪದ ತಜ್ಞ ಡಾ. ರಾಮು ಮೂಲಗಿ ಮಾತನಾಡಿ, ವರ್ಷದಲ್ಲಿ ಬರುವ ಮೊದಲನೆಯ ಯುಗಾದಿ ಹಬ್ಬ ಹೊಸ ವರ್ಷದ ನಿಜವಾದ ಯುಗಾದಿ ಹಬ್ಬ, ಅಂದು ಕೃಷಿಕರು ಭೂಮಿ ತಾಯಿಗೆ ಪೂಜೆ ನೆರವೇರಿಸಿದ ನಂತರ ಬಿತ್ತನೆಗೆ ಸಜ್ಜಾಗುವ ಹಬ್ಬ ಇದಾಗಿದೆ ಎಂದರು.

ಧಾರವಾಡ ಹೆಸ್ಕಾಂ ಅಭಿಯಂತರಾದ ಈರಣ್ಣಾ ಸಿಂದಗಿಮಠ, ಡಾ. ಬಸಮ್ಮಾ ಅಮ್ಮನಿ, ಹಿರಿಯ ಪತ್ರಕರ್ತ ರಂಗನಾಥ ಕಮತರ, ಉಪ್ಪಿನಬೆಟಗೇರಿ ಹೆಸ್ಕಾಂ ಶಾಖಾಧಿಕಾರಿ ಎಂಎಲ್.ಎನ್ ಫಣೇಂದ್ರ, ಚಂದ್ರಶೇಖರ ಚಿಕ್ಕಮಠ, ಹಬ್ಬೇನೂರ ಯಡಳ್ಳಿ,ಆಯಟ್ಟಿ ಇತರರಿದ್ದರು. ಶರಣ ಮಂಜುನಾಥ ಬೆಳವಡಿವಿರುಪಾಕ್ಷಪ್ಪ ಬಡಿಗೇರ ಅನ್ನ ಪ್ರಸಾದ ಸೇವೆ ಸಲ್ಲಿಸಿದರು. ಶಿಕ್ಷಕ ವಿ.ಎಸ್ ಬೆಳ್ಳಿಗಟ್ಟಿ ನಿರ್ವಹಿಸಿದರು.

ಧರ್ಮಸ್ಥಳ ಸಂಘದಿಂದ ಹೂಳೆತ್ತಿ ಕೆರೆಗಳ ಅಭಿವೃದ್ಧಿ

◆**ಕುರುಗೋಡು:** ಧರ್ಮಸ್ಥಳ ವೀರೇಂದ್ರ ಹೆಗಡೆಯವರು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಬಡವರ ಕಷ್ಟವನ್ನು ಪರಿಹಾರ ಮಾಡಲು ಪ್ರಸಾದ ನೀಡುವ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ದೇವರಲ್ಲಿ ಭಯ ಭಕ್ತಿ ಪ್ರೀತಿ ಗೌರವದಿಂದ ದೇವಸ್ಥಾನ ಸ್ವಚ್ಛತೆ ಕಾಪಾಡಿಕೊಂಡು ಅನುದಾನ ಬಳಸಿಕೊಂಡು ಸಮಾಜಕ್ಕೆ ನೆರವಾಗಬೇಕೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ತಾಲೂಕು ಯೋಜನಾ ಅಧಿಕಾರಿ ಸುಧೀರ್ ಅಂಗಳೂರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಸಮೀಪದ ಶಿರಿಗೇರಿ ಗ್ರಾಮದ ಹುಲಿಗೆಮ್ಮ ದೇವಸ್ಥಾನ ಕಮಿಟಿಯವರು ಸಹಾಯಧನಕ್ಕೆ ಅರ್ಜಿ ಸಲ್ಲಿಸಿದಾಗ ತಕ್ಷಣ ಸ್ಪಂದಿಸಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಹುಲಿಗೆಮ್ಮ ದೇವಸ್ಥಾನ ಜೀರ್ಣೋದ್ಧಾರಕ್ಕೆ ಎರಡು ಲಕ್ಷ ಮಂಜೂರಾತಿ ಪತ್ರ ನೀಡಿ, ದೇವಸ್ಥಾನಕ್ಕೆ ಅನುದಾನ ನೀಡಲಾಯಿತು. ಸಾಮಾಜಿಕವಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಕಾರ್ಯಕ್ರಮಗಳು ಅನುಷ್ಠಾನಗೊಂಡಿದ್ದು. ಅದರಲ್ಲಿ ಕೆರೆಗಳ ಹೂಳೆತ್ತುವ ಕೆಲಸ ಮಾಡಲಾಗಿದ್ದು, ಒಟ್ಟು ರಾಜ್ಯದಲ್ಲಿ 1021 ಕೆರೆಗಳನ್ನು ಧರ್ಮಸ್ಥಳ ವತಿಯಿಂದ ಕೆರೆಗಳ ಹೂಳೆತ್ತಿ ಅಭಿವೃದ್ಧಿಗೊಳಿಸಲಾಗಿದೆ. ಇಷ್ಟೇ ಅಲ್ಲದೆ ಸಂಸ್ಥೆ ಬಡವರಿಗೆ, ಅನಾರೋಗ್ಯ ಪೀಡಿತರಿಗೆ, ಪ್ರತಿ ತಿಂಗಳು ಒಂದು ಸಾವಿರ, ಮೂರು ಸಾವಿರ ಮಾಶಾಸನ ನೀಡುತ್ತಿದ್ದು. ಜೊತೆಗೆ ಕಡು ಬಡವರಿಗೆ ವಾತ್ಸಲ್ಲ ಮನೆ ನಿರ್ಮಾಣ, ಬೆಂಕಿ ಅವಘಡಕ್ಕೆ ಸಹಾಯಧನ, ಶಾಲಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ನಮ್ಮ ಸ್ವಸಹಾಯ ಸಂಘದ ಜೊತೆಯಲ್ಲಿ ಅತ್ಯುತ್ತಮ ಕಡಿಮೆ ಬಡ್ಡಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಿಂದ ಸಾಲ ವಿತರಣೆ, ಸ್ಮಶಾನ ಅಭಿವೃದ್ಧಿ, ಆರೋಗ್ಯ, ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

ಯೋಜನೆ ಅನುಷ್ಠಾನಕ್ಕೆ ರೈತರಿಂದ ಅಡಚಣೆ: ಆರ್‌ವಿಡಿ

◆**ಹಳಿಯಾಳ:** ಪಟ್ಟಣದಲ್ಲಿ ಇತ್ತೀಚೆಗೆ ನಡೆದ ನೀರಿಗಾಗಿ ರೈತರ ಪ್ರತಿಭಟನೆಯು ಜನ ಬೆಂಬಲವಿಲ್ಲದ್ದಾಗಿದ್ದು, ದೇಶಪಾಂಡೆ ಏನು ಅಂತ ಜನತೆಗೆ ತಿಳಿದಿದೆ ಎಂದು ಶಾಸಕ ಆರ್.ವಿ. ದೇಶಪಾಂಡೆ ಹೇಳಿದರು.



ಹಳಿಯಾಳದ ತಮ್ಮ ಸ್ವ ಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿ, ನೀರಿಗಾಗಿ ತಂದ ಯೋಜನೆಯ ಅನುಷ್ಠಾನದಲ್ಲಿ ಹಲವು ರೈತರೇ ಮಾಡಿದ ಹಲವು ಅಡಚಣೆಗಳು ಇನ್ನೂ ಕೆಲವು ತುಂಡು ಕಾಮಗಾರಿಗಳು ಹಾಗೆಯೇ ಪೆಂಡಿಂಗ್ ಇವೆ. ಆದರೂ ಅನುಷ್ಠಾನಕ್ಕೆ ಬದ್ಧರಿದ್ದೇವೆ. ಕಬ್ಬು ಸಾಗಾಣಿಕೆಯ ವಾಹನಗಳು ಸಾಗಲು ಯಡೋಗಾದಿಂದ ಹಳಿಯಾಳಕ್ಕೆ ಬರುವ ಟ್ರ್ಯಾಕ್ಟರ್ ಬೈಪಾಸ್ ರಸ್ತೆಯಿಂದ ಸಾಗಲು ರಸ್ತೆ ನಿರ್ಮಿಸಲು ಕಾರ್ಖಾನೆಯ ಸಹಕಾರದೊಂದಿಗೆ ನಿರ್ಮಿಸಲು ಮುಂದಾದಾಗ ಇದುವರೆಗೂ ಅಡ್ಡಿ ಮಾಡಿ ಕೇವಲ ಒಂದು ಸಣ್ಣ ತುಂಡು ಜಾಗದಿಂದಾಗಿ ಹಳಿಯಾಳದ ಅಭಿವೃದ್ಧಿಗೆ ಮಾರಕವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದರು.

ಹಳಿಯಾಳ ಅಭಿವೃದ್ಧಿಗಾಗಿ ಮಂಜೂರಾಗಿರುವ ಅನುದಾನದ ಬಗ್ಗೆ ವಿವರಣೆ ನೀಡಿದ ಅವರು, ಹಳಿಯಾಳ ಪಟ್ಟಣದ ಅಲಂಕಾರಿಕ ದೀಪಗಳು – ರೂ. 337 ಲಕ್ಷ ಮಂಜೂರು, ಖೇಲೋ ಇಂಡಿಯಾ ಒಳಾಂಗಣ ಕ್ರೀಡಾಂಗಣಕ್ಕಾಗಿ ಹಳಿಯಾಳಕ್ಕೆ ಹೆಚ್ಚುವರಿ ರೂ. 248 ಲಕ್ಷ ಮಂಜೂರು, ಹಳಿಯಾಳ ಸರ್ಕಾರಿ ಉರ್ದು ಬಾಲಕಿಯರ ಶಾಲೆಗೆ ಜಾಗ ಲೀಸ್‌ಗೆ ರೂ. 43.50 ಲಕ್ಷ ಮಂಜೂರು, ಹಳಿಯಾಳದಲ್ಲಿನ ಸರಕಾರಿ ಉರ್ದು ಬಾಲಕಿಯರ ಶಾಲೆಗೆ ಅಗತ್ಯ ಜಾಗವನ್ನು ಲೀಸ್ ಮೇಲೆ ಪಡೆಯಲು ರೂ. 43.50 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ. ಹಿರಿಯ ಕುಸ್ತಿ ಪಟುಗಳಿಗೆ ಪಿಂಚಣಿ ಹೆಚ್ಚಳ ಮಾಡಿದ್ದು (ಕುಸ್ತಿ ಮಾಸಾಶನ ಯೋಜನೆ), ರಾಜ್ಯ ಮಟ್ಟದ ಕುಸ್ತಿ ಪಟುಗಳಿಗೆ 3500 ರಿಂದ 4000 ರೂ.ಗಳಿಗೆ ಹೆಚ್ಚಿಸಲಾಗಿದೆ. ರಾಷ್ಟ್ರ ಮಟ್ಟದ ಕುಸ್ತಿಪಟುಗಳಿಗೆ 4500 ರೂ. ಗಳಿಂದ 5000 ರೂ. ಗಳಿಗೆ ಏರಿಸಲಾಗಿದೆ. ಪ್ರಸ್ತುತ ಹಳಿಯಾಳದಲ್ಲಿ 52 ಮಂದಿ ಹಿರಿಯ ಕುಸ್ತಿ ಪಟುಗಳು ಪಿಂಚಣಿ ಪಡೆಯುತ್ತಿದ್ದಾರೆ. PM SHRI ಯೋಜನೆಗೆ ಆಯ್ಕೆ – ಸರ್ಕಾರಿ ಪಿಯು ಕಾಲೇಜು, ಹಳೆ ದಾಂಡೇಲಿ: ದಾಂಡೇಲಿಯ PM SHRI (Pradhan Mantri Schools for Rising India) ಯೋಜನೆಯಡಿಯಲ್ಲಿ ಆಯ್ಕೆಯಾಗಿದೆ. ಈ ಯೋಜನೆಯಡಿ ಕಾಲೇಜಿನ ಕಟ್ಟಡ ಹಾಗೂ ಪ್ರಯೋಗಾಲಯಗಳ ನವೀಕರಣ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಅನುದಾನ ಲಭ್ಯವಾಗಲಿದೆ. ಆಂಬ್ಯುಲೆನ್ಸ್ ಖರೀದಿಗೆ ರೂ. 30.00 ಲಕ್ಷ ಮಂಜೂರು, ಅಲ್ಪಸಂಖ್ಯಾತರಿಗಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮ (VDP ಯೋಜನೆ) ಅಡಿಯಲ್ಲಿ ಹೊಸ ಆಂಬ್ಯುಲೆನ್ಸ್ ವಾಹನ ಖರೀದಿಸಲು ರೂ. 30 ಲಕ್ಷ ಮಂಜೂರು ಮಾಡಲಾಗಿದೆ. ಈ ವಾಹನವನ್ನು ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಮೂಲಕ ಖರೀದಿಸಲಾಗುವುದು ಎಂದು ತಿಳಿಸಿದರು.

ನಾಳೆಯಿಂದ ರಾಜ್ಯ ಮಟ್ಟದ ಯುವಜನೋತ್ಸವ

◆**ವಿಜಯಪುರ:** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವಕಾರ್ಯ ಮತ್ತು ಕ್ರೀಡಾ ಸಚಿವಾಲಯ, ಭಾರತ ಸರಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರಕಾರ, ಎನ್ ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯ, ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಮಟ್ಟದ ಯುವಜನೋತ್ಸವ–2026 ಕಾರ್ಯಕ್ರಮವನ್ನು ಮಾ.23ರಿಂದ 27ರ ವರೆಗೆ ಮಹಿಳಾ ವಿವಿಯಲ್ಲಿ ಆಯೋಜಿಸಲಾಗಿದೆ. ಮಾ.23ರಂದು ಮಾಜಿ ಶಾಸಕ ರಾಜು ಆಲಗೂರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಹಿಳಾ ವಿವಿಯ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ರಾಷ್ಟ್ರ ಪ್ರಶಸ್ತಿ ಪುರಸ್ಕೃತರ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಡಾ.ಜಾವಿದ್ ಜಮಾದಾರ, ಬೆಂಗಳೂರಿನ ರಾಷ್ಟ್ರೀಯ ಸೇವಾ ಯೋಜನಾ ಕೋಶ ದ ಪ್ರಾದೇಶಿಕ ನಿರ್ದೇಶಕ ಎಸ್.ಎಚ್.ಗಿರಿಧರ್ ಉಪಾಧ್ಯಾಯ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ್ ಪೋತದಾರ, ಕಾಂಗ್ರೆಸ್ ಮುಖಂಡ ಕೃಷ್ಣಾ ಕೆ.ಎಚ್, ರಾಷ್ಟ್ರೀಯ ಸೇವಾ ಯೋಜನಾ ಕೋಶದ ಯುವ ಅಧಿಕಾರಿ ಪಿ.ಎನ್.ಸಂತೋಷ ಹಾಗೂ ಸಿಂಡಿಕೇಟ್ ಮಾಜಿ ಸದಸ್ಯ ಆರ್.ಸಿ.ಪಾಟೀಲ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣವರ ಹಾಗೂ ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ ಉಪಸ್ಥಿತರಿರಲಿದ್ದಾರೆ. ಮಾ.27ರ ಸಮಾರೋಪದಲ್ಲಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತರ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಡಾ.ಜಾವಿದ ಜಮಾ ದಾರ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಬೆಂಗಳೂರಿನ ಎನ್ ಎಸ್‌ಎಸ್ ಪ್ರಾದೇಶಿಕ ಕೇಂದ್ರ, ಪ್ರಾದೇಶಿಕ ನಿರ್ದೇಶಕ ಎಸ್.ಎಚ್.ಗಿರಿಧರ್ ಉಪಾಧ್ಯಾಯ, ವಿಜಯಪುರ ಮಹಾನಗರ ಪಾಲಿಕೆಯ ಉಪಆಯುಕ್ತ ಮಹಾವೀರ ಬೊರಣ್ಣವರ ಹಾಗೂ ಸರಕಾರಿ ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ಲತಾ ಮ. ಬಿರಾದಾರ ಭಾಗವಹಿಸಲಿದ್ದಾರೆ. ವಿಶೇಷ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ. ಎಲ್.ಲಕ್ಕಣ್ಣವರ ಹಾಗೂ ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ ಉಪಸ್ಥಿತರಿರಲಿದ್ದಾರೆ ಎಂದು ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜಕ ಡಾ.ಪ್ರಕಾಶ ಸಣ್ಣಕ್ಕನವರ ಜಂಟಿಯಾಗಿ ತಿಳಿಸಿದ್ದಾರೆ.

ಬೃಹತ್ ಗಾತ್ರದ ಆಲಿಕಲ್ಲು ಮಳೆಗೆ ಬೆಳೆ ಹಾನಿ

◆**ಕಲಾದಗಿ:** ವ್ಯಾಪ್ತಿಯ ಕಳಸಕೊಪ್ಪ, ಶೆಲ್ಲಿಕೇರಿ, ತುಳಸಿಗೇರಿ, ಶಾರದಾಳ, ಖಜ್ಜಿಡೋಣಿಯಲ್ಲಿ ಸುರಿದ ಆಲಿಕಲ್ಲು ಮಳೆಗೆ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದ್ದು ದಾಳಿಂಬೆ, ಪೇರು, ಪಪ್ಪಾಯಿ, ಕಲ್ಲಂಗಡಿ ಹಣ್ಣಿನ ಗಿಡಗಳು ಮುರಿದು ಬಿದ್ದಿವೆ, ಇನ್ನೇನು ಮಾರಕಟ್ಟೆಗೆ ಕಳಿಸಲು ಸಿದ್ದವಾಗಿದ್ದ ಹಣ್ಣುಗಳು ಅಕಾಲಿಕ ಆಣೆಕಲ್ಲು ಮಳೆಗೆ ತುತ್ತಾಗಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಫಸಲು ರೈತರ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಇನ್ನು ಕಟಾವಿಗೆ ಬಂದಿದ್ದ ಗೋದಿ, ಜೋಳ, ಗೋವಿನ ಜೋಳದ ತೆನೆಗಳು ಮುರಿದ್ದು ಬಿದ್ದು ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ಆಲಿಕಲ್ಲು ಮಳೆಗೆ ಚಿಕ್ಕಶೆಲ್ಲಿಕೇರಿಯ ಹೊಲವೊಂದರಲ್ಲಿನ ದುಂಡಪ್ಪ ನಾಯ್ಕರ ಎನ್ನುವವರ 8 ಕುರಿಗಳು



ಆಲಿಕಲ್ಲು ಮಳೆಗೆ ಸಾವಿಗೀಡಾಗಿದ್ದು ಪರಿಹಾರಕ್ಕಾಗಿ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಕ್ರಮಕ್ಕೆ ಜೆಟಿಪಾ ಸೂಚನೆ: ಆಲಿಕಲ್ಲು ಮಳೆಯಿಂದ ಅಪಾರ ಪ್ರಮಾಣದ ಬೆಳೆಹಾನಿ ಆದ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಬುಧವಾರ ದೂರವಾಣಿ ಮೂಲಕ ಜಿಲ್ಲಾಧಿಕಾರಿ ಸಂಗಪ್ಪ ಅವರೊಂದಿಗೆ ಹಾಗೂ ತೋಟಗಾರಿಕೆ ಅಧಿಕಾರಿಗಳೊಂದಿಗೆ ಮಾತನಾಡಿದ ಶಾಸಕ ಜೆ.ಟಿ.ಪಾಟೀಲ ಅವರು ತತಕ್ಷಣ ಕ್ರಮಕ್ಕೆ ಮುಂದಾಗುವಂತೆ ಸೂಚನೆ ನೀಡಿದ್ದಾರೆ. ಪಶುಸಂಗೋಪನಾ ಇಲಾಖೆಯ ಜಿಲ್ಲಾ ಅಧಿಕಾರಿ ತಮ್ಮ ದೂರವಾಣಿ ಕರೆಯನ್ನು ಸ್ವೀಕರಿಸದೆ ಇದ್ದದ್ದಕ್ಕೆ ಅಸಹನೆಯನ್ನು ವ್ಯಕ್ತಮಾಡಿದ್ದಾರೆ. ಹಾನಿಗೊಳಗಾದ ರೈರಿಗೆ ಅಗತ್ಯ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದ ಅವರು ಆದಷ್ಟು ಬೇಗ ಈ ಪ್ರದೇಶಗಳಿಗೆ ಭೇಟಿ ನೀಡುವುದಾಗಿ ಹೇಳಿದ್ದಾರೆ.

ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ

◆**ಶಿರಸಿ:** ತಾಲೂಕಿನ ಕುಳವೆ ಗ್ರಾಪಂ ವ್ಯಾಪ್ತಿಯ ಟಿಪ್ಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮುಖ್ಯ ದ್ವಾರದಿಂದ ವಸತಿ ನಿಲಯದವರೆಗೆ ರಸ್ತೆ ಸುಧಾರಣೆಗೆ 20 ಲಕ್ಷ ರೂ. ಹಾಗೂ ಟಿಪ್ಪುನಗರ ರಸ್ತೆಯ ಸುಧಾರಣೆಗೆ 30 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಭೀಮಣ್ಣ ನಾಯ್ಕ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಶಿಕ್ಷಣ ಎಂಬುದು ಶ್ರೀಮಂತರ ಸ್ವತ್ತಲ್ಲ, ಎಲ್ಲ ವರ್ಗದವರಿಗೂ ಸಮಾನ ಶಿಕ್ಷಣ ದೊರೆತು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ. ಮೂಲಸೌಕರ್ಯ ಅಭಿವೃದ್ಧಿಯನ್ನು ಕ್ಷೇತ್ರದಲ್ಲಿ ಆದ್ಯತೆ ಮೇರೆಗೆ ಕೈಗೊಳ್ಳಲಾಗುತ್ತಿದ್ದು, ಟಿಪ್ಪುನಗರದಲ್ಲಿ ರಸ್ತೆ ಸುಧಾರಣೆಗೆ 50 ಲಕ್ಷ ರೂ. ಅನುದಾನ ಮಂಜೂರು ಮಾಡಲಾಗಿದೆ.



ಸರ್ಕಾರದ ಹಣ ಸರಿಯಾಗಿ ಸದುಪಯೋಗಪಡಿಸಿಕೊಂಡು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಚಿಸಿದ ಶಾಸಕರು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ಮಂಜೂರುಗೊಳಿಸುವ ಪ್ರಯತ್ನ ಮಾಡುತ್ತೇನೆ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪಾಧ್ಯಕ್ಷ ಎಸ್. ಎಂ.ಕಮನಳ್ಳಿ, ಸದಸ್ಯರಾದ ಎ.ಕೆ.ನಾಯ್ಕ, ನಂದಕುಮಾರ ಜೋಗಳೇಕರ, ಪ್ರತಿಭಾ ಭಟ್ಟ ಬೆಳಖಂಡ, ಸಿ.ಡಿ.ನಾಯ್ಕ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ಕುಳವೆ ಗ್ರಾಪಂ ಮಾಜಿ ಸದಸ್ಯರಾದ ಸಂದೇಶ ಭಟ್ಟ ಬೆಳಖಂಡ, ಶ್ರೀನಾಥ ಶೆಟ್ಟಿ, ಘಟಕಾಧ್ಯಕ್ಷ ಮಂಜುನಾಥ ಭಟ್ಟ ಬೆಳಖಂಡ, ಬೂತ್ ಅಧ್ಯಕ್ಷ ತಿಮ್ಮ ನಾಯ್ಕ ಮತ್ತಿತರರಿದ್ದರು.

ಕಣ್ಣಿನ ತಪಾಸಣೆ ಶಿಬಿರ ಯಶಸ್ವಿ

◆**ಕಲಬುರಗಿ:** ಧರಣಿ ಸೇವಾ ಸಂಸ್ಥೆಯ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಹಾಗೂ ಅಗತ್ಯವಿರುವವರಿಗೆ ಉಚಿತ ಕನ್ನಡಕ ವಿತರಣೆ ಕಾರ್ಯಕ್ರಮವನ್ನು ನಗರದ ಗಣೇಶ್ ಅವಿನ್ಯೂ, ಮೊದಲ ಮಹಡಿ, ರೈಲ್ವೆ ಸ್ಟೇಷನ್ ಪೋಸ್ಟ್ ಆಫೀಸ್ ಹತ್ತಿರ ಆಯೋಜಿಸಲಾಯಿತು. ಬುಧವಾರ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನಡೆದ ಈ ಶಿಬಿರದಲ್ಲಿ ಒಟ್ಟು 130 ಜನರು ಪ್ರಯೋಜನ ಪಡೆದರು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಡಾ. ಸುರೇಶ್ (ಕಣ್ಣಿನ ತಜ್ಞರು) ಭಾಗವಹಿಸಿದ್ದರು. ಅತಿಥಿಗಳಾಗಿ ಶೇಷಗಿರಿ ಜೋಶಿ (ವಕೀಲರು), ಟ್ಯಾಕ್ಸ್ ಪ್ರಾಕ್ಟೀಷನರ್ ರಮೇಶ್ ಮುಕರಾಂಬಿ, ಚಂದ್ರಶೇಖರ್ ಬೆಲ್ಲದ್ (ಸಿಎಪಿಎಫ್ ಜಿಲ್ಲಾ ಅಧ್ಯಕ್ಷರು ಕಲ್ಬುರ್ಗಿ) ಹಾಗೂ ಸಂಜೀವ್ ಪವಾರ್ (ಎನ್‌ಎಸ್‌ಜಿ ಕಮಾಂಡೋ ಬೆಂಗಳೂರು) ಉಪಸ್ಥಿತರಿದ್ದರು. ಧರಣಿ ಸೇವಾ ಸಂಸ್ಥೆಯ ಅಧ್ಯಕ್ಷರಾದ ಜ್ಯೋತಿ ಪಾಟೀಲ್ ಹಾಗೂ ಕಾರ್ಯದರ್ಶಿ ನಾರಾಯಣ ರಾಥೋಡ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಈ ಶಿಬಿರದ ಮೂಲಕ ಜನರಿಗೆ ಉಚಿತ ಕಣ್ಣಿನ ಪರೀಕ್ಷೆ ಹಾಗೂ ಅಗತ್ಯವಿರುವವರಿಗೆ ಕನ್ನಡಕ ವಿತರಣೆ ಮಾಡಲಾಗಿದ್ದು, ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.





ಕಿರುಸುದ್ದಿ

ಜೂನ್‌ನಲ್ಲಿ ಭಾರತದ ಐರ್ಲೆಂಡ್ ಪ್ರವಾಸ

ಮುಂಬೈ: ವಿಶ್ವಕಪ್ ಮುಡಿಗೇರಿಸಿಕೊಂಡಿರುವ ಭಾರತ ಟಿ20 ತಂಡವು ಜೂನ್‌ನಲ್ಲಿ ಎರಡು ಪಂದ್ಯಗಳ ಟಿ20 ಸರಣಿಗಾಗಿ ಐರ್ಲೆಂಡ್ ಪ್ರವಾಸ ಮಾಡಲಿದೆ. ಇತ್ತೀಚೆಗಷ್ಟೇ ಮುಕ್ತಾಯಗೊಂಡಿರುವ ವಿಶ್ವಕಪ್‌ನಲ್ಲಿ ಗೆಲುವು ಸಾಧಿಸಿರುವ ಸೂರ್ಯ ಪಡೆ ಸದ್ಯ ಐಪಿಎಲ್‌ನಲ್ಲಿ ವ್ಯಸ್ತವಾಗಿದೆ. ಐಪಿಎಲ್ ಮುಗಿದ ನಂತರ ಇಂಗ್ಲೆಂಡ್ ಪ್ರವಾಸವಿದ್ದು ಟೆಸ್ಟ್ ಪಂದ್ಯಗಳು ನಡೆಯಲಿವೆ. ಈ ಬಳಿಕ ಭಾರತ ಜೂನ್‌ನಲ್ಲಿ ಎರಡು ಪಂದ್ಯಗಳ ಸರಣಿಗಾಗಿ ಐರ್ಲೆಂಡ್‌ಗೆ ಹೋಗುವ ಬಗ್ಗೆ ಬಿಸಿಸಿಐ ಅಧಿಕೃತ ಪ್ರಕಟಣೆ ಹೊರಡಿಸಿದೆ. ಜೂನ್ 26ರಂದು ಬೆಲ್ಫಾಸ್ಟ್‌ನಲ್ಲಿ ಮೊದಲ ಟಿ20 ಪಂದ್ಯವನ್ನಾಡಲಿದೆ. 28ರಂದು ಎರಡನೇ ಪಂದ್ಯವಾಡಲಿದೆ. ಜೂನ್‌ವರೆಗೂ ಭಾರತ ಯಾವುದೇ ಟಿ20 ಪಂದ್ಯಗಳನ್ನಾಡುವುದಿಲ್ಲ, ಎಲ್ಲರೂ ಐಪಿಎಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ವಿಶ್ವ ಯು-20 ಅಥ್ಲೆಟಿಕ್ಸ್‌ಗೆ ಪಿಯುಶ್ ಆಯ್ಕೆ

ತಿರುವನಂತಪುರ: ವಿಶ್ವ ಯು-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 400 ಮೀ. ಓಟಕ್ಕಾಗಿ ಬಿಹಾರದ ಪಿಯುಶ್ ರಾಜ್ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ. ಶನಿವಾರ ದಂದು ತಿರುವನಂತಪುರದಲ್ಲಿ ನಡೆದಿರುವ ಇಂಡಿಯನ್ ಓಪನ್ 400 ಮೀ. ಮೀಟ್ ಕೂಟದಲ್ಲಿ ಚಿನ್ನದ ಪದಕ ಗೆದ್ದು ಮುಂಬರಲಿರುವ ಅಂತಾರಾಷ್ಟ್ರೀಯ ಕೂಟದಲ್ಲಿ ಉತ್ತಮ ಪ್ರದರ್ಶನ ನೀಡುವ ಭರವಸೆ ಮೂಡಿಸಿದ್ದಾರೆ. ಶನಿವಾರದ ಆ ಕೂಟದಲ್ಲಿ ಅತ್ಯಂತ ಪ್ರಬಲರಿದ್ದ ಸ್ಪರ್ಧೆಯಲ್ಲಿ ಅವರು ನಿರೀಕ್ಷಿತ ಪ್ರದರ್ಶನ ನೀಡಿದರು. 47.11 ಸೆಕೆಂಡುಗಳಲ್ಲಿ ಮಾತ್ರೇ 400 ಮೀ. ದೂರವನ್ನು ವೇಗವಾಗಿ ಕ್ರಮಿಸಿ ಗೆಲುವು ಸಾಧಿಸಿದರು. ಬೆಳ್ಳಿ ಪದಕ ಗೆದ್ದ ಉತ್ತರಾಖಂಡದ ಸಾಹಿಲ್ ಮಲಿಕ್ ಕೂಡ ತಮ್ಮ ದೂರದ ಕ್ರಮವನ್ನು ವೇಗದಲ್ಲಿ ಉತ್ತಮ ಪಡಿಸಿಕೊಮಡರು. ಅವರು 47.28 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಕೇರಳದ ಇಡ್ವಿನ್ ಮ್ಯಾಥೆವ್ 47.65 ಸೆಕೆಂಡುಗಳಲ್ಲಿ ಗುರಿ ತಲುಪಿ ಕಂಚಿನ ಪದಕ ಗಿಟ್ಟಿಸಿಕೊಂಡರು. 2026 ವಿಶ್ವ ಯು-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ಆಗಸ್ಟ್ 5ರಿಂದ 9ರವರೆಗೆ ನಡೆಯಲಿದೆ.

ಕ್ವಾರ್ಟರ್-ಮೈಲರ್ ಸ್ನೇಹ್‌ಗೆ ನಿಷೇಧ ಬಿಸಿ

ಹೊಸದಿಲ್ಲಿ: ಭಾರತದ ಕ್ವಾರ್ಟರ್ ಮೈಲರ್ ಸ್ನೇಹ ಕೊಳ್ಳೇರಿ ಅವರಿಗೆ ಡೋಪಿಂಗ್ ಪ್ರಕರಣದಲ್ಲಿ ಮೂರು ವರ್ಷಗಳ ನಿಷೇಧ ವಿಧಿಸಲಾಗಿದೆ. ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಶಿಪ್ ತಂಡದಿಂದ ಡೋಪ್ ಪರೀಕ್ಷೆಯಲ್ಲಿ ವಿಫಲವಾದ ಕಾರಣ ಹೊರಗಿಡಲಾಗಿದ್ದ 26 ವರ್ಷದ ಕೊಚ್ಚಿ ಮೂಲದ ಆಟಗಾರ್ತಿಗೆ ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ ಮೂರು ವರ್ಷದ ನಿಷೇಧ ಹೇರಿದೆ. ಮಾಲಿನ್ಯಗೊಂಡ ಪೂರಕ ಆಹಾರದಿಂದ ಪರೀಕ್ಷಾ ಫಲಿತಾಂಶ ತಪ್ಪಾಗಿದೆ ಎಂಬ ಅವರ ವಾದವನ್ನು ಯೂನಿಟ್ ತಳ್ಳಿಹಾಕಿದೆ. ಇದಲ್ಲದೆ, ಚಂಡೀಗಢದಲ್ಲಿ ಸಂಗ್ರಹಿಸಲಾಗಿದ್ದ ಮಾದರಿಯ ಮರುಪರಿಶೀಲನೆ ವೇಳೆ, ದಿಲ್ಲಿಯಲ್ಲಿ ನಡೆದ ಪರೀಕ್ಷೆಯಲ್ಲಿ ನೆಗೆಟಿವ್ ಬಂದಿದ್ದರೂ, ನಂತರ ಅದು ನಿಷೇಧಿತ ಅನಾಬಾಲಿಕ್ ಸ್ಟೆರಾಯ್ಡ್ ಸ್ಟಾನೋಜೋಲಾಲ್ ಇರುವುದಾಗಿ ಪತ್ತೆಯಾಯಿತು. ಇದರಿಂದಾಗಿ ತಾತ್ಕಾಲಿಕ ಅಮಾನತು ಅವಧಿಯಲ್ಲೇ ಅವರ ವಿರುದ್ಧ ಮತ್ತೊಂದು ಡೋಪಿಂಗ್ ಆರೋಪವೂ ಸೇರಿಸಲಾಯಿತು. ಸ್ನೇಹ ಕೊಳ್ಳೇರಿ ಮೇ 10ರಂದು ಚೀನಾದ ಗ್ವಾಂಗ್‌ಜೌನಲ್ಲಿ ಸ್ಪರ್ಧೆಯ ವೇಳೆ ಪರೀಕ್ಷೆಗೆ ಒಳಪಟ್ಟಿದ್ದರು. ಭಾರತದಲ್ಲಿ ನಡೆದ ಹಲವು ಪರೀಕ್ಷೆಗಳಲ್ಲಿ ನೆಗೆಟಿವ್ ಫಲಿತಾಂಶ ಬಂದಿದ್ದರೂ, ಈ ಪರೀಕ್ಷೆಯಲ್ಲಿ ಸ್ಟಾನೋಜೋಲಾಲ್ ಪಾಸಿಟಿವ್ ಕಂಡುಬಂದಿತ್ತು. ಅಮಾನತು ಅವಧಿಯಲ್ಲಿ ಸ್ನೇಹ ಅವರು ಯಾವುದೇ ತಪ್ಪು ಮಾಡಿಲ್ಲ ಎಂದು ನಿರಾಕರಿಸಿದ್ದರು.



ಮಾರ್ಚ್ 28ಕ್ಕೆ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೂ ಮುನ್ನ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲಿಕ ಸಂಜೀವ್ ಗೋಯೆಂಕಾ, ನಾಯಕ ರಿಷಭ್ ಪಂತ್, ವೇಗಿ ಪ್ರಿನ್ಸ್ ಯಾದವ್ ಸೇರಿದಂತೆ ವಿವಿಧ ಆಟಗಾರರು ಅಯೋಧ್ಯೆಯ ರಾಮಲಲಾ ದರ್ಶನ ಪಡೆದರು.

ಬೆಂಗಳೂರಿನ ಥನುಷ್-ಧನುಷ್ ಏಷ್ಯಾ ಆಯ್ಕೆ

ಕಿರಿಯರ ಟೆನಿಸ್: ಭಾರತ ತಂಡದಲ್ಲಿ 2 ಕನ್ನಡಿಗರು

ಬೆಂಗಳೂರು: ಕನ್ನಡಿಗರಾದ 2ನೇ ಶ್ರೇಯಾಂಕಿತ ಥನುಷ್ ಶೇಖರ್ ಬಿ.ಸಿ. ಮತ್ತು ಮೂರನೇ ಶ್ರೇಯಾಂಕದ ಧನುಷ್ ಎಸ್.ಎಮ್ ಏಪ್ರಿಲ್ 13ರಿಂದ 17ರವರೆಗೆ ನೇಪಾಳದಲ್ಲಿ ನಡೆಯಲಿರುವ ಏಷ್ಯಾ ಅಂಡರ್-12 ಮತ್ತು ಅಂಡರ್ ಟೀಮ್ ಸ್ಪರ್ಧೆಗಳಲ್ಲಿ ಆಯ್ಕೆಯಾಗಿದ್ದಾರೆ. ಕರ್ನಾಟಕದ ಟೆನಿಸ್ ಪಟುಗಳು ವಿಶ್ವಾದ್ಯಂತ ಸದ್ದು ಮಾಡುತ್ತಿರುವುದು ಗೋಚರಿಸಿದೆ. ಮುಂದಿನ ತಿಂಗಳು ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಈ ಕೂಟದಲ್ಲಿ ಭಾರತದಿಂದ ಮೂರೇ ಜನರು ಆಯ್ಕೆಯಾಗಿದ್ದಾರೆ. ಅದರಲ್ಲೂ ಇಬ್ಬರು ಕನ್ನಡಿಗರು ಇದರಲ್ಲಿರುವುದು ಕರ್ನಾಟಕದ ಪಾರುಪತ್ಯ ಎತ್ತಿಹಿಡಿಯುತ್ತದೆ.

ಅಂಡರ್-12 ವಿಭಾಗದ ನಂಬರ್-1 ಸ್ಥಾನದಲ್ಲಿರುವ ರಿಯಾನ್ ಅತುಲ್ ನಂದನಕರ್ ಅವರು ಆಯ್ಕೆಯಾದವರಲ್ಲಿದ್ದಾರೆ. ಏಷ್ಯಾದ ಚಾಂಪಿಯನ್‌ಶಿಪ್ ಅನ್ನಿಸಿಕೊಳ್ಳುವ ಈ ಕೂಟಕ್ಕಾಗಿ ಅಗ್ರ ಶ್ರೇಯಾಂಕ ಹೊಂದ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ. ಸದ್ಯ ಮೊದಲ ಮೂರು ಸ್ಥಾನಗಳಲ್ಲಿರುವ ಕನ್ನಡಿಗರಿಬ್ಬರೂ ಇದರಲ್ಲಿ ಆಯ್ಕೆಯಾಗಿದ್ದಾರೆ.

ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆ(ಐಟಿಎಫ್) ಮತ್ತು ಏಷ್ಯನ್ ಟೆನಿಸ್ ಸಂಸ್ಥೆ(ಎಟಿಎಫ್) ಮಾನ್ಯತೆಯೊಂದಿಗೆ ಭವಿಷ್ಯದ ಸ್ಟಾರ್‌ಗಳಿಗೆ ಪ್ರೋತ್ಸಾಹದ ರೂಪವಾಗಿ ಈ ಕೂಟವನ್ನು ಆಯೋಜಿಸಲಾಗುತ್ತದೆ. ಇದರಲ್ಲಿ 12 ವಯೋಮಿತಿ ಒಳಗಿನವರೇ ಇರುತ್ತಾರೆ. ಮಾದರಿಗೆ ಬಂದರೆ ಪಂದ್ಯವನ್ನು ನಿರ್ಧರಿಸುವಲ್ಲಿ ಮೂವರೂ ಆಟಗಾರರು ತಂಡವಾಗಿ ಆಟಬೇಕಾಗುತ್ತದೆ. ಅಂದರೆ ತಂಡದ ಪಂದ್ಯಾವಳಿ ಇದಾಗಿದೆ. ಎದುರಾಗುವ ಎರಡೂ ತಂಡಗಳಿಂದಲೂ ಇಬ್ಬರು ಸಿಂಗಲ್ಸ್ ಪಂದ್ಯಗಳನ್ನಾಡಿದರೆ, ಒಂದು ಡಬಲ್ಸ್ ಪಂದ್ಯ ಕೂಡ ಮೂವರಲ್ಲಿ ಇಬ್ಬರು ಆಡಬೇಕಾಗುತ್ತದೆ. ಹೆಚ್ಚಿನ ಪಂದ್ಯ ಗೆಲ್ಲುವ ತಂಡ ವಿಜೇತವಾಗುತ್ತದೆ. ದಕ್ಷಿಣ ಏಷ್ಯಾದ ಕ್ವಾಲಿಫೈ ಆಗುವ ತಂಡಗಳು ವರ್ಷಾಂತ್ಯದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಅಂಡರ್-12 ಮತ್ತು ಅಂಡರ್ ಟೀಮ್ ಚಾಂಪಿಯನ್‌ಶಿಪ್ ಫೈನಲ್‌ಗೆ ಅರ್ಹತೆ ಪಡೆಯುತ್ತವೆ.





> ಥನುಷ್ ಮತ್ತು ಧನುಷ್ ಅವರಿಗೆ ಈ ದೊಡ್ಡ ಸಾಧನೆಗಾಗಿ ಅಭಿನಂದನೆಗಳು. ಕರ್ನಾಟಕದ ಯುವ ಆಟಗಾರರು ದೇಶವನ್ನು ಪ್ರತಿನಿಧಿಸುತ್ತಿರುವುದು ವಿಶೇಷ. ಇಂತಹ ಪಂದ್ಯಾವಳಿಗಳಲ್ಲಿ ಭಾಗವಹಿಸುವುದರಿಂದ ಆಟಗಾರರಿಗೆ ಭರವಸೆ ಮೂಡುತ್ತದೆ. ಸಿನಿಯರ್ ಮಟ್ಟದಲ್ಲಿ ಮಿಂಚಲು ಅನುವು ಮಾಡಿಕೊಡುತ್ತದೆ.
> ■ ಸುನಿಲ್ ಯಜಮಾನ, ಜಂಟಿ ಕಾರ್ಯದರ್ಶಿ ಕೆಎಸ್‌ಎಲ್‌ಟಿಎ

ಕೋಲ್ಕತ್ತಾ ನೈಟ್ ರೈಡರ್ಸ್ ಪಡೆಗೆ ಭಾರೀ ಪೆಟ್ಟು

ಆಟಗಾರರು ಅಲಭ್ಯ ತಂಡಗಳಿಗೆ ಗಾಯ





ಕೋಲ್ಕತ್ತಾ: ಹರಾಜಿನಲ್ಲಿ ಗುಣಮಟ್ಟದ ಪಸ್‌ನೊಂದಿಗೆ ವಿವಿಧ ಬಲಿಷ್ಠ ವೇಗಿಗಳನ್ನು ಆಯ್ಕೆ ಮಾಡಿಕೊಂಡಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಕ್ಕೆ ಆಟಗಾರರ ಅಲಭ್ಯತೆ ಭಾರೀ ಹಿನ್ನಡೆ ತರುತ್ತಿದೆ.

ಗಾಯಗೊಂಡು ಪಂದ್ಯಾವಳಿಯಿಂದ ಹೊರಬೀಳುತ್ತಿರುವ ಆಟಗಾರರ ಸಂಖ್ಯೆ ಹೆಚ್ಚಾಗುತ್ತಿದೆ. ಕೆಕೆಆರ್ ತಂಡಕ್ಕೆ ಇದು ದೊಡ್ಡ ಆಘಾತ ನೀಡಿದೆ. ಆಕಾಶ್ ದೀಪ್ ಅವರ ಅಲಭ್ಯತೆ ಕೆಕೆಆರ್ ತಂಡಕ್ಕೆ ತೀರಾ ಆಘಾತ ನೀಡಿದೆ. ಹರ್ಷಿತ್ ರಾಣಾ, ಮಥೀಶಾ ಪಥಿರಾಣ ಪಂದ್ಯಾವಳಿಯಿಂದ ಆಗಲೆ ಹೊರಬಿದ್ದಿದ್ದಾರೆ. ಇದೀಗ ಮತ್ತೊಬ್ಬ ವೇಗಿ ಆಕಾಶ್‌ದೀಪ್ ಕೂಡ ಹಿನ್ನಡೆ ಅನುಭವಿಸಿದ್ದು, ತಂಡದ ವೇಗ ವಿಭಾಗದ ಮೇಲೆ ಪರಿಣಾಮಕಾರಿ ಪೆಟ್ಟು ಬಿದ್ದಂತಿದೆ.

ಪಂದ್ಯಾವಳಿಯಿಂದ ತಂಡದ ಮೂರನೇ ವೇಗಿ ಔಟ್

ಬಂಗಾಳದ ಆಕಾಶ್‌ದೀಪ್ ಈ ಹಿಂದೆ ನಡೆದಿದ್ದ ರಣಜಿ ಪಂದ್ಯಾವಳಿಯ ವೇಳೆ ಗಾಯಗೊಂಡಿದ್ದರು. ಹಲವು ದಿನಗಳಿಂದ ಚೇತರಿಕಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದ ಅವರು, ಸದ್ಯ ಬೆಂಗಳೂರಿನ ಶ್ರೇಷ್ಠತಾ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತಿದ್ದಾರೆಂದು ವರದಿಯಾಗಿದೆ. ಆದಾಗ್ಯೂ ಮೂಲಗಳ ಪ್ರಕಾರ ಅವರು ಇನ್ನೂ ಫಿಟ್ ಆಗಬೇಕಿರುವದಿರಂದ ಪಂದ್ಯಾವಳಿಯಿಂದ ಹೊರಬೀಳುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ.

ಅಭಿಷೇಕ್ ನಾಯರ್ ಈ ಬಗ್ಗೆ ಮಾತನಾಡಿದ್ದು, ಈ ವರೆಗೆ ಮೂವರು ಹೊರಬಿದ್ದಿದ್ದಾರೆ. ಇವರ ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕಿದೆ ಎಂದು ಸುಳಿವು ನೀಡಿದ್ದಾರೆ.

ವೇಗದ ವಿಭಾಗದಲ್ಲಿ ಈಗಾಗಲೇ ರೆಹಮಾನ್, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಹೊರಬಿದ್ದಿದ್ದಾರೆ. ಇವರ ಬದಲಿಗೆ ಬಿಕರಿಯಾಗದ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಫ್ರಾಂಚೈಸಿ ಮುಂದಾಗಬಹುದು.

ಅಭ್ಯಾಸಕ್ಕೆ ಬಾರದ ಆರ್‌ಸಿಬಿ ವೇಗಿ ದಯಾಳ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪ್ರಮುಖ ವೇಗಿ ಯಶ್ ದಯಾಳ್ ಅಭ್ಯಾಸಕ್ಕೆ ಹಾಜರಾಗಿಲ್ಲ. ಮುಂದಿನ ವಾರ ಬೆಂಗಳೂರಿನಲ್ಲೇ ನಡೆಯಲಿರುವ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಬೆಂಗಳೂರು ಮತ್ತು ಹೈದರಾಬಾದ್ ತಂಡಗಳು ಎದುರಾಗಲಿವೆ. ಇಂಡಿಯನ್ ಪ್ರೀಮಿಯರ್ ಲೀಗ್ ಹತ್ತಿರ ಬರುತ್ತಿದ್ದಂತೆ ಎಲ್ಲಾ ತಂಡದ ಆಟಗಾರರು ತಮ್ಮ ತಮ್ಮ ಕ್ಯಾಂಪ್‌ಗಳಿಗೆ ಸೇರಿಕೊಂಡಿದ್ದಾರೆ. ಅಭ್ಯಾಸ ಜೋರಾಗಿದೆ. ಇತ್ತ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲೂ ಅಭ್ಯಾಸದ ಕಹಳೆ ಜೋರಾಗಿದೆ. ಹಾಲಿ ಚಾಂಪಿಯನ್ ಆರ್‌ಸಿಬಿ ತಂಡದ ಎಲ್ಲಾ ಆಟಗಾರರು ಮೈದಾನ ಸೇರಿಕೊಂಡಿದ್ದಾರೆ. ಆದರೆ ಕಳೆದ ಬಾರಿ ಪ್ರಮುಖ ಪಾತ್ರ ವಹಿಸಿದ್ದ ಯಶ್ ದಯಾಳ್ ಮಾತ್ರ ಶುಕ್ರವಾರದ ಅಭ್ಯಾಸದ ವೇಳೆ ಕಾಣಿಸಿಕೊಂಡಿಲ್ಲ. ಲೈಂಗಿಕ ದೌರ್ಜನ್ಯದ ಪ್ರಕರಣವನ್ನು ಎದುರಿಸುತ್ತಿರುವ ಅವರು, ಎರಡು ಕೇಸುಗಳಿಂದ ಇನ್ನೂ ಸಂಪೂರ್ಣವಾಗಿ ಮುಕ್ತಾಗಬೇಕಿದೆ. ಇದಲ್ಲದೆ ಇತ್ತೀಚೆಗಷ್ಟೇ ದಯಾಳ್ ಮದುವೆ ಮಾಡಿಕೊಂಡಿದ್ದಾರೆ. ಈ ಮಧ್ಯೆ ತಂಡದಲ್ಲಿ ಕಾಣಿಸಿಕೊಳ್ಳದಿರುವುದು ಆರ್‌ಸಿಬಿ ಅಭಿಮಾನಿಗಳಲ್ಲಿ ನಿಗೂಢ ಪ್ರಶ್ನೆಯೊಂದನ್ನಿಟ್ಟಿದೆ. ಇದಲ್ಲದೆ, ಬೆಂಗಳೂರಿನ ಆಟಗಾರರನ್ನು ಸ್ಥಳಾಂತರಿಸುವ ಬಸ್ ಮೇಲೆ ಎಲ್ಲಾ ಆಟಗಾರರ ಚಿತ್ರವಿದ್ದರೂ ಯಶ್ ದಯಾಳ್ ಅವರ ಚಿತ್ರ ಇಲ್ಲದಿರುವ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

ಲಂಕಾ ಕ್ರಿಕೆಟಿಗರ ಫಿಟ್ನೆಸ್ ಟೆಸ್ಟ್

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ತನ್ನ ದೇಶದ ಆಟಗಾರರಿಗೆ ನಿರಾಕ್ಷೇಪಣಾ ಪತ್ರ ನೀಡುವ ಮೊದಲು ಕೆಲವು ಆಟಗಾರರಿಗೆ ಫಿಟ್ನೆಸ್ ಪರೀಕ್ಷೆಗೆ ಒಳಗಾಗಿಸಲಿದೆ. ಕೆಕೆಆರ್ ತಂಡಕ್ಕೆ ಆಯ್ಕೆಯಾಗಿರುವ ಮತೀಶ ಪಥಿರಾಣ, ಲಖನೌ ತಂಡದ ವನಿಂದು ಹಸ್ರಂಗಾ, ಹೈದರಾಬಾದ್‌ನ ಈಶಾನ್ ಮಾಲಿಂಗಾ ಮತ್ತು ಬೆಂಗಳೂರು ತಂಡದ ತುಷಾರಾ ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಸೋಮವಾರ ಮತ್ತು ಮಂಗಳವಾರದಂದು ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ವಿವಿಧ ಆಟಗಾರರ ಫಿಟ್ನೆಸ್ ಪರೀಕ್ಷೆ ತೆಗೆದುಕೊಳ್ಳಲಿದೆ. ಮೇಲಿನ ಆಟಗಾರರೆಲ್ಲರೂ ಇದರಲ್ಲಿ ಭಾಗಿಯಾಗಲಿದ್ದಾರೆ. ಚಮೀರಾ, ನಿಸ್ಸಂಕಾ ಮತ್ತು ಮೆಂಡೀಸ್ ಮಾತ್ರ ಈಗಾಗಲೇ ಫಿಟ್ನೆಸ್ ಪ್ರಮಾಣ ಪಡೆದುಕೊಂಡಿದ್ದಾರೆ. ಅವರಿಗೆ ಸಂಸ್ಥೆ ನಿರಾಕ್ಷೇಪಣಾ ಪತ್ರ ಕೂಡ ನೀಡಿದೆ.

ವಿಂಬಲ್ಡನ್‌ಗೂ ಬಂತು ಡಿಆರ್‌ಎಸ್ ವ್ಯವಸ್ಥೆ!

ಲಂಡನ್: ಅಂಪೈರ್‌ಗಳ ನಿರ್ಣಯವನ್ನು ಮರುಪರಿಶೀಲನೆ ಮಾಡುವ ವಿಡಿಯೋ ರಿವೀವ್ ವ್ಯವಸ್ಥೆ ಇದೀಗ ಟೆನಿಸ್‌ಗೂ ಬಂದಿದೆ. ಇದೇ ಮೊದಲ ಬಾರಿಗೆ ಈ ವರ್ಷದ ವಿಂಬಲ್ಡನ್ ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಗೆ ಕ್ಯಾಮರಾ ರಿವೀವ್ ಇರುವುದಾಗಿ ಸಂಸ್ಥೆ ಶನಿವಾರ ತಿಳಿಸಿದೆ.

ಇಂಗ್ಲೆಂಡ್‌ನಲ್ಲಿ ನಡೆಯುವ ದೊಡ್ಡ ಗ್ರ್ಯಾಂಡ್‌ಸ್ಲಾಮ್ ಅನ್ನಿಸುವ ವಿಂಬಲ್ಡನ್‌ನಲ್ಲಿ ಇಷ್ಟು ವರ್ಷ ಚೇರ್ ಅಂಪೈರ್ ನೀಡುವ ನಿರ್ಧಾರವೇ ಅಂತಿಮವಾಗಿತ್ತು. ಆದರೆ ಮೊದಲ ಬಾರಿಗೆ ಅಂಪೈರ್‌ಗಳ ನಿರ್ಣಯವನ್ನು ಪ್ರಶ್ನಿಸುವ ಅಧಿಕಾರ ಆಟಗಾರರಿಗೆ ನೀಡಲಾಗಿದೆ. ಇದಕ್ಕೆ ಎಲೆಕ್ಟ್ರಾನಿಕ್ ಲೈನ್ ಕಾಲಿಂಗ್ ಎಂಬ ಹೆಸರನ್ನಿಡಲಾಗಿದೆ. ಎರಡು ಬಾರಿ ಬಾಲು ನೆಲಕ್ಕೆ ಪುಟದಿರುವ ವಿಚಾರ, ಆಟಗಾರರಿಗೆ ತಾಗಿದ ವಿಚಾರವನ್ನು ಮರುಪರಿಶೀಲನೆ ನಡೆಸುವ ಹಂತಕ್ಕೇರಬಹುವುದು.

ಆಟಗಾರರು ಪಾಯಿಂಟ್-ಎಂಡಿಂಗ್ ಕರೆಯ ಸಮಯದಲ್ಲಿ, ಆಟಗಾರನು ತಕ್ಷಣವೇ ಆಟವನ್ನು ನಿಲ್ಲಿಸಿದಾಗ ಅಥವಾ ಪಾಯಿಂಟ್ ಪೂರ್ಣಗೊಂಡ ತಕ್ಷಣ (ಅಡೆತಡೆಯ ಸಂದರ್ಭದಲ್ಲಿ) ಚೇರ್ ಅಂಪೈರ್ ಮಾಡಿದ ನಿರ್ದಿಷ್ಟ ತೀರ್ಪಿನ ಕರೆಗಳನ್ನು (ಉದಾಹರಣೆಗೆ, 'ನಾಟ್-ಅಪ್', 'ಫೌಲ್ ಶಾಟ್', 'ಟಚ್') ಪರಿಶೀಲಿಸಲು ಅನುಮತಿಸಲಾಗುತ್ತದೆ, ಎಂದು ಆಲ್ ಇಂಗ್ಲೆಂಡ್ ಲಾನ್ ಟೆನಿಸ್ ಮತ್ತು ಕ್ರೋಕೆಟ್ ಕ್ಲಬ್ ಹೇಳಿಕೆಯಲ್ಲಿ ತಿಳಿಸಿದೆ.

ಮಾ.24ರಿಂದ ರಾಷ್ಟ್ರ ಮಟ್ಟದ ಪವರ್ ಲಿಫ್ಟಿಂಗ್

ಮಂಗಳೂರು: ಕರ್ನಾಟಕ ಪವರ್ ಲಿಫ್ಟಿಂಗ್ ಅಸೋಸಿಯೇಶನ್ ಆಶ್ರಯದಲ್ಲಿ, ಕಶಾರ್ಪ್ ಫಿಟ್ನೆಸ್ ವತಿಯಿಂದ ರಾಷ್ಟ್ರಮಟ್ಟದ ಸೀನಿಯರ್ ಕ್ಲಾಸಿಕ್ ಪವರ್ ಲಿಫ್ಟಿಂಗ್ ಚಾಂಪಿಯನ್‌ಶಿಪ್ ಮಾ.24ರಿಂದ 28ರವರೆಗೆ ಮಂಗಳೂರಿನ ಟಿ.ವಿ.ರಮಣ ಪೈ ಸಭಾಂಗಣದಲ್ಲಿ ನಡೆಯಲಿದೆ.

ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದಪದಕ ವಿಜೇತರು ಲಿಥುವೇನಿಯಾದಲ್ಲಿ ಜೂನ್‌ನಲ್ಲಿ ನಡೆಯಲಿರುವ ವಿಶ್ವ ಪವರ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಲಿದ್ದಾರೆ. ಸ್ಪರ್ಧೆಯಲ್ಲಿ ಸ್ಕ್ವಾಟ್, ಬೆಂಚ್‌ಪ್ರೆಸ್ ಮತ್ತು ಡೆಡ್‌ಲಿಫ್ಟ್ ವಿಭಾಗಗಳಿದ್ದು, ಮಾ.24ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದೆ ಎಂದು ಚಾಂಪಿಯನ್‌ಶಿಪ್‌ನ ನಿರ್ದೇಶಕ ಸತೀಶ್ ಕುಮಾರ್ ಕುದ್ರೋಳಿ ತಿಳಿಸಿದ್ದಾರೆ.



5 ದಿನಗಳ ಈ ಚಾಂಪಿಯನ್‌ಶಿಪ್‌ನಲ್ಲಿ ವಿವಿಧ ರಾಜ್ಯಗಳ 300ಕ್ಕೂ ಅಧಿಕ ಪುರುಷ ಹಾಗೂ ಮಹಿಳಾ ಪವರ್ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಮಾನದಂಡಗಳಡಿ ಈ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದ್ದು, ಎಲ್ಲಾ ರೀತಿಯ ಸೌಲಭ್ಯಗಳನ್ನು ಸಂಸ್ಥೆ ವತಿಯಿಂದ ಒದಗಿಸಲಾಗುವುದು ಎಂದು ಕಶಾರ್ಪ್ ಫಿಟ್ನೆಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕುಮಾರ್ ತಿಳಿಸಿದರು.ಬೇರೆ ಕ್ರೀಡೆಗಳಿಗೆ ಹೋಲಿಸಿದರೆ ಪವರ್ ಲಿಫ್ಟಿಂಗ್ ಭಾರತದಲ್ಲಿ ಅಧಿಕ ಪದಕಗಳನ್ನು ತರುವ ಕ್ರೀಡೆಯಾಗಿದೆ. ಈ ಕ್ರೀಡೆಗೆ ಇನ್ನಷ್ಟು ಬೆಂಬಲದ ಅಗತ್ಯವಿದೆ ಎಂದು ಅವರು ಹೇಳಿದರು.

ಸವಾಲುಗಳನ್ನೆದುರಿಸಲು ಸಜ್ಜು: ಕೊಹ್ಲಿ | ಹೊಸಬರಿಗೆ ಸ್ವಾಗತ

ಕಪ್ ಉಳಿಸಿಕೊಳ್ಳಲು ಸನ್ನದ್ಧ

ಬೆಂಗಳೂರು: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಟ್ರೋಫಿ ಉಳಿಸಿಕೊಳ್ಳಲು ಸಜ್ಜಾಗಿದೆ. ಶಿಸ್ತು ಬದ್ಧ ಅಭ್ಯಾಸ ಆರಂಭಿಸಿರುವ ತಂಡವು ವಿಶೇಷ ಸೆಷನ್‌ಗಳನ್ನು ನಡೆಸಿತು.

ನಾವು ಟ್ರೋಫಿ ಉಳಿಸಿಕೊಳ್ಳಲು ಪಡಬೇಕಾದ ಶ್ರಮವನ್ನು ಪಟ್ಟಿದ್ದೇವೆ. ಕಳೆದ ಎರಡು-ಮೂರು ದಿನಗಳಲ್ಲಿ ನಾವು ಹೆಚ್ಚಿನ ಅಭ್ಯಸವನ್ನೂ ಮಾಡಿದ್ದೇವೆ, ಕಳೆದ ಬಾರಿ ಮಾಡಿದ ಸಾಧನೆ ಮತ್ತೊಮ್ಮೆ ಮಾಡಲು ನಾವು ಸಿದ್ಧವಾಗಿದ್ದೇವೆ ಎಂದು ಅಭ್ಯಾಸದ ವೇಳೆ ತಂಡದೊಂದಿಗೆ ಮಾತನಾಡುತ್ತಾ ವಿರಾಟ್ ಕೊಹ್ಲಿ ಹೇಳಿದರು. ಟ್ರೋಫಿ ಸಾಧಿಸುವುದಕ್ಕೆ ಕೇವಲ ಸಾಮಾನ್ಯ ಅಭ್ಯಾಸ ಮಾಡಿದರೆ ಸಾಲದು. ನಾವು ಗುಣಮಟ್ಟದ ಅಭ್ಯಾಸ ಮಾಡಬೇಕಿದೆ, ಒಂದೇ ಒಂದು ಕ್ಷಣವನ್ನೂ ನಾವು ಸುಮ್ಮನಿರಲಾಗಲ್ಲ, ಕಪ್‌ಗಾಗಿ ನಾವು ನಮ್ಮ 120 ರಷ್ಟು ಶ್ರಮವನ್ನು ಪಡಬೇಕು ಎಂದು ಹೇಳಿದ್ದಾರೆ.

ಹೊಸ ಆಟಗಾರರಿಗೆ ಸ್ವಾಗತ:

ಇದೇ ಮೊದಲ ಬಾರಿಗೆ ತಂಡ ಸೇರಿಕೊಂಡ ಆಟಗಾರರನ್ನು ಪ್ರಮುಖ ಕೋಚ್ ಆ್ಯಂಡಿ ಫ್ಲಾವರ್ ಸ್ವಾಗತಿಸಿದರು. ವೆಂಕಟೇಶ್ ಅಯ್ಯರ್, ಮಂಗೇಶ್ ಯಾದವ್, ಜಾರ್ಡನ್ ಕಾಕ್ಸ್, ವಿಕಿ ಓಸ್ತವಾಲ್, ಸಾತ್ವಿಕ್ ದೇಶ್ವಾಲ್, ಮತ್ತು ವಿಶೇಷವಾಗಿ ಅಂಡರ್-19 ತಂಡದಲ್ಲಿ ಗಮನ ಸೆಳೆದಿರುವ ಕನಿಷ್ಕ್ ಚೌಹಾಣ್ ಮತ್ತು ವಿಹಾನ್ ಮಲಹೋತ್ರಾ ಅವರನ್ನು ಉದ್ದೇಶಿಸಿ ಮಾತನಾಡಿದ ಆ್ಯಂಡಿ, ನಾವು ಹರಾಜಿನಲ್ಲಿ ಅತ್ಯುತ್ತಮ ಆಟಗಾರರನ್ನು ಖರೀದಿಸಿದ್ದೇವೆ. ಕಳೆದ ಬಾರಿಯ ತಂಡವನ್ನು ಇನ್ನಷ್ಟು ಬಲಿಷ್ಠಗೊಳಿಸಿದ್ದೇವೆ. ಮುಖ್ಯವಾಗಿ ಯುವ ಆಟಗಾರರನ್ನು ಒಗ್ಗೂಡಿಸಿದ್ದೇವೆ. ವಿರಾಟ್ ಕೊಹ್ಲಿ ಮತ್ತು ರಜತ್ ಪಾಟಿದಾರ್ ಅವರ ನಾಯಕತ್ವದಲ್ಲಿ ಅವರಿಗೆ ಸ್ವಾಗತಿಸುತ್ತೇನೆ ಎಂದರು.

> ಎಲ್ಲರೂ ಒಬ್ಬರಿಗೊಬ್ಬರನ್ನು ಭೇಟಿ ಮಾಡಲು ಉತ್ಸುಕರಾಗಿದ್ದೆವು. ಹೊಸ ಮುಖಗಳನ್ನು ನಾವು ತಂಡದಲ್ಲಿ ಸ್ವಾಗತಿಸುತ್ತೇವೆ, ನಾನು ವೈಯಕ್ತಿಕವಾಗಿ ನೆಟ್ಸ್‌ನಲ್ಲಿ ಆಡಲು ಉತ್ಸುಕನಾಗಿದ್ದೆ. ನನಗೆ ಹೆಚ್ಚಿನ ಬ್ಯಾಟಿಂಗ್ ಸಿಗಲಿದೆ. ನೆಟ್ಸ್‌ನಲ್ಲಿ ಕೋಚ್‌ಗಳ ಮಧ್ಯೆ ಹೊಸ ಕಲಿಕೆ ಸಿಗಲಿದೆ.
> ■ ಜಿತೇಶ್ ಶರ್ಮ, ವಿಕೆಟ್ ಕೀಪರ್-ಬ್ಯಾಟರ್



ಈ ವರ್ಷ ಆಟವೇ ಬೇರೆಯದ್ದು. ಹೊಸ ಆಟಗಾರರನ್ನು ಹೊಂದಿರುವುದು ಸಮಸ್ತ ಆರ್‌ಸಿಬಿ ಅಭಿಮಾನಿಗಳಿಗೆ ಹೆಮ್ಮೆ ತಂದಿದೆ. ಕಪ್ ಕೂಡ ನಮ್ಮದಾಗಿಸಿಕೊಂಡಿದ್ದೇವೆ. ಆದರೆ ಕಾಲ ಮುಗಿದಿದೆ. ಇದು ಹೊಸ ಆವೃತ್ತಿ, ನಾವು ಹೊಸ ಹೊಸ ಸವಾಲುಗಳನ್ನು ಎದುರಿಸಲಿದ್ದೇವೆ. ಅದೇ ನಮಗೆ ತುಂಬಾ ರೋಮಾಂಚನಕಾರಿಯಾದ ವಿಷಯ. ಈ ಬಾರಿಯ ಐಪಿಎಲ್ ಅನ್ನೂ ಗೆಲ್ಲಲು ನಾವು ಇಲ್ಲಿದ್ದೇವೆ ಎಂದರು.

ಇಂಡಿಯನ್ ಓಪನ್‌ನಲ್ಲಿ ಸ್ಥಳೀಯರದ್ದೇ ದರ್ಬಾರ್

ಸ್ಕ್ವ್ಯಾಷ್: ಸೆಮಿಗೆ 4 ಭಾರತೀಯರು

ಮುಂಬೈ: ಭಾರತದ ಪ್ರಮುಖ ಸ್ಕ್ವ್ಯಾಷ್ ಆಟಗಾರರಾದ ಅಭಯ್ ಸಿಂಗ್, ವೀರ್ ಚೊಟ್ರೋನಿ, ಅನಹತ್ ಸಿಂಗ್ ಹಾಗೂ ತನ್ವಿ ಕುಮಾರ್ ತಮ್ಮ ಪ್ರಾಬಲ್ಯ ಮುಂದುವರಿಸಿ ಸೆಮಿಗೇರಿದ ನಂತರ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವ್ಯಾಷ್ ಪಂದ್ಯಾವಳಿಯಲ್ಲಿ ಭಾರತದ ಪಾರುಪತ್ಯ ಮುಂದೆ ಸಾಗಿದೆ.

ಪ್ರಾಬಲ್ಯಭರಿತ ಪ್ರದರ್ಶನದೊಂದಿಗೆ ಮಿಂಚಿದ ಭಾರತದ ಪ್ರಮುಖ ಆಟಗಾರರು ಕ್ವಾರ್ಟರ್‌ಫೈನಲ್‌ನಲ್ಲಿ ಕರಾರುವಾಕ್ ಪ್ರದರ್ಶನೊಂದಿಗೆ ಭಾರೀ ಗೆಲುವು ಸಾಧಿಸಿದರು.

ಅಭಯ್ ಮಿಂಚಿನಾಟ: ಜೀವಾ ಇಜಿಪ್ಟ್‌ನ ಇಬ್ರಾಹಿಂ ಎಲ್ ಕಬ್ಬಾನಿ ಅವರನ್ನು ಎದುರಿಸಿ 3-0(11-8, 11-7, 11-8) ರಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು. ಇಜಿಪ್ಟ್‌ನ ಯಾಸ್ಸಿನ್ ಶೋಹ್ದಿ ಅವರನ್ನು ಎದುರಿಸಿದ್ದ ಭಾರತದ ಭರವಸೆಯ ಆಟಗಾರ ಅಭಯ್ ಸಿಂಗ್ ಕರಾರುವಾಕ್ ಪ್ರದರ್ಶನದೊಂದಿಗೆ 3-1 (11-8, 7-11, 11-5, 11-7) ರಿಂದ ಗೆದ್ದರು. ಅತ್ಯುತ್ತಮ ಆರಂಭ ಪಡೆದ ಭಾರತದ ಹಿರಿಯ ಆಟಗಾರ ಅಭಯ್ ಎದುರಾಳಿಗೆ ಮೊದಲಿನಿಂದಲೂ ಕಡಿವಾಣ ಹಾಕಿದರು. ಮೊದಲನೇ ಸೆಟ್‌ನಲ್ಲಿ ನಿಯಂತ್ರಿತ ಪ್ರದರ್ಶನದೊಂದಿಗೆ 11-8ರಿಂದ ಗೆದ್ದ ಅಭಯ್ ಎರಡನೇ ಸುತ್ತಿನಲ್ಲಿ ನಿರಾಶೆ ಅನುಭವಿಸಿದರೂ ಮೂರನೇ ಸುತ್ತಿನಲ್ಲಿ ಮತ್ತೆ ಪುಟಿದೆದ್ದರು. ಐದನೇ ಸೆಟ್‌ಗೆ ಕೊಂಡೊಯ್ಯದೆ ನಾಲ್ಕು ಸೆಟ್‌ಗಳಲ್ಲೇ ಪಂದ್ಯ ಮುಗಿಸಿದ ಅವರು, ಸೆಮಿಗೆ ಸಿದ್ಧರಾದರು. ಇದಕ್ಕೂ ಮೊದಲು ಚೆಟ್ರೋನಿ ತಮ್ಮ ಆಕ್ರಮಣಕಾರಿ ಆಟದೊಂದಿಗೆ ಮಿಂಚಿದರು. ಇಜಿಪ್ಟ್‌ನ ಮೊಹಮ್ಮದ್ ಶರಫ್ ಅವರನ್ನು ಎದುರಿಸಿದ್ದ ಅವರು, ಮೂರೇ ಮೂರು ಸೆಟ್‌ಗಳಲ್ಲಿ ಕ್ಲೀನ್‌ಸ್ವಿಪ್ ಮಾಡಿದರು. ನಿಯಂತ್ರಿತ ಆಟದೊಂದಿಗೆ ಮೊದಲಿನ ಸೆಟ್‌ನಲ್ಲಿ 11-9, ಎರಡನೇ ಸೆಟ್‌ನಲ್ಲಿ 11-8, ಹಾಗೂ ಮೂರನೇ ಸೆಟ್‌ನಲ್ಲಿ 11-2ರಿಂದ ಭರ್ಜರಿ ಗೆಲುವು ಸಾಧಿಸಿ ಸೆಮಿಫೈನಲ್‌ಗೇರಿದರು.



ಮಹಿಳೆಯರಲ್ಲೂ ಪ್ರಾಬಲ್ಯ: ಯುವ ಆಟಗಾರ್ತಿ ಅನಾಹತ್ ಸಿಂಗ್ ಮತ್ತು ಶ್ರೇಯಾಂಕ ರಹಿತ ಆಟಗಾರ್ತಿ ತನ್ವಿ ಖನ್ನಾ ಅವರು ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿದರು. ಮೊದಲಿನೇ ಸುತ್ತಿನ ಪಂದ್ಯದಿಂದಲೂ ಈ ಇಬ್ಬರೂ ಕರಾರುವಾಕ್ ಪ್ರದರ್ಶನವನ್ನೇ ನೀಡುತ್ತಾ ಬಂದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಲೇಷ್ಯಾದ ಸೆಹವೀತ್ರಾ ಕುಮಾರ್ ಅವರನ್ನು ಎದುರಿಸಿದ್ದ ಅನಾಹತ್ ಸಿಂಗ್ 30 (11-2, 11-6, 11-4)ರಿಂದ ಭರ್ಜರಿ ಗೆಲುವು ಸಾಧಿಸಿದರು. ಮೊದಲಿನಿಂದಲೂ ಪಂದ್ಯದಲ್ಲಿ ಹಿಡಿತ ಸಾಧಿಸಿದ ಅವರು, ಕೊನೆಯವರೆಗೂ ಎದುರಾಳಿಗೆ ಅವಕಾಶವೇ ನೀಡಲಿಲ್ಲ. ನಾಲ್ಕನೇ ಸೀಡ್‌ನ ಐನಾ ಅಮಾನಿ ಅವರನ್ನು ಎದುರಿಸಿದ್ದ ತನ್ವಿ 3-1ರಿಂದ ಗೆಲುವು ಸಾಧಿಸಿ ಮುನ್ನಡೆದರು. ಜೋಶ್ನಾ ಕ್ವಾರ್ಟರ್‌ಫೈನಲ್‌ನಲ್ಲಿ ಹಿನ್ನಡೆ ಅನುಭವಿಸಿದರು.

ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಕೂಟಕ್ಕೆ ಸಿದ್ಧತೆ

ತುಮಕೂರಲ್ಲಿ ಅಂತಾರಾಷ್ಟ್ರೀಯ ಟೆನಿಸ್

ಬೆಂಗಳೂರು: ಇಲ್ಲಿನ ವಿಶ್ವವಿದ್ಯಾಲಯ ಆವರಣದ ಜಿಲ್ಲಾ ಟೆನಿಸ್ ಕ್ರೀಡಾಂಗಣದಲ್ಲಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿ ನಡೆಯಲಿದೆ. ಮೇ 4ರಿಂದ 10ರವರೆಗೆ ತುಮಕೂರಿನಲ್ಲಿ ಟೆನಿಸ್ ಹಬ್ಬ ನೆರವೇರಲಿದೆ. ಸುಮಾರು 30,000 ಡಾಲರ್ ಬಹುಮಾನ ಮೊತ್ತದ ಈ ಸ್ಪರ್ಧೆ ತುಮಕೂರಿನ ಇತಿಹಾಸದಲ್ಲೇ ಮೊದಲ ಮಹಿಳಾ ಐಟಿಎಫ್ ಟೂರ್ನಿಯಾಗಿದ್ದು, ಎರಡು ದಶಕಗಳ ನಂತರ ಮತ್ತೆ ಅತಾರಾಷ್ಟ್ರೀಯ ಟೆನಿಸ್ ಕ್ರೀಡೆಗೆ ವೇದಿಕೆಯಾಗುತ್ತಿದೆ.

ಈ ಸ್ಪರ್ಧೆಯಲ್ಲಿ 32 ಆಟಗಾರ್ತಿಯರ ಮುಖ್ಯ ಡ್ರಾ ಹಾಗೂ ಅರ್ಹತಾ ಸುತ್ತುಗಳ ಮೂಲಕ ಅಂತಾರಾಷ್ಟ್ರೀಯ ಮಟ್ಟದ ಯುವ ಆಟಗಾರ್ತಿಯರು ಮತ್ತು ಭಾರತದ ಶ್ರೇಷ್ಠ ಆಟಗಾರ್ತಿಯರು ಭಾಗವಹಿಸಲಿದ್ದಾರೆ. ಇದು ವಿಶ್ವ ಟೆನಿಸ್ ಸಂಘಟನೆಯ ಸರ್ಕ್ಯೂಟ್‌ನ ಭಾಗವಾಗಿದ್ದು, ಆಟಗಾರ್ತಿಯರಿಗೆ ರ‍್ಯಾಂಕಿಂಗ್ ಅಂಕಗಳನ್ನು ಗಳಿಸಲು ಅವಕಾಶ ಒದಗಿಸುತ್ತದೆ.




ವರ್ಷಗಳ ನಂತರ ಟೆನಿಸ್: 2003ರಲ್ಲಿ ತುಮಕೂರಿನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೂರ್ನಿಯ ನಂತರ ಇದೇ ಮೊದಲ ಅಂತಾರಾಷ್ಟ್ರೀಯ ಟೆನಿಸ್ ಸ್ಪರ್ಧೆಯಾಗಿದೆ. ಆ ಸಂದರ್ಭದಲ್ಲಿ ರೋಹನ್ ಬೋಪಣ್ಣ, ಪ್ರಕಾಶ್ ಅಮೃತರಾಜ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಜರ್ಮನಿಯ ಫಿಲಿಪ್ ಕೊಹ್ಲ್‌ಶ್ರೈಬರ್ ಪ್ರಶಸ್ತಿ ಗೆದ್ದಿದ್ದು, ಮಾರ್ಕೋಸ್ ಬಾಗ್ದಾತಿಸ್ ಸೆಮಿಫೈನಲ್ ತಲುಪಿದ್ದರು. ಸಚಿವ ಪ್ರಿಯಾಂಕ್ ಖರ್ಗೆ ಅವರು, ತುಮಕೂರಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿ ಆಯೋಜನೆ ನಮ್ಮ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ. ಇದು ರಾಜ್ಯದ ಯುವ ಪ್ರತಿಭೆಗಳಿಗೆ ಪ್ರೇರಣೆ ನೀಡಲಿದೆ ಎಂದು ಹೇಳಿದರು. ಒಟ್ಟಿನಲ್ಲಿ, ದೇಶ-ವಿದೇಶದ ಆಟಗಾರ್ತಿಯರು ಭಾಗವಹಿಸುವ ಈ ಐಟಿಎಫ್ ಡಬ್ಲ್ಯು35 ಟೂರ್ನಿ ತುಮಕೂರಿನ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸುವ ನಿರೀಕ್ಷೆಯಿದೆ ಎಂದಿದ್ದಾರೆ.

ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ. ಪರಮೇಶ್ವರ ಅವರು, ಇದು ತುಮಕೂರಿಗೆ ಹೆಮ್ಮೆಯ ಕ್ಷಣ. ಎರಡು ದಶಕಗಳ ನಂತರ ಇಂತಹ ದೊಡ್ಡ ಮಟ್ಟದ ಟೂರ್ನಿ ಆಯೋಜನೆ ನಮ್ಮ ಜಿಲ್ಲೆಯ ಕ್ರೀಡಾ ಅಭಿವೃದ್ಧಿಯ ಪ್ರತೀಕವಾಗಿದೆ. ಯುವಕರಿಗೆ ಹೆಚ್ಚಿನ ಅವಕಾಶಗಳನ್ನು ನೀಡಲು ಇದು ಸಹಕಾರಿ ಎಂದು ಹೇಳಿದ್ದಾರೆ.

ಪದಬಂಧ

▶ ರಾಜಾ ಸಂಗಮೇಶ ಹಿರೇಮಠ



5930

5929 ಉತ್ತರ

ಎಡದಿಂದ ಬಲಕ್ಕೆ:
1.ಭಗವದ್ಗೀತೆ
3.ಕುಟುಕು 5.ರಮೇಶ
6.ನಕುಲ 8.ಚಿತ್ರಕ
9.ಸಾಕ್ಷರ 13.ಮಣಕ
15.ತಮಾಳ 16.ನಮನ
17.ಕುಮುದಾಕರ

ಮೇಲಿನಿಂದ ಕೆಳಕ್ಕೆ :
1.ಭವನ 2.ತೆರಳು
3.ಕುಶಲ 4.ಕುತ್ಸಿತಾಚಾರ
7.ಕುತಂತ್ರ 8.ಚಿರನೂತನ
10.ಕ್ಷಪಣ 11.ವೇತನ
12.ಬೆಳಕು 14.ಕಠೋರ

ಎಡದಿಂದ ಬಲಕ್ಕೆ
1.ಕೆಲಸಕ್ಕೆ ಪ್ರಯತ್ನಿಸು-ತೊಡಗು (4)
3.ಮಾರುವಿಕೆಯಿಲ್ಲಿ ತಿರುಗಿದೆ (3)
5.ಕಸುವಿನ ನಡುವೆ ಪಡ್ಡೆ ಜಾನುವಾರಿದೆ (3)
7.ಕಡಮೆ-ಅಭಾವದ ಸಮಾನಪದ (3)
8.ಬಿಡುಗಡೆಗಾಗಿ ತೋರುತ್ತಿರುವ ಆವಸರ (4)
10.ಬೇಡಿಕೆಯ ಪತ್ರದ ಮೊದಲು ದರವಿದೆ (4)
12.ತಳದ ನಡುವೆ ಅಡಗಿ ಕುಳಿತ ಹುಡುಗ (3)
14.ಸುತನು ಹೀಗೆ ಒಳ್ಳೆಯ ಚಾರಿತ್ರ್ಯದವನು (3)
15.ಸಂಪ್ರದಾಯ-ರೂಢಿಯಿದು (3)
16.ಮತದ ನಡುವೆ ಅಡಗಿದ ವ್ಯಥೆ (4)

ಮೇಲಿನಿಂದ ಕೆಳಕ್ಕೆ
1.ಅಭ್ಯುದಯ-ಏಳಿಗೆಯಿದು (3)
2.ಸುಲಭವಾಗಿರುವಿಕೆ-ದಯಾಪರತೆ (4)
4.ತಡೆ-ನಿಗ್ರಹಿಸು ಎಂಬರ್ಥದ ಶಬ್ದ (4)
6.ಭೂಮಿ ಕೊರೆದು ಮಾಡಿದ ದಾರಿ (3)
7.ಸಿಂಗರಿಸಿಕೊಂಡ ಕಮಾನುಬಂಡಿ (3)
9.ಕಲಚೂರಿ ವಂಶದ ಅರಸನಿತ (3)
10.ದರಿಯ ನಡುವೆ ಹಿಡಿಯುವಿಕೆಯಿದೆ (4)
11.ಹೊಗಳು-ಕೊಂಡಾಡುವಿಕೆ (3)
12.ಮತ-ತರ ಒಳಗೊಂಡ ಮೇಲುಕೀಳು (4)
13.ಅಸಂಖ್ಯವಾದುದು (3)

ಕಿರುಸುದ್ದಿ

ಇಂದಿನಿಂದ ಉರುಸು



◆**ರೋಣ:** ಪಟ್ಟಣದ ಹಿಂದೂ ಮುಸ್ಲಿಂ ಭಾವೈಕ್ಯತೆಯ ಶ್ರದ್ಧಾ ಕೇಂದ್ರವಾಗಿರುವ ಹಜರತ್ ಸಯ್ಯದ ಶಾ ಖಾಜಾ ಹುಸೇನ ಶಾವಲಿ ಚಿಸ್ತಿ ಅಲ್ ಖಾದ್ರಿ ಶರಣರ ಉರುಸು ಧಾರ್ಮಿಕ ಕಾರ್ಯಕ್ರಮ ಮಾ.22 ರಿಂದ ಮಾ 24 ರವರೆಗೆ ಜರುಗಲಿವೆ ಎಂದು ಹಜರತ್ ಸೈಯದ ಶಾ ಸುಲೇಮಾನ ಶಾವಲಿ ಅಜ್ಜನವರು ಹೇಳಿದರು.

ಅವರು ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಮಾ.22 ರಂದು ಸಂಜೆ ವಾದ್ಯ ಮೇಳಗಳೊಂದಿಗೆ ಗಂಧದ ಮೆರವಣಿಗೆ ನಡೆಯಲಿದೆ. ಮಾ.23ರಂದು ಸಂಜೆ 6ಕ್ಕೆ 20ನೇ ವರ್ಷದ ಸರ್ವಧರ್ಮ ಸಮ್ಮೇಳನ ಜರುಗಲಿದ್ದು, ಸಾನ್ನಿಧ್ಯವನ್ನು ಗುಲಗಂಜಿ ಮಠದ ಗುರುಪಾದ ದೇವರು, ಮಾರನಬಸರಿ ಗ್ರಾಮದ ಸರ್ವಧರ್ಮ ಸಮನ್ವಯ ಪೀಠದ ಶಿವಮೂರ್ತಿ ಶ್ರೀಗಳು, ಚರಂತೇಶ್ವರ ವಿರಕ್ತಮಠದ ಶರಣಬಸವ ಶ್ರೀಗಳು ವಹಿಸಲಿದ್ದು, ಅಧ್ಯಕ್ಷತೆಯನ್ನು ಶಾಸಕ ಜಿ.ಎಸ್.ಪಾಟೀಲ ವಹಿಸಿಕೊಳ್ಳಲಿದ್ದಾರೆ ಎಂದ ಅವರು, ಮಾ 24 ರಂದು ಜಿಯಾರತ್ ನಡೆಯಲಿದೆ ಎಂದರು. ದಾಸ್ತ್ ಕಿರೇಸೂರ ಮಾತನಾಡಿ, ರೋಣ ಪಟ್ಟಣದ ದರ್ಗಾ ಹಿಂದು ಮುಸ್ಲಿಂರ ಆರಾಧ್ಯ ಕ್ಷೇತ್ರವಾಗಿದ್ದು, ಸಾವಿರಾರು ಭಕ್ತರು ಐತಿಹಾಸಿಕ ದರ್ಗಾಕ್ಕೆ ನಡೆದುಕೊಳ್ಳುತ್ತಾರೆ. ಬೇರೆ ಗ್ರಾಮಗಳಿಂದಲೂ ಭಕ್ತರು ಆಗಮಿಸಿ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದರ್ಗಾದಲ್ಲಿ ಪ್ರಾರ್ಥನೆ ಮಾಡುತ್ತಾರೆ ಎಂದರು.

ಮಲ್ಲಯ್ಯ ಮಹಾಪುರುಷಮಠ, ಎಚ್.ಎಚ್. ಇದ್ಲಿ,ಅಂದಾನಪ್ಪ ಗಿರಡ್ಡಿ, ಜಗದೀಶ ಬ್ಯಾಳಿ, ಮುತ್ತಪ್ಪ ಚಳಗೇರಿ, ಫಕೀರಗೌಡ ತಿಮ್ಮನಗೌಡರ, ಪ್ರಭುಗೌಡ ಪಾಟೀಲ ಸೇರಿದಂತೆ ಅನೇಕ ಮುಖಂಡರುಗಳು ಉಪಸ್ಥಿತರಿದ್ದರು.

ಮಾ.25ಕ್ಕೆ ಮಹಿಳಾ ದಿನಾಚರಣೆ

◆**ಲಕ್ಷ್ಮೇಶ್ವರ:** ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ವೇದಿಕೆ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ ಇವರುಗಳ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾ.25ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಚಂಬಣ್ಣ ಬಾಳಿಕಾಯಿ ಅವರ ಜಿನನಲ್ಲಿ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಸಿ.ಆರ್. ಲಕ್ಕುಂಡಿಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮ ಅಧ್ಯಕ್ಷತೆ ಅಧ್ಯಕ್ಷ ಸಿ.ಆರ್. ಲಕ್ಕುಂಡಿಮಠ ವಹಿಸಲಿದ್ದಾರೆ. ಮಹಿಳಾ ಎಸ್.ಸಿ. ಅಳಗವಾಡಿ, ಸುನಂದಾ ಬೆನ್ನೂರ, ಲಲಿತಕ್ಕ ಕೇರಿಮನಿ, ಪ್ರತಿಮಾ ಮಹಾಜನಶೆಟ್ಟರ, ಸವಿತಾ ಬಿ. ಆದಿ, ಮೀನಾಕ್ಷಿ ಮಟ್ಟಿ, ಮಂಜುಳಾ ಹೂಗಾರ, ಆಗಮಿಸುವರು. ಈ ಸಮಾರಂಭದಲ್ಲಿ ಮಾಲಾದೇವಿ ದಂದರಗಿ ಉಪನ್ಯಾಸ ನೀಡುವರು. ಶತಾಯುಷಿಯಾದ ಈರಮ್ಮ ಕೊಂಚಿಗೇರಿಮಠ, ನೀಲಮ್ಮ ಪುರಾಣಿಕಮಠ, ಸಾವಿತ್ರಮ್ಮ ಹೂವಿನ, ಸೋಮವ್ವ ಚಕ್ರಸಾಲಿ, ಶಾಂತವ್ವ ಕುಂಬಿ, ಸಿಮವ್ವ ಅರಳಿ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಶರಣ ತತ್ವಗಳು ಸಾರ್ವಕಾಲಿಕ



◆**ಲಕ್ಷ್ಮೇಶ್ವರ:** 12ನೇ ಶತಮಾನದ ಶರಣರ ಬದುಕಿನ ಆದರ್ಶಗಳು ಕಾಯಕವೇ ಕೈಲಾಸ, ಸತ್ಯಶುದ್ಧ ನಡೆತೆ, ಸಮಾನತೆ ಮತ್ತು ದಯೆಯ ತತ್ವಗಳ ಮೇಲೆ ಆಧಾರಿತವಾಗಿವೆ. ನಡೆ-ನುಡಿ ಒಂದಾಗಿರಬೇಕು ಎಂಬ ಮೂಲಮಂತ್ರದೊಂದಿಗೆ ಅವರು ಸರಳ ಸ್ವಾರ್ಥರಹಿತ ಜೀವನವನ್ನು ನಡೆಸಿದರು. ಶರಣರು ನಾಡಿಗೆ ನೀಡಿದ ತತ್ವಗಳು ಸದಾ ಕಾಲಕ್ಕೂ ಶಾಶ್ವತ ಸಂದೇಶವನ್ನು ನೀಡುತ್ತವೆ ಎಂದು ನಿವೃತ್ತ ಶಿಕ್ಷಕ ಎಸ್.ಎಫ್. ಆದಿ ಹೇಳಿದರು.

ಅವರು ಪಟ್ಟಣದ ಲಕ್ಷ್ಮೇಶ್ವರದ ಅಕ್ಕಮಹಾದೇವಿ ದೇವಸ್ಥಾನದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ಮತ್ತು ಕದಳಿ ಮಹಿಳಾ ವೇದಿಕೆ ಇವರ ಸಹಯೋಗದಲ್ಲಿ ಬಸವರಾಜ ಚನ್ನಪ್ಪ ನೆಲವಿಗಿ ಹಾಗೂ ಸಾವಂತ್ರವ್ವ ಗುರುಬಸಪ್ಪ ಹೂವಿನ ಅವರ ಹೆಸರಿನಲ್ಲಿ ಕೊಡಮಾಡಿರುವ ದತಿಯ ಕಾರ್ಯಕ್ರಮದಲ್ಲಿ ಶರಣರ ಬದುಕಿನ ಆದರ್ಶಗಳು ಕುರಿತು ಉಪನ್ಯಾಸ ನೀಡಿ ಮಾತನಾಡಿದರು. ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುವುದು ಶರಣರ ಗುರಿಯಾಗಿತ್ತು. ಹೀಗಿದ್ದರೂ ಅವರು ಎಲ್ಲೂ ಸಂಸಾರಿಕ ಜವಾಬ್ದಾರಿ ಮತ್ತು ಕಾಯಕದಿಂದ ವಿಮುಕ್ತರಾಗಿರಲಿಲ್ಲ, ಕಾಯಕವೇ ಕೈಲಾಸವೆಂದು ಜೀವನ ನಡೆಸಿದರು ಎಂದರು.

ದತ್ತಿ ದಾನಿ ಲೋಹಿತ ನೆಲವಿಗಿ ಮಾತನಾಡಿ, ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ದುಡಿದು ಬದುಕಬೇಕು. ಕಾಯಕದಲ್ಲಿ ಚಿಕ್ಕದು ದೊಡ್ಡದು ಎಂಬ ಭೇದವಿಲ್ಲದೆ ಪ್ರತಿ ಕೆಲಸವೂ ದೇವರ ಕೃಪೆ ಎಂಬುದು ಅವರ ನಂಬಿಕೆಯಾಗಿತ್ತು, ಅದರಂತೆ ಅವರು ಬದುಕು ಸಾಗಿಸಿದರು ಎಂದರು. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಲ್.ಎಸ್. ಅರಳಹಳ್ಳಿ ವಹಿಸಿದ್ದರು. ಹಿರಿಯ ಜೀವಿ ಶತಾಯುಷಿ ಸಾವಂತ್ರವ್ವ ಹೂವಿನ, ಡಾ.ಶಿವಾನಂದ ಹೂವಿನ, ಪತ್ರಕರ್ತ ದಿಗಂಬರ ಪೂಜಾರ, ಶ.ಸಾ.ಪ ಕಾರ್ಯದರ್ಶಿ ಮಾಲಾದೇವಿ ದಂದರಗಿ, ಕದಳಿಮಹಿಳಾ ವೇದಿಕೆ ಅಧ್ಯಕ್ಷೆ ನಿರ್ಮಲಾ ಅರಳಿ, ಪೂರ್ಣಾಜಿ ಖರಾಟೆ, ಎಸ್.ಬಿ.ಕೊಣ್ಣೂರ, ನಿಂಗಪ್ಪ ಗೊರವರ, ಎಂ.ಕೆ.ಕಳ್ಳಿಮಠ, ಎನ್.ಆರ್.ಸಾತಪೂತೆ, ಸೋಮಶೇಖರ ಕೆರಿಮನಿ, ಮಹಾನಂದಾ ಕೊಣ್ಣೂರು, ಕವಿತಾ ಅರಳಹಳ್ಳಿ, ಬಸವರಾಜ ಸಂಗಪ್ಪಶೆಟ್ಟರ, ಶಂಕರ ಶಿಳ್ಳಿನ್, ಬಸಣ್ಣ ಬೆಂಡಿಗೇರಿ ಮುಂತಾದವರಿದ್ದರು.



ಮುಂಡರಗಿ: ರಂಜಾನ್ ಹಬ್ಬದ ನಿಮಿತ್ತ ಪಟ್ಟಣದ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದರು. ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ, ಡಿ.ಡಿ. ಮೋರನಾಳ, ಎಸ್.ಡಿ.ಮಕಾಂದಾರ, ಡಾ.ಬಿ.ಎಸ್.ಮೇಟಿ, ಎ.ಪಿ.ದಂಡಿನ, ಡಿ.ಎಂ.ನಾಗರಹಳ್ಳಿ, ಮೆಹಬೂಬಸಾಬ ಹವಾಲ್ದಾರ, ಅಮಿನಸಾಬ ಬಿಸನಳ್ಳಿ, ಆರ್.ಎಂ.ತಪ್ಪಡಿ, ಎ.ಕೆ.ಮುಲ್ಲಾನವರ, ರಾಜಾಭಕ್ಷಿ ಬೆಟಗೇರಿ, ನಬೀಸಾಬ ಕೆಲೂರ, ಆರ್.ಎಂ. ಸೈದರ, ವಿನೋದ ವಡ್ಡರ, ಶಿರಾಜ ಕೊಪ್ಪಳ, ಅಲ್ಲಾವುದ್ದೀನ ಬನ್ನಿಗೋಳ ಎಂ.ಜಿ.ವಡ್ಡಟ್ಟಿ, ಅಮರಸಾಬ ಕೊಕ್ಕರಗುಂದಿ ಮುಂತಾದವರಿದ್ದರು.

ಗದಗನಲ್ಲಿ ಸಂಭ್ರಮದ ಈದ್ ಉಲ್ ಫಿತ್ರ

◆**ಗದಗ:** ನಗರದಲ್ಲಿ ರಂಜಾನ್ ಮಾಸಾಂತ್ಯದ ದಿನವಾದ ಶನಿವಾರ ಮುಸ್ಲಿಂ ಬಂಧುಗಳು ಈದ್ ಉಲ್ ಫಿತ್ರ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಒಂದು ತಿಂಗಳು ನಡೆಸಿಕೊಂಡು ಬಂದ ರೋಜಾ ವ್ರತವನ್ನು ಮುಕ್ತಾಯಗೊಳಿಸಿದ ಮುಸ್ಲಿಂ ಬಂಧುಗಳು ಬೆಳಗ್ಗೆ ಹೊಸ ಬಟ್ಟೆ ಧರಿಸಿ ಲಘು ಉಪಹಾರ ಸೇವಿಸಿ ನಗರದ ಈದ್ಗಾಗಳಲ್ಲಿ ನಮಾಝ್ (ಪ್ರಾರ್ಥನೆ) ಮಾಡಿದರು.

ಇಲ್ಲಿನ ಡಂಬಳ ನಾಕಾ ಬಳಿ ಇರುವ ಈದ್ಗಾ ಮೈದಾನ, ಮುಳಗುಂದ ನಾಕಾ ಬಳಿ ಇರುವ ಈದ್ಗಾ ಮೈದಾನ, ಬೆಟಗೇರಿಯಲ್ಲಿ ರೈಲ್ವೆ ನಿಲ್ದಾಣದ ಬಳಿ ಇರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಂಧುಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿ ನಮಾಜ್ ಮಾಡಿದರು. ನಂತರ ಅವರ ನಗರದ ಮುಸ್ಲಿಂ ಬಂಧುಗಳು ಪರಸ್ಪರ ಆಲಿಂಗನ, ಹಸ್ತ ಲಾಘವ (ಮುಸಾಫಹತ್)ದ ಮೂಲಕ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ನಮಾಜ್‌ಗೆ ಬರುವಾಗ ಮುಸ್ಲಿಂ ಬಂಧುಗಳೆಲ್ಲರೂ ಒಟ್ಟಾಗಿ ತಕ್‌ಬೀರ್ ಹೇಳುತ್ತ ಬಂದರು. ಮಧ್ಯಾಹ್ನ ವಿಶೇಷ ಖಾದ್ಯವಾದ ಸುರಕುರುಮಾ ಸವಿದು ಹಬ್ಬ ಆಚರಿಸಿದರು. ಹಬ್ಬದ ನಿಮಿತ್ತ ಮುಸ್ಲಿಂ ಸಮಾಜದ ಕೆಲ ನಾಯಕರು ಹಬ್ಬದ ಖರ್ಚು- ವೆಚ್ಚಗಳಿಗಾಗಿ ಕೂಡಿಟ್ಟಿದ್ದ ಹಣದಲ್ಲಿ ಬಡವರ ಆಹಾರ ಸಾಮಗ್ರಿ ಹಾಗೂ ವೈದ್ಯಕೀಯ ಚಿಕಿತ್ಸೆಗಾಗಿ ಹಣಕಾಸಿನ ನೆರವು ನೀಡಿದರು. ಮುಸ್ಲಿಂ ಬಾಂಧವರಿಂದ ಸಾಮೂಹಿಕ ಪ್ರಾರ್ಥನೆಯಲ್ಲಿ ಸಚಿವ ಎಚ್.ಕೆ.ಪಾಟೀಲ ಭಾಗಿಯಾದರು. ಈ ವೇಳೆ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿದ್ದಾರೆ. ಮುಸ್ಲಿಂ ಬಾಂಧವರು ಪರಸ್ಪರ ಹಬ್ಬದ ಶುಭಾಶಯ ಕೋರಿದ್ದಾರೆ. ಸಾವಿರಾರು ಜನ ಮುಸ್ಲಿಂ ಬಾಂಧವರು ಪ್ರಾರ್ಥನೆಯಲ್ಲಿ ಭಾಗಿಯಾಗಿದ್ದರು.



ಗದಗ: ನಗರದಲ್ಲಿ ರಂಜಾನ್ ಮಾಸಾಂತ್ಯದ ದಿನವಾದ ಶನಿವಾರ ಮುಸ್ಲಿಂ ಬಂಧುಗಳು ಈದ್ ಉಲ್ ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಒಂದು ತಿಂಗಳು ನಡೆಸಿಕೊಂಡು ಬಂದ ರೋಜಾ ವ್ರತವನ್ನು ಮುಕ್ತಾಯಗೊಳಿಸಿದ ಮುಸ್ಲಿಂ ಬಂಧುಗಳು ಬೆಳಗ್ಗೆ ಹೊಸ ಬಟ್ಟೆ ಧರಿಸಿ ಲಘು ಉಪಹಾರ ಸೇವಿಸಿ ನಗರದ ಈದ್ಗಾಗಳಲ್ಲಿ ನಮಾಝ್ (ಪ್ರಾರ್ಥನೆ) ಮಾಡಿದರು.

ಕೆರಿಯರ್ ಮೇಳ ಉದ್ಘಾಟನೆ | ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಅಭಿಮತ

ಉದ್ಯೋಗಕ್ಕಾಗಿ ಓದು ಅವಶ್ಯ

◆**ಗದಗ:** ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ವಿದ್ಯಾರ್ಥಿಗಳು ಭವ್ಯ ಭವಿಷ್ಯ ರೂಪಿಸಿಕೊಳ್ಳಲು ಉದ್ಯೋಗಕ್ಕಾಗಿ ಓದುವುದು ಅವಶ್ಯವಾಗಿದೆ. ವೃತ್ತಿ ಮಾರ್ಗದರ್ಶನ ಪಡೆದಿರುವ ವ್ಯಕ್ತಿಗೆ ಈ ದಾರಿ ಸುಗಮಗೊಳ್ಳುವುದು. ಅಂತಹ ಸುಂದರ ಭವಿಷ್ಯವನ್ನು ಸುಗಮಗೊಳಿಸಲು ಈ ಕೆರಿಯರ್ ಮೇಳ ಪೂರಕವಾಗಲಿ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದ ಡಯಟ್ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಜರುಗಿದ 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಕೆರಿಯರ್ ಮೇಳ-2026 ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಮುಂದಿನ ಜೀವನ ರೂಪಿಸಿಕೊಳ್ಳಲು ವೃತ್ತಿ ಮಾರ್ಗದರ್ಶನ ಘಟಕವನ್ನು ರಾಜ್ಯದ ಎಲ್ಲ ಜಿಲ್ಲೆಯ ಡಯಟ್‌ಗಳಲ್ಲಿ ತೆರೆಯುವ ಸರ್ಕಾರ ಆದೇಶ ನೀಡಿದ್ದು ಅದರರನ್ವಯ ಗದುಗಿನಲ್ಲಿಯೂ ಈ ಘಟಕವನ್ನು ಇಂದು ಅಧಿಕೃತವಾಗಿ ಪ್ರಾರಂಭಿಸಲಾಗಿದೆ. ಜಿಲ್ಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಘಟಕದಲ್ಲಿರುವ ವಿಷಯ ತಜ್ಞರೊಂದಿಗೆ ಸಮಾಲೋಚಿಸಿ ಮಾರ್ಗದರ್ಶನ ಪಡೆದುಕೊಳ್ಳಬೇಕು, ಜೊತೆಗೆ ವೃತ್ತಿ ಮಾರ್ಗದರ್ಶನಕ್ಕೆ ಪೂರಕವಾದ ಅತ್ಯಮೂಲ್ಯ ಗ್ರಂಥಗಳು, ಉನ್ನತ ಕೋರ್ಸ್‌ಗಳ ವ್ಯಾಸಂಗಕ್ಕೆ ಅಗತ್ಯ ಪುಸ್ತಕಗಳಿದ್ದು ವಿದ್ಯಾರ್ಥಿಗಳು ಅಧ್ಯಯನ ಮಾಡಬಹುದು, ಕಂಪ್ಯೂಟರ್ ಇಂಟರ್‌ನೆಟ್ ಸೌಲಭ್ಯವೂ ಇದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಹೇಳಿದರು. 9 ರಿಂದ 12ನೇ ತರಗತಿಯ ವಿದ್ಯಾರ್ಥಿಗಳು ವೃತ್ತಿ ಮಾರ್ಗದರ್ಶನ ಪಡೆದುಕೊಂಡಿದ್ದರೆ ಅರ್ಧ ದಾರಿ ಕ್ರಮಿಸಿದಂತೆ ಉಳಿದಿರುವುದು ಪಿಯುಸಿ ನಂತರ ಅವಕಾಶಗಳು ಹೇರಳವಾಗಿದ್ದು ಸಾಧನೆಯ ಸೂಕ್ತ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ ಎಂದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪನಿರ್ದೇಶಕ (ಅಭಿವೃದ್ಧಿ) ಹಾಗೂ ಪ್ರಾಂಶುಪಾಲ ಜಿ.ಎಂ.ಮುಂದಿನಮನಿ ಮಾತನಾಡಿ, ವಿದ್ಯಾರ್ಥಿಗಳು ವೃತ್ತಿ ಬಗ್ಗೆ ಅರಿತುಕೊಳ್ಳಲು ಹಾಗೂ ಭವಿಷ್ಯ ರೂಪಿಸಿಕೊಳ್ಳಲು ಈ ಕೆರಿಯರ್ ಮೇಳಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಜಿಲ್ಲೆಯ 865 ವಿದ್ಯಾರ್ಥಿಗಳು ಮೇಳದಲ್ಲಿ ಪಾಲ್ಗೊಂಡು ಮಾಹಿತಿಯನ್ನು ಪಡೆದುಕೊಂಡಿದ್ದು ಈ ಮಾಹಿತಿ ಅವರ ಭವಿಷ್ಯವನ್ನು ರೂಪಿಸುವಂತಾಗಲಿ ಎಂದರು.

ವಿಶ್ರಾಂತ ಪ್ರಾದೇಶಿಕ ನಿರ್ದೇಶಕ ಡಾ.ಜಿ.ಎಚ್.ಇಮ್ರಾಪೂರ ಸಿಇಟಿ, ಎನ್ ಇಇಟಿ, ಜೆಇಇ, ಎನ್‌ಡಿಎ, ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ, ಪರೀಕ್ಷೆ ಎದುರಿಸುವ ಬಗೆಯನ್ನು ವಿವರಿಸಿದರು. ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ.ನಡುವಿನಮನಿ, ಡಯಟ್ ಹಿರಿಯ ಉಪನ್ಯಾಸಕ ಬಿ.ಎಫ್.ಅರವಟಗಿ, ಡಯಟ್ ಉಪನ್ಯಾಸಕ ಕೆ.ವೈ. ವಿಭೂತಿ, ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿಜಯ ಕಿರೇಸೂರ, ಅಧೀಕ್ಷಕಿ ಶೈಲಜಾ ತಟ್ಟಿ, ಉಪನ್ಯಾಸಕಿ ಕೆ.ಎಸ್.ಹೂಲಗೇರಿ, ಸುಧಾ ಬನಿಕಲ್, ಎಸ್.ಆರ್.ನದಾಫ ಇದ್ದರು.

ಡಯಟ್ ಅಧೀಕ್ಷಕ ಶ್ರೀನಿವಾಸ ಕುಲಕರ್ಣಿ ಪ್ರಾರ್ಥಿಸಿದರು. ಉಪನ್ಯಾಸಕ ಎಚ್.ಬಿ.ರಡ್ಡೇರ ಸ್ವಾಗತಿಸಿದರು. ಯಲ್ಲಪ್ಪ ಹಂದ್ರಾಳ ನಿರೂಪಿಸಿದರು. ಜಿ.ಡಿ.ದಾಸರ ವಂದಿಸಿದರು. ಜಿಲ್ಲಾ ಚಿತ್ರಕಲಾ ಶಿಕ್ಷಕರಿಂದ ಚಿತ್ರಪ್ರದರ್ಶನ, ವಿವಿಧ ಇಲಾಖೆ ಯೋಜನೆಗಳ ಕುರಿತು ಹಾಗೂ ಶಾಲಾ ವಿದ್ಯಾರ್ಥಿಗಳ ವಿಜ್ಞಾನ ಗಣಿತ ಪ್ರಯೋಗಳ ಮಳಿಗೆ ಜನಮನ ಸೆಳೆದವು.



ವಾಸ್ತವಿಕ ಬದುಕಿಗೆ ಒತ್ತು ನೀಡಿ

ಎಸ್‌ಎಸ್‌ಎಲ್‌ಸಿ, ಪಿಯುಸಿ ನಂತರ ವೃತ್ತಿ ಅವಕಾಶಗಳ ಕುರಿತು ಉಪನ್ಯಾಸ ನೀಡಿದ ಹಾವೇರಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಡಾ.ಬಿ.ಎಂ.ಬೇವಿನಮರದ ಅವರು, ನಾವಿಂದು ಭ್ರಮೆಯ ಲೋಕದಲ್ಲಿದ್ದೇವೆ. ಬದಲಾಗಿ ವಾಸ್ತವಿಕ ಬದುಕಿಗೆ ಒತ್ತು ನೀಡಬೇಕು. ಇದು ಸ್ಪರ್ಧಾತ್ಮಕ ಯುಗವಾಗಿದ್ದು ಕಲಿಯುವ ಆಸಕ್ತಿ, ಸಾಧಿಸುವ ಛಲವಿದ್ದರೆ ಸಾಧನೆ ಸುಗಮಗೊಳ್ಳುವುದು. ಸಾಧಿಸಬೇಕೆನ್ನುವ ವಿದ್ಯಾರ್ಥಿಗಳಿಗೆ ಪೋಷಕರ ಸಲಹೆ, ಶಿಕ್ಷಕರ ಮಾರ್ಗದರ್ಶನ ಆಪ್ತ ಸಮಾಲೋಚನೆ ಅಗತ್ಯ ಎಂದರು.

ಅಪಘಾತ ತಡೆ, ಸಂಚಾರಿ ನಿಯಮಗಳ ಜಾಗೃತಿ

◆**ಲಕ್ಷ್ಮೇಶ್ವರ:** ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2026 ವರ್ಷ ಅಪಘಾತಗಳು ಸರಣಿ ಮುಂದು ವರೆದಿದ್ದು ,ಇದರ ಸಲುವಾಗಿ ಅಪಘಾತ ತಡೆಗಳ ಬಗ್ಗೆ ಹಾಗೂ ಸಂಚಾರಿ ನಿಯಮಗಳ ಬಗ್ಗೆ ಪೊಲೀಸರು ಜಾಗೃತಿ ಮೂಡಿಸುವ ಸಲುವಾಗಿ ದಿಟ್ಟ ಹೆಜ್ಜೆ ಇಟ್ಟಿದ್ದು ಸ್ವತಹ ತಮ್ಮ ಖರ್ಚಿನಲ್ಲಿ ಬ್ಯಾರಿಕೆಡ್, ಬ್ಯಾನರ್, ರಿಫ್ಲೆಕ್ಟರ್ ಸ್ಟಿಕರ್ ಮೂಲಕ ಜನರಿಗೆ ಅರಿವು ಮೂಡಿಸಲು ಪ್ರಯತ್ನ ಮಾಡುತ್ತಿದ್ದಾರೆ.

ಸವಣೂರ ರಸ್ತೆ ಸಂಗಮ ಬಾರ ಹತ್ತಿರ, ಅಗಡಿ ಕಾಲೇಜು ರಾಮಗೇರಿ ಹೈಸ್ಕೂಲ್, ಶಿಗ್ಲಿ ರಸ್ತೆಯಲ್ಲಿ ಬ್ಯಾರಿಕೆಡ್ ಅಳವಡಿಸಿದ್ದು, ಸವಣೂರ ರಸ್ತೆ ಹುಬ್ಬಳ್ಳಿ ರಸ್ತೆ ಲೀಟಲ್ ಹಾರ್ಟ್ಸ್ ಶಾಲೆ ಹತ್ತಿರ, ಪಂಪವೃತ್ತ ಶಿಗ್ಲಿ ಕ್ರಾಸ್, ಬ್ಯಾನರ್‌ಗಳಲ್ಲಿ ಕಂಡು ಬರುವ ಪ್ರಮುಖ ರಸ್ತೆನಿಯಮ, ಹೆಲ್ಮೆಟ್ ತಿರುವುಗಳ ಬಗ್ಗೆ ವೇಗದ ಮಿತಿ ಸಿಗ್ನಲ್ ಉಲ್ಲಂಘನೆ ಆದರೆ ಆಗುವ ಅಪಘಾತಗಳ ಬಗ್ಗೆ ಓವರ್‌ಸ್ಪೀಡ್ ಹೀಗೆ ಬ್ಯಾನರ್ ಅಳವಡಿಸಿ ಅನೇಕ ವಿಷಯಗಳ ಜಾಗೃತಿ ಮೂಡಿಸಲಾಗುತ್ತಿದೆ. ವಾಹನ ಚಾಲಕರಿಗೆ ಪೊಲೀಸರು ದಿನಂಪ್ರತಿ ಮೋಟಾರ್ ವೆಹಿಕಲ್ ಆಕ್ಟ್ ನಲ್ಲಿ ದಂಡ, ರಾತ್ರಿಯಾದರೆ ಡ್ರಿಂಕ್ಸ್ ಮತ್ತು ಡ್ರೈವ್ ಕೇಸ್ ದಾಖಲು ಮಾಡುತ್ತಿದ್ದು ಸಾರ್ವಜನಿಕರು ಸಂಚಾರಿ ನಿಯಮ ಪಾಲಿಸಬೇಕು ಎಂಬುದು ಪೊಲೀಸ್ ಅಧಿಕಾರಿಗಳ ಮನವಿಯಾಗಿದೆ.

> ಠಾಣೆ ವ್ಯಾಪ್ತಿಯಲ್ಲಿ ಅಪಘಾತ ಪ್ರಕರಣಗಳು ಜಾಸ್ತಿ ಆಗುತ್ತಿದ್ದು, ಸಾರ್ವಜನಿಕರು ಸಂಚಾರಿ ನಿಯಮ ಪಾಲನೆ ಮಾಡಬೇಕು ಎನ್ನುವ ಉದ್ದೇಶದಿಂದ ಜಾಗೃತಿ ಮೂಡಿಸುವ ಬ್ಯಾನರ್‌ಗಳನ್ನು ಪ್ರಮುಖ ರಸ್ತೆಗಳಲ್ಲಿ ಹಾಕಿದ್ದು ಸಾರ್ವಜನಿಕರು ವಾಹನ ಚಾಲನೆ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಹಾಗೂ ವೇಗದ ಮಿತಿ ಕಡಿಮೆ ಇರಲಿ, ಮದ್ಯಸೇವನೆ ಮಾಡಿ ವಾಹನ ಚಾಲನೆ ಮಾಡಬಾರದು.
>
> ■ ನಾಗರಾಜ ಗಡದ, ಲಕ್ಷ್ಮೇಶ್ವರ ಪಿಎಸ್‌ಐ



ಸಮುದಾಯ ಭವನ ನಿರ್ಮಾಣಕ್ಕೆ ಭೂಮಿಪೂಜೆ

◆**ನರಗುಂದ:** ಸಮುದಾಯ ಭವನ ನಿರ್ಮಾಣಕ್ಕೆ ಪುರಸಭೆಯಿಂದ ಬಿಡುಗಡೆಯಾದ ರೂ.50 ಲಕ್ಷ ಅನುದಾನದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರಕಾರದಲ್ಲಿ ದೊರಕಿದ್ದ ರೂ.2 ಕೋಟಿ ಅನುದಾನವನ್ನು ಸಿದ್ದರಾಮಯ್ಯ ಸರ್ಕಾರ ವಾಪಸ್ ಪಡೆದಿತ್ತು. ಪುನ: ರೂ.2 ಕೋಟಿ ಬಿಡುಗಡೆ ಮಾಡಿದ್ದಾರೆ. ಮುಂದೆ ಯಾವ ಸರ್ಕಾರ ಬಂದರೂ ಅನುದಾನ ಬರಲು ತೊಂದರೆಯಾಗಲ್ಲ ಎಂದು ಶಾಸಕ ಸಿ.ಸಿ. ಪಾಟೀಲ ಹೇಳಿದರು.

ಪಟ್ಟಣದ ನೀರಾವರಿ ಇಲಾಖೆಯ ಪ್ರವಾಸಿ ಮಂದಿರದ ಹತ್ತಿರದ 2 ಎಕರೆ ನಿವೇಶನದಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಯುಗಾದಿಯ ಪಾಡ್ಯ ಶುಭ ದಿನದಂದು ಪಂಚಮಸಾಲಿ ಸಮಾಜದ ರಾಣಿ ಚನ್ನಮ್ಮಾಜಿ ಸಮುದಾಯ ಭವನ ನಿರ್ಮಾಣಕ್ಕೆ ಸಾಂಕೇತಿಕವಾಗಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ನಾನು ಸ್ವತಃ ರೂ.1 ಕೋಟಿ ನೀಡುತ್ತೇನೆ ಹಾಗೂ ಸ್ಥಳೀಯ ಪಂಚಮಸಾಲಿ ಸಮಾಜದ ಪ್ರಮುಖ ಹಿರಿಯರು ವಯಕ್ತಿಕವಾಗಿ ರೂ.60 ಲಕ್ಷ ಹಣವನ್ನು ಕೊಡುವ ವಾಗ್ದಾನ ಮಾಡಿದ್ದಾರೆ. ಒಟ್ಟು ರೂ.12 ಕೋಟಿ ವೆಚ್ಚದಲ್ಲಿ ಪಂಚಮಸಾಲಿ ಸಮುದಾಯ ಭವನದ ಕಾಮಗಾರಿಯನ್ನು ನಿಲ್ಲಿಸದಂತೆ ಪೂರ್ಣಗೊಳಿಸುವ ಇಚ್ಚೆ ಪ್ರತಿ ಗುರಿಯನ್ನು ಇಟ್ಟುಕೊಂಡಿದ್ದೇವೆ ಎಂದರು. ತಾಲೂಕಿನ ಗ್ರಾಮಗಳಲ್ಲಿ ಸಂಚರಿಸಿ ಹಣಕಾಸು ಸಮಿತಿ ರಚಿಸಿಕೊಂಡು ಹಣ ಕ್ರೋಢೀಕರಣ ಮಾಡುವಂತೆ ಸಲಹೆ ಮಾಡಿದರು. ಈ ಸಂದರ್ಭದಲ್ಲಿ ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಡಾ.ಸಿ ಕೆ ರಾಚನಗೌಡ್ರ, ಎಸ್.ಡಿ.ಕೊಳ್ಳಿಯವರ, ಎಸ್.ಆರ್.ಪಾಟೀಲ, ಅಜೀತಗೌಡ ಪಾಟೀಲ, ವಿ.ಎನ್.ಕೊಳ್ಳಿಯವರ, ಅಪ್ಪನಗೌಡ ನಾಯ್ಕರ, ಬಸು ಪಾಟೀಲ, ಬಿ.ಎಂ.ಬೆಳಹಾರ, ನ್ಯಾಯವಾದಿ ಸಿ.ಎಸ್.ಪಾಟೀಲ, ಎಚ್.ವಿ.ಪಾಟೀಲ, ಸುರೇಶ ಹುಡೇದಮನಿ, ರಾಜುಗೌಡ ಪಾಟೀಲ (ಹದಲಿ) ಆರ್.ಎನ್.ಪಾಟೀಲ, ಪ್ರಭುಗೌಡ ಪಾಟೀಲ, ಶಿವಾನಂದ ಮುತ್ತವಾಡ, ಗುರುಪಾದಪ್ಪ ಕುರಹಟ್ಟಿ, ಶಿವಪ್ಪ ಬೋಳಶೆಟ್ಟಿ, ಸಂಗಪ್ಪ ಪೂಜಾರ, ರಾಜುಗೌಡ ಪಾಟೀಲ, ಬಸವರಾಜ ಹುಲಕುಂದ, ಸಂಗನಗೌಡ ಹಾಲಗೌಡ್ರ, ನವೀನ ಹುಡೇದಮನಿ, ಕಾರ್ತಿಕ ಚೌದರಿ, ಅಜ್ಜನಗೌಡ ಪಾಟೀಲ, ಆನಂದ ಚಂದ್ರತ್ನವರ, ಎಚ್.ಎಸ್.ಭರಮಗೌಡ್ರ, ಪುರಸಭೆ ಮುಖ್ಯಾಧಿಕಾರಿ ಸಂಗಮೇಶ ಬ್ಯಾಳಿ, ಸತೀಶ ನಾಯ್ಕರ, ಶಂಕ್ರಗೌಡ ಪಾಟೀಲ, ಸಿದ್ದಪ್ಪ ಯಲಿಗಾರ, ವಿಜಯಕುಮಾರ ಬೇಲೇರಿ ಸಮಾಜದ ಮುಖಂಡರಿದ್ದರು.



ಕಾಂಕ್ರಿಟ್ ರಸ್ತೆ, ಚರಂಡಿ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ: ಎಸ್.ಬಿ. ಕರಿಗೌಡ್ರ

◆**ನರಗುಂದ:** ತಾಲೂಕಿನ ಸುರಕೋಡ ನವಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ 250 ಲಕ್ಷ ರೂ. ವೆಚ್ಚದ ಕಾಂಕ್ರಿಟ್ ರಸ್ತೆ ಹಾಗೂ ಗಟಾರ್ ನಿರ್ಮಾಣದ ಕಾಮಗಾರಿಯನ್ನು ಶಾಸಕ ಸಿ.ಸಿ. ಪಾಟೀಲ ಅನುಪಸ್ಥಿತಿಯಲ್ಲಿ ಅವರ ಸೂಚನೆ ಮೇರೆಗೆ ಗ್ರಾಮದ ಹಿರಿಯರು ಭೂಮಿಪೂಜೆ ನೆರವೇರಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಎಸ್.ಬಿ. ಕರಿಗೌಡ್ರ ಮಾತನಾಡಿ, ಸುರಕೋಡ ಗ್ರಾಮ ಸ್ಥಳಾಂತರ ಆದಾಗಿನಿಂದ ಅಭಿವೃದ್ಧಿ ಆಗಿಯೇ ಇಲ್ಲ, ಈಗ ನಡೆಯುವ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ಕಾಮಗಾರಿ ಗುಣಮಟ್ಟದಿಂದ ಕೂಡಿರಲಿ. ಯಾಕಂದರೆ ನಮ್ಮೂರ ಭೂಮಿ ಎರಿ ಮಣ್ಣಿನಿಂದ ಕೂಡಿದೆ. ಹೀಗಾಗಿ ಕಾಮಗಾರಿ ಉತ್ತಮವಾಗಿರಲಿ ಮತ್ತು ಗ್ರಾಮದಲ್ಲಿ ಆಗಿರುವ ಅತಿಕ್ರಮಣ ತೆರವುಗೊಳಿಸಬೇಕು. ನಾವೆಲ್ಲರೂ ತಮಗೆ ಸಹಕಾರ ಕೊಡುತ್ತೇವೆ ಎಂದರು.

ಜಿನ್ನಾಸಾಹೇಬ ಮುಲ್ಲಾ ಮಾತನಾಡಿ, 2008-09ರಲ್ಲಿ ಮಲಪ್ರಭಾ ಹಾಗೂ ಬೆಣ್ಣಿಹಳ್ಳದ ಪ್ರವಾಹಕ್ಕೆ ತಾಲೂಕಿನ ಅನೇಕ ಗ್ರಾಮಗಳು ಮುಳುಗಡೆ ಆಗಿದ್ದವು. ಆ ಸಂದರ್ಭದಲ್ಲಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಸುರಕೋಡ ಗ್ರಾಮವು ಸ್ಥಳಾಂತರಗೊಂಡು ನವ ಗ್ರಾಮವಾಗಿ ನಿರ್ಮಾಣವಾಗಿದೆ. ಕಳೆದ ಐದಾರು ವರ್ಷದ ಹಿಂದೆ ಗ್ರಾಮದ ಜನರು ನವಗ್ರಾಮಕ್ಕೆ ಆಗಮಿಸಿದ್ದಾರೆ. ಹೀಗಾಗಿ ನವಗ್ರಾಮದ ಅಭಿವೃದ್ಧಿ ಬಹಳ ಆಗಬೇಕಾಗಿದೆ ಎಂದರು. ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ, ಎಸ್.ಕೆ. ಪಾಟೀಲ ಮಾತನಾಡಿದರು. ಮುತ್ತಯ್ಯ ಚಿಕ್ಕಮಠ, ರುದ್ರಗೌಡ ಆಡೂರ, ನಾಗನಗೌಡ ಬಳಗಾನೂರ, ಬಸನಗೌಡ ಲಿಂಗದಾಳ, ಮುತ್ತು ಪಿಡ್ಡಣ್ಣವರ, ಗ್ರಾಪಂ ಮಾಜಿ ಸದಸ್ಯೆ ಪುಷ್ಪಾ ಪಿಡ್ಡನ್ನವರ, ಮಲರಡ್ಡಿ ಅಜ್ಜರಡ್ಡಿ, ಮೋಹನ ಉಪವಾಸಿ, ಪಿಡಿಒ ಹೆಚ್ ಎಸ್ ಚಟ್ರಿ, ಅನೀಲ ಧರಿಯಣ್ಣವರ, ಮಂಜು ಹುಡೇದ, ಮುತ್ತಪ್ಪ ಮಾದರ, ಗೀತಾ ತಳವಾರ ಇತರರಿದ್ದರು.



ದೇಶ ಮೊದಲು ಎನ್ನುವ ಸಿದ್ಧಾಂತ ಬಿಜೆಪಿಯದ್ದು: ಕಳಕಪ್ಪ ಬಂಡಿ

◆**ಗಜೇಂದ್ರಗಡ:** ದೇಶದ ಹಿತ ಕಾಯುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಮುಂಚೂಣಿಯಲ್ಲಿದೆ. ದೇಶ ಮೊದಲು ಎನ್ನುವ ಸಿದ್ಧಾಂತದ ಮೇರೆಗೆ ನಮ್ಮ ಸರ್ಕಾರ ಅನೇಕ ಜನಪರ ಸಾಧನೆಗಳನ್ನು ಮಾಡಿದೆ. ಭಾರತೀಯ ಜನತಾ ಪಕ್ಷದ ಐತಿಹಾಸಿಕ ಹಿನ್ನೆಲೆ ನೋಡಿದರೆ ಎಲ್ಲ ವರ್ಗದ ಜನರು ಪಕ್ಷಕಟ್ಟಲು ಶ್ರಮಿಸಿದ್ದಾರೆ ಎಂದು ಮಾಜಿ ಸಚಿವ ಕಳಕಪ್ಪ ಬಂಡಿ ಹೇಳಿದರು.

ರೋಣ ಮಂಡಲ ವತಿಯಿಂದ ನಗರದ ರೋಣ ರಸ್ತೆಯಲ್ಲಿರುವ ಜೆಟಿ ಸಿಬಿಎಸ್‌ಇ ಶಾಲೆಯಲ್ಲಿ ನಡೆದ ಪಂ. ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ -2026 ಕಾರ್ಯಕ್ರಮದಲ್ಲಿ ಮಾತನಾಡಿದರು.ಪ್ರವರ್ಗ ಕಾರ್ಯಕ್ರಮದಲ್ಲಿ ಸಾಮಾಜಿಕ ಜಾಲತಾಣ ಮಾಧ್ಯಮ ಮತ್ತು ಮಾಹಿತಿ ತಂತ್ರಜ್ಞಾನ, ಕಾರ್ಯ ಪದ್ಧತಿ, ಕಾರ್ಯ ವಿಸ್ತರಣೆ ದೃಷ್ಟಿಕೋನ, ಪಕ್ಷದ ಇತಿಹಾಸ, ನಮ್ಮ ಬೂತ್ ನಿರ್ವಹಣೆ ಮತ್ತು ನಮ್ಮ ಸರ್ಕಾರದ ಸಾಧನೆ ಯೊಂದಿಗೆ ಸೈದ್ಧಾಂತಿಕ ಅಡಿಪಾಯವನ್ನು ಹೇಗೆ ಮೈಗೂಡಿಸಿಕೊಳ್ಳಬೇಕು ಹಾಗೂ ಮತದಾರರಿಗೆ ಮನವರಿಕೆ ಮಾಡಬೇಕು ಎನ್ನುವುದರ ಕುರಿತು ತರಬೇತಿಯನ್ನು ನೀಡಲಾಗುತ್ತದೆ ಎಂದರು.

ಕಾರ್ಯಕ್ರಮವನ್ನು ಬಿಜೆಪಿ ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ನಿರ್ಮಲಾ ಕೊಳ್ಳಿ ಉದ್ಘಾಟಿಸಿ ಮಾತನಾಡಿ, ಮೇರಾಬೂತ್ ಸಬಸೇ ಮಜಬೂತ ಎನ್ನುವ ಮಂತ್ರದೊಂದಿಗೆ ಹಿರಿಯರ ಮಾರ್ಗದರ್ಶನದಲ್ಲಿ ಸಂಘಟನಾತ್ಮಕವಾಗಿ ಪಕ್ಷವನ್ನು ಬಲಪಡಿಸಬೇಕು. ನರೇದ್ರ ಮೋದಿಯವರ ಸುದೀರ್ಘ ಜನಪರ ಆಡಳಿತ ವೈಖರಿಯನ್ನು ಜನರಿಗೆ ತಿಳಿಸುವ ಕೆಲಸ ಮಾಡುವಲ್ಲಿ ಕಾರ್ಯಕರ್ತರು ಕೆಲಸ ಮಾಡುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಪ್ರವರ್ಗ ಕಾರ್ಯಕ್ರಮ ತರಬೇತಿ ನೀಡುವ ಮೂಲಕ ಕಾರ್ಯಕರ್ತರಲ್ಲಿ ಹುಮ್ಮಸ್ಸು ತರಲಿದೆ ಎಂದರು.

ಈ ಸಂದರ್ಭದಲ್ಲಿ ಉಮೇಶ ಮಲ್ಲಾಪುರ, ಹಟ್ಟಿಮನಿ, ಮುತ್ತಣ್ಣ ಕಡಗದ, ರಾಜೇಂದ್ರ ಘೋರ್ಪಡೆ,ಮುದಿಯಪ್ಪ ಕರಡಿ, ಭಾಸ್ಕರ ರಾಯಬಾಗಿ, ಬಸವರಾಜ ಬಂಕದ, ಬಾಲಾಜಿರಾವ್ ಬೋಸಲೆ ಸೇರಿದಂತೆ ಅನೇಕರು ಇದ್ದರು.



ಅಂತರ್ ಜಿಲ್ಲಾ ಕಳ್ಳನ ಬಂಧನ



◆**ಮುಂಡರಗಿ:** ಅಂತರ್ ಜಿಲ್ಲಾ ಮೋಟರ್ ಸೈಕಲ್ ಕಳ್ಳನ ಬಂಧಿಸುವುದರೊಂದಿಗೆ ಕದ್ದಿರುವ 7 ಬೈಕ್‌ಗಳನ್ನು ಮುಂಡರಗಿ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಕಳ್ಳತನ ಪ್ರಕರಣದ ಪತ್ತೆ ಕಾರ್ಯಕ್ಕೆ ಗದಗ ಜಿಲ್ಲೆಯ ಪೊಲೀಸ್ ಅಧೀಕ್ಷಕ ರೋಹನ್ ಜಗದೀಶ ಅವರು ಒಂದು ವಿಶೇಷ ತಂಡ ರಚನೆ ಮಾಡಿದ್ದು, ಡಿ.ಎಸ್.ಪಿ ಪ್ರಭುಗೌಡ ಕಿರೇದಳ್ಳಿ ಅವರ ಮಾರ್ಗದರ್ಶನದಲ್ಲಿ ಮುಂಡರಗಿ ಪೊಲೀಸರು ರವಿ ಪರುಶರಾಮ ಕೂಕನೂರ ಅವನನ್ನು ದಸ್ತಗಿರಿ ಮಾಡಿದ್ದು, ಆರೋಪಿಯು ವಿಚಾರಣೆಯ ಕಾಲಕ್ಕೆ ತಾನು ಮುಂಡರಗಿ ಪಟ್ಟಣ, ಕೊಪ್ಪಳ, ಗದಗ ಶಹರಗಳಲ್ಲಿ ಒಟ್ಟು 7 ಮೋಟಾರ್ ಸೈಕಲ್‌ಗಳನ್ನು ಕಳ್ಳತನ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು, ಸುಮಾರು 2 ಲಕ್ಷ 5 ಸಾವಿರ ರೂಪಾಯಿ ಕಿಮ್ಮತ್ತಿನ ಒಟ್ಟು 7 ವಿವಿಧ ಕಂಪನಿಯ ಮೋಟರ್ ಸೈಕಲ್‌ಗಳನ್ನು ಪತ್ತೆ ಮಾಡಿ ವಶಪಡಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಕಳ್ಳತನವಾದ ಮೋಟಾರ್ ಸೈಕಲ್‌ಗಳ ಪತ್ತೆ ಮಾಡಲು ಶ್ರಮಿಸಿದ ಮುಂಡರಗಿ ಪೊಲೀಸ್ ಠಾಣೆಯ ಸಬ್ ಇನ್ಸಪೆಕ್ಟರ್‌ಗಳಾದ ಚನ್ನಯ್ಯ ದೇವೂರ, ಬಿ.ಎನ್.ಯಳವತ್ತಿ, ಸಿಬ್ಬಂದಿ ಜೆ.ಐ.ಬಚ್ಚೇರಿ, ಅಶೋಕ ಬೂದಿಹಾಳ, ಮಂಜುನಾಥ ಅಗಸಿಮನಿ, ಮಹೇಶ ಗೋಳಗೊಳಕಿ, ವಿನಾಯಕ ಬಾಲರಡ್ಡಿ, ನಾಗರಾಜ ಹರಪನಹಳ್ಳಿ, ಶರಣಪ್ಪ ಓಜನಹಳ್ಳಿ, ನಿಂಗಪ್ಪ ಪೂಜಾರ, ಪರಶುರಾಮ ಧಾರವಾಡ ಇವರುಗಳಿಗೆ ಗದಗ ಜಿಲ್ಲೆಯ ಪೊಲೀಸ್ ಅಧೀಕ್ಷಕ ರೋಹನ್ ಜಗದೀಶ ಅವರು ಈ ಕಾರ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿ ಸೂಕ್ತ ಬಹುಮಾನ ಘೋಷಿಸಿದ್ದಾರೆ.

ಮಕ್ಕಳಿಗೆ ಉನ್ನತ ಶಿಕ್ಷಣ ಒದಗಿಸಿ

◆**ರೋಣ:** ಮುಸ್ಲಿಮರು ತಮ್ಮ ಮಕ್ಕಳಿಗೆ ಧರ್ಮದ ತಿಳಿವಳಿಕೆ ಜೊತೆಗೆ ಉನ್ನತ ಶಿಕ್ಷಣ ಒದಗಿಸುವ ಕರ್ತವ್ಯವನ್ನು ನಿಭಾಯಿಸಬೇಕು ಎಂದು ಮೌಲಾನ ಮಲೀಕ್ ಹೇಳಿದರು.

ಅವರು ಶನಿವಾರ ಮಾರನಬಸರಿ ಗ್ರಾಮದ ಈದ್ಗಾ ಮೈದಾನದಲ್ಲಿ ಜರುಗಿದ ರಂಜಾನ್ ಹಬ್ಬದ ಸಾಮೂಹಿಕ ಪ್ರಾರ್ಥನೆಯ ನೇತೃತ್ವ ವಹಿಸಿ ಮಾತನಾಡಿ, ರಂಜಾನ್ ಹಬ್ಬ ಮುಸ್ಲಿಮರ ಪಾಲಿಗೆ ಅತ್ಯಂತ ಪವಿತ್ರ ಹಬ್ಬ. ದೇವರಿಗಾಗಿ ತಿಂಗಳಾದ್ಯಂತ ಉಪವಾಸ ಆಚರಿಸುವ ಜೊತೆಗೆ ವಿಶೇಷ ಪ್ರಾರ್ಥನೆಯಲ್ಲಿ ತೊಡಗಿಕೊಳ್ಳುತ್ತೇವೆ. ನಮ್ಮಲ್ಲಿರುವ ಕೆಟ್ಟ ವಿಚಾರಗಳು ದೂರವಾಗಿ ಒಳ್ಳೆಯ ಆಲೋಚನೆಗಳಿಂದ ಜೀವನ ನಿರ್ವಹಿಸಬೇಕು ಎಂಬ ತತ್ವಗಳು ರಂಜಾನ್ ಹಬ್ಬದಲ್ಲಿ ಅಡಕವಾಗಿದೆ ಎಂದರು.

ರೋಣ, ನಿಡಗುಂದಿ, ಜಕ್ಕಲಿ, ಅಬ್ಬಿಗೇರಿ, ಹಿರೇಹಾಳ, ಕೊತಬಾಳ, ಇಟಗಿ, ಸವಡಿ, ಬೆಳವಣಕಿ, ಮುಗುಳಿ, ಗುಳಗುಳಿ, ಹೊಸಳ್ಳಿ, ಕಳಕಾಪೂರ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ರಂಜಾನ್ ಆಚರಿಸಲಾಯಿತು. ಕಾಶೀಮಸಾಬ ದೋಟಿಹಾಳ, ರೈಮಾನಸಾಬ ಮೋತೆಖಾನ್, ಫಕ್ರುಸಾಬ ಹಜರತನವರ, ಬಾಬು ಮೋತೆಖಾನ್, ಬಾಬು ಅತ್ತಾರ, ಮರ್ತುಜಸಾಬ ಸವಡಿ, ಅಲ್ಲಿಸಾಬ ಸವಡಿ ಇತರರಿದ್ದರು.



ಬದುಕಿಗೆ ಆಸರೆಯಾದ ಗ್ಯಾರಂಟಿ: ಮಠಪತಿ



◆**ಶಿರಹಟ್ಟಿ:** ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರ ಬದುಕಿಗೆ ಗ್ಯಾರಂಟಿ ಯೋಜನೆ ಆಸರೆಯಾಗಿದೆ ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ವೀರಯ್ಯ ಮಠಪತಿ ಹೇಳಿದರು.

ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುತ್ತಿದ್ದು, ಬಡವರ ಬದುಕು ಹಸನಾಗುತ್ತದ್ದು, ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಗಾರ್ಮೆಂಟ್ಸ್, ವ್ಯಾಪಾರಕ್ಕೆ ಹತ್ತಾರು ಕಿ.ಮಿ ಹೋಗಿ ಕೂಲಿ ಕೆಲಸ ಮಾಡುವ ಮಹಿಳೆಯರಿಗೆ ಶಕ್ತಿ ಯೋಜನೆ ಶಕ್ತಿ ತುಂಬುತ್ತಿದೆ. ಕಡು ಬಡತನ ಅನುಭವಿಸುವ ಕುಟುಂಬವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಗೃಹಲಕ್ಷ್ಮೀ ಯೋಜನೆ ಸಹಕಾರಿಯಾಗುತ್ತಿದ್ದು, ಅಧಿಕಾರಿಗಳು ಪ್ರತಿ ಅರ್ಹ ಕುಟುಂಬವನ್ನು ಗುರುತಿಸಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು ಎಂದರು.

ತಾಲೂಕಿನ ಕೆಲ ಹಳ್ಳಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ನೋಂದಣಿ ಸಮಸ್ಯೆ ಕಾಡುತ್ತಿದೆ. ಪಡಿತರ ಚೀಟಿ, ಆಧಾರ್ ಕಾರ್ಡ್, ಮೊಬೈಲ್ ನಂಬರ್, ಬ್ಯಾಂಕ್ ಪಾಸ್‌ಬುಕ್ ಸೇರಿ ಅಗತ್ಯ ದಾಖಲೆ ನೀಡಿದರೂ ಗೃಹಲಕ್ಷ್ಮೀ ಹಣ ಜಮವಾಗುತ್ತಿಲ್ಲ, ಇಂತಹ ತಾಂತ್ರಿಕ ಸಮಸ್ಯೆಗಳನ್ನು ಅಧಿಕಾರಿಗಳು ಶಕ್ಷಣ ಸರಿಪಡಿಸಬೇಕು ಎಂದರು. ತಾಲೂಕು ಪಂಚಾಯಿತಿ ಇಒ ರಾಮಪ್ಪ ದೊಡ್ಡಮನಿ, ಶಿವನಗೌಡ ಪಾಟೀಲ, ರಾಘವೇಂದ್ರ ದೊಡ್ಡಮನಿ, ಆರ್. ಆರ್. ಗಡ್ಡದೇವರಮಠ, ಬುಡನಶ್ಯಾ ಮಕಾಂದರ, ಮಲ್ಲಪ್ಪ ಹುಯಿಲಗೋಳ, ಹೊನ್ನೇಶ ಪೋಟಿ, ದೇವಪ್ಪ ಲಮಾಣಿ, ಸೋಮನಗೌಡ ಮರಿಗೌಡರ ಇದ್ದರು.

ಲಕ್ಷ್ಮೇಶ್ವರದಲ್ಲಿ ರಂಜಾನ್ ಆಚರಣೆ

◆**ಲಕ್ಷ್ಮೇಶ್ವರ:** ಮುಸ್ಲಿಂ ಬಾಂಧವರ ಶ್ರದ್ಧಾ ಭಕ್ತಿಯ ಹಬ್ಬವಾಗಿರುವ ರಂಜಾನ್ ಮಾಸಾಂತ್ಯದ ದಿನವಾದ ಶನಿವಾರ ಮುಸ್ಲಿಂ ಬಂಧುಗಳು ಈದ್ ಉಲ್‌ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಸಮಾಜದ ಸಾವಿರಾರು ಜನರು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು.

ರಂಜಾನ್ ಮಾಸದ ಅಂತ್ಯವನ್ನು ಸೂಚಿಸುತ್ತದೆ. ಪರಸ್ಪರ ಶುಭಾಶಯ ವಿನಿಮಯ ಮಾಡಿ ಬಳಿಕ ವಿಶೇಷ ಖಾದ್ಯವನ್ನು ಸವಿದು ಹಬ್ಬವನ್ನು ಆಚರಿಸುತ್ತಾರೆ. ಈ ದಿನ ಬಡವರಿಗೆ ದಾನ-ಧರ್ಮವನ್ನು ಮಾಡುವುದು ಕೂಡಾ ಈ ಹಬ್ಬದ ವಿಶೇಷವಾಗಿದೆ. ಒಂದು ತಿಂಗಳ ಕಾಲ ನಡೆಸಿಕೊಂಡು ಬಂದ ರೋಜಾ ವ್ರತವನ್ನು ಮುಕ್ತಾಯಗೊಳಿಸಿದ ಮುಸ್ಲಿಂ ಬಂಧುಗಳು ಶನಿವಾರ ಬೆಳಗ್ಗೆ ಹೊಸ ಬಟ್ಟೆ ಧರಿಸಿ ಮುಕ್ತಿಮಂದಿರ ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಂಧುಗಳು ಸಾವಿರಾರು ಸಂಖ್ಯೆಯಲ್ಲಿ ಸೇರಿ ನಮಾಜ್ ಮಾಡಿದರು. ಪಟ್ಟಣದಲ್ಲಿ ಬಹುತೇಕ ರಂಜಾನ್ ಹಬ್ಬ ಶಾಂತಿಯುತವಾಗಿ ನೆರವೇರಿತು. ಅಂಜುಮನ್ ಎ-ಇಸ್ಲಾಂ ಕಮಿಟಿ, ದೂದನಾನಾ ದರ್ಗಾ ಕಮೀಟಿ ಹಾಗೂ ಇನ್ನಿತರ ಮುಸ್ಲಿಂ ಸಮಾಜದ ಕಮಿಟಿಗಳ ಮುಖ್ಯಸ್ಥರು ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.



ಉಪಚುನಾವಣೆ | ದಾಖಲೆ ಇಲ್ಲದ 20.80 ಲಕ್ಷ ರೂ. ಸೀಜ್

ಚೆಕ್‌ಪೋಸ್ಟ್‌ಗಳಲ್ಲಿ ಅಧಿಕಾರಿಗಳು ಅಲರ್ಟ್

▸ ಜಗದೀಶ ಎಂ.ಗಾಣಿಗೇರ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭೆಯ ಚುನಾವಣೆ ಕಾವು ದಿನದಿಂದ ದಿನಕ್ಕೆ ಏರುತ್ತಿದೆ. ಮತದಾನಕ್ಕೆ ಹದಿನಾಲ್ಕು ದಿನ ಬಾಕಿ ಇದ್ದು ಜಿಲ್ಲೆಯಾದ್ಯಂತ ನಿರ್ಮಾಣವಾಗಿರುವ ಚೆಕ್‌ಪೋಸ್ಟ್‌ಗಳಲ್ಲಿ ಹಾಯ್ದು ಹೋಗುವ ಪ್ರತಿಯೊಂದು ವಾಹನ ತಪಾಸಣೆ ನಡೆಯುತ್ತಿದ್ದು, ಅಧಿಕಾರಿಗಳು ಫುಲ್ ಅಲರ್ಟ್ ಆಗಿದ್ದಾರೆ.

ಜಿಲ್ಲೆಯಾದ್ಯಂತ ನೀತಿ ಸಂಹಿತೆ ಜಾರಿಯಲ್ಲಿದೆ. ಅನಧಿಕೃತವಾಗಿ ಸಾಮಾಗ್ರಿ ಸಾಗಾಣಿಕೆ, ಹಣದ ಸಾಗಾಣಿಕೆ ನಡೆಯುತ್ತಿದ್ದರೆ 24 ಗಂಟೆ ಚೆಕ್‌ಪೋಸ್ಟ್ ಕಣ್ಗಾವಲು ಇಟ್ಟಿದೆ. ಹಳದೂರ, ಮಹಾಲಿಂಗಪೂರ ಬುದ್ನಿ, ವಿಜಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಅನಗವಾಡಿ, ಮಲ್ಲಾಪುರ, ಬೇಲೂರ, ಗುಡೂರ ಎಸ್ಸಿ, ಹೊನ್ನಾಕಟ್ಟಿ ಕ್ರಾಸ್, ಮುಧೋಳ ಕ್ಷೇತ್ರದ ಲೋಕಾಪುರ, ಯಾದವಾಡ ವೃತ್ತ, ಲಕ್ಷಾನಟ್ಟಿ ಕ್ರಾಸ್, ಸಂಗೊಳ್ಳಿ ರಾಯಣ್ಣ ವೃತ್ತ, ತೇರದಾಳ ವ್ಯಾಪ್ತಿಯ ಬುದ್ನಿ ಪಿಡಿ ಕ್ರಾಸ್, ಮಹಾಲಿಂಗಪೂರ, ಜಮಖಂಡಿ, ಹುನಗುಂದ ಬಾದಾಮಿ ಮತಕ್ಷೇತ್ರ ಸೇರಿದಂತೆ ಜಿಲ್ಲೆಯ ಪ್ರತಿಯೊಂದು ಬಾಗದಿಂದ ಬಾಗಲಕೋಟೆಗೆ ಬರುವ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ. ಇನ್ನೂ ಚೆಕ್‌ಪೋಸ್ಟ್ ಮೂಲಕ ಹಾಯ್ದು ಹೋಗುವ ಪ್ರತಿ ವಾಹನದಲ್ಲಿ 50 ಸಾವಿರ ರೂ.ಗಿಂತ ಹೆಚ್ಚಿಗೆ ಹಣ ಸಾಗಿಸುತ್ತಿದ್ದರೆ ಅದಕ್ಕೆ ದಾಖಲೆ ಸಲ್ಲಿಸಿ ತೆಗೆದುಕೊಂಡು ಹೋಗಬೇಕು ಇಲ್ಲವಾದರೆ ಚೆಕ್‌ಪೋಸ್ಟ್‌ದಲ್ಲಿ ವಶಕ್ಕೆ ಪಡೆಯಲಾಗುತ್ತದೆ.



> ಚೆಕ್‌ಪೋಸ್ಟ್‌ದಲ್ಲಿ ಪ್ರತಿಯೊಂದು ವಾಹನಗಳನ್ನು ತಪಾಸಣೆ ಮಾಡಿ ಕಳುಹಿಸಲಾಗುತ್ತಿದೆ. ಶನಿವಾರ ಬಾಗಲಕೋಟೆ ಮತ್ತು ಹುನಗುಂದ ಚೆಕ್ ಪೋಸ್ಟ್‌ಬಳಿ 5 ಲಕ್ಷ 30 ಸಾವಿರ ರೂ. ದಾಖಲೆ ಇಲ್ಲದಕ್ಕೆ ವಶಕ್ಕೆ ಪಡೆಯಲಾಗಿದೆ. ದಾಖಲೆ ಒದಗಿಸಿದ ಬಳಿಕ ಸಂಬಂಧಿಸಿದವರಿಗೆ ದುಡ್ಡು ವಾಪಸ್ ನೀಡಲಾಗುವುದು.
> ■ ಸಿದ್ದಾರ್ಥ ಗೋಯಲ್, ಎಸ್ಪಿ, ಬಾಗಲಕೋಟೆ

ಇತ್ತೀಚೆಗೆ ನಾಯನೇಗಲಿ ಚೆಕ್‌ಪೋಸ್ಟ್ ಮೂಲಕ ಹಾಯ್ದು ಹೋಗುವಾಗ ದಾಖಲೆ ಇಲ್ಲದೇ 15.50 ಲಕ್ಷ ರೂ. ಸಾಗಿಸುತ್ತಿದ್ದಾಗ ವಶಕ್ಕೆ ಪಡೆಯಲಾಗಿದೆ. ಮಾ.21ರಂದು ಹುನಗುಂದ ಚೆಕ್‌ಪೋಸ್ಟ್ ಬಳಿ, 3ಲಕ್ಷ 30 ಸಾವಿರ ಮತ್ತು ಬಾಗಲಕೋಟೆ ಚೆಕ್‌ಪೋಸ್ಟ್ ಬಳಿ 2 ಲಕ್ಷ ರೂ. ದಾಖಲೆ ಇಲ್ಲದೇ ಸಾಗಿಸುತ್ತಿದ್ದಾಗ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ವಾಹನಗಳ ತಪಾಸಣೆ: ಚೆಕ್‌ಪೋಸ್ಟ್‌ದಲ್ಲಿ ಹೋಗುವ ಲಾರಿ, ಕಾರು, ಗೂಡ್ಸ್ ವಾಹನಗಳ ಡಿಕ್ಕಿ, ಸೀಟುಗಳ ಬಳಿ ತಪಾಸಣೆ ನಡೆಸಲಾಗುತ್ತಿದ್ದು, ಮತದಾನ ಸಮೀಪಿಸುತ್ತಿದ್ದಂತೆ ಕ್ಷೇತ್ರದಲ್ಲಿ ದುಡ್ಡು ಹರಿದಾಡಬಾರದು, ಪಾರದರ್ಶಕ ಮತದಾನ ನಡೆಯಬೇಕು ಎಂದು ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ.

ಚೆಕ್‌ಪೋಸ್ಟ್‌ದಲ್ಲಿ ವಾಹನಗಳು ತಪಾಸಣೆಗೊಂಡ ನಂತರವೇ ಮುಂದೆ ಸಾಗುವಂತೆ ಬ್ಯಾರಿಕೇಡ್‌ಗಳನ್ನು ಕೂಡ ಅಳವಡಿಸಲಾಗಿದೆ. ಸ್ವಲ್ಪ ವಾಹನಗಳು ನಿಲ್ಲಿಸಿ ಹೋಗುವುದರಿಂದ ಚೆಕ್‌ಪೋಸ್ಟ್ ಸಮೀಪ ವಾಹನಗಳ ಟ್ರಾಫೀಕ್ ಜಾಮ್ ಆಗಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಚಾಲಕರು, ವಾಹನಗಳ ಮಾಲೀಕರು ಸಹಕರಿಸಬೇಕು ಎಂದು ಅಧಿಕಾರಿಗಳು ತಿಳಿಸುತ್ತಿದ್ದಾರೆ.

ದಿಗಂತ ವಿಶೇಷ

ಕಲ್ಲಂಗಡಿ ಹಣ್ಣುಗಳಿಗೆ ಬೇಡಿಕೆ | ದಲ್ಲಾಳಿಗಳು ಕಂಗಾಲು

ಮಾರುಕಟ್ಟೆ ಅಖಾಡಕ್ಕಿಳಿದ ರೈತರು

▸ ರುದ್ರಗೌಡ ಪಾಟೀಲ

ಗದಗ: ಸದಾ ದಲ್ಲಾಳಿಗಳ ಮೋಸಕ್ಕೆ ಹೈರಾಣಾಗಿದ್ದ ರೈತರು ಇದೀಗ ಸ್ವತಃ ತಾವೇ ಮಾರುಕಟ್ಟೆ ಅಖಾಡಕ್ಕೆ ಇಳಿದಿದ್ದಾರೆ. ನಾನಾ ಕಾರಣ ನೆಪವೊಡ್ಡಿ ಕಲ್ಲಂಗಡಿ ಹಣ್ಣು ರೈತರಿಂದ ಕಡಿಮೆ ದರಳಿಗೆ ದಲ್ಲಾಳಿಗಳು ಖರೀದಿಸಿ ನಂತರ ಅದನ್ನು ಗ್ರಾಹಕರಿಗೆ ರೂ. 25ರಿಂದ 50ರ ವರೆಗೂ ಮಾರಾಟ ಮಾಡುತ್ತಾರೆ. ಇದನ್ನರಿತ ರೈತರು ದಲ್ಲಾಳಿಗಳ ಸಹವಾಸವೇ ಬೇಡ ಎಂದು ತಾವೇ ತಂದು ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ರೈತರು ಭರ್ಜರಿ ಲಾಭ ಪಡೆಯುತ್ತಿದ್ದಾರೆ.

ನಗರದ ಪಂಚರಹೊಂಡ ಬಳಿ ಬಂದರೆ ಸಾಲು ಸಾಲು ಸಾಲು ಟ್ರ್ಯಾಕ್ಟರ್ ಟ್ರ್ಯಾಲಿಗಳಲ್ಲಿ ಕಲ್ಲಂಗಡಿ ಹಣ್ಣು ತುಂಬಿಕೊಂಡು ಮಾರಾಟ ಮಾಡುವುದು ಕಾಣಸುತ್ತಿದೆ. ಗ್ರಾಹಕರು ರೈತರ ಬಳಿಯಿಂದಲೇ ಹಣ್ಣುಗಳ ಖರೀದಿಗೆ ಮುಗಿಬಿದ್ದಾರೆ. ಗ್ರಾಹಕರಿಗೆ ಕಡಿಮೆ ದರದಲ್ಲಿ ಉತ್ತಮ ಕಲ್ಲಂಗಡಿ ನೀಡುತ್ತಿದ್ದಾರೆ.

ಲಾಭದತ್ತ ರೈತರು: ವರ್ಷವಿಡೀ ಕಷ್ಟಪಟ್ಟರೂ ಮಾರಾಟದ ವೇಳೆ ಸದಾ ದಲ್ಲಾಳಿಗಳ ಹೊಡೆತಕ್ಕೆ ನಲುಗಿ ಹೋಗುತ್ತಿದ್ದ ರೈತರಿಗೆ ಈ ವರ್ಷ ತಾವೇ ಮಾರಾಟ ಮಾಡುತ್ತಿರುವುದರಿಂದ ರೈತರು ಲಾಭದತ್ತ ಮುಖ ಮಾಡಿದ್ದಾರೆ. ಹುಲಕೋಟಿ, ನಾಗಸಮುದ್ರ ಸೇರಿದಂತೆ ವಿವಿಧ ಭಾಗಗಳಿಂದ ಬರುವ ರೈತರು ಕಲ್ಲಂಗಡಿಯನ್ನು ಟ್ರ್ಯಾಕ್ಟರ್ ಮೂಲಕ ತರುತ್ತಾರೆ. ಬೆಳಗ್ಗೆಯಿಂದ ಸಾಯಂಕಾಲದವರಿಗೆ ಮಾರಾಟ ಮಾಡುತ್ತಾರೆ.

ಹೆಚ್ಚಿನ ಇಳುವರಿ: ಈ ವರ್ಷ ಹೆಚ್ಚಿನ ಪ್ರಮಾಣದ ಕಲ್ಲಂಗಡಿ ಬೆಳೆದಿದ್ದಾರೆ. ಬೇಸಿಗೆಯಲ್ಲಿ ಹೆಚ್ಚಿನ ಪ್ರಮಾಣ ಲಾಭವಾಗುತ್ತಿರುವುದರಿಂದ ನಗರದಲ್ಲಿ ಕಲ್ಲಂಗಡಿ ಮಾರಾಟ ಜೋರಾಗಿದೆ. ದಲ್ಲಾಳಿಗಳಿಗೆ ನೀಡುವ ದರಕ್ಕಿಂತ ರೈತರು ಈಗ ಮೂರು ಪಟ್ಟು ಹೆಚ್ಚು ಲಾಭ ಪಡೆಯುತ್ತಿದ್ದಾರೆ. ರೈತರ ಈ ನಿರ್ಧಾರದಿಂದ ಗ್ರಾಹಕರಿಗೂ ಬಂಪರ್ ಲಾಭವಾಗುತ್ತಿದೆ.



> ಕೆಲವು ದಲ್ಲಾಳಿಗಳು ನಮ್ಮ ಹೊಲಕ್ಕೆ ಬಂದು ಕಲ್ಲಂಗಡಿ ಹಣ್ಣುಗಳನ್ನು 5ರಿಂದ 8ರವರಿಗೆ ಖರೀದಿ ಮಾಡಿಕೊಂಡು ಹೋಗುತ್ತಿದ್ದರು. ನಂತರ ಗ್ರಾಹಕರಿಗೆ 50 ರಿಂದ 100ರವರೆಗೆ ಮಾರಾಟ ಮಾಡುತ್ತಾರೆ. ಇದರಿಂದ ನಮಗೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗುತ್ತದೆ. ಹೀಗಾಗಿ ನಾವೇ ನೇರವಾಗಿ ಮಾರಾಟ ಮಾಡಿ ಹೆಚ್ಚಿನ ಲಾಭ ಪಡೆಯುತ್ತಿದ್ದೇವೆ.
> ■ ಸುರೇಶ, ಕಲ್ಲಂಗಡಿ ಬೆಳೆದ ರೈತ

> ದಲ್ಲಾಳಿಗಳ ಹಿಡಿತಕ್ಕೆ ನಲುಗಿದ್ದ ರೈತರು ಕಲ್ಲಂಗಡಿಗಳನ್ನು ತಾವೇ ಮಾರಾಟ ಮಾಡುತ್ತಿದ್ದು, ಮೂರು ಪಟ್ಟು ಹೆಚ್ಚು ಲಾಭ ಪಡೆಯಲಾಗುತ್ತಿದೆ. ಜತೆಗೆ ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರು ಭೇಟಿಯಾಗಿ ನೇರವಾಗಿ ಹೊಲಕ್ಕೆ ಬಂದು ವಿವಿಧ ಹಣ್ಣುಗಳನ್ನು ಖರೀದಿ ಮಾಡಿಕೊಂಡು ಹೋಗುತ್ತಾರೆ.
> ■ ಭೀಮಪ್ಪ, ಕಲ್ಲಂಗಡಿ ಬೆಳೆದ ರೈತ

ದಲ್ಲಾಳಿಗಳು ಕೆಜಿಗೆ 25-30 ರೂಪಾಯಿಯಂತೆ ಮಾರಾಟ ಮಾಡುತ್ತಿದ್ದರು. ಈಗ ರೈತರು ಕೆಜಿಗೆ 13-15 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಗ್ರಾಹಕರೂ ಖುಷಿಯಾಗಿದ್ದಾರೆ. ದಲ್ಲಾಳಿಗಳ ಆಟಕ್ಕೆ ಹೊಡೆತ ಬಿದ್ದಿದೆ.

ಸದಾ ದಲ್ಲಾಳಿಗಳ ಮೋಸಕ್ಕೆ ಹೈರಾಣಾಗಿದ್ದ ರೈತರು ಇದೀಗ ಸ್ವತಃ ಮಾರುಕಟ್ಟೆ ಅಖಾಡಕ್ಕೆ ಇಳಿದಿದ್ದಾರೆ. ಜತೆಗೆ ಗ್ರಾಹಕರಿಗೂ ಕಡಿಮೆ ದರದಲ್ಲಿ ಕಲ್ಲಂಗಡಿ ಹಣ್ಣು ದೊರೆತರೆ ಮತ್ತೊಂದೆಡೆ, ರೈತರು ಭರ್ಜರಿ ಲಾಭದಲ್ಲಿದ್ದಾರೆ. ಹೀಗಾಗಿ ದಲ್ಲಾಳಿಗಳು ರೈತರ ನಿರ್ಧಾರದಿಂದ ಅಕ್ಷರಶಃ ಕಂಗಾಲಾಗಿದ್ದಾರೆ.

ಕಿರುಸುದ್ದಿ

ಲಂಚಕ್ಕೆ ಬೇಡಿಕೆ: ಎಫ್‌ಡಿಎ ಮಧುಸೂದನ್ ಅಮಾನತು

ಧಾರವಾಡ: ಸಹಕಾರ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಮಧುಸೂದನ್ ಅವರನ್ನು ಸಹಕಾರ ಸಂಘಗಳ ನಿಬಂಧಕ ಎಚ್.ಎಂ.ಕುಮಾರ್ ಅಮಾನತು ಮಾಡಿ ಶನಿವಾರ ಆದೇಶ ಹೊರಡಿಸಿದ್ದಾರೆ. ಜಿಲ್ಲಾ ಸಹಕಾರ ಇಲಾಖೆಯಲ್ಲಿ ಲಂಚಾವತಾರ ನಡೆಯುತ್ತಿರುವ ಕುರಿತು ಸಹಕಾರ ಇಲಾಖೆಯ ಸಹಾಯಕ ನಿಬಂಧಕ ನಿಂಗರಾಜ ಬೆಣ್ಣಿ ಅವರು, ಸಹಕಾರ ಇಲಾಖೆ ಮೇಲಾಧಿಕಾರಿಗೆ ಪತ್ರ ಬರೆದಿದ್ದರು. ಫೈನಾನ್ಸ್ ಪರವಾನಗಿ ನವೀಕರಣಕ್ಕೆ ಫೈನಾನ್ಸ್ ಸಂಸ್ಥೆಗೆ ರೂ.30 ಸಾವಿರ ಬೇಡಿಕೆ ಇಟ್ಟು, ರೂ.3 ಸಾವಿರ ಹಣ ಪಡೆದು, ಕಚೇರಿಯಲ್ಲಿ ಎಣಿಸುವುದು ಸಾಬೀತಾದ ಹಿನ್ನೆಲೆಯಲ್ಲಿ ಅಮಾನತಗೊಳಿಸಿದ್ದಾರೆ.

ಬಾಲಕನ ಮೇಲೆ ಬೀದಿ ನಾಯಿ ದಾಳಿ

ಜಮಖಂಡಿ: ನಗರದಲ್ಲಿ ಹೆಚ್ಚುತ್ತಿರುವ ಬೀದಿ ನಾಯಿಗಳ ಹಾವಳಿಯಿಂದ ರಹೆಮತ್ ನಗರದ ಬಿಲಾಲ್ ಮಸೀದಿ ಹತ್ತಿರ ಆಟವಾಡುತ್ತಿದ್ದ 6 ವರ್ಷದ ಬಾಲಕ ಅಜಾನ್ ಅಸೀಫ್ ಬಡೇಗರ ಮೇಲೆ ಬೀದಿ ನಾಯಿ ದಾಳಿ ಮಾಡಿದ ಘಾಸಿಗೊಳಿಸಿದ ಘಟನೆ ನಡೆದಿದೆ. ರಂಜಾನ್ ಹಬ್ಬದ ನಿಮಿತ್ತ ತನ್ನ ಸಂಬಂಧಿಕರ ಮನೆಗೆ ಸಹೋದರನೊಂದಿಗೆ ತೆರಳುತ್ತಿದ್ದ ವೇಳೆ ಏಕಾಏಕಿ ಬೀದಿ ನಾಯಿ ದಾಳಿ ನಡೆಸಿದೆ ಎಂದು ತಿಳಿದು ಬಂದಿದೆ. ದಾಳಿಯಲ್ಲಿ ಮಗುವಿನ ತಲೆಗೆ ಗಂಭೀರ ಗಾಯಗಳಾಗಿದ್ದು, ಗಾಯಾಳು ಮಗುವನ್ನು ತಕ್ಷಣ ಜಮಖಂಡಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ. ನಗರದಾದ್ಯಂತ ನಾಗರಿಕರು ಹೊರಗಡೆ ತಿರುಗಾಡಲೂ ಸಹ ಭಯಪಡುವ ಸ್ಥಿತಿ ಎದುರಾಗಿದೆ. ಎಲ್ಲೆಂದರಲ್ಲಿ ನಾಯಿಗಳ ಹಿಂಡು ಬಂದು ಏಕಾಏಕಿ ದಾಳಿ ಮಾಡಿ ಜನರನ್ನು ಘಾಸಿಗೊಳಿಸುತ್ತಿವೆ. ನಗರ ಸಭೆಯ ಅಧಿಕಾರಿಗಳು ಇದಕ್ಕೆ ಏನಾದರೂ ಪರ್ಯಾಯ ಕ್ರಮ ಜರುಗಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಆರ್‌ಎಸ್‌ಎಸ್ ಬಲಿಷ್ಠ ಸಂಘಟನೆ: ನರೇಂದ್ರ



ಹುಬ್ಬಳ್ಳಿ: ರಾಷ್ಟ್ರೀಯ ಸ್ವಯಂಸೇವಕ ಸಂಘ ವಿಶ್ವದ ಅತಿದೊಡ್ಡ ಸಂಘಟನೆ ಎಂದು ಹೇಳಲಾಗುತ್ತಿದೆ. ಹಾಗೆಯೇ ಬಲಿಷ್ಠ ಸಂಘಟನೆಯೂ ಹೌದು. ಇದರ ಹಿಂದೆ ಇರುವುದು ಹೆಡಗೇವಾರ್ ಅವರ ಪರಿಶ್ರಮ ಎಂದು ಆರ್‌ಎಸ್‌ಎಸ್‌ನ ಕರ್ನಾಟಕ ಉತ್ತರ ಪ್ರಾಂತ ಪ್ರಚಾರಕ ನರೇಂದ್ರ ತಿಳಿಸಿದರು.

ನಗರದ ಲೋಕಹಿತ ಟ್ರಸ್ಟ್ ಮತ್ತು ಸಂಸ್ಕಾರ ಭಾರತಿ ಸಹಯೋಗದಲ್ಲಿ ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಶನಿವಾರ ನಡೆದ ವಿಶೇಷಸಂಗೀತ ನೃತ್ಯ ಕಾರ್ಯಕ್ರಮ 'ಕೇಶವ ನಮನ'ದಲ್ಲಿ ಅವರು ಮಾತನಾಡಿದರು.

ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು, ರಾಷ್ಟ್ರೀಯ ಸ್ವಯಂಸೇವಕ ಸಂಘ ಎನ್ನುವ ಗಂಗೆಯನ್ನು ಭೂಮಿಗೆ ತಂದರು. ಅವರು ಪ್ರತಿಮ ದೇಶಭಕ್ತರಾಗಿದ್ದರು. ಸ್ವಂತಕ್ಕೆ ಯೋಚಿಸದೆ ಸಂಘಟನೆ ಕಾರ್ಯದಲ್ಲಿ ಹಗಲಿರುಳು ಶ್ರಮಿಸಿದ ಮಹಾನ್ ಸಂತ ಅವರಾಗಿದ್ದರು ಎಂದರು.

ಹೆಡಗೇವಾರ್ ಅವರು 11ನೇ ವಯಸ್ಸಿನಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗುತ್ತಾರೆ. ಆದರೂ ದಾರಿ ತಪ್ಪದ ಮಗುವಾಗಿ ಶಾಲಾ ದಿನಗಳಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ನಂತರದ ಕ್ರಾಂತಿ ದಿನಗಳಲ್ಲಿ ಗುಲಾಮಗಿರಿಗೆ ಕಾರಣವೇನು ಎಂದು ಚಿಂತಿಸಿ, ರಾಜಿ ಇಲ್ಲದ ದೇಶಭಕ್ತಿ, ನಡವಳಿಕೆ ನಮ್ಮದಾಗಿ ಎಂದು ಯೋಚಿಸಿ ಹಿಂದುಗಳ ಸ್ವಯಂಸೇವಕ ಸಂಘಟನೆಯಲ್ಲಿ ನಿರತರಾದರು ಎಂದರು.

ಸದ್ಯ ಸಂಘ ಸಮಾಜದ ಎಲ್ಲಾ ಕ್ಷೇತ್ರದಲ್ಲಿಯೂ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದೆ. ಭಾರತ ಮಾತೆಯನ್ನು ಜಗನ್ಮಾತೆ ಮಾಡುವುದು ಸಂಘದ ಉದ್ದೇಶ. ಜಗತ್ತಿನಲ್ಲಿ ಗೊಂದಲವಿದ್ದು, ಎಲ್ಲರೂ ದೇಶಕ್ಕಾಗಿ ಹೆಚ್ಚು ಸಮಯ ವಿನಿಯೋಗಿಸಬೇಕು ಎಂದರು.

ನೂರು ಕಲಾವಿದರಿಂದ ದೇಶ ಭಕ್ತಿ ಗೀತೆ ಗಾಯನ ಏಕಕಾಲದಲ್ಲಿ ನಡೆಯಿತು. ಭರತನಾಟ್ಯ ಕಲಾವಿದ ಸುಜಯ ಶಾನಭಾಗ ಅವರ ತಂಡದಿಂದ 'ಸಂಘಾಂತರಂಗ ನೃತ್ಯ ರೂಪಕ', ಕೃಷ್ಣೇಂದ್ರ ವಾಡೇಕರ ಮತ್ತು ಗಾಯತ್ರಿ ದೇಶಪಾಂಡೆ ಅವರಿಂದ 'ಹಿಂದೂಸ್ತಾನಿ ಸಂಗೀತ' ಕಾರ್ಯಕ್ರಮ ನಡೆಯಿತು. ತೇಜೋಮಯಿ ಮಾತಾ ಸಾನ್ನಿಧ್ಯ ವಹಿಸಿದ್ದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯರಾದ ಶ್ರೀಧರ ನಾಡಿಗೇರ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ಉತ್ತರ ಪ್ರಾಂತ ಸಹಕಾರ್ಯವಾಹ ಕಿರಣ ಗುಡ್ಡದಕೇರಿ, ಖ್ಯಾತ ಹಿಂದೂಸ್ತಾನಿ ಗಾಯಕ ಹಾಗೂ ಸಂಸ್ಕಾರ ಭಾರತಿ ಅಧ್ಯಕ್ಷ ಬಾಲಚಂದ್ರ ನಾಕೋಡ್, ಸೇವಾ ಭಾರತಿ ಕಾರ್ಯದರ್ಶಿ ರಘು ಅಕ್ಮಂಚಿ, ಹಾಗೂ ಸಾಮಾಜಿಕ ಕಾರ್ಯಕರ್ತ ಸುಭಾಸಸಿಂಗ್ ಜಮಾದಾರ, ಶ್ರೀನಿವಾಸ, ದಿನೇಶ ವಾಘಮೋಡೆ ಉಪಸ್ಥಿತರಿದ್ದರು.

ಇಂದೇ ಚುನಾವಣೆ ನಡೆದರೂ ಬಿಜೆಪಿಗೆ ಅಧಿಕಾರ: ಬಿವೈವಿ

ಬೀದರ್: ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಜನರು ಬೇಸತ್ತಿದ್ದಾರೆ. ಇಂದೇ ಚುನಾವಣೆ ನಡೆದರೂ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂಬ ವಿಶ್ವಾಸವಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಚಾಂಗಲೇರಾ ಗ್ರಾಮದಲ್ಲಿರುವ ಜೆಡಿ ಕಲ್ಯಾಣ ಮಂಟಪದಲ್ಲಿ, ಬೀದರ್ ದಕ್ಷಿಣ ಮಂಡಲದ ವತಿಯಿಂದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪಂಡಿತ ದೀನದಯಾಳ ಉಪಾಧ್ಯಾಯರ 2026ರ ಪ್ರಶಿಕ್ಷಣ ಮಹಾಭಿಯಾನ ಉದ್ಘಾಟಿಸಿ ಅವರ ಮಾತನಾಡಿದರು.

ಬಿಜೆಪಿ ಕೇವಲ ಒಂದು ರಾಜಕೀಯ ಪಕ್ಷವಲ್ಲ, ಇದು ಒಂದು ಸಿದ್ಧಾಂತ ಮತ್ತು ಸೇವಾ ಮನೋಭಾವ. ನಮ್ಮ ಪಕ್ಷದ ನಿಜವಾದ ಬಲವೇ ನೀವು, ನಮ್ಮ ನಿಷ್ಠಾವಂತ ಕಾರ್ಯಕರ್ತರು. ಸಮಾಜದ ಕೊನೆಯ ವ್ಯಕ್ತಿಗೂ ನ್ಯಾಯ ಮತ್ತು ಸೌಲಭ್ಯಗಳು ತಲುಪಬೇಕು ಎಂಬುದು ನಮ್ಮ ಧ್ಯೇಯವಾಗಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತ ವಿಶ್ವದ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ. ಈ ಅಭಿವೃದ್ಧಿಯ ಪಥವನ್ನು ಇನ್ನಷ್ಟು ಬಲಪಡಿಸಲು ನಾವು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದರು.



ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಮಾತನಾಡಿ, ಸಂಘಟನೆಗೆ ಒತ್ತು ನೀಡುವುದು ಪಕ್ಷದ ಬಲವರ್ಧನೆಗೆ ಮೂಲಭೂತ ಅಂಶವಾಗಿದೆ. ಸಂಘಟಿತ ಕಾರ್ಯಕರ್ತರು, ಶಕ್ತಿಶಾಲಿ ಮಂಡಲ, ಬೂತ್ ಮಟ್ಟದ ವ್ಯವಸ್ಥೆ ಹಾಗೂ ಜನರೊಂದಿಗೆ ನೇರ ಸಂಪರ್ಕವೇ ಪಕ್ಷದ ಯಶಸ್ಸಿನ ಪ್ರಮುಖ ಶಕ್ತಿ. ಕೇಂದ್ರ ಸರ್ಕಾರದ ಯೋಜನೆಗಳನ್ನು ಪ್ರತಿಯೊಬ್ಬರಿಗೂ ಪರಿಚಯಿಸಬೇಕು ಎಂದರು.

ಈ ಸಂದರ್ಭದಲ್ಲಿ ಬಿ.ವೈ.ವಿಜಯೇಂದ್ರ ಅವರು ಚಾಂಗಲೇರಾ ಗ್ರಾಮದಲ್ಲಿರುವ ವೀರಭದ್ರೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷರಾದ ಸೋಮನಾಥ್ ಪಾಟೀಲ್, ದಕ್ಷಿಣ ಮಂಡಲ ಅಧ್ಯಕ್ಷ ಗುರುನಾಥ ರಾಜಗೀರಾ, ಮಾಜಿ ಸಚಿವ ಮತ್ತು ಶಾಸಕರಾದ ಪ್ರಭು ಚವ್ಹಾಣ, ಡಾ.ಸಿದ್ದು ಪಾಟೀಲ, ಶರಣು ಸಲಗರ, ಬಸವರಾಜ್ ಮತ್ತಿಮೂಡ್, ವಿಧಾನ ಪರಿಷತ್ ಸದಸ್ಯರುಗಳಾದ ಎಂ.ಜಿ.ಮೂಳೆ, ಶಶಿಲ್ ನಮೋಶಿ ಸೇರಿದಂತೆ ಪ್ರಮುಖರು, ಹೆಚ್ಚಿನ ಸಂಖ್ಯೆಯಲ್ಲಿ ಮುಖಂಡರು ಕಾರ್ಯಕರ್ತರು ಉಪಸ್ಥಿತರಿದ್ದರು.

ಗ್ಯಾಸ್ ಟ್ಯಾಂಕರ್ ಸೋರಿಕೆ: ಹುಬ್ಬಳ್ಳಿ-ಕಾರವಾರ ಹೆದ್ದಾರಿ ಸ್ಥಗಿತ

ಕಲಘಟಗಿ: ತಾಲೂಕಿನ ತಂಬೂರ ಕ್ರಾಸ್ ಬಳಿ ಹುಬ್ಬಳ್ಳಿ-ಕಾರವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಗ್ಯಾಸ್ ಟ್ಯಾಂಕರ್ ಅನಿಲ ಸೋರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ಮಾರ್ಗದ ಸಾರಿಗೆ ಸಂಚಾರ ಸಂಪೂರ್ಣ ನಿರ್ಬಂಧಿಸಲಾಗಿತ್ತು.

ಅನಿಲ ಸೋರಿಕೆ ಕಂಡು ಬಂದ ತಕ್ಷಣ ಮುಂಜಾಗ್ರತಾ ಕ್ರಮವಾಗಿ ಪೊಲೀಸರು ಸಂಚಾರ ತಡೆದರು. ಇದರಿಂದಾಗಿ ಸಾರಿಗೆ ಬಸ್‌ಗಳು ಹಾಗೂ ಇತರೆ ಖಾಸಗಿ ವಾಹನಗಳ ಸಂಚಾರದಲ್ಲಿ ಭಾರೀ ವ್ಯತ್ಯಯ ಉಂಟಾಗಿದ್ದು, ಪ್ರಯಾಣಿಕರು ಪರದಾಡಿದರು.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಭೇಟಿ ನೀಡಿ ಅಗತ್ಯ ಕ್ರಮ ಕೈಗೊಂಡರು. ಅನಿಲ ಸೋರಿಕೆಯಿಂದ ಉಂಟಾಗಬಹುದಾದ ಅಪಾಯತಪ್ಪಿಸಲು ಪೊಲೀಸ್ ಇಲಾಖೆ ಸಕಲ ಮುಂಜಾಗ್ರತಾ ಕ್ರಮ ಕೈಗೊಂಡು ಸೋರಿಕೆಯಾಗುತ್ತಿರುವ ಗ್ಯಾಸನ್ನು ಸುರಕ್ಷಿತವಾಗಿ ಬೇರೊಂದು ವಾಹನಕ್ಕೆ ವರ್ಗಾಯಿಸುವ ಪ್ರಕ್ರಿಯೆ ಪೊಲೀಸ್ ಹಾಗೂ ವಿಶೇಷ ಪರಿಣಿತರ ಭದ್ರತೆಯಲ್ಲಿ ಜರುಗಿತು.



ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಶೈಲ್ ಕೌಜಲಗಿ ಹಾಗೂ ಸಿಬ್ಬಂದಿ ಸ್ಥಳದಲ್ಲಿ ಮೊಕ್ಕಾಂ ಹೂಡಿ, ವಾಹನ ಸಂಚಾರ ನಿಯಂತ್ರಿಸಿದರು. ಕಾರ್ಯಾಚರಣೆಯಲ್ಲಿ ಮಂಗಳೂರಿನ ವಿಶೇಷ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ ಪಾಲ್ಗೊಂಡಿದ್ದರು.

ಬದಲಿ ಮಾರ್ಗ ಬಳಕೆ: ಹುಬ್ಬಳ್ಳಿ-ಕಾರವಾರ-ಅಂಕೋಲಾ ಕಡೆಗೆ ಸಂಚರಿಸುವ ವಾಹನಗಳು ಹುಬ್ಬಳ್ಳಿ ತಡಸ ಕ್ರಾಸ್-ಮುಂಡಗೋಡ ಮಾರ್ಗವಾಗಿ, ಹಾಗೂ ಧಾರವಾಡ-ಕಲಘಟಗಿ-ಯಲ್ಲಾಪೂರ ಮಾರ್ಗವಾಗಿ ಸಂಚರಿಸುವ ವಾಹನಗಳು ಹುಬ್ಬಳ್ಳಿ-ತಡಸ ಕ್ರಾಸ್-ಮುಂಡಗೋಡ ಮಾರ್ಗವಾಗಿ, ಮತ್ತು ಯಲ್ಲಾಪೂರ ಕಡೆಯಿಂದ ಕಲಘಟಗಿ ಹುಬ್ಬಳ್ಳಿ ಕಡೆಗೆ ಬರುವಂತಹ ವಾಹನಗಳು ಯಲ್ಲಾಪೂರ ಹಳಿಯಾಳ ಕ್ರಾಸ್-ಹಳಿಯಾಳ ಧಾರವಾಡ ಹುಬ್ಬಳ್ಳಿ ಕಡೆಗೆ ಸಂಚರಿಸುವುದು, ತಡಸ ಗ್ರಾಮದಿಂದ ತಬಕದ ಹೊನ್ನಳ್ಳಿ-ಕಲಘಟಗಿ ಮಾರ್ಗವಾಗಿ ಯಲ್ಲಾಪೂರ ಕಡೆಗೆ ಹೋಗುವ ವಾಹನಗಳನ್ನು ಮುಂಡಗೋಡ-ಶಿರ್ಸಿ ಮಾರ್ಗವಾಗಿ ಸಂಚರಿಸಲು ತಿಳಿಸಲಾಗಿತ್ತು.

ಹಿಂಸಾತ್ಮಕವಾಗಿಟ್ಟಿದ್ದ ಜಾನುವಾರು ವಶ



ಭಟ್ಕಳ: ವಧೆ ಮಾಡುವ ಉದ್ದೇಶದಿಂದ ಅಕ್ರಮವಾಗಿ ಶೆಡ್‌ವೊಂದರಲ್ಲಿ ನೀರು-ಹುಲ್ಲು ನೀಡದೆ ಕಟ್ಟಿ ಹಾಕಿದ್ದ 3 ಎತ್ತುಗಳು ಹಾಗೂ 2 ಕರುಗಳನ್ನು ನಗರ ಠಾಣೆಯ ಪೊಲೀಸರು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಮೂಲತಃ ಹೊನ್ನಾವರ ತಾಲೂಕಿನವನಾಗಿದ್ದು ಪ್ರಸ್ತುತ ಭಟ್ಕಳದ ಮೂಸಾ ನಗರದಲ್ಲಿ ವಾಸವಾಗಿರುವ ಮುಜಾಫರ್ ನಾಥಗೇರಿ (40) ಈತನೇ ಅಕ್ರಮವಾಗಿ ಜಾನುವಾರುಗಳನ್ನು ಕಟ್ಟಿಹಾಕಿದ ಆರೋಪಿಯಾಗಿದ್ದಾನೆ. ಸುಮಾರು 2.80 ಲಕ್ಷ ರೂ. ಮೌಲ್ಯದ 3 ಎತ್ತುಗಳು ಹಾಗೂ 40 ಸಾವಿರ ರೂ. ಮೌಲ್ಯದ 2 ಗಂಡು ಕರುಗಳನ್ನು ಬಂದರ ರಸ್ತೆಯ 6ನೇ ಕ್ರಾಸ್‌ನಲ್ಲಿ ಶೆಡ್‌ವೊಂದರಲ್ಲಿ ಯಾರಿಗೂ ತಿಳಿಯದಂತೆ ಇಟ್ಟು, ನೀರು-ಮೇವು ನೀಡದೇ ಹಿಂಸಾತ್ಮಕವಾಗಿ ಕಟ್ಟಿ ಹಾಕಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು 3 ಎತ್ತುಗಳು ಹಾಗೂ 2 ಕರುಗಳನ್ನು ವಶಕ್ಕೆ ಪಡೆದುಕೊಂಡಿದ್ದು ಈ ಕುರಿತು ನಗರ ಠಾಣೆಯ ಪಿಎಸ್ಐ ನವೀನ ನಾಯ್ಕ ನೀಡಿದ ದೂರಿನನ್ವಯ ಜಾನುವಾರು ಹತ್ಯೆ ತಡೆ ಮತ್ತು ಸಂರಕ್ಷಣಾ ಕಾಯ್ದೆಯಡಿ ಪಿಎಸ್ಐ ಸೋಮನಾಥ ರಾಠೋಡ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ್ದಾರೆ.

ವರಿಷ್ಠರ ತೀರ್ಮಾನಕ್ಕೆ ಬದ್ಧ: ನಾರಾ ಭರತ್ ರೆಡ್ಡಿ

ಬಳ್ಳಾರಿ: ಎರಡನೇ ಬಾರಿ ಗೆಲುವು ಸಾಧಿಸಿದವರಿಗೆ ಸಚಿವ ಸ್ಥಾನ ನೀಡಬೇಕು ಎಂದು ವರಿಷ್ಠರಿಗೆ ಮನವಿ ಮಾಡಿದ್ದೇವೆ. ಕೊಡೋದು ಬಿಡೋದು ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು. ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನಲ್ಲಿ 48 ಶಾಸಕರು ಸೇರಿ ಈ ಕುರಿತು ಸಭೆ ನಡೆಸಿ, ಸಚಿವ ಸ್ಥಾನ ನೀಡಬೇಕು ಎಂದು ವರಿಷ್ಠರಿಗೆ ಮನವಿ ಮಾಡಿದ್ದೇವೆ. ಈ ಕುರಿತು ಪಕ್ಷದ ವರಿಷ್ಠರು ತೀರ್ಮಾನ ಕೈಗೊಳ್ಳಬೇಕು. ಅವರು ಯಾವುದೇ ತೀರ್ಮಾನ ತೆಗೆದುಕೊಂಡರು ಅದಕ್ಕೆ ಬದ್ಧರಾಗಿದ್ದೇವೆ ಎಂದರು. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳು, ಪಕ್ಷ ಹೇಳಿದಂತೆ ಎಲ್ಲರೂ ನಡೆದುಕೊಳ್ಳಬೇಕು. ಇದರಿಂದ ಪಕ್ಷಕ್ಕೆ ದೊಡ್ಡಮಟ್ಟದ ಒಳ್ಳೆಯದಾಗಲಿದೆ. ಇವರನ್ನೇ ಮಾಡಿ ಎಂದು ಷರತ್ತು ಇಲ್ಲ, ವರಿಷ್ಠರು ಯಾರನ್ನೇ ಮಾಡಿದರೂ ಅದಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಅಧಿವೇಶನದೊಳಗೆ ಭೇಟಿ ಮಾಡಲು ಸಮಯ ನೀಡಲಾಗುವುದು ಎಂದು ದೆಹಲಿ ವರಿಷ್ಠರು ತಿಳಿಸಿದ್ದಾರೆ. ದೆಹಲಿ ಹೈಕಮಾಂಡ್ ವರಿಷ್ಠರು ನಮ್ಮ ಕುಟುಂಬ ಇದ್ದಂತೆ, ನಾವೆಲ್ಲರೂ ನಮ್ಮ ಕುಟುಂಬದ ಹಿರಿಯರಲ್ಲಿ ನಮ್ಮ ಬೇಡಿಕೆಗಳನ್ನು ಇಟ್ಟಿದ್ದೇವೆ, ಸಚಿವ ಸಂಪುಟ ವಿಸ್ತರಣೆಯಾದರೆ ನಮಗೂ ಅವಕಾಶ ನೀಡಬೇಕು ಎಂದು ಮನವಿ ಮಾಡುತ್ತೇವೆ. ಇದನ್ನೇ ತಪ್ಪು ಅರ್ಥೈಸಿಕೊಳ್ಳಬಾರದು, ಅಪಪ್ರಚಾರ ಮಾಡಕೂಡದು ಎಂದರು.

ಕೂಡಿಟ್ಟ ಹಣ ಸ್ಮಶಾನಕ್ಕೆ ದಾನ ಮಾಡಿದ ಬಾಲಕಿ

ಬೆಳಗಾವಿ: ಸಾವಿನಮನೆಯಲ್ಲೂ ಮಾನವೀಯತೆಯ ಹಣತೆ ಬೆಳಗಿದ ಘಟನೆಯೊಂದು ಬೆಳಗಾವಿಯ ಸದಾಶಿವ ನಗರದ ಸ್ಮಶಾನದಲ್ಲಿ ನಡೆದಿದೆ. ತನ್ನ ಆಸೆಯ ಕ್ರಿಕೆಟ್ ಬ್ಯಾಟ್ ಖರೀದಿಸಲು ಕೂಡಿಟ್ಟಿದ್ದ ಹಣವನ್ನು ಸ್ಮಶಾನದ ಕಾರ್ಯಕ್ಕೆ ನೀಡಿ ಪುಟ್ಟ ಬಾಲಕಿ ನಿಧಿ ಪಾಟಿಲ್ ಎಲ್ಲರ ಕಣ್ಣಾಲಿಗಳು ತೇವವಾಗುವಂತೆ ಮಾಡಿದ್ದಾಳೆ.

ಬೆಳಗಾವಿಯ ಸದಾಶಿವ ನಗರದ ಸ್ಮಶಾನದಲ್ಲಿ ಅಂತ್ಯಸಂಸ್ಕಾರಕ್ಕೆ ಅತ್ಯಗತ್ಯವಾಗಿ ಬೇಕಾಗುವ ಬೆರಣಿಗಳನ್ನು ದಾನ ಮಾಡುವ ಮೂಲಕ ಸಮಾಜ ಸೇವಕರು ಗಮನ ಸೆಳೆದಿದ್ದಾರೆ. ಸಮಾಜ ಸೇವಕರಾದ ಗಂಗಾಧರ್ ಪಾಟಿಲ್ ಮತ್ತು ಅಲನ್ ವಿಜಯ್ ಮೋರೆ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ಕೆ ಬಾಲಕಿ ನಿಧಿ ಪಾಟಿಲ್ ತೋರಿದ ತ್ಯಾಗ ಈಗ ಜಿಲ್ಲೆಯಾದ್ಯಂತ ಚರ್ಚೆಯಾಗುತ್ತಿದೆ.

ಉದಯೋನ್ಮುಖ ಕ್ರಿಕೆಟರ್ ಆಗಿರುವ ನಿಧಿ, ತಾನು ಹೊಸ ಬ್ಯಾಟ್ ಖರೀದಿಸಲು ಅತೀ ಆಸೆಯಿಂದ ಕೂಡಿಟ್ಟಿದ್ದ ಹಣವನ್ನು ಅಂತಿಮ ಸಂಸ್ಕಾರದ ಗೌರವಯುತ ವಿಧಿ ವಿಧಾನಗಳಿಗಾಗಿ ಬಳಸಲು ಮುಂದಾಗುವ ಮೂಲಕ ನಮಗಿಂತ ಪರರು ಮುಖ್ಯ ಎಂಬ ಸಂದೇಶ ಸಾರಿದ್ದಾಳೆ.

ಸ್ಮಶಾನದ ಕಾರ್ಮಿಕರಾದ ಮಲ್ಲೇಶ್ ಕಾಂಬಳೆ ಮತ್ತು ತಂಡ ಈ ದಾನವನ್ನು ಅತ್ಯಂತ ಭಾವುಕರಾಗಿ ಸ್ವೀಕರಿಸಿದರು. ತಂದೆಯ ಒಂದು ಕರೆಯಲ್ಲಿ ಸ್ಮಶಾನದ ಅಗತ್ಯವನ್ನು ಅರಿತ ನಿಧಿ, ಕ್ಷಣವೂ ಯೋಚಿಸದೆ ತನ್ನ ವೈಯಕ್ತಿಕ ಆಸೆಯನ್ನು ಬದಿಗೊತ್ತಿದ್ದು ನೆರೆದಿದ್ದವರ ಮೆಚ್ಚುಗೆಗೆ ಪಾತ್ರವಾಯಿತು. ನಿಧಿಯ ಕಾರ್ಯಕ್ಕೆ ಮಾಜಿ ಮಹಾಪೌರ ವಿಜಯ್ ಮೋರೆ ಕೃತಜ್ಞತೆ ಸಲ್ಲಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ದಾಂಡೇಲಿ: ವಿದ್ಯುತ್ ವ್ಯತ್ಯಯ ಇಂದು

ಕಾರವಾರ: ಕರ್ನಾಟಕ ನೀರಾವರಿ ನಿಗಮ ನಿಯಮಿತ, ಖಾನಾಪುರ ವಿಭಾಗದ ಕಾಮಗಾರಿಯ 1ನೇ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸಕ್ಕೆ ದಾಂಡೇಲಿ ತಾಲೂಕಿನ ಅಂಬೇವಾಡಿ 220/110/11 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತುರ್ತು ಕೆಲಸ ಇರುವುದರಿಂದ ಮಾ.22 ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ದಾಂಡೇಲಿಯ ಎಲ್ಲಾ ಗ್ರಾಮಗಳು, ಜೋಯಿಡಾ ತಾಲೂಕು (ರಾಮನಗರ ಹೊರತು ಪಡಿಸಿ), ಹಳಿಯಾಳ ತಾಲೂಕು (110/11 ಕೆ.ವಿ ಕಾವಲವಾಡ ಉಪ-ಕೇಂದ್ರದ ಮೇಲೆ ಬರುವ ಹಳ್ಳಿಗಳನ್ನು ಹೊರತು ಪಡಿಸಿ) ಅಳ್ನಾವರ ತಾಲೂಕಿನಾದ್ಯಂತ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ, ದಾಂಡೇಲಿಯ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಕೋಣಾರದಲ್ಲಿ ಯುಗಾದಿ ಉತ್ಸವ

ಭಟ್ಕಳ: ತಾಲೂಕಿನ ಕೋಣಾರದ ಹಿಂದೂ ಮಂಡಲದ ವತಿಯಿಂದ ಯುಗಾದಿ ಉತ್ಸವವನ್ನು ಮಾರ್ಚ 22ರಂದು ಭಾನುವಾರ ಸಂಜೆ ಕೋಣಾರದ ಶ್ರೀ ಸಿದ್ಧಿ ವಿನಾಯಕ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಯುವ ವಾಗ್ಮಿ ಕು. ಹಾರಿಕಾ ಮಂಜುನಾಥ್ ಇವರು ದಿಕ್ಸೂಚಿ ಭಾಷಣವನ್ನು ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಮಸ್ತ ಹಿಂದೂ ಬಾಂಧವರು ಭಾಗವಹಿಸುವಂತೆ ಸಂಘಟಕರು ಕೋರಿದ್ದಾರೆ.

ಪ್ರವಾಸೋದ್ಯಮ ಸಚಿವರ ಪ್ರವಾಸ ಇಂದು

ಕಾರವಾರ: ಕಾನೂನು ನ್ಯಾಯ ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಅವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾ. 22ರಂದು ಪ್ರವಾಸ ಕೈಗೊಂಡಿದ್ದು, ಅಂದು ಸಂಜೆ 4.30 ಗಂಟೆಗೆ ಹಳಿಯಾಳದಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ನೂತನವಾಗಿ ನಿರ್ಮಾಣವಾಗಿರುವ ಸಮಾವೇಶ ಕೇಂದ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊಲೀಸ್ ಠಾಣೆ ಮೆಟ್ಟಿಲೇರಿದ ಮಹಿಳೆಯರು

ಮುಂಡಗೋಡ: ಬಸ್ಸಿನಲ್ಲಿ ಇಬ್ಬರು ಮಹಿಳೆಯರು ಹೊಡೆದಾಡುಕೊಂಡು ತಮ್ಮ ಮಾಂಗಲ್ಯ ಸರ ಹರಿದುಕೊಂಡ ಘಟನೆ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದಿದೆ.ಹುಬ್ಬಳ್ಳಿ ಶಿರಶಿ ಮಾರ್ಗದ ಬಸ್ಸಿನಲ್ಲಿ ಗುರುವಾರ ಮಹಿಳೆರುಬ್ಬರು ಹೊಡೆದಾಡಿಕೊಂಡು ಪೊಲೀಸ್ ಠಾಣೆ ಮೆಟ್ಟಿಲೇರಿದರು.

ಇಲ್ಲಿನ ಬಸ್ ನಿಲ್ದಾಣದಿಂದ ಶಿರಶಿಗೆ ತೆರಳುತ್ತಿದ್ದ ಬಸ್ ನಲ್ಲಿ ಪ್ರಯಾಣಿಕರು ಸಂಖ್ಯೆ ಹೆಚ್ಚಾಗಿತ್ತು. ಮಹಿಳೆಯರು ಬಸ್ ಹತ್ತಿದ ಮೇಲೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆದು ಇಬ್ಬರು ಜಡೆ ಹಿಡಿದುಕೊಂಡು ಬಡಿದಾಡುಕೊಂಡು ಇಬ್ಬರು ಮಾಂಗಲ್ಯ ಸರ ಹರಿದುಕೊಂಡಿದ್ದಾರೆ.

ಮಾಂಗಲ್ಯ ಸರ ಹರಿದ ಕಾರಣ ಬಸ್ಸಿನಲ್ಲಿಯೇ ಬಂಗಾರದ ಚೈನಿನ ತುಂಡು ಮತ್ತು ಬಂಗಾರದ ಗುಂಡು ಕಳೆದುಕೊಂಡ ಜಗಳ ವಿಕೋಪಕ್ಕೆ ಹೋಗುತ್ತಿದಂತೆ ಸಹ ಪ್ರಯಾಣಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಷಯ ತಿಳಿದು ಪೊಲೀಸರು ಪ್ರಯಾಣಿಕರ ಸಮೇತ ಬಸನ್ನು ಪೋಲಿಸರು ಠಾಣೆಗೆ ಕರೆತಂದರು.

ಇಬ್ಬರು ಮಹಿಳೆಯರು ಬಂಗಾರ ಮಾಂಗಲ್ಯ ಸರ ಹರಿದಿದ್ದರಿಂದ ಒಬ್ಬ ಮಹಿಳೆಯ ಬಂಗಾರ ಚೈನ ಮತ್ತು ಮತ್ತೊಬ್ಬರ ಬಂಗಾರದ ಗುಂಡು ಸಿಕ್ಕಿಲ್ಲವೆಂದು ದೂರು ಪ್ರತಿದೂರು ನೀಡಲು ಮುಂದಾದರು.

ಇಬ್ಬರು ಮಹಿಳೆಯರು ಒಬ್ಬರ ಮೇಲೆ ಒಬ್ಬರು ಆರೋಪ ಮಾಡಿದರು. ನಂತರ ಇಬ್ಬರು ಮಹಿಳೆಯರು ದೂರು ನೀಡಲು ಹಿಂದೇಟು ಹಾಕಿ ರಾಜಿ ಮಾಡಿಕೊಂಡು ತೆರಳಿದರು.

ಅಪಘಾತ: ಬೈಕ್ ಸವಾರ ಸಾವು

ಹೊನ್ನಾವರ: ತಾಲೂಕಿನ ಹಳದೀಪುರ ಅಗ್ರಹಾರ ಸಮೀಪ ಕೆ.ಎಸ್.ಆರ್.ಟಿ.ಸಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲಿ ಮೃತಪಟ್ಟ ಘಟನೆ ಸಂಭವಿಸಿದೆ. ನವಿಲಗೋಣ ಗ್ರಾಮದ ಚಿಪ್ಪಿಹಕ್ಕಲ್ ನಿವಾಸಿ ವೆಂಕಟೇಶ ಗೋಪಾಲಕೃಷ್ಣ ವೈದ್ಯ ಮೃತ ವ್ಯಕ್ತಿ. ಅಡುಗೆ ಕೆಲಸ ಮಾಡುತ್ತಿದ್ದ ಇವರು ಹಳದೀಪುರಕ್ಕೆ ಕೆಲಸಕ್ಕೆ ಬಂದಾಗ ಈ ಅವಘಡ ಸಂಭವಿಸಿದೆ. ಈ ಕುರಿತು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಸಿದ್ದಾಪುರ; ರಂಜಾನ್ ಮಾಸಾಚರಣೆ ಚಂದ್ರದರ್ಶನದೊಂದಿಗೆ ಶುಕ್ರವಾರ ಅಂತ್ಯಗೊಂಡ ಹಿನ್ನೆಲೆಯಲ್ಲಿ ತಾಲೂಕಿನ ಹಾಗೂ ಪಟ್ಟಣದ ಮುಸ್ಲಿಂ ಧರ್ಮಿಯರು ಪವಿತ್ರ ಈದ್-ಉಲ್-ಫಿತರ್ ಅನ್ನು ಶ್ರದ್ಧೆ ಅಲ್ಲಾಹ್ ಮೇಲಿನ ಭಕ್ತಿಯೊಂದಿಗೆ ಸಡಗರ ಸಂಭ್ರಮದಿಂದ ಆಚರಿಸಿದರು. ಶನಿವಾರ ಬೆಳಿಗ್ಗೆ 8.30 ಗಂಟೆಗೆ ಪಟ್ಟಣದ ಬದ್ರಿಯಾ ಜಾಮಿಯಾ ಮಸೀದಿಯಿಂದ ಮೆರವಣಿಗೆ ಮೂಲಕ ಹೊರಟ ಮುಸ್ಲಿಮ್ ಧರ್ಮಿಯರು ಹಾಳದಕಟ್ಟಾದ ಈದ್ಗಾ ಮೈದಾನದಲ್ಲಿ ಸೇರಿ ಹಬ್ಬದ ವಿಶೇಷ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸಿದರು.

ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆಗೆ ಸ್ವಾಗತ

ಬನವಾಸಿ: ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ದಿವ್ಯಪ್ರೇಮ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಹಮ್ಮಿಕೊಂಡ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆಗೆ ಶನಿವಾರ ಪಟ್ಟಣದ ಸಾಯಿಭಕ್ತರು ಭಕ್ತಿಯಿಂದ ಸ್ವಾಗತಿಸಿದರು.

ಕಳೆದ ವರ್ಷ ಏ. 25 ರಂದು ಆಂಧ್ರಪ್ರದೇಶದ ಪುಟ್ಟಪರ್ತಿಯಿಂದ ಹೊರಟ ಐದು ದಿವ್ಯ ರಥಗಳು ವಿವಿಧ ರಾಜ್ಯಗಳ ಸುಮಾರು 5 ಸಾವಿರಕ್ಕೂ ಹೆಚ್ಚು ಗ್ರಾಮಗಳಲ್ಲಿ ಸಂಚರಿಸಿ, ಪ್ರಸ್ತುತ ಕರ್ನಾಟಕದಲ್ಲಿ ತನ್ನ ಪಯಣವನ್ನು ಮುಂದುವರಿಸಿದೆ. ಪಟ್ಟಣದ ಶಿವಾಜಿ ವೃತ್ತದಲ್ಲಿ ರಥಯಾತ್ರೆಗೆ ಸ್ವಾಗತಿಸಿ, ಶ್ರೀ ಉಮಾ ಮಧುಕೇಶ್ವರ ದೇವಾಲಯದಲ್ಲಿ ಅರ್ಚಕ ನಾಗೇಶ ಪತ್ರೆ, ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸತ್ಯಸಾಯಿ ರಾಜ್ಯ ಸಮಿತಿ ಸಂಚಾಲಕ ವೆಂಕಟೇಶ್ ಬಡಿಗೇರಿ, ಜಿಲ್ಲಾ ಅಧ್ಯಕ್ಷ ರಾಮದಾಸ್ ಆಚಾರಿ, ಸಂಚಾಲಕ ಗಣಪತಿ ಶೇಟ್, ಮಧುಕೇಶ್ವರ ದೇವಸ್ಥಾನ ವ್ಯವಸ್ಥಾಪನ ಸಮಿತಿ ಕಾರ್ಯದರ್ಶಿ ಲತಾ ಜಿ. ಶೆಟ್ಟಿ, ನಿವೃತ್ತ ಕೃಷಿ ಅಧಿಕಾರಿ ದಾಮೋಧರ ಪಟಗಾರ, ಗಣೇಶ ಸಣ್ಣಲಿಂಗಣ್ಣನವರ, ಕೃಷ್ಣರಾಯ ಕಾನಳ್ಳಿ, ಸಾಯಿರಾಂ ಕಾನಳ್ಳಿ, ಸುಧೀರ ನಾಯರ್, ಪವನ್ ಕಾನಳ್ಳಿ, ಪ್ರಶಾಂತ, ಜಗದಂಬ ಪಟಗಾರ, ಪೂರ್ಣಿಮಾ ಶೆಟ್ಟಿ, ನಿರ್ಮಲಾ, ಸುಧಾ ಆರೇರ, ಸವಿತಾ ಭಟ್ ಸೇರಿದಂತೆ ಮಾತೃಮಂಡಳಿ ಸದಸ್ಯರು ಹಾಗೂ ಸತ್ಯಸಾಯಿ ಭಕ್ತರು ಉಪಸ್ಥಿತರಿದ್ದರು.



ಬನವಾಸಿ: ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ದಿವ್ಯಪ್ರೇಮ ಸಂದೇಶವನ್ನು ಜನಸಾಮಾನ್ಯರಿಗೆ ತಲುಪಿಸುವ ಉದ್ದೇಶದಿಂದ ಹಮ್ಮಿಕೊಂಡ ಶ್ರೀ ಸತ್ಯಸಾಯಿ ಪ್ರೇಮ ಪ್ರವಾಹಿನಿ ರಥಯಾತ್ರೆಗೆ ಶನಿವಾರ ಪಟ್ಟಣದ ಸಾಯಿಭಕ್ತರು ಭಕ್ತಿಯಿಂದ ಸ್ವಾಗತಿಸಿದರು.

ಜನಸ್ಪಂದನಾ ಕಾರ್ಯಕ್ರಮ | ಮನೆ ನಿರ್ಮಿಸಿಕೊಡುವ ಭರವಸೆ

ಅಹವಾಲು ಆಲಿಸಿದ ಸಚಿವ ಮಂಕಾಳ ವೈದ್ಯ

ಹೊನ್ನಾವರ: ಪಟ್ಟಣದ ಸಚಿವರ ಕಾರ್ಯಾಲಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರು ಶನಿವಾರ ಜನಸ್ಪಂದನಾ ಕಾರ್ಯಕ್ರಮದಲ್ಲಿ ನೂರಾರು ಜನರ ಅಹವಾಲುಗಳಿಗೆ ಸ್ಪಂದಿಸಿದರು.

ಜನತೆ ವಿವಿಧ ರೀತಿಯ ಸಹಾಯ, ಸಹಕಾರ ಹಾಗೂ ಸಮಸ್ಯೆಗಳನ್ನು ಕೇಳಿಕೊಂಡು ಸಚಿವರೊಂದಿಗೆ ಮಾತನಾಡಿದರು. ಮಕ್ಕಳು, ವಿಶಿಷ್ಟಚೇತನರು, ವಯೋವೃದ್ಧರೊಂದಿಗೆ ಸಚಿವರು ಪ್ರೀತಿಯಿಂದ ಮಾತನಾಡಿಸುತ್ತಾ ಅವರ ಮನವಿ ಆಲಿಸಿದರು. ಖರ್ವಾ ಗ್ರಾಮದ ಕೊಳಗದ್ದೆಯಲ್ಲಿರುವ ಬಿಸಿಎಂ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯವನ್ನು ಬೇರೆ ವಿದ್ಯಾರ್ಥಿ ನಿಲಯಕ್ಕೆ ಸೇರ್ಪಡೆಗೊಳಿಸದಂತೆ ಹಾಗೂ ಸದ್ಯ ಇರುವ ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಿಸಿಕೊಡುವ ಕುರಿತು ಖರ್ವಾ ಶ್ರೀ ಸಿದ್ಧಿವಿನಾಯಕ ಪ್ರೌಢಶಾಲೆಯ ಶಿಕ್ಷಕರು, ನಾಥಗೇರಿ ಸರ್ಕಾರಿ ಪ್ರಾಥಮಿಕ ಶಾಲೆಯ ಎಸ್‌ಡಿಎಮ್‌ಸಿ ಅಧ್ಯಕ್ಷರು, ಊರ ನಾಗರಿಕರು ಸಚಿವರಿಗೆ ಮನವಿ ಸಲ್ಲಿದರು.

ಅಗ್ನಿ ಅವಘಡದಿಂದ ಮನೆಗೆ ಹಾನಿಗೊಳಗಾದ ದತ್ತಾತ್ರೇಯ ಈಶ್ವರ ನಾಯ್ಕ ಕುಟುಂಬ ಸಚಿವರಲ್ಲಿ ಮನವಿ ಸಲ್ಲಿಸಿ, ಸೂಕ್ತ ಪರಿಹಾರ ಒದಗಿಸಿಕೊಡುವಂತೆ ಕೋರಿದರು. ಮನೆಯಲ್ಲಿ ದೇವರಿಗೆ ಪೂಜಿಸಿ ಇಟ್ಟ ಆರತಿಯ ಬೆಂಕಿಯಿಂದ ಮನೆಯೆಲ್ಲ ಹತ್ತಿ ಮನೆಯ ಎಲ್ಲಾ ಸಾಮಾನುಗಳು, ಬಟ್ಟೆ ಬರೆಗಳು ಎಲ್ಲಾ ನಾಶವಾಗಿದೆ. ಇದರಿಂದ ನಮ್ಮ ಕುಟುಂಬಕ್ಕೆ ಈಗ ಉಳಿಯಲು ಜಾಗವಿಲ್ಲ, ಹಾಗೆ ಹಾಕಿಕೊಳ್ಳಲು ಬಟ್ಟೆ ಬರೆಗಳಿಲ್ಲ. ನನಗೆ ಹಾಗೂ ನನ್ನ ಪತ್ನಿ ಇಬ್ಬರಿಗೂ ಮಾತು ಬರುವುದಿಲ್ಲ ಹಾಗೂ ಕಿವಿಯೂ ಕೇಳಿಸುವುದಿಲ್ಲ. ಆದ್ದರಿಂದ ನಮ್ಮ ಜೀವನ ತುಂಬಾ ಕಷ್ಟವಾಗಿದೆ. ಅಂಗವಿಕಲರಾದ ನಮಗೆ ಯಾವುದಾದಾರೂ ರೀತಿಯಲ್ಲಿ ಸರ್ಕಾರದಿಂದ ಸಿಗುವ ಸಹಾಯಧನವನ್ನು ಹಾಗೂ ತಮ್ಮ ಕೈಲಾದಷ್ಟು ಸಹಾಯಧನವನ್ನು ನೀಡಿ ಸಹಕರಿಸಬೇಕು ಎಂದು ಲಿಖಿತ ಮನವಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಸಚಿವರು, ಈಶ್ವರ ನಾಯ್ಕರ 5ವರ್ಷದ ಪುಟ್ಟ ಬಾಲಕಿಯೊಂದಿಗೆ ಮಾತನಾಡಿ, ನಮ್ಮ ಶಿಕ್ಷಣ ಸಂಸ್ಥೆಯಲ್ಲೇ ನಿನಗೆ ಶಿಕ್ಷಣ ನೀಡಿ, ನಿನ್ನ ಶಿಕ್ಷಣದ ಸಂಪೂರ್ಣ ಖರ್ಚುವೆಚ್ಚ ಭರಿಸುವೆ ಎಂದು ವೈಯಕ್ತಿವಾಗಿ 25,000 ಧನಸಹಾಯ ನೀಡಿ ಹೊಸ ಬಟ್ಟೆ ತೆಗೆದು ಕೊಳ್ಳಿ ಎಂದು ಮಾನವೀಯತೆ ಮೆರೆದರು. ಹೆಚ್ಚಿನ ಸಹಾಯ ಒದಗಿಸಿಕೊಡುವುದಾಗಿ ಕುಟುಂಬಕ್ಕೆ ಭರವಸೆ ನೀಡಿದರು. ಅವರಿಗೆ ಮನೆನಿರ್ಮಿಸಿಕೊಡಲು ಸೂಕ್ತ ಜಾಗ ಹುಡುಕಿ ಎಂದು ಸ್ಥಳೀಯ ಪ್ರಮುಖರಿಗೆ ತಿಳಿಸಿ, ಎಲ್ಲರೂ ಮನೆ ನಿರ್ಮಿಸಿಕೊಡೋಣ ಎಂದು ಅಭಯ ನೀಡಿದರು.



ಸೇರ್ಪಡೆಗೊಳಿಸುವ ಪ್ರಸ್ತಾಪ ಕೈಬಿಡಿ

ಹಲವಾರು ವಿದ್ಯಾರ್ಥಿಗಳು ಈ ಹಿಂದಿನ ಅನೇಕ ವರ್ಷಗಳಿಂದ ಈವರೆಗೂ ವ್ಯಾಸಂಗ ಮಾಡುತ್ತಾ ಬಂದಿದ್ದಾರೆ. ಈ ಹಿಂದೆ ಹಾಸ್ಟೆಲ್ ವಿದ್ಯಾರ್ಥಿ ಸಂಖ್ಯಾ ಮಿತಿ 50 ಇದ್ದು, ನಂತರ ವಿದ್ಯಾರ್ಥಿ ಸಂಖ್ಯಾ ಮಿತಿ 30ಕ್ಕೆ ಕಡಿತಗೊಳಿಸಲಾಗಿದೆ. ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಳ ಮಾಡಿಕೊಡುವಂತೆ ಪ್ರತಿ ವರ್ಷ ತಾಲೂಕು ಬಿಸಿಎಂ ಕಚೇರಿಯಿಂದ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುತ್ತಾ ಇದ್ದರೂ ಸಹ ವಿದ್ಯಾರ್ಥಿಗಳ ಸಂಖ್ಯಾಬಲ ಹೆಚ್ಚಳವಾಗಿಲ್ಲ. ಈ ವಸತಿ ನಿಲಯವು ನಮ್ಮ ಶಾಲೆಗೆ ಪ್ರವೇಶ ಪಡೆದು ವ್ಯಾಸಂಗ ಮಾಡಲು ದೂರದ ಊರಿಂದ ಬರುವ ಬಡ ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಈ ವಸತಿ ನಿಲಯವನ್ನು ಮತ್ತೊಂದು ವಸತಿ ನಿಲಯದೊಂದಿಗೆ ಸೇರ್ಪಡೆಗೊಳಿಸುವ ಪ್ರಸ್ತಾಪವು ಇಲಾಖಾ ಹಂತದಲ್ಲಿ ನಡೆದಿರುವುದು ಗಮನಕ್ಕೆ ಬಂದಿದೆ. ಈ ರೀತಿ ಸೇರ್ಪಡೆಯಾದಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದರ ಜೊತೆಗೆ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಲಿದೆ ಎಂದು ಶಿಕ್ಷಕರು ಸಚಿವರಲ್ಲಿ ವಿನಂತಿಸಿದರು. ಈ ಬಗ್ಗೆ ಮಾಹಿತಿ ಪಡೆಯುತ್ತೇನೆ. ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದಲ್ಲಿ ಸೇರ್ಪಡೆಗೊಳಿಸುವ ಪ್ರಸ್ತಾಪ ಕೈಬಿಡಲು ಹೇಳುತ್ತೇನೆ. ನನ್ನ ಹಂತದಲ್ಲಾಗುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಯುಗಾದಿ ಹಿಂದುತ್ವದ ಬುನಾದಿ: ಶ್ರೀಗಳು

ಶಿರಸಿ: ಹಿಂದು ಹಬ್ಬಗಳಲ್ಲಿ ಸಾಮಾಜಿಕ, ಕೌಟುಂಬಿಕ ಹಾಗೂ ವೈಯಕ್ತಿಕ ಹಿತಚಿಂತನೆಯಿದೆ ಎಂದು ಸೋಂದಾ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಯುಗಾದಿ ಉತ್ಸವ ಸಮಿತಿ ನಗರದ ವಿಕಾಸಾಶ್ರಮ ಮೈದಾನದಲ್ಲಿ ಆಯೋಜಿಸಿದ್ದ ಯುಗಾದಿ ಉತ್ಸವದ ಸಭಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಆಶೀರ್ವಚನ ನೀಡಿದರು. ಯುಗಾದಿ ಹೊಸ ವರ್ಷದ ಆರಂಭ. ಇಡೀ ವರ್ಷದಲ್ಲಿ ಒಳ್ಳೆಯ ಕೆಲಸ ಮಾಡುವ ಬಗ್ಗೆ ಸಂಕಲ್ಪ ಮಾಡುವ ದಿನವಿದು. ಯುಗಾದಿ ಹಿಂದುತ್ವದ ಬುನಾದಿ. ಅದನ್ನು ಸರಿಯಾಗಿ ಆಚರಿಸಿದರೆ ಅದು ನಮಗೆ ಶಕ್ತಿ ಕೊಡುತ್ತದೆ. ಮನೆಯಲ್ಲಿ ಮಕ್ಕಳಿಗೆ ಧಾರ್ಮಿಕ, ಸಂಸ್ಕೃತಿಯ ಶಿಕ್ಷಣ ದೊರೆಯುವಂತೆ ಮಾಡಬೇಕು. ಈ ಮೂಲಕ ಸಮಾಜ, ಕುಟುಂಬ ಹಾಗೂ ವ್ಯಕ್ತಿಯನ್ನು ಮೇಲಕೆತ್ತಬೇಕು ಎಂದರು.

ಬಣ್ಣದ ಮಠದ ಶಿವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಸಂಸ್ಕೃತಿ, ನೀತಿ, ನೈತಿಕತೆ ಎಲ್ಲವೂ ನಾಶವಾಗಿದೆ. ಹಿಂದು ಎಂಬ ಶಬ್ದದ ಅರ್ಥ ಮಕ್ಕಳಿಗೆ ಗೊತ್ತಿಲ್ಲ. ಮಕ್ಕಳಿಗೆ ನಮ್ಮ ಪಂಚಾಂಗದ ಬಗ್ಗೆ ಅರಿವು ನೀಡಬೇಕು ಎಂದರು.

ಸ್ವಾದಿ ಜೈನ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ಆಶೀರ್ವಚನ ನೀಡಿದರು. ದಿಕ್ಸೂಚಿ ಭಾಷಣ ಮಾಡಿದ ಮಂಗಳೂರು ಕೇಶವ ಸ್ಮೃತಿ ಸಂವರ್ಧನ ಸಮಿತಿ ಕಾರ್ಯದರ್ಶಿ ಗಜಾನನ ಪೈ, ಪರಾಭವ ಸಂವತ್ಸರದ ಕಾಲದಲ್ಲಿ ಆತ್ಮೋನ್ನತಿ, ಸಾಮಾಜಿಕ ನ್ಯಾಯ, ಪರಿಸರ ಉನ್ನತಿಯಾಗಬೇಕು. ರಾಷ್ಟ್ರವಿರೋಧಿ ಶಕ್ತಿ ಮತ್ತು ಸಂಸ್ಕೃತಿ, ಸಮಾಜ ವಿರೋಧಿ ಸಂಗತಿಗಳನ್ನು ಪರಾಭವಗೊಳಿಸಬೇಕು. ಹಿಂದು ಸಮಾಜದ ದೋಷ, ದೌರ್ಬಲ್ಯಗಳ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಯುಗಾದಿ ಉತ್ಸವ ಸಮಿತಿ ಅಧ್ಯಕ್ಷ ರಮೇಶ ದುಭಾಶಿ, ಸಂಚಾಲಕ ಕೃಷ್ಣ ಎಸಳೆ, ಯುವ ಮುಖಂಡ ಅಶ್ವಿನ್ ಭೀಮಣ್ಣ ನಾಯ್ಕ ಇದ್ದರು. ರಘುನಾಥ ಹೊನ್ನಾವರ ಗೀತೆ ಹಾಡಿದರು. ಚಂದ್ರು ಎಸಳೆ ನಿರೂಪಿಸಿದರು. ಯುಗಾದಿ ಉತ್ಸವ ಶೋಭಾಯಾತ್ರೆ ವಿಜೃಂಭಣೆಯಿಮದ ನಡೆಯಿತು. ಶೋಭಾಯಾತ್ರೆ ಸಂಚರಿಸುವ ವೇಳೆ ಅಶ್ವಿನಿ ವೃತ್ತದ ಬಳಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ದೇವಿಕೆರೆ ಬಳಿ ಮಾಜಿ ಕೇಂದ್ರ ಸಚಿವ ಅನಂತಕುಮಾರ ಹೆಗಡೆ ಆಗಮಿಸಿದ್ದರು. ಶಾಸಕ ಭೀಮಣ್ಣ ನಾಯ್ಕ ಶೋಭಾಯಾತ್ರೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಶಾಸಕರ ಪುತ್ರ ಅಶ್ವಿನ್ ನಾಯ್ಕ ಪೂರ್ಣ ಪ್ರಮಾಣದಲ್ಲಿ ಯುಗಾದಿ ಕಾರ್ಯಕ್ರಮದಲ್ಲಿ ತೊಡಗಿ ಕೊಂಡರು.



ಮಾ.24ಕ್ಕೆ ಯುಗಾದಿ ಕವಿಗೋಷ್ಠಿ ಕಾರ್ಯಕ್ರಮ



ಅಂಕೋಲಾ: ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಕುರಿತಂತೆ ಆಸಕ್ತಿ ಹೆಚ್ಚಿಸುವ ಉದ್ದೇಶದಿಂದ ಕಾರ್ಯನಿರತ ಪತ್ರಕರ್ತರ ಸಂಘ ಅಂಕೋಲಾ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಗೋಖಲೆ ಸೆಂಟೆನರಿ ಕಾಲೇಜ್ ಆಶ್ರಯದಲ್ಲಿ ಪಿಯುಸಿ ನಂತರದ ವಿದ್ಯಾರ್ಥಿಗಳಿಗೆ ಮೂರನೇ ವರ್ಷದ ಯುಗಾದಿ ಕವಿಗೋಷ್ಠಿ ಕಾರ್ಯಕ್ರಮ ಮಾ.24ರಂದು ಬೆಳಗ್ಗೆ 10 ಗಂಟೆಯಿಂದ ಗೋಖಲೆ ಕಾಲೇಜಿನ ಸಭಾಭವನದಲ್ಲಿ ನಡೆಯಲಿದೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ ಹೇಳಿದರು.

ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮಾ.23ರ ಒಳಗೆ ಹೆಸರು ನೋಂದಣಿ ಮಾಡಿಸಬೇಕು ಎಂದು ತಿಳಿಸಿದರು.

ಕಸಾಪ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಕಸಾಪದಿಂದ ಇದು ಮೂರನೇ ವರ್ಷದ ಯುಗಾದಿ ಕವಿಗೋಷ್ಠಿಯಾಗಿದ್ದು ವಿದ್ಯಾರ್ಥಿಗಳು ಕನ್ನಡ ಸಾಹಿತ್ಯದತ್ತ ಒಲವು ತೋರಬೇಕುಎಂಬಉದ್ದೇಶದಿಂದಕಾರ್ಯಕ್ರಮ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಜಿ.ಬಿ.ನಾಯಕ ಪ್ರಾಯೋಜಕತ್ವದಲ್ಲಿ ಬಹುಮಾನ ವಿತರಣೆ ನಡೆಯಲಿದೆ ಎಂದರು. ಜಿ.ಸಿ.ಕಾಲೇಜಿನ ಪ್ರಾಚಾರ್ಯ ಸಿದ್ದಲಿಂಗಸ್ವಾಮಿ ವಸ್ತ್ರದ ಮಾತನಾಡಿ, ಈ ಯುಗಾದಿ ಕವಿಗೋಷ್ಠಿಯ ಭಾಗವಾಗಿ ಪ್ರತಿಸ್ಪಂದನ ಕೂಡ ನಡೆಯಲಿದ್ದು ವಿದ್ಯಾರ್ಥಿಗಳು ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹೊಂದಬೇಕು. ಉತ್ತಮ ಕವಿ, ಸಾಹಿತಿಗಳಾಗಿ

ಗುರುತಿಸಿಕೊಳ್ಳಬೇಕು. ಶೈಕ್ಷಣಿಕ ಸಂಸ್ಥೆಗಳು ಈ ದಿಶೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಬೇಕು. ಈ ಹಿನ್ನೆಲೆ ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿ ಪ್ರೋತ್ಸಾಹಿಸಬೇಕು ಎಂದರು. ಯುಗಾದಿ ಕವಿಗೋಷ್ಠಿಯನ್ನು ಹಿರಿಯ ಸಾಹಿತಿ ಜಿ. ಪ್ರೇಮಾನಂದ ಉದ್ಘಾಟಿಸಲಿದ್ದು, ಕಸಾಪ ಅಧ್ಯಕ್ಷ ಗೋಪಾಲಕೃಷ್ಣನಾಯಕ ಅಧ್ಯಕ್ಷತೆ ವಹಿಸಲಿದ್ದಾರೆ. ಜಿ.ಸಿ. ಕಾಲೇಜಿನ ಪ್ರಾಚಾರ್ಯ ಎಸ್.ವಿ.ವಸ್ತ್ರದ ಬಹುಮಾನ ವಿತರಿಸಲಿದ್ದು, ಮುಖ್ಯ ಅತಿಥಿಗಳಾಗಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ, ನಿವೃತ್ತ ಪ್ರಾಧ್ಯಾಪಕ ಜಿ.ಬಿ.ನಾಯಕ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ವಿಠ್ಠಲದಾಸ ಕಾಮತ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಕಾರ್ಯನಿರತ ಪತ್ರಕರ್ತ ಸಂಘದ ಕಾರ್ಯದರ್ಶಿ ಸುಭಾಷ ಕಾರೇಬೈಲ್ ಮಾತನಾಡಿದರು. ಕಸಾಪ ಗೌರವ ಕಾರ್ಯದರ್ಶಿ ಜಿ.ಆರ್.ತಾಂಡೇಲ, ಪದಾಧಿಕಾರಿಗಳಾದ ಮಹಾಂತೇಶ ರೇವಡಿ, ತಿಮ್ಮಣ್ಣ ಭಟ್, ಪತ್ರಕರ್ತ ಕೆ.ರಮೇಶ, ನಾಗರಾಜ ಮಂಜಗುಣಿ ನಾಗರಾಜ ಜಾಂಬಳೇಕರ,ಅರುಣ ಶೆಟ್ಟಿ, ಅಜಿತ ನಾಯಕ, ಮೋಹನ ದುರ್ಗೇಕರ, ದಿನಕರ ನಾಯ್ಕ, ನಿತೇಶ ಕೇಣಿ ಉಪಸ್ಥಿತರಿದ್ದರು.

ಗೋವುಗಳ ಸಮೃದ್ಧಿಯಿಂದ ದೇಶದ ಪರಿಸರ ಶುದ್ಧ

ಯಲ್ಲಾಪುರ: ಗೋವುಗಳು ಸಮೃದ್ಧಿಯಿಂದ ದೇಶದಲ್ಲಿ ಪರಿಸರ ಶುದ್ಧವಾಗುತ್ತದೆ. ಗೋವಿನ ಕೃಷಿ ಅಮೃತದ ಸಮಾನವಾಗಿದ್ದು ಪರಾಭವ ಸಂವತ್ಸರದಲ್ಲಿ ಗೋವಿನ ಕೃಷಿ ಸಮೃದ್ಧಿಯಾಗುತ್ತದೆ. ಗುರು ಅಧಿಪತಿಯಾಗಿದ್ದು, ಗುರು ರಾಜನ ಸ್ಥಾನದಲ್ಲಿರುವುದರಿಂದ ಮಳೆ, ಕೃಷಿ, ಗೋವುಗಳ ಸಮೃದ್ಧಿಯಾಗಲಿದೆ. ಇದರಿಂದ ಸರ್ವರಿಗೂ ಒಳಿತಾಗಲಿದೆ ಎಂದು ವಿದ್ವಾನ್ ಗೋಪಾಲಕೃಷ್ಣ ಭಟ್ ಹಂದ್ರಮನೆ ಹೇಳಿದರು.

ಅವರು ಗ್ರಾಮದೇವಿ ದೇವಸ್ಥಾನದ ಸಭಾಭವದಲ್ಲಿ ನಡೆದ ಯುಗಾದಿ ಉತ್ಸವದಲ್ಲಿ ಪಂಚಾಂಗ ಪಠಣ ಮಾಡಿ, ಯುಗಾದಿ ಫಲಾಫಲವನ್ನು ವಿವರಿಸಿ, ಶನಿ, ಕುಜ ದೃಷ್ಟಿಯ ಪರಿಣಾಮ ಯುದ್ಧ ಭೀತಿ ಹಾಗೂ ಅಗ್ನಿಭಯ ಇರುವ ಸಾಧ್ಯತೆ ಇದ್ದರೂ, ಕೆಲವು ದಿನಗಳಲ್ಲಿ ಅವು ಉಪಶಮನವಾಗಲಿದೆ. ಬೆಳ್ಳಿ, ಬಂಗಾರ ಸೇರಿದಂತೆ ವಿವಿಧ ಲೋಹಗಳು ಹಾಗೂ ತೈಲದ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದರು.

ಮಾರುತಿ ಮಂದಿರದ ಅರ್ಚಕ ನಾರಾಯಣ ಭಟ್ ಮಾತನಾಡಿ, 'ನಮ್ಮ ಸಂಸ್ಕೃತಿಯಲ್ಲಿ ರಾಮ ಮತ್ತು ಕೃಷ್ಣರ ಆದರ್ಶ ಜೀವನ ಮಾರ್ಗದರ್ಶನ ನೀಡುತ್ತದೆ. ತಂದೆ-ತಾಯಿ ಹಾಗೂ ಗುರುಹಿರಿಯರನ್ನು ಗೌರವಿಸುವುದು ನಮ್ಮ ಸಂಸ್ಕೃತಿಯಾಗಿದೆ ಎಂದರು ವೈಟಿಎಸ್‌ಎಸ್ ಅಧ್ಯಕ್ಷ ರವಿ ಶಾನಭಾಗ, ಮರಾಠಾ ಸಮಾಜ ಸೀಮಾ ಪರಿಷತ್ ಅಧ್ಯಕ್ಷ, ನಾರಾಯಣ ಮರಾಠಿ ಇದ್ದರು ಉತ್ಸವ ಸಮಿತಿಯ ಅಧ್ಯಕ್ಷ ವಿಶಾಲ ವಾಳಂಬಿ ಸ್ವಾಗತಿಸಿದರು. ಶಿಕ್ಷಕ ಚಂದ್ರಹಾಸ ನಾಯ್ಕ ನಿರ್ವಹಿಸಿದರು. ಸಿದ್ದಾರ್ಥ ನಂದೊಳ್ಳಿ ಮಠ ವಂದಿಸಿದರು.



ಇಂದಿನಿಂದ ಬಸವಣ್ಣ, ವೀರಭದ್ರೇಶ್ವರ ದೇವರ ಜಾತ್ರಾ ಮಹೋತ್ಸವ

ಮುಂಡಗೋಡ: ಪಟ್ಟಣದ ಬಸವನಬೀದಿಯಲ್ಲಿರುವ ಶ್ರೀಬಸವಣ್ಣ ಹಾಗೂ ಶ್ರೀವೀರಭದ್ರೇಶ್ವರ ದೇವರ ಜಾತ್ರೋತ್ಸವ ಹಾಗೂ ರಥೋತ್ಸವ ಇಲ್ಲಿನ ಹಿರೇಮಠ ಸಂಸ್ಥಾನದ ವೇ.ಮೂ.ರುದ್ರಮುನಿ ಶ್ರೀಗಳ ಮಾರ್ಗದರ್ಶನದೊಂದಿಗೆ ಮಾ.22ರಿಂದ ಮಾ.29ರವರೆಗೆ ಜರುಗಲಿವೆ.

ಮಾ.22ರಂದು ಬೆಳಗ್ಗೆ ಗಣಪತಿ ಪೂಜೆ, ಪಂಚಗವ್ಯ ಪ್ರೋಕ್ಷಣೆಗಳೊಂದಿಗೆ ಮಂದಿರ ಶುದ್ಧೀಕರಣ, ನವಗ್ರಹ ಪೂಜೆ, ರುದ್ರಹೋಮ ನೆರವೇರುವುದು. ಸಂಜೆ ನವಲಗುಂದ ಗವಿಮಠದ ಬಸವಲಿಂಗ ಶ್ರೀಗಳ ಸಾನ್ನಿಧ್ಯದಲ್ಲಿ ಆಶೀರ್ವಚನ, ಮಾ.23ರಂದು ಜಗದ್ಗುರು ಸದಾಶಿವಾನಂದ ಮಹಾಸ್ವಾಮಿಗಳು ಜಗದ್ಗುರು ಶಿವಾನಂದ ಬೃಹನ್ಮಠ ಗದಗ ಇವರಿಂದ ಆಶೀರ್ವಚನ, ಮಾ. 24ರಂದು ಬೆಳಗ್ಗೆ ಓಂಪ್ರಕಾಶ ಅಂಗಡಿ, ಶ್ರೀ ವಿರಭದ್ರೇಶ್ವರ ಪುರವಂತಿಕೆಯ ಕಲಾತಂಡ ಬಂಕಾಪುರ ಇವರಿಂದ ಶ್ರೀವೀರಭದ್ರೇಶ್ವರ ಸ್ವಾಮಿಯ ಗುಗ್ಗಳ ಸೇವೆ ಸಂಜೆ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು, ದೇವಮಂದಿರ ಮಹಾಮಠ, ಮಣಕವಾಡ ಇವರಿಂದ ಆಶೀರ್ವಚನ, ಮಾ. 25ರಂದು ಕುಮಾರ ವಿರೂಪಾಕ್ಷ ಮಹಾಸ್ವಾಮಿಗಳು ಮೂರುಸಾವಿರ ವಿರಕ್ತ ಮಠ, ಉಪ್ಪಿನ ಬೆಟಗೇರಿ ಇವರಿಂದ ಆಶೀರ್ವಚನ ನೆರವೇರುವುದು.

ಮಾ..26ರಂದು ಮುಂಡಗೋಡ ನಗರದ ಎಲ್ಲ ತಾಯಂದಿರಿಂದ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ ಹಾಗೂ ಎಲ್ಲ ಭಕ್ತರ ಮನೆಯಿಂದ ರೊಟ್ಟಿ ಸೇವೆ, ಸಂಜೆ ಗುರು ಮಹೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಗುರು ನಂಜೇಶ್ವರ ಮಠ, ಕೂಡಲ, ಇವರಿಂದ ಆಶೀರ್ವಚನ,

ಮಾ.27ರಂದು ಬಂಕಾಪುರದ ಅರಳೆಲೇ ಹಿರೇಮಠದರೇವಣಸಿದ್ದೇಶ್ವರ ಶಿವಾಚಾರ್ಯ ಷಂ.ವೆ.ಮೂ. ರುದ್ರಮುನಿ ಸ್ವಾಮಿಗಳು ಹಿರೇಮಠ ಇವರ ಅಮೃತ ಹಸ್ತದಿಂದ ಹಾಗೂ ಗಣ್ಯಮಾನ್ಯರಿಂದ ಮಧ್ಯಾಹ್ನ 3.30 ಘಂಟೆಗೆ ಮಹಾರಥೋತ್ಸವವು ವಾದ್ಯ ವೈಭವಗಳೊಂದಿಗೆ ಬನ್ನಿಮಹಾಂಕಾಳಿ ದೇವಿಯ ದೇವಸ್ಥಾನದವರೆಗೂ ಭಕ್ತ ವೃಂದದೊಂದಿಗೆ ಸಾಗುವುದು.

ಮಾ..28ರಂದು ಬೆಳಿಗ್ಗೆ ಎಲ್ಲಾ ತಾಯಂದಿರಿಂದ ಹಾಗೂ ಭಕ್ತರಿಂದ ಕಡಬಿನ ಕಾಳಗ ನೆರವೇರುವುದು. ಮಾ..28 ಮತ್ತು ಮಾ. 29ರಂದು ಕುಸ್ತಿ ಪಂದ್ಯಾವಳಿಯೊಂದಿಗೆ ಜಾತ್ರಾ ಕಾರ್ಯಕ್ರಮಗಳು ಸಂಪನ್ನಗೊಳ್ಳುವವು ಎಂದು ಶ್ರೀಬಸವಣ್ಣ ಹಾಗೂ ಶ್ರೀ ವೀರಭದ್ರೇಶ್ವರ ಜಾತ್ರಾ ಸಮಿತಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಘಟನಾತ್ಮಕ ರೂಪುರೇಷೆಗಳಿಗೆ ಭದ್ರ ಬುನಾದಿ ಯುಗಾದಿ

ಶಿರಸಿ: ತಾಲೂಕಿನ ಕಾನಗೋಡದಲ್ಲಿ ಸ್ಥಳೀಯ ಯುಗಾದಿ ಉತ್ಸವ ಸಮಿತಿಯವರು ಆಯೋಜಿಸಿದ್ದ ಯುಗಾದಿ ಉತ್ಸವ 2026 ಹಾಗೂ ಸನ್ಮಾನ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಶೋಭಾಯಾತ್ರೆ ವಿಜೃಂಭಣೆಯಿಂದ ಜರುಗಿತು.

ಕಾರ್ಯಕ್ರಮದ ಮುಖ್ಯ ಅಭ್ಯಾಗತರಾಗಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸಮಸ್ತ ಹಿಂದುಗಳ ಸಂಭ್ರಮದ ಹಬ್ಬ ಯುಗಾದಿಯಾಗಿದ್ದು, ವರ್ಷದ ಆರಂಭದಲ್ಲೇ ಸಂಘಟನಾತ್ಮಕ ರೂಪುರೇಷೆಗಳಿಗೆ ಭದ್ರ ಬುನಾದಿ ಹಾಕಿಕೊಡುತ್ತದೆ. ತನ್ಮೂಲಕ ಒಗ್ಗಟ್ಟಿನ ಸಂಕೇತವನ್ನು ಎತ್ತಿ ತೋರಿಸುತ್ತದೆ. ಇಂದು ಪರಕೀಯರ ದಾಳಿ, ಬಂದೊದಗುತ್ತಿರುವ ಸಮಾಜಘಾತುಕ ಕಾರ್ಯ ಚಟುವಟಿಕೆಗಳನ್ನು ಹಿಮ್ಮೆಟ್ಟಿಸಲು ಹಿಂದೂಗಳ ಸಂಘಟನೆ, ಸಮಾವೇಶ ಅತ್ಯಂತ ಮಹತ್ವವಾಗಿದ್ದು, ಇದು ಭಾವನಾತ್ಮಕ ವಿಚಾರಗಳನ್ನು ಹಂಚಿಕೊಳ್ಳುವ ವಿಷಯವೂ ಆಗಿದೆ ಎಂದರು.

ಉದ್ಘಾಟಿಸಿದ ಧಾರವಾಡ ಹಾಲು ಒಕ್ಕೂಟದ ಪ್ರಭಾರಿ ಅಧ್ಯಕ್ಷ ಹಾಗೂ ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ಸುರೇಶ್ವಂದ್ರ ಹೆಗಡೆ ಕೆಶಿನ್ಮನೆ ಮಾತನಾಡಿ, ಭಾರತ ಮಾತೆ ಹಾಗೂ ಗೋ ಮಾತೆ ಇರುವುದರಿಂದ ನಮ್ಮ ಜೀವನ ಸ್ವಚ್ಛಂದವಾಗಿ ನಡೆಯುತ್ತಿದೆ. ಹಬ್ಬದ ಸಡಗರ ಎನ್ನುವುದು ಕೇವಲ ಒಂದು ದಿನಕ್ಕೆ ಸಿಮೀತವಾಗಿರದೇ ದೈನಂದಿನ ಜೀವನದ ಪ್ರತಿ ದಿನವೂ ಸಂಘಟನಾತ್ಮಕ ಹಬ್ಬವಾಗಿರಲಿ ಎಂದರು.


ಸಾಮಾಜಿಕ ಕಾರ್ಯಕರ್ತರಾದ ಉಪೇಂದ್ರ ಪೈ ಮತ್ತು ಅನಂತಮೂರ್ತಿ ಹೆಗಡೆ ಮಾತನಾಡಿ ದರು. ಅಜ್ಜೀಬಳ ಸಹಕಾರಿ ಸಂಘದ ಅಧ್ಯಕ್ಷ ಎಂ.ಎನ್.ಭಟ್ಟ ಶುಭಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ಕಾನಗೋಡ ಯುಗಾದಿ ಸಮಿತಿ ಅಧ್ಯಕ್ಷ ಸುರೇಶ ನಾಯ್ಕ ಕಾನಗೊಡ ಸ್ವಾಗತಿಸಿ, ಪ್ರಾಸ್ತಾವಿಸಿದರು. ಸ್ಥಳೀಯವಾಗಿ ಸಾಧನೆ ಮಾಡಿದ ಸಿಎ ರಮೇಶ ನಾಯ್ಕ ಹಳ್ಳಿಕಾನ ಹಾಗೂ ಸಿಎ ಮಧು ಹೆಗಡೆ ಕಾನಗೋಡ ಅವರನ್ನು ಸನ್ಮಾನಿಸಲಾಯಿತು. ಯುಗಾದಿ ಉತ್ಸವ ಸಮಿತಿ ಡಿ.ವಿ.ಹೆಗಡೆ ಕಾನಗೋಡ, ರಾಮಚಂದ್ರ ಪಟಗಾರ, ಸತೀಶ ದೇಶಭಂಡಾರಿ, ಅಶೋಕ ಹೆಗಡೆ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ ನಾಯ್ಕ ಮತ್ತಿತರರಿದ್ದರು. ಉತ್ಸವದ ಪೂರ್ವಭಾವಿಯಾಗಿ ಏರ್ಪಡಿಸಲಾಗಿದ್ದ ರಂಗೋಲಿ ಹಾಗೂ ಇನ್ನಿತರ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಗಿರಿಧರ ಕಬ್ನಳ್ಳಿ ನಿರೂಪಿಸಿದರೆ, ಸಮಿತಿಯ ಪ್ರಧಾನ ಕಾರ್ಯದರ್ಶಿ ರವಿ ಗಾಂವ್ಕರ ಹೊಳೆಕ್ಕೆ ವಂದಿಸಿದರು. ಸಭಾ ಕಾರ್ಯಕ್ರಮದ ಪೂರ್ವ ಕಾನಗೋಡನಿಂದ ನಿಲೇಕಣಿ ಹಾಗೂ ಕಾನಸೂರು ವರೆಗೆ ಊರನಾಗರಿಕರು ಬೈಕ್ ರ‍್ಯಾಲಿ ಮೂಲಕ ಶೋಭಾಯಾತ್ರೆಯನ್ನು ಶಿಸ್ತುಬದ್ಧವಾಗಿ ನಡೆಸಿದರು.



ಶಾನಬಾಳೆಗದ್ದೆಯಲ್ಲಿ ಶ್ರೀ ಶನೇಶ್ವರ ದೇವರ ಪುನರ್ ಪ್ರತಿಷ್ಠಾಪನೆ

ಸಿದ್ದಾಪುರ; ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯಲ್ಲಿ ಶ್ರೀ ಶನೇಶ್ವರ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ನೂತನ ದೇವಾಲಯ ಲೋಕಾರ್ಪಣೆ ಶನಿವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನಡೆಯಿತು.

ಶ್ರೀ ಸಂಸ್ಥಾನ ಜಡೆಮಠದ ಶ್ರೀ ಡಾ.ಮಹಾಂತ ಸ್ವಾಮಿಗಳವರ ಅಮೃತ ಹಸ್ತದಿಂದ ಶ್ರೀ ಶನಿದೇವರ ಪ್ರತಿಷ್ಠೆ ನಡೆಯಿತು. ನಂತರ ಸ್ಥಾನಶುದ್ಧಿ, ಬಿಂಬಶುದ್ಧಿ, ಕಲಾವೃದ್ಧಿ, ರುದ್ರಹೋಮ, ಸಾಮೂಹಿಕ ಶನೇಶ್ವರ ವ್ರತ, ಶ್ರೀ ಸತ್ಯನಾರಾಯಣ ಕಥೆ ನಡೆಯಿತು. ಶ್ರೀ ಶನೇಶ್ವರ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ನೂತನ ದೇವಾಲಯ ಲೋಕಾರ್ಪಣೆ ನಿಮಿತ್ತ ಗುರುವಾರದಿಂದ ಶನಿವಾರದವರೆಗೆ ನಡೆದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ವೇ. ದತ್ತಾತ್ರೇಯ ಭಟ್ಟ ಮಗೆಗಾರ ಅವರ ಆಚಾರ್ಯತ್ವದಲ್ಲಿ ನಡೆಯಿತು. ತಾಲೂಕು ಹಾಗೂ ವಿವಿಧ ಕಡೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀ ದೇವರ ದರ್ಶನ ಪಡೆದು ತೀರ್ಥಪ್ರಸಾದ ಹಾಗೂ ಪ್ರಸಾದ ಭೋಜನ ಸ್ವೀಕರಿಸಿದರು.



ಗಮನ ಸೆಳೆದ ಯುಗಾದಿ ಶೋಭಾಯಾತ್ರೆ

ಕುಮಟಾ: ಯುಗಾದಿ ಉತ್ಸವದ ಅಂಗವಾಗಿ ಕುಮಟಾ ಪಟ್ಟಣದಲ್ಲಿ ಆಯೋಜಿಸಲಾದ ಬೃಹತ್ ಶೋಭಾಯಾತ್ರೆ ಅಪಾರ ಜನಸ್ತೋಮದ ನಡುವೆ ಅದ್ದೂರಿಯಾಗಿ ನೆರವೇರಿತು. ಸಭಾ ಕಾರ್ಯಕ್ರಮಕ್ಕೂ ಪೂರ್ವವಾಗಿ ನಡೆದ ಈ ಮೆರವಣಿಗೆ ಪಟ್ಟಣದ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸಿ ಎಲ್ಲರ ಗಮನ ಸೆಳೆಯಿತು.

ಪಟ್ಟಣದ ದೇವರಹಕ್ಕಲದ ಶ್ರೀ ಶಾಂತಿಕಾ ಪರಮೇಶ್ವರಿ ದೇವಸ್ಥಾನದ ಆವರಣದಿಂದ ಪ್ರಾರಂಭವಾದ ಶೋಭಾ ಯಾತ್ರೆಯು ಸುಭಾಸ್ ರಸ್ತೆ, ರಥ ಬೀದಿ, ಮೂರುಕಟ್ಟೆ, ಬಸ್ತಿಪೇಟೆ, ಹಳೆ ಬಸ್ ನಿಲ್ದಾಣ ಮಾರ್ಗವಾಗಿ ಮಾಸ್ತಿಕಟ್ಟೆ ಸರ್ಕಲ್ ಮೂಲಕ ರಾಷ್ಟ್ರೀಯ ಹೆದ್ದಾರಿಯನ್ನು ಅಲಂಕರಿಸುತ್ತಾ ಮಣಕಿ ಮೈದಾನದಲ್ಲಿ ಸಮಾವೇಶಗೊಂಡಿತು. ಮಾರ್ಗಮಧ್ಯೆ ಎಲ್ಲೆಡೆ ಜನರು ಉತ್ಸಾಹದಿಂದ ಮೆರವಣಿಗೆಯನ್ನು ಬರಮಾಡಿಕೊಂಡರು.

ಈಶೋಭಾಯಾತ್ರೆಯವಿಶೇಷ ಆಕರ್ಷಣೆಯಾಗಿ ವಿವಿಧ ಸಮಾಜಗಳ ಪರವಾಗಿ ಪ್ರದರ್ಶಿಸಲಾದ ಸ್ತಬ್ಧಚಿತ್ರಗಳು ಕಾಣಿಸಿಕೊಂಡವು. ಪ್ರತಿ ಸ್ತಬ್ಧಚಿತ್ರವೂ ಭಾರತೀಯ ಸಂಸ್ಕೃತಿ, ಪರಂಪರೆ ಹಾಗೂ ಸಾಮಾಜಿಕ ಸಂದೇಶಗಳನ್ನು ಪ್ರತಿಬಿಂಬಿಸುವಂತೆ ವಿನ್ಯಾಸಗೊಳಿಸಲಾಗಿತ್ತು. ಪೌರಾಣಿಕ ಪಾತ್ರಗಳ ವೇಷಧಾರಿಗಳು ಮೆರವಣಿಗೆಯಲ್ಲಿ ಭಾಗವಹಿಸಿ ನೋಡುಗರ ಮನಸೆಳೆಯುವಲ್ಲಿ ಯಶಸ್ವಿಯಾದರು.

ಡೋಲು, ನಗಾರಿ ಹಾಗೂ ಸುಗ್ಗಿ ಕುಣಿತಗಳಂತಹ ಜನಪದ ಕಲಾ ರೂಪಗಳು ಮೆರವಣಿಗೆಯ ಮೆರುಗು ಹೆಚ್ಚಿಸಿತು. ಸಾಂಪ್ರದಾಯಿಕ ವಾದ್ಯಗಳ ನಾದಕ್ಕೆ ಹೆಜ್ಜೆ ಹಾಕಿದ ಕಲಾವಿದರು ಜನರಲ್ಲಿ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು. ಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರೂ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಮೆರವಣಿಗೆಯನ್ನು ಕಣ್ತುಂಬಿಕೊಳ್ಳಲು ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದು ಕಂಡುಬಂದಿತು. ಕುಟುಂಬ ಸಮೇತರಾಗಿ ಆಗಮಿಸಿದ ಜನರು ಶೋಭಾ ಯಾತ್ರೆಯನ್ನು ಆನಂದಿಸಿ ಹಬ್ಬದ ಉಲ್ಲಾಸವನ್ನು ಹಂಚಿಕೊಂಡರು.

ಒಟ್ಟಾರೆ, ಕುಮಟಾದ ಯುಗಾದಿ ಶೋಭಾ ಯಾತ್ರೆ ಸಾಂಸ್ಕೃತಿಕ ವೈಭವ, ಜನಪದ ಕಲಾ ವೈಶಿಷ್ಟ್ಯ ಮತ್ತು ಸಾಮಾಜಿಕ ಏಕತೆಯ ಸಂಕೇತವಾಗಿ ರೂಪುಗೊಂಡಿದ್ದು, ಪಟ್ಟಣದ ಇತಿಹಾಸದಲ್ಲಿ ಮತ್ತೊಂದು ಮರೆಯಲಾರದ ಕ್ಷಣವಾಗಿ ಉಳಿಯಿತು.



ಕಿರುಸುದ್ದಿ

ಸಂಭ್ರಮದ ಶ್ರೀವಿಶ್ವರಾಧ್ಯರ ರಥೋತ್ಸವ

ಶಿಗ್ಗಾವಿ: ತಾಲೂಕಿನ ಹಿರೇಬೆಂಡಿಗೇರಿಯ ಭಾವೈಕ್ಯ ಹಿರೇಮಠದಲ್ಲಿ ಶ್ರೀವಿಶ್ವರಾಧ್ಯರ ರಥೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಾದ್ಯ ವೈಭವಗಳೊಂದಿಗೆ ಅದ್ದೂರಿಯಾಗಿ ನಡೆಯಿತು.

ಹಿರೇಮಠದ ಷ.ಬ್ರ. ವಿಶ್ವೇಶ್ವರ ಶಿವಾಚಾರ್ಯರು ಮಹಾಸ್ವಾಮಿಗಳು ಚಾಲನೆ ನೀಡಿ ಮಾತನಾಡಿ, ಮೇಲು ಕೀಳು ಮರೆತು ನಾವೆಲ್ಲರೂ ಒಂದು ನಾವೆಲ್ಲರೂ ಬಂದು ಎಂದು ಒಟ್ಟಾಗಿ ಸೇರಿ ಬದುಕಿನಲ್ಲಿ ಬೆಳಕಿನ ಉತ್ಸವ ಕಾಣುವ ಕಾರ್ಯಕ್ರಮವೇ ರಥೋತ್ಸವ ಎಂದರು. ವೇದಮೂರ್ತಿ ರೇವಣಸಿದ್ದೇಶ್ವರ ಮಹಾಸ್ವಾಮಿಗಳು, ವೇದಮೂರ್ತಿ ಮೃತ್ಯುಂಜಯ ಒಡೆಯರ್‌ಮಠ, ವೇದಮೂರ್ತಿ ಮೃತ್ಯುಂಜಯ ಹಿರೇಮಠ ಸಮ್ಮುಖ ವಹಿಸಿದ್ದರು.

ಮುಖಂಡರಾದ ಶಿವಾನಂದ ಮ್ಯಾಗೇರಿ, ಮೌಲಸಾಬ್ ತಹಶೀಲ್ದಾರ್. ಈರಮ್ಮ ಹಡಪದ, ವೇದಮೂರ್ತಿ ವೀರಭದ್ರಯ್ಯ ಹಿರೇಮಠ, ಬಸವರಾಜ ನಾಗಪ್ಪನವರ್, ಹನುಮಂತಪ್ಪ ಮಂಟೂರ, ಈರಪ್ಪ ಮ್ಯಾಗೇರಿ, ಬಸವರಾಜ್ ಮಾಳಗಿ, ಪಕೀರೇಶ ಪುಟ್ಟಣ್ಣವರ, ಬಸಪ್ಪ ಬಂಗಿ. ಬಸಪ್ಪ ಮಲ್ಲೂರ್, ಬಸವರಾಜ ಕೇಸರಿ, ಫಕೀರಪ್ಪ ಸಂಗಣ್ಣನವರ್, ಚಿನ್ನಪ್ಪ ಕುಂದಗೋಳ, ಬಸವರಾಜ್ ಹುಬ್ಬಳ್ಳಿ, ಬಸವರಾಜ್ ಗುದ್ಲಿ, ನೂರಾರು ಭಕ್ತರು ಇದ್ದರು.

ವೃತ್ತಿ ಶಿಕ್ಷಣ ಪ್ರದರ್ಶನ, ಕೆರಿಯರ್ ಮೇಳ

ಹಾವೇರಿ: ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವೃತ್ತಿ ಪ್ರಪಂಚದ ಅರಿವು ಮತ್ತು ಆಯ್ಕೆಗಳ ಮಾರ್ಗದರ್ಶನ ನೀಡಲು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳ ಮಾ.23ರಂದು ಬೆಳಿಗ್ಗೆ 9ರಿಂದ ಸಂಜೆ 5.30ರವರೆಗೆ ಇಜಾರಿಲಕಮಾಪೂರ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ವಿದ್ಯಾರ್ಥಿಗಳಿಗೆ ವಿವಿಧ ವೃತ್ತಿಪರ ಕೋರ್ಸ್‌ಗಳು ಮತ್ತು ಲಭ್ಯವಿರುವ ಉದ್ಯೋಗಾವಕಾಶಗಳ ಬಗ್ಗೆ ಅರಿವು ಮೂಡಿಸುವುದು, 12ನೇ ತರಗತಿಯ ನಂತರದ ವಿವಿಧ ಪ್ರವೇಶ ಪರೀಕ್ಷೆಗಳ (ಸಿಇಟಿ, ನೀಟ್, ಜೆಇಇ ಇತ್ಯಾದಿ) ಬಗ್ಗೆ ಮಾಹಿತಿ ನೀಡುವುದು, ವಿವಿಧ ಕೋರ್ಸ್‌ಗಳಿಗೆ ಇಲಾಖೆಯಿಂದ ಲಭ್ಯವಿರುವ ಆರ್ಥಿಕ ನೆರವು, ಜಿಲ್ಲೆಯಲ್ಲಿ ಲಭ್ಯವಿರುವ ಇಲಾಖಾ ವಸತಿ ನಿಲಯಗಳ ವಿವರ, ಯುವಕರಿಗೆ/ ವಿದ್ಯಾರ್ಥಿಗಳಿಗೆ ಇಲಾಖೆ ವತಿಯಿಂದ ನೀಡಲಾಗುವ ವೃತ್ತಿಪರ ತರಬೇತಿಗಳು, ಉದ್ಯಮಶೀಲತೆ ಅಥವಾ ಉನ್ನತ ವ್ಯಾಸಂಗಕ್ಕೆ ನೀಡಲಾಗುವ ಇತರೆ ಇಲಾಖಾ ಸೌಲಭ್ಯಗಳ ಮಾಹಿತಿ ನೀಡುವುದು ಈ ಮೇಳದ ಮುಖ್ಯ ಉದ್ದೇಶವಾಗಿದೆ. ಜಿಲ್ಲೆಯ ಎಲ್ಲ 8, 9 ಮತ್ತು 12ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕಾರ್ಯಕ್ರಮಕ್ಕೆ ಹಾಜರಾಗಿ ವಿವಿಧ ವೃತ್ತಿಪರ ಕೋರ್ಸ್‌ಗಳು ಮತ್ತು ಲಭ್ಯವಿರುವ ಉದ್ಯೋಗವಕಾಶಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳಬೇಕು.ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾವೇರಿಯ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರಾದ ಝುಡ್. ಎಂ. ಖಾಜಿ ಮೊ.9448999372, ನೋಡಲ್ ಅಧಿಕಾರಿ ಹಾಗೂ ಹಿರಿಯ ಉಪನ್ಯಾಸಕ ಮೌನೇಶ ಬಡಿಗೇರ ಮೊ. 8904660525 ಗೆ ಸಂಪರ್ಕಿಸಬಹುದೆಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕ (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗುತ್ತಲ: ಸಮೀಪದ ನೆಗಳೂರ ಗ್ರಾಮದಲ್ಲಿ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಚಿಕ್ಕರಥೋತ್ಸವ ಸಹಸ್ರಾರು ಸಂಖ್ಯೆಯ ಭಕ್ತರ ಮಧ್ಯೆ ಸಂಭ್ರಮ ಸಡಗರದಿಂದ ನಡೆಯಿತು.



ಶಿಗ್ಗಾವಿ: ತಾಲೂಕಿನ ಹಿರೇಬೆಂಡಿಗೇರಿಯ ಭಾವೈಕ್ಯ ಹಿರೇಮಠದಲ್ಲಿ ಶ್ರೀವಿಶ್ವರಾಧ್ಯರ ರಥೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಾದ್ಯ ವೈಭವಗಳೊಂದಿಗೆ ಅದ್ದೂರಿಯಾಗಿ ನಡೆಯಿತು. ಹಿರೇಮಠದ ಷ.ಬ್ರ. ವಿಶ್ವೇಶ್ವರ ಶಿವಾಚಾರ್ಯರು ಮಹಾಸ್ವಾಮಿಗಳು ಚಾಲನೆ ನೀಡಿದರು. ವೇದಮೂರ್ತಿ ರೇವಣಸಿದ್ಧೇಶ್ವರ ಮಹಾಸ್ವಾಮಿಗಳು, ವೇದಮೂರ್ತಿ ಮೃತ್ಯುಂಜಯ ಒಡೆಯರ್‌ಮಠ, ವೇದಮೂರ್ತಿ ಮೃತ್ಯುಂಜಯ ಹಿರೇಮಠ ಸಮ್ಮುಖ ವಹಿಸಿದ್ದರು. ಹಾಗೂ ಇತರರು ಇದ್ದರು.

ಶಾಸಕ ಯಾಸೀರ್‌ಖಾನ್ ಪಠಾಣ್‌ಗೆ ಸನ್ಮಾನ

ಶಿಗ್ಗಾವಿ: ನಾಡಿನ ಜನತೆಗೆ ಆರೋಗ್ಯ, ಸಂಪತ್ತು, ರೈತರಿಗೆ ಉತ್ತಮ ಮಳೆಯಾಗಿ ಬೆಳೆ ಚನ್ನಾಗಿ ಬರಲಿ ಎಂದು ಅಲ್ಲಾನಲ್ಲಿ ಪ್ರಾರ್ಥಿಸಿದ್ದೇನೆ ಎಂದು ಶಾಸಕ ಯಾಸೀರ್‌ಖಾನ್ ಪಠಾಣ್ ಹೇಳಿದರು.

ಪಟ್ಟಣದಲ್ಲಿ ಮುಸಲ್ಮಾನ್ ಸಮುದಾಯದ ಬಾಂಧವರ ಜೊತೆಗೂಡಿ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ನಂತರ ಮಾತನಾಡಿದ ಅವರು, ಒಂದು ತಿಂಗಳ ಕಾಲ ಉಪವಾಸ ಆಚರಿಸುವ ಮುಸ್ಲಿಂರು ಈದ್ ಉಲ್ ಫಿತುರ್ ಹಿಂದಿನ ದಿನ ಚಂದ್ರದರ್ಶನದೊಂದಿಗೆ ಉಪವಾಸ ಅಂತ್ಯ ಗೊಳಿಸುತ್ತಾರೆ. ಹಬ್ಬದ ದಿನ ಪ್ರಾರ್ಥನೆ ಸಂಜೆ ಸಲ್ಲಿಸಿ ಝುಕಾತ್ ನೀಡುತ್ತಾರೆ.

ಝುಕಾತ್ ಎಂದರೆ ಪ್ರತಿ ಮುಸ್ಲಿಮನು ರಂಜಾನ್ ನಲ್ಲಿ ತಮ್ಮ ದುಡಿಮೆ ಅಥವಾ ಸಂಪತ್ತಿನಲ್ಲಿ ಒಂದಷ್ಟು ಭಾಗವನ್ನು ಅಸಹಾಯಕ, ನಿರ್ಗತಿಕ, ಬಡವರ್ಗದ ಜನತೆಗೆ ಆಹಾರ, ಬಟ್ಟೆ, ಹಣ್ಣು ಹಂಪಲು ಸೇರಿದಂತೆ ಹಲವು ವಿಧಾನಗಳಲ್ಲಿ ದಾನ ನೀಡುವ ಮೂಲಕ ಅವರಿಗೆ ವಿವಿಧ ರೀತಿಯಲ್ಲಿ ನೆರವಾಗುವ ಸಹಾಯ ಮಾಡುವ ಪ್ರಕ್ರಿಯೆಯ ವಿಶಿಷ್ಟ ಆಚರಣೆಯಾಗಿದೆ ಎಂದರು.

ಅಂಜುಮನ್ ಸಂಸ್ಥೆಯಿಂದ ಶಾಸಕ ಪಠಾಣ್ ಅವರನ್ನು ಸನ್ಮಾನಿಸಲಾಯಿತು, ಈ ಸಂದರ್ಭದಲ್ಲಿ ತಾಲೂಕಿನ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.



ಪಟ್ಟಣದಲ್ಲಿ ಮುಸಲ್ಮಾನ್ ಸಮುದಾಯದ ಬಾಂಧವರ ಜೊತೆಗೂಡಿ ಈದ್ಗಾ ಮೈದಾನದಲ್ಲಿ ಶಾಸಕ ಯಾಸೀರ್‌ಖಾನ್ ಪಠಾಣ್ ಅವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಅಂಜುಮನ್ ಸಂಸ್ಥೆಯಿಂದ ಅವರನ್ನು ಸನ್ಮಾನಿಸಲಾಯಿತು.

ಸಾಮರಸ್ಯ, ಸೌಹಾರ್ದತೆ ಬೆಳೆಸುವುದೇ ಜಾತ್ರೆಗಳ ಮೂಲ ಗುರಿ: ಶ್ರೀಗಳು

ಹಾವೇರಿ: ವ್ಯಕ್ತಿ ವ್ಯಕ್ತಿಗಳಲ್ಲಿ ಧರ್ಮ ಧರ್ಮಗಳಲ್ಲಿ ನಡೆಯುತ್ತಿರುವ ಸಂಘರ್ಷ ಒಳ್ಳೆಯ ಬೆಳವಣಿಗೆಯಲ್ಲ, ಉದಾತ್ತ ಜೀವನ ಮೌಲ್ಯಗಳನ್ನು ಸಂಪಾದಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುವುದೇ ನಿಜವಾದ ಧರ್ಮ. ಸಮಾಜದಲ್ಲಿ ಸಾಮರಸ್ಯ ಮತ್ತು ಸೌಹಾರ್ದತೆ ಬೆಳೆಸುವುದೇ ಜಾತ್ರಾ ಮಹೋತ್ಸವದ ಮೂಲ ಗುರಿಯಾಗಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ತಾಲೂಕಿನ ಕೆಸರಳ್ಳಿ ಕಲ್ಮೇಶ್ವರಸ್ವಾಮಿ 30ನೇ ವರ್ಷದ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಧರ್ಮ ಎಂಬುದು ಹಸಿದವನಿಗೆ ಅನ್ನ, ಬಾಯಾರಿದವನಿಗೆ ನೀರು, ಕುರುಡನಿಗೆ ಕಣ್ಣು ಮತ್ತು ಹಕ್ಕಿಗೆ ರೆಕ್ಕೆ ಇದ್ದ ಹಾಗೆ. ಮನುಷ್ಯನಿಗೆ ಹೆತ್ತ ತಾಯಿ ಹೊತ್ತ ನೆಲ ಎಷ್ಟು ಮುಖ್ಯವೋ ಅಷ್ಟೇ ಧರ್ಮವೂ ಮುಖ್ಯ ಎಂಬುದನ್ನು ಮರೆಯಬಾರದು. ಶ್ರೀ ಜಗದ್ಗುರು ರೇಣುಕಾಚಾರ್ಯರು ಆದರ್ಶ ಜೀವನದ ಮೌಲ್ಯಗಳನ್ನು ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ಕೆಸರಳ್ಳಿ ಗ್ರಾಮಸ್ಥರು ಒಕ್ಕಟ್ಟಿನಿಂದ ಪ್ರತಿ ವರುಷ ಜಾತ್ರಾ ಮಹೋತ್ಸವ ಮಾಡುತ್ತಿರುವುದು ತಮಗೆ ಅಪಾರ ಸಂತೋಷ ತಂದಿದೆ ಎಂದರು. ಶ್ರೀ ಕಲ್ಮೇಶ್ವರ ಗೋಪುರಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳು ಕಳಸಾರೋಹಣ ನೆರವೇರಿಸಿದರು.

ಅಗಡಿ ಅಕ್ಕಿಮಠದ ಗುರುಲಿಂಗ ಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿದರು. ನೆಗಳೂರು ಹಿರೇಮಠದ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮಿಗಳು, ಕೂಡಲದ ಗುರುಮಹೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿದರು.

ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು. ಸಹಸ್ರಾರು ಭಕ್ತರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳ ಆಶೀರ್ವಾದ ಪಡೆದರು.

ಕೆಸರಹಳ್ಳಿ ಗ್ರಾಮದ ಗುರುನಾಥಯ್ಯ ಮುಳ್ಳೂರುಮಠ ಅನ್ನದಾಸೋಹ ಸೇವೆಯನ್ನು ಸಲ್ಲಿಸಿದರು. ಸವಣೂರಿನ ಡಾ.ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

ಬೆರಗಿನ ವಚನಗಳ ಮೂಲಕ ಸಮಾಜ ತಿದ್ದಿದ ಅಲ್ಲಮಪ್ರಭು

ಹಾವೇರಿ: ತನ್ನ ಬೆರಗಿನ ವಚನಗಳಿಂದ, ಬೆಡಗು ಎಂಬುದು ಒಗಟು ಮಾತು, ಒಗಟು ಮಾತಿನ ರೀತಿ ಅದು ಸಂಕೇತಗಳ ಮೂಲಕ ಮಾತನಾಡುತ್ತದೆ. ತಮ್ಮ ಬೆರಗಿನ ವಚನಗಳ ಮೂಲಕ ಸಮಾಜವನ್ನು ತಿದ್ದಿದವರು ಅಲ್ಲಮಪ್ರಭುಗಳು ಎಂದು ಹತ್ತಿಮತ್ತೂರಿನ ನಿಜಗುಣ ಶಿವಯೋಗಿಗಳು ಹೇಳಿದರು.

ತಾಲೂಕಿನ ಅಗಡಿ ಗ್ರಾಮದ ಪ್ರಭುಸ್ವಾಮಿಮಠದ ಸಂಗನಬಸವ ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೊಸಮಠದ ಬಸವ ಶಾಂತಲಿಂಗ ಸ್ವಾಮೀಜಿ ಮಾತನಾಡಿ, ಅಲ್ಲಮನ ಬಗ್ಗೆ ಎಲ್ಲರಿಗೂ ಭಕ್ತಿ ಮಿಶ್ರಿತ ಗೌರವ, ಅದಕ್ಕೆ ಅಲ್ಲಮನ ವ್ಯಕ್ತಿತ್ವವೇ ಕಾರಣ. ಆತನ ವ್ಯಕ್ತಿತ್ವ ಏಕಾಂತವಾದದ್ದು, ಬಸವಣ್ಣನಂತೆ ಎಲ್ಲರ ಜೊತೆ ಸಲೀಸಾಗಿ ಬೆರೆಯುವಂತಹ ಮುಕ್ತಿಯಲ್ಲ, ರಾಜಿಯ ಮನೋಭಾವವಂತೂ ಆತನದು ಅಲ್ಲವೇ ಅಲ್ಲ. ಅಲ್ಲಮ ತುಂಬಾ ನಿಷ್ಠುರವಾದಿ, ಅವನ ವಚನಗಳ ಅಂಕಿತವು ಗುಹೇಶ್ವರ ಎಂದು ಪ್ರಸಿದ್ಧವಾಗಲು ಕಾರಣ ಆತನ ವ್ಯಕ್ತಿತ್ವದ ಗಾಢತೆ. ಅವರ ಕಳಕಳಿ ಆಧ್ಯಾತ್ಮಿಕ ಔನ್ನತ್ಯ ಎಂದು ಸ್ಮರಿಸಿದರು.

ಮಠಾಧ್ಯಕ್ಷ ಗುರುಶಿದ್ಧ ಸ್ವಾಮೀಜಿ ಮಾತನಾಡಿ, ಶರಣರ ಜೀವನ ಸೂತ್ರಗಳು ಇಂದಿನ ಆರ್ಥಿಕ, ಸಾಮಾಜಿಕ ಮತ್ತು ನೈತಿಕ ದುರವಸ್ಥೆಗೆ ಪರಿಹಾರ ಸೂತ್ರಗಳಾಗಿವೆ. ಶರಣರು ಪ್ರತಿಪಾದಿಸಿದ ಕಾಯಕ, ಸಂಗ್ರಹ ಮತ್ತು ದಾಸೋಹ ತತ್ವಗಳು ಕಾಲತೀತ ಮತ್ತು ದೇಶಾತೀತ ತಾತ್ವಿಕತೆಯನ್ನು ಅಳವಡಿಸಿಕೊಳ್ಳುವ ತುರ್ತು ಎಂದಿಗಿಂತಲೂ ಈಗ ಹೆಚ್ಚಿದೆ ಎಂದರು.

ನಿವೃತ್ತ ಜಿಲ್ಲಾ ನ್ಯಾಯಾಧೀಶ ಚಂದ್ರಶೇಖರ ಮರಗೂರ ಅವರಿಗೆ ಗುರುರಕ್ಷೆ ನೀಡಿ ಗೌರವಿಸಲಾಯಿತು. ಗುರುಮಾತೆ ಲಕ್ಷ್ಮಿ ಅಸುಂಡಿ ಅಲ್ಲಮಪ್ರಭು ಕುರಿತು ಉಪನ್ಯಾಸ ನೀಡಿದರು. ಶಂಬಣ್ಣ ಬಸೇಗಣ್ಣಿ, ನಾಗರಾಜ ಬಸೇಗಣ್ಣಿ ಮುಂತಾದವರು ವೇದಿಕೆಯಲ್ಲಿದ್ದರು. ಅಶ್ವಿನಿ ಹಿರೇಮಠ ಸ್ವಾಗತಿಸಿದರು. ನೇತ್ರಾವತಿ ಕೊಪ್ಪಳದ ನಿರೂಪಿಸಿ ವಂದಿಸಿದರು.



ಮಾ.23ರಂದು ಗ್ರಾಹಕರ ಸಂವಾದ ಸಭೆ

ಕಾರವಾರ: ಕಾರವಾರ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಕಚೇರಿಯಲ್ಲಿ ಮಾ.23 ರಂದು ಗ್ರಾಹಕರ ಸಂವಾದ ಸಭೆಯನ್ನು ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯವರೆಗೆ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳೇನಾದರೂ ಇದ್ದಲ್ಲಿ ಸಭೆಗೆ ಹಾಜರಾಗಿ ತಮ್ಮ ಕುಂದು ಕೋರತೆಗಳ ಅಹವಾಲುಗಳನ್ನು ನೀಡುವಂತೆ ಕಾರವಾರ ಕಾರ್ಯ ಪಾಲನಾ ಮತ್ತು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೌಹಾರ್ದತೆಯ ಹಬ್ಬ ರಂಜಾನ್: ಪಾಟೀಲ

ಬ್ಯಾಡಗಿ: ಈದ್ ಉಲ್ ಫಿತರ್ ಮುಸ್ಲಿಮರಿಗೆ ಅತ್ಯಂತ ಪವಿತ್ರ ಹಬ್ಬ. ಅದು ಶಿಸ್ತು, ಸಂಯಮ, ತ್ಯಾಗ ಮತ್ತು ಮಾನವೀಯತೆ ನೆಲಗಟ್ಟಿನಲ್ಲಿ ಆಚರಿಸಲ್ಪಡುತ್ತದೆ. ಏಕತೆ ಮತ್ತು ಸಹೋದರತೆ ಸಾರುತ್ತದೆ. ಹಸಿವಿನಿಂದ ಯಾರು ಹಬ್ಬದಿಂದ ವಂಚಿತರಾಗಬಾರದು ಎಂಬ ಸದುದ್ದೇಶದಿಂದ ತಿಂಗಳ ಕಾಲ ಆಹಾರ ನಿರ್ಬಂಧಿಸಿ ಕಠಿಣ ರಂಜಾನ್ ಉಪವಾಸ ಕೈಗೊಳ್ಳುವರು. ಹಬ್ಬದ ಸಮಾರೋಪವೇ ಮುಸ್ಲಿಮರಿಗೆ ಮುಖ್ಯ ಘಟ್ಟವಾಗಿದ್ದು, ರಂಜಾನ್ ಅಂತ್ಯದಲ್ಲಿ ಫಿತ್ರ್ ಝುಕಾತ್ ಅಂದರೆ ಅಲ್ಲಾಹ್‌ಗೆ ಕೃತಜ್ಞತೆಯಿಂದ ಬಡವರಿಗೆ ನೀಡುವ ದಾನವೇ ಶ್ರೇಷ್ಠ ಎಂದು ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ ಹೇಳಿದರು.

ಪಟ್ಟಣದ ಬೆಟ್ಟದ ಮಲ್ಲೇಶ್ವರ ನಗರದಲ್ಲಿರುವ ಈದ್ಗಾ ಮೈದಾನದ ರಂಜಾನ್ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಮಾಜಿ ಶಾಸಕ ಸುರೇಶ್ ಗೌಡ ಪಾಟೀಲ ಮಾತನಾಡಿದರು.

ಗ್ಯಾರಂಟಿ ಯೋಜನೆಯ ರಾಜ್ಯ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಸಮಾಜದ ಮುಖಂಡ ಡಾಕ್ಟರ್ ಎ.ಎಂ. ಸೌಧಾಗರ ಮಾತನಾಡಿದರು.

ಬೆಳಗ್ಗೆ ಕುಟುಂಬ ಸದಸ್ಯರೆಲ್ಲರೂ ಹೊಸ ಉಡುಪು ಧರಿಸಿ ಮಹಿಳೆಯರು ಮನೆಯಲ್ಲಿ ಪ್ರಾರ್ಥನೆ ಸಲ್ಲಿಸುವುದರೇ ಪುರುಷರು ಈಗ ಮೈದಾನದಲ್ಲಿ ಸುಮಾರು ಒಂದು ಗಂಟೆಗಳ ಹೆಚ್ಚು ಕಾಲ ಶ್ರದ್ಧಾ ಭಕ್ತಿಯಿಂದ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಪ್ರಾರ್ಥನೆ ಮುಗಿದ ನಂತರ ಸಮಸ್ತ ಮುಸ್ಲಿಂ ಬಾಂಧವರು ಶುಭಾಶಯಗಳ ವಿನಿಮಯ ಹಂಚಿಕೊಂಡರು.

ಈ ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ರಾಜೆ ಸಾಬ್ ಕಳ್ಯಾಳ. ಮಂಜೂರಲ್ಲಿ ಹಕ್ಕಿಮ್. ಅಬ್ದುಲ್ ಮುನಫ್ ಎರೇಸಮಿ. ಭಾಷಾ ಸಾಬ್ ಮುಲ್ಲಾ. ಹಾಗೂ ಸಮಸ್ತ ಮುಸ್ಲಿಂ ಬಾಂಧವರು .ಪೊಲೀಸ್ ಠಾಣೆಯ ಸಿಪಿಐ ಮಂಜುನಾಥ್ ಚಿಕ್ಕಣ್ಣನವರ್ ಸೂಕ್ತ ಬಂದೋಬಸ್ತ್ ಒದಗಿಸಿದ್ದರು.



ಗುಂಡಿ ತುಂಬಿದ ರಸ್ತೆ: ದುರಸ್ತಿಗೆ ಆಗ್ರಹ

ಹಾನಗಲ್: ಹಾನಗಲ್‌ನಿಂದ ಹಾವೇರಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ. ಆದರೆ, ಶೀಗಿಹಳ್ಳಿ ಸಿಂಗಾಪುರ, ಆಡೂರ, ಬಾಳಂಬಿಡ ಬಳಿ ಬಿದ್ದಿರುವ ಕೃತಕ ಗುಂಡಿಗಳು ಮತ್ತು ಕೆಲವು ಭಾಗಗಳಲ್ಲಿ ಹಾಳಾದ ರಸ್ತೆ ಇದೀಗ ಅಪಾಯಕ್ಕೆ ಆಹ್ವಾನಿಸುತ್ತಿದೆ. ಈ ಮಾರ್ಗದಲ್ಲಿ ಓಡಾಡುವ ವಾಹನ ಸವಾರರು ಕೈಯಲ್ಲಿ ಜೀವ ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ರಸ್ತೆ ದುರಸ್ತಿಗಾಗಿ ತೆಗೆದ ಕೃತಕ ಗುಂಡಿಗಳು ತಿಂಗಳು ಕಳೆದರು ದುರಸ್ತಿಯಾಗದೆ ಇರುವುದು ಇದೀಗ ವಾಹನ ಸವಾರರ ಆಕ್ರೋಶಕ್ಕೆ ಕಾರಣವಾಗಿವೆ.

ಈ ಗುಂಡಿಗಳನ್ನ ತಪ್ಪಿಸಲು ಹೋಗಿ ವಾಹನ ಸವಾರರು ಅಪಘಾತಕ್ಕೆ ಒಳಗಾಗುತ್ತಿದ್ದಾರೆ. ಈ ರಾಷ್ಟ್ರೀಯ ಹೆದ್ದಾರಿಗೆ ಒಳಪಡುವ ಇಲಾಖೆ ಕಣ್ಣು ಮುಚ್ಚಿ ಕುಳಿತಿದೆಯಾ? ಎಂಬ ಪ್ರಶ್ನೆ ಇದೀಗ ಸಾರ್ವಜನಿಕ ವಲಯದಲ್ಲಿ ಮೂಡತೊಡಗಿದೆ.

ಆದರಲ್ಲೂ ದ್ವಿಚಕ್ರ ವಾಹನ ಸವಾರರು ರಾತ್ರಿ ವೇಳೆ ಸ್ವಲ್ಪ ಯಾಮಾರಿದ್ರೆ ಅಪಾಯ ಕಟ್ಟಿಟ್ಟ ಬುತ್ತಿ. ಇನ್ನಾದರೂ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನ ಹರಿಸಿ ರಸ್ತೆ ದುರಸ್ತಿ ಮಾಡದಿದ್ದರೆ ವಾಹನ ಸವಾರರು ಮತ್ತು ಇಲ್ಲಿನ ಸ್ಥಳೀಯರು ಬೀದಿಗಿಳಿದು ಹೋರಾಟ ಮಾಡಲು ಸಿದ್ಧರಿದ್ದಾರೆ. ವಾಹನ ಸವಾರರ ಕಾಳಜಿಗಾದ್ರೂ ಇಲ್ಲಿನ ಅಧಿಕಾರಿಗಳು ಇತ್ತ ಗಮನ ಹರಿಸಬೇಕಾಗಿದೆ.



ಹಲವು ಬಾರಿ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಆದರೆ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ಮುಂದಿನ ದಿನಗಳಲ್ಲಿ ಗುಂಡಿಗಳನ್ನ ಮುಚ್ಚಿ ದುರಸ್ತಿ ಮಾಡದೇ ಹೋದರೆ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ಮಾಡಲಾಗುವುದು ಎಂದು ರೈತ ಮುಖಂಡ ಭುವನೇಶ್ವರ ಶಿಡ್ಲಾಪುರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಶ್ರದ್ಧಾಭಕ್ತಿಯಿಂದ ರಂಜಾನ್ ಆಚರಣೆ

ಹಾವೇರಿ: ನಗರ ಸೇರಿದಂತೆ ಜಿಲ್ಲಾದ್ಯಂತ ಶಾಂತಿ, ಸೌಹಾರ್ದತೆ ಹಾಗೂ ಸಾಮರಸ್ಯದ ಸಂಕೇತವಾಗಿರುವ ಪವಿತ್ರ ರಂಜಾನ್ ಈದ್-ಉಲ್-ಫಿತರ್ ಹಬ್ಬವನ್ನು ಶನಿವಾರ ಮುಸ್ಲಿಂ ಬಾಂಧವರು ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೇ ಶ್ರದ್ಧಾಭಕ್ತಿಯಿಂದ ಆಚರಿಸಿದರು. ಪಕ್ಷಾತೀತ ಚುನಾಯಿತ ಪ್ರತಿನಿಧಿಗಳಿಗೆ ಸಾಮೂಹಿಕವಾಗಿ ಶುಭಾಶಯ ಕೋರುವುದರ ಮೂಲಕ, ಸಕಾಲಕ್ಕೆ ಉತ್ತಮ ಮಳೆ ಬೆಳೆಗಾಗಿ ಅಲ್ಲಾಹುನಲ್ಲಿ ಪ್ರಾರ್ಥಿಸಿದರು.

ಅಂಜುಮನ್ ಏ-ಇಸ್ಲಾಂ ಕಮೀಟಿಯ ಈದ್ಗಾ ಮೈದಾನದಲ್ಲಿ ಶನಿವಾರ ಬೆಳಗ್ಗೆಯಿಂದ ಹಿರಿಯರು ಕಿರಿಯರೆನ್ನದೇ ಎಲ್ಲಾ ವರ್ಗದ ವಯೋಮಾನದವರು ಹೊಸ ಬಟ್ಟೆ ಧರಿಸಿ ತಂಡೋಪ ತಂಡವಾಗಿ ಆಗಮಿಸಿ ಬೆಳಗ್ಗೆ 10ರಿಂದ 11 ಗಂಟೆಯವರೆಗೆ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಸಾಮೂಹಿಕ ಪ್ರಾರ್ಥನೆ ನಂತರ ರಂಜಾನ್ ಹಬ್ಬದ ಶುಭಾಶಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

ಧರ್ಮಗುರುಗಳಾದ ಮನ್‌ಮುಸೂತಿ ಮುಫ್ತಿ ನಿಹಾಲುದ್ದೀನ್, ಹಜರತ್ ಮೌಲಾಲಿ ಮುಲ್ಲಾ, ದಾದಾಪೀರ ಮುಲ್ಲಾ ಮಾತನಾಡಿದರು. ಶಾಹೀದ ದೇವಿಹೊಸುರ, ನವೀದ ಅಮ್ಮಿನಭಾವಿ, ಅಮೀರಜಾನ ಬೇಪಾರಿ, ಅನ್ವರಸಾಬ ಚಿಮ್ಮಲಗಿ, ದಾವಲಸಾಬ ಹಿರೇಮುಗದೂರ, ಜಾಫರಸಾಬ ಹತ್ತಿಕಾಳ, ಇಮ್ರಾನ ಹುಬ್ಬಳ್ಳಿ ಇನ್ನೂ ಅನೇಕರು ಉಪಸ್ಥಿತರಿದ್ದರು.



ಗಣ್ಯರಿಗೆ ಶುಭಾಶಯ: ರಂಜಾನ ಹಬ್ಬದ ಪ್ರಯುಕ್ತ ಹುಕ್ಕೇರಿಮಠ ಹಾಗೂ ಹೊಸಮಠಕ್ಕೆ ಭೇಟಿ ನೀಡಿದ ಮುಸ್ಲೀಂ ಬಾಂಧವರು ಹುಕ್ಕೇರಿಮಠದ ಪರಮಪೂಜ್ಯ ಸದಾಶಿವ ಮಹಾಸ್ವಾಮಿಗಳಿಗೆ ಹಾಗೂ ಹೊಸಮಠದ ಬಸವಶಾಂತಲಿಂಗ ಮಹಾಸ್ವಾಮಿಗಳಿಗೆ ಸನ್ಮಾನಿಸಿ ಗೌರವಿಸಿ ಶುಭ ಕೋರಿದರು.

ಜಾನುವಾರುಗಳ ಸಜೀವ ದಹನ: ಮಾಲೀಕರಿಗೆ ಸಾಂತ್ವನ

ಹಾವೇರಿ: ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಸಂಭವಿಸಿದ 12 ಎಮ್ಮೆಗಳ ಸಜೀವ ದಹನ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ, ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ, ಡೆಪ್ಯೂಟಿ ಸ್ಪೀಕರ್ ಹಾಗೂ ಶಾಸಕ ರುದ್ರಪ್ಪ ಲಮಾಣಿ ಶನಿವಾರ ಪ್ರತ್ಯೇಕವಾಗಿ ಭೇಟಿ ನೀಡಿ ಜಾನುವಾರು ಕಳೆದುಕೊಂಡ ಮಾಲೀಕರಿಗೆ ಸಾಂತ್ವನ ಹೇಳಿದರು.

ಕಳೆದ ಗುರುವಾರ ರಾತ್ರಿ ಗುಡುಗು, ಮಿಂಚು ಸಹಿತ ಜೋರಾಗಿ ಬೀಸಿದ ಮಳೆಗಾಳಿಗೆ ವಿದ್ಯುತ್ ಲೈನ್‌ಗಳ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ದನದ ಕೊಟ್ಟಿಗೆಯಲ್ಲಿದ್ದ 14 ಎಮ್ಮೆಗಳ ಪೈಕಿ 12 ಎಮ್ಮೆಗಳು ಸಂಪೂರ್ಣವಾಗಿ ಸಜೀವ ದಹನಗೊಂಡಿದ್ದವು. ಎರಡು ಎಮ್ಮೆಗಳು ತೀವ್ರವಾಗಿ ಅಸ್ವಸ್ಥಗೊಂಡಿದ್ದವು. ಜತೆಗೆ ನಾಲ್ಕೈದು ಟ್ರ್ಯಾಕ್ಟರ್‌ನಷ್ಟು ಮೆಕ್ಕೆಜೋಳ ಮೇವು ಕೂಡ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿತ್ತು. ಇದರಿಂದ ಗ್ರಾಮದ ರೈತ ಪರಮೇಶಪ್ಪ ಸೋಮಣ್ಣ ಜಾಡರ ಕುಟುಂಬ ಅಕ್ಷರಶಃ ಕಣ್ಣೀರಲ್ಲಿ ಕೈ ತೊಳೆಯುವಂತಾಗಿದೆ. ಶನಿವಾರ ಗ್ರಾಮಕ್ಕೆ ಆಗಮಿಸಿದ ಶಾಸಕರಾದ ಬಸವರಾಜ ಶಿವಣ್ಣನವರ, ರುದ್ರಪ್ಪ ಲಮಾಣಿ ಎದುರು ರೈತ ಪರಮೇಶಪ್ಪ ಹಾಗೂ ಪತ್ನಿ ಅಳುತ್ತಾ ಗೋಗರೆಯುತ್ತಿದ್ದ ದೃಶ್ಯ ನೆರೆದಿದ್ದ ಗ್ರಾಮಸ್ಥರ ಕಣ್ಣುಗಳನ್ನು ತೇವಗೊಳಿಸಿತು.




ಶಾಸಕ ಬಸವರಾಜ ಶಿವಣ್ಣನವರ ಮಾಲೀಕರನ್ನು ಸಮಾಧಾನಪಡಿಸಿ ಮಾತನಾಡಿ, ಸುಮಾರು 12 ಎಮ್ಮೆಗಳು ಸಜೀವ ದಹನಗೊಂಡಿರುವುದು ನನಗೂ ವೈಯಕ್ತಿಕವಾಗಿ ಬಹಳ ನೋವನ್ನುಂಟು ಮಾಡಿದೆ. ಘಟನೆ ಆಗಬಾರದಿತ್ತು, ನಡೆದು ಹೋಗಿದೆ. ನೀವು ಆತ್ಮಸ್ಥೈರ್ಯದಿಂದ ಇರಬೇಕು. ನಿಮ್ಮ ಪರವಾಗಿ ನಾವು ಇದ್ದೇವೆ. ಶಾಸಕರು ಇದ್ದಾರೆ. ಸರ್ಕಾರವೂ ಇದೆ ಎಂದು ಸಮಾಧಾನಪಡಿಸಿದರು. ಬಳಿಕ ವೈಯಕ್ತಿಕವಾಗಿ 25 ಸಾವಿರ ರೂ.ಗಳ ಸಹಾಯಧನ ನೀಡಿದರು. ಮುಖ್ಯಮಂತ್ರಿಗಳ ಪರಿಹಾರ ನಿಯಿಂದ ಸೂಕ್ತ ಪರಿಹಾರ ಹಾಗೂ ಪಶು ಸಂಗೋಪನಾ ಇಲಾಖೆಯಿಂದಲೂ ಪರಿಹಾರ ಕೊಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ರುದ್ರಪ್ಪ ಲಮಾಣಿ ಭೇಟಿ: ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಬಂದು ಸಾಂತ್ವಾನ ಹೇಳಿ ನಿರ್ಗಮಿಸಿದ ಬಳಿಕ ಹಾವೇರಿ ಶಾಸಕ, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಕೂಡ ಬಂದು ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು. ತಾವೂ ಕೂಡ ವೈಯಕ್ತಿಕವಾಗಿ 1 ಲಕ್ಷ ಸಹಾಯಧನ ನೀಡುತ್ತೇನೆ ಎಂದು ತಿಳಿಸಿದರು. ಸರ್ಕಾರದ ವತಿಯಿಂದಲೂ ಸೂಕ್ತ ಪರಿಹಾರ ಕೊಡಿಸಲು ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ತಾಲೂಕಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಂ.ಎಂ. ಮೈದೂರ ಸೇರಿದಂತೆ ಗ್ರಾಮದ ಮುಖಂಡರು ಹಾಜರಿದ್ದರು.

ಶ್ರೀ ಸಿದ್ಧೇಶ್ವರ ಜಾತ್ರಾ ಮಹೋತ್ಸವ



ಬ್ಯಾಡಗಿ: ಪಟ್ಟಣದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಶ್ರೀ ಸಿದ್ಧೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಸಿದ್ಧೇಶ್ವರನಿಗೆ ಬೆಳಗ್ಗೆ ಪ್ರಾತಃಕಾಲದಲ್ಲಿ ರುದ್ರಾಭಿಷೇಕ ಪುಷ್ಪ ಬಿಲ್ವಾರ್ಚನೆ ಮಾಡುವರ ಮೂಲಕ ದೇವರಿಗೆ ಸಂಪನ್ನಗೊಳಿಸಲಾಯಿತು. ಸಂಜೆ ಶ್ರೀ ಸಿದ್ಧೇಶ್ವರ ದೇವರ ಪುಷ್ಪದಿಂದ ಅಲಂಕೃತ ಗೊಂಡ ರಥೋತ್ಸವ ವಿವಿಧ ವಾದ್ಯ ವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ದೇವಸ್ಥಾನವನ್ನು ತಲುಪಿತು. ಕಾರ್ಯಕ್ರಮದಲ್ಲಿ ನೂರಾರು ಭಕ್ತಾದಿಗಳು ಪಾಲ್ಗೊಂಡಿದ್ದರು.

ರಂಗಕಲೆ ಉಳಿಸಿ ಬೆಳೆಸಲು ಮುಂದಾಗಿ

ಹಾವೇರಿ: ಪ್ರಸ್ತುತ ಆಧುನಿಕ ಯುಗದಲ್ಲಿ ಟಿವಿ ಮಾಧ್ಯಮದ ಪ್ರಭಾವದಿಂದ ರಂಗಕಲೆ ಮರೆಯಾಗುತ್ತಿದ್ದು ನಾವೆಲ್ಲರೂ ರಂಗಕಲೆಯನ್ನು ಉಳಿಸಿ ಬೆಳೆಸಲು ಮುಂದಾಗಬೇಕು ಎಂದು ಮಾಜಿ ಗ್ರಾಪಂ ಸದಸ್ಯ ಸಣ್ಣೀರಯ್ಯ ಹಿರೇಮಠ ಹೇಳಿದರು.

ತಾಲೂಕಿನ ಬಮ್ಮನಕಟ್ಟಿ ಗ್ರಾಮದಲ್ಲಿ ಮಾರುತಿ ದೇವರ ಜಾತ್ರಾಮಹೋತ್ಸವದ ಅಂಗವಾಗಿ ಗ್ರಾಮದ ಮಾರುತಿ ನಾಟ್ಯ ಸಂಘದ ವತಿಯಿಂದ ಏರ್ಪಡಿಸಿದ್ದ ಸೇಡು ಸಾಧಿಸಿದ ಗಂಡು ಹುಲಿ ಎಂಬ ಸಾಮಾಜಿಕ ನಾಟಕ ಪ್ರದರ್ಶನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖಂಡ ಹನುಮಂತಪ್ಪ ಓಲೇಕಾರ ಮಾತನಾಡಿದರು.

ಈ ವೇಳೆ ರಾಮಾಚಾರಿ ವಿಶ್ವಬ್ರಾಹ್ಮಣ, ಮಂಜನಗೌಡ ಪಾಟೀಲ, ಸಂಗಯ್ಯ ಹಿರೇಮಠ, ಭರಮಪ್ಪ ಕಜ್ರಿ, ಮಾಲತೇಶ ಪಾಟೀಲ, ಭೀಮಪ್ಪ ಕಜ್ರಿ, ಸಿದ್ದಪ್ಪ ಕಜ್ರಿ, ಮಂಜುನಾಥ ಕುರಿ, ಕೊಟ್ರೇಶ್ ಐನಳ್ಳಿ, ಜಿಲಾನಿಭಾ೯ ಕಮಗಾಲ್, ಬಸವರಾಜ ಮೈಲಾರ, ಬೀರಪ್ಪ ಮಾಳಾಪುರ, ಹಾಲಯ್ಯ ಹಿರೇಮಠ, ಮೃತ್ಯುಂಜಯ ಮಾಳಮ್ಮನವರ, ಪರಶುರಾಮ ಕರೇಮ್ಮನವರ, ಮಾಂತೇಶ್ ದೊಡ್ಡತಳವಾರ ಉಪಸ್ಥಿತರಿದ್ದರು. ಪ್ರದೀಪಕುಮಾರ ನಿರೂಪಿಸಿ ವಂದಿಸಿದರು.



ಕಿರುಸುದ್ದಿ

ನಂದಾಜ್ಯೋತಿಯೊಂದಿಗೆ ಪಾದಯಾತ್ರೆ

ಗೋಕಾಕ: ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಶ್ರೀ ಕ್ಷೇತ್ರ ಮಂಗಸೂಳಿಯ ಮಾರ್ತಾಂಡ ಮಲ್ಲಯ್ಯ ಜಾತ್ರಾ ಮಹೋತ್ಸವದ ನಿಮಿತ್ತ ತಾಲೂಕಿನ ಬೆಣಚಿನಮರಡಿ ಗ್ರಾಮದಿಂದ ಮಾ.25 ರಿಂದ 37ನೇ ವರ್ಷದ ಪಾದಯಾತ್ರೆ ಹಮಿಕೊಳ್ಳಲಾಗಿದೆ. ಮಾ.28ರ ಶನಿವಾರ ದೇವರಿಗೆ ನೈವೇದ್ಯ ಹಾಗು ಅದೇ ದಿನ ರಾತ್ರಿ ಸರಪಳಿ ಹರಿಯುವುದು. ಬೆಣಚಿನಮರಡಿ, ನಿಂಗಾಪುರ, ಬೆಟಗೇರಿ, ಹುಣಶ್ಯಾಳ (ಪಿಜಿ), ಕಲ್ಲೋಳಿ, ಮರಡಿ ಶಿವಾಪೂರ ಗ್ರಾಮಗಳಿಂದ ನೂರಾರು ಭಕ್ತರು ನಂದಾ ಜ್ಯೋತಿಯೊಂದಿಗೆ ಪಾದಯಾತ್ರೆ ಕೈಗೊಳ್ಳಲಿದ್ದಾರೆ. ಮಾ. 27ರ ಸಂಜೆ 5 ಗಂಟೆಗೆ ನಂದಾ ಜ್ಯೋತಿ ದೇಗುಲ ತಲುಪಲಿದೆ. ಜ್ಯೋತಿ ಪೂಜೆಯನ್ನು ಬಾಳೇಶ ಅಡಿವೆಪ್ಪ ಗಡಾದ ವಹಿಸಿಕೊಳ್ಳಲಿದ್ದು, ಸಿದ್ದಪ್ಪ ಹೊನ್ನಪ್ಪ ಲಟ್ಟಿ ವಾಹನ ವ್ಯವಸ್ಥೆ ಮಾಡಿದ್ದಾರೆ. ಮಲ್ಲಪ್ಪ ಗಂಗಪ್ಪ ಲಟ್ಟಿ, ಸಂತೋಷ ಬೆಸಲೆ ಅವರು ಮಹಾ ಪ್ರಸಾದ, ಈರವ್ವ ಪ್ರಕಾಶ ಗುಡದಾರ ಹಾಗು ಕೆಂಚವ್ವ ಅ. ಗಡಾದ ಉಡಿ ತುಂಬುವ ಜವಾಬ್ದಾರಿ ವಹಿಸಿಕೊಂಡಿದ್ದಾರೆ.

ಅಪ್ಪಾಸಾಹೇಬ ಶಿರಕೋಳಿ ಮುಂದುವರಿಯಲಿ

ಸಂಕೇಶ್ವರ: ಪಟ್ಟಣದ ಐತಿಹಾಸಿಕ ಶ್ರೀ ಮಹಾಲಕ್ಷ್ಮಿ ದೇವಿಯ ಜಾತ್ರಾ ಮಹೋತ್ಸವು ಬರುವ 2027ರಲ್ಲಿ ಜರುಗಲಿದ್ದು, ಹಿರಿಯರಾದ ಅಪ್ಪಾಸಾಹೇಬ ಶಿರಕೋಳಿ ಅವರೇ ಜಾತ್ರಾ ಸಮಿತಿಯ ಅಧ್ಯಕ್ಷರಾಗಿ ಮುಂದುವರೆಯಲಿ ಎಂದು ಹಕ್ಕುದಾರ ಖಾತೇದಾರ ಪಾಟೀಲ ಕುಟುಂಬದವರು ತಿಳಿಸಿದರು. ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಪಟ್ಟಣದ ಶ್ರೀ ಶಂಕರಲಿಂಗ ಮಠದ ಸಚ್ಚಿದಾನಂದ ಅಭಿನವ ವಿದ್ಯಾನರಸಿಂಹ ಭಾರತಿ ಸ್ವಾಮೀಜಿಗಳ ಸಾನಿಧ್ಯದಲ್ಲಿ, ಜಾತ್ರೆಯ ಎಲ್ಲ ಕಾರ್ಯಕ್ರಮಗಳು ಜರುಗಲಿವೆ ಎಂದರು. ಎಲ್ಲ ಸಮುದಾಯದವರು ಒಗ್ಗೂಡಿಕೊಂಡು ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸುವ ಅಗತ್ಯವಿದೆ. ಮಾ. 24ರಂದು ಜಾತ್ರೆಯ ಪೂರ್ವಭಾವಿ ಸಭೆ ನಡೆಯಲಿದ್ದು, ಎಲ್ಲರೂ ಭಾಗವಹಿಸಬೇಕು ಎಂದರು. ಕೆಲ ದಿನಗಳಿಂದ ಅಧ್ಯಕ್ಷ ಸ್ಥಾನ ಬದಲಾವಣೆಯ ಬಗ್ಗೆ ಚರ್ಚೆ ನಡೆಯುತ್ತಿದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಪ್ರತಿ11ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯು ಅತ್ಯಂತ ಜವಾಬ್ದಾರಿಯಿಂದ ಕೂಡಿದ್ದು, ಹಿರಿಯರಾದ ಅಪ್ಪಾಸಾಹೇಬ ಶಿರಕೋಳಿ ಅವರು ಈ ಹಿಂದಿನ ಜಾತ್ರೆಯನ್ನು ಅತ್ಯಂತ ಯಶಸ್ವಿಯಾಗಿ ಆಚರಿಕೊಂಡು ಬಂದ ಜವಾಬ್ದಾರಿ ಹಾಗೂ ಅನುಭವ ಉಳ್ಳ ವ್ಯಕ್ತಿಯಾಗಿದ್ದು ಅವರ ಅಧ್ಯಕ್ಷತೆಯಲ್ಲಿ ಜಾತ್ರೆಯು ಜರುಗಲಿ, ಈ ಬಾರಿ ಅವರನ್ನು ಬಿಟ್ಟು ಬೇರೆಯವರಾದರೆ ಒಪ್ಪಿಗೆ ಇಲ್ಲ ಎಂದು ಸ್ಪಷ್ಟಪಡಿಸಿದರು. ಈ ವೇಳೆ ಹಕ್ಕುದಾರ ಖಾತೇದಾರ ಪಾಟೀಲ ಕುಟುಂಬದ ಸುನಂದಾ ಶಂಕರ ಪಾಟೀಲ, ವಿಜಯಲಕ್ಷ್ಮಿ ಸಚಿನ್ ಪಾಟೀಲ, ಕುನಾಲ ಸಂಜಯ ಪಾಟೀಲ ಹಾಗೂ ಬಸನಗೌಡ ಪಾಟೀಲ ಹಾಜರಿದ್ದರು.

ಮಾ.24ರ ವರೆಗೆ ಜಪಯಜ್ಞ

ಯರಗಟ್ಟಿ: ಸಮೀಪದ ರೈನಾಪೂರ ಗ್ರಾಮದ ಶ್ರದ್ಧಾನಂದ ಆಶ್ರಯದಲ್ಲಿ ವಿಶ್ವಶಾಂತಿಗಾಗಿ ನಡೆಯಲಿರುವ ಜಪಯಜ್ಞ ಕಾರ್ಯಕ್ರಮದ ನಿಮಿತ್ತ ಇಂಚಲ ಡಾ ಶಿವಾನಂದ ಭಾರತಿ ಮಹಾ ಸ್ವಾಮಿಗಳು ಮಾ.23ರಂದು ಬೆಳಗ್ಗೆ 10ಗಂಟೆಗೆ ಆಗಮಿಸುತ್ತಿದ್ದಾರೆ. ಸಂಜೆ 6 ಗಂಟೆಗೆ ಕನೇರಿಯ



ಮಠದ ಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮೀಜಿ ಆಗಮಿಸುತ್ತಿದ್ದಾರೆ. ಮೂರು ದಿನಗಳ ಕಾಲ ಜಪಯಜ್ಞ ಕಾರ್ಯಕ್ರಮ ಜರಗಲಿದೆ. ಮಾ.22ರಿಂದ ಮಹಾರುದ್ರಾಭಿಷೇಕದೊಂದಿಗೆ ಕಾರ್ಯಕ್ರಮ ಆರಂಭವಾಗಿ ಮಹಾಮಂಗಳಾರತಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಳ್ಳಲಿದೆ ಎಂದು ಆಶ್ರಮದ ಸಂಚಾಲಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

24 ಗಂಟೆಯಲ್ಲೇ ಆರೋಪಿ ಬಂಧಿಸಿದ ಪೊಲೀಸರು

ಬೆಳಗಾವಿ: ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೊಡವಾಡದ ಗ್ರಾಮದಲ್ಲಿ ಕ್ಷುಲ್ಲಕ ದಾರಿ ವಿವಾದಕ್ಕೆ ಸಂಬಂಧಿಯನ್ನು ಕೊಂದಿದ್ದ ಆರೋಪಿಯನ್ನು ಪೊಲೀಸರು, 24 ಗಂಟೆಯಲ್ಲೇ ಬಂಧಿಸಿ ಜೈಲಿಗೆ ಕಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬೈಲಹೊಂಗಲ ತಾಲೂಕಿನ ದೊಡವಾಡ ಗ್ರಾಮದ ಕೊಪ್ಪ ಅಗಸಿಯ ನಿವಾಸಿ ಮಹೇಶ ಬಸಯ್ಯ ಉಪ್ಪಿನಮಠ ಎಂಬುವವರ ಭೀಕರ ಹತ್ಯೆ ಪ್ರಕರಣವನ್ನು ದೊಡವಾಡ ಪೊಲೀಸರು ಕೇವಲ ಒಂದೇ ದಿನದಲ್ಲಿ ಪತ್ತೆಹಚ್ಚಿದ್ದಾರೆ. ಮೃತನ ಸಂಬಂಧಿ ರುದ್ರಯ್ಯ ಬಸಯ್ಯ ಉಪ್ಪಿನಮಠ (36) ಎಂಬಾತ ಕೃತ್ಯ ಎಸಗಿದವ. ಮನೆಯ ಮುಂದಿನ ದಾರಿ ವಿವಾದ ಹಾಗೂ ಹಳೆಯ ದ್ವೇಷದ ಹಿನ್ನೆಲೆಯಲ್ಲಿ ಈ ಕೊಲೆ ನಡೆದಿದೆ. ಮಾರ್ಚ್ 17 ರಂದು ಸಂಜೆ ಏಕಾಏಕಿ ಕುಡುಗೋಲಿನಿಂದ ಮಹೇಶನ ಕುತ್ತಿಗೆಗೆ ಇರಿದು ರಕ್ತದ ಮಡುವಿನಲ್ಲಿ ಕೆಡವಿದ್ದ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ. ಈ ಪ್ರಕರಣವನ್ನು ದಾಖಲಿಸಿಕೊಂಡ ಪೊಲೀಸರು, ತನಿಖೆ ಚುರುಕುಗೊಳಿಸಿ, ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಸವದತ್ತಿ: ನಗರದ ಗ್ರಾಮ ದೇವಿ ದೇವಸ್ಥಾನದಲ್ಲಿ ಶುಕ್ರವಾರ ಕಾಯಿ ಕಟ್ಟುವ ಕಾರ್ಯಕ್ರಮವನ್ನು ವಿಧಿವಿಧಾನಗಳೊಂದಿಗೆ ನೆರವೇರಿಸುವ ಮೂಲಕ 44 ವರ್ಷಗಳ ಬಳಿಕ ನಡೆಯುತ್ತಿರುವ ಗ್ರಾಮದೇವಿ ಜಾತ್ರೆಗೆ ಚಾಲನೆ ನೀಡಲಾಯಿತು.

ಕಾಯಿ ಕಟ್ಟುವ ಮೂಲಕ ಗ್ರಾಮದೇವಿ ಜಾತ್ರೆಗೆ ಚಾಲನೆ

ಸವದತ್ತಿ: ನಗರದ ಗ್ರಾಮ ದೇವಿ ದೇವಸ್ಥಾನದಲ್ಲಿ ಶುಕ್ರವಾರ ಕಾಯಿ ಕಟ್ಟುವ ಕಾರ್ಯಕ್ರಮವನ್ನು ವಿಧಿವಿಧಾನಗಳೊಂದಿಗೆ ನೆರವೇರಿಸುವ ಮೂಲಕ 44 ವರ್ಷಗಳ ಬಳಿಕ ನಡೆಯುತ್ತಿರುವ ಗ್ರಾಮದೇವಿ ಜಾತ್ರೆಗೆ ಚಾಲನೆ ನೀಡಲಾಯಿತು. ಗ್ರಾಮ ದೇವಿಯ ದೇವಸ್ಥಾನದಲ್ಲಿ ಮೂಲಿಮಠದ ಮಲ್ಲಿಕಾರ್ಜುನ ಮಹಾಸ್ವಾಮಿಗಳ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಗ್ರಾಮ ದೇವಿಯ ಜಾತ್ರಾ ಮಹೋತ್ಸವದ 16 ಜನ ರೈತರು ಹಾಗೂ ಉತ್ಸವದ ಮುಖಂಡರಾದ ವಿರುಪಾಕ್ಷಪ್ಪ ಮಾಮನಿ ಶಾಸಕ ವಿಶ್ವಾಸ ವೈದ್ಯ ಸ್ಥಳೀಯ ಎಲ್ಲ ಮುಖಂಡರು ಉಪಸ್ಥಿತರಿದ್ದರು. ನಂತರ ನಗರದ ಎಲ್ಲ ಸಮಾಜಗಳ ಮುಖಂಡರು, ಮುತ್ತೈದೆಯರು ಕಟ್ಟಿ ಓಣಿಯ ಗ್ರಾಮದೇವಿಗೆ ಪೂಜೆ ಸಲ್ಲಿಸಿ ಪ್ರಥಮವಾಗಿ ಗ್ರಾಮ ದೇವಿ ದೇವಸ್ಥಾನದಲ್ಲಿ ಕಾಯಿ ಕಟ್ಟಿದರು. ನಂತರ ವಾದ್ಯಮೇಳಗಳೊಂದಿಗೆ ಜೋಗಳಬಾವಿ ಸತ್ಯಮ್ಮ ದೇವಸ್ಥಾನ, ಆನಿ ಅಗಸಿಯ ಕಾಳಮ್ಮ ದೇವಸ್ಥಾನ, ದೇಸಾಯಿ ಕೋಟೆಯ ಕಾಡಸಿದ್ದೇಶ್ವರ ದೇವಸ್ಥಾನ ಹಾಗೂ ಹಣಮಗೇರಿ ಓಣಿಯ ಸುಂಕದ ಕಟ್ಟಿ ಬಸವೇಶ್ವರ ದೇವಸ್ಥಾನಗಳಲ್ಲಿ ಕಾಯಿ ಕಟ್ಟುವ ಕಾರ್ಯಕ್ರಮ ನೆರವೇರಿಸಲಾಯಿತು. ಮೇ 4ರಿಂದ ಮೇ 12ರವರೆಗೆ ಒಂಬತ್ತು ದಿನಗಳ ಕಾಲ ನಡೆಯಲಿರುವ ದ್ಯಾಮವ್ವ ಮತ್ತು ದುರ್ಗವ್ವ ದೇವರ ಜಾತ್ರೆ ಮೇ 12ರಂದು ಮಂಗಳವಾಗಲಿದೆ.



ಗೋಕಾಕ: ಕಳೆದ ಒಂದು ತಿಂಗಳನಿಂದ ಉಪವಾಸ ಆಚರಿಸುತ್ತಿದ್ದ ಮುಸ್ಲಿಂ ಬಾಂಧವರು ಶನಿವಾರದಂದು ರಂಜಾನ ಹಬ್ಬವನ್ನು ಸಡಗರದೊಂದಿಗೆ ಆಚರಿಸಿ, ಪರಸ್ಪರರು ಶುಭಾಶಯ ವಿನಿಮಯ ಮಾಡಿಕೊಂಡರು. ನಗರದ ಅಬ್ದುಲ್ ಕಲಾಂ ಕಾಲೇಜಿನ ಈದ್ಗಾ ಮೈದಾನ ಹಾಗೂ ನಗರದ ಇತರ ಮಸೀದಿಗಳಲ್ಲಿ ಶನಿವಾರ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಮುಸ್ಲಿಂ ಸಮುದಾಯದವರು ರಂಜಾನ್ ಹಬ್ಬಕ್ಕೆ ತೆರೆ ಎಳೆದರು.

ಮಹಿಳಾ ಸಮಾವೇಶ | ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ

ಮಹಿಳೆಯಿಂದ ಸಕಲವೂ ಸಾಧ್ಯ

ಬೆಳಗಾವಿ: ನಾನು ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸಿ, ಹಲವು ಏಳು ಬೀಳುಗಳನ್ನು ಕಂಡು ಇಂದು ಸಚಿವೆಯಾಗುವ ಮಟ್ಟಕ್ಕೆ ಬೆಳೆದಿರುವೆ. ಮಹಿಳೆ ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ನಾನೇ ಸಾಕ್ಷಿ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಉದ್ಯಮಭಾಗ್ನಲ್ಲಿರುವ ಫೌಂಡ್ರಿ ಕ್ಲಸ್ಟರ್ ಆಡಿಟೋರಿಯಂನಲ್ಲಿ ನಡೆದ ಮಹಿಳಾ ಸಮಾವೇಶದಲ್ಲಿ ಮಾತನಾಡಿದ ಸಚಿವರು, ನಾನು 1998ರಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿ ಕಾಂಗ್ರೆಸ್ ಪಕ್ಷವನ್ನು ಪ್ರವೇಶಿಸಿದೆ. ಹೋರಾಟದ ಮನೋಭಾವವೇ ನನ್ನನ್ನು ಈ ಮಟ್ಟಿಗೆ ಇಂದು ಬೆಳೆಸಿದೆ ಎಂದರು.

ರಾಜಕೀಯ ಮಹಿಳೆಯರಿಗೆ ಅಂದುಕೊಂಡಷ್ಟು ಸುಲಭವಲ್ಲ, ನಾನು ಜಿಲ್ಲಾ ಪಂಚಾಯತ್ ಚುನಾವಣೆಗೆ ನಿಲ್ಲಲು ಟಿಕೆಟ್ ಕೇಳಿದಾಗ ಕೊಡಲಿಲ್ಲ, 2007ರಲ್ಲಿ ಬೆಳಗಾವಿ ಕಾರ್ಪೋರೇಷನ್ ಚುನಾವಣೆಗೆ ಹಾಗೂ 2009ರಲ್ಲಿ ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೇಳಿದರೂ ಟಿಕೆಟ್ ಕೊಡಲಿಲ್ಲ. ನಾನು ಇದನ್ನೇ ಸವಾಲಾಗಿ ಸ್ವೀಕರಿಸಿ, ವೈಯಕ್ತಿಕವಾಗಿ ಪ್ರಬಲವಾದೆ. ಲೋಕಸಭಾ ಸದಸ್ಯೆಯಾಗುವುದು ಇಂದಿಗೂ ನನ್ನ ದೊಡ್ಡ ಕನಸು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಮರಿಸಿದರು.

2013ರಲ್ಲಿ ನಾನು ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿದ್ದೆ. ನಾನು ಬೇರುಮಟ್ಟದಲ್ಲಿ ಪಕ್ಷವನ್ನು ಸಂಘಟಿಸಿದ ಫಲವಾಗಿ 2013ರಲ್ಲಿ ಬೆಳಗಾವಿ ಗ್ರಾಮೀಣ ಕ್ಷೇತ್ರಕ್ಕೆ ಟಿಕೆಟ್ ಕೊಟ್ಟರು. ನಾನು ಮೂಲತಃ ಖಾನಾಪುರದವಳು, ಇದರಿಂದಾಗಿಯೇ ನನಗೆ ಪ್ರಚಾರ ಮಾಡಲು ಸರಿಯಾಗಿ ಬೆಂಬಲ ಸಿಗಲಿಲ್ಲ, ಆದರೂ ಹೋರಾಡಿದ್ದರಿಂದ ಕಡಿಮೆ ಅಂತರದಿಂದ ಸೋತೆ. 2014ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಕ್ಕಿತು. ಆದರೆ, ಮೋದಿ ಅಲೆಯಲ್ಲಿ ಸೋಲಬೇಕಾಯಿತು ಎಂದರು.

ಸತತಎರಡುಚುನಾವಣೆಗಳಲ್ಲಿ ಸೋತರೂನಾನು ಧೃತಿಗೆಡದೆ ಮನೆಯಲ್ಲಿ ಕೂರಲಿಲ್ಲ, ಕ್ಷೇತ್ರದಲ್ಲಿ ಸತತವಾಗಿ ಒಡನಾಟ ಇಟ್ಟುಕೊಂಡಿದ್ದರಿಂದ 2018ರಲ್ಲಿ ಒಂದು ಲಕ್ಷದ 10 ಸಾವಿರ ಮತಗಳನ್ನು ಪಡೆದು 52 ಸಾವಿರ ಮತಗಳ ಅಂತರದಿಂದ ಗೆದ್ದೆ. ಮಹಿಳೆಯರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದ ಎಂಬುದಕ್ಕೆ ನಾನೇ ಸಾಕ್ಷಿ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ರವೀಂದ್ರ ಎನರ್ಜಿ ಲಿಮಿಟೆಡ್ ವಿದ್ಯಾ ಮುರ್ಕುಂಬಿ, ಪಟ್ಟೇದ ಫರ್ಟಿಲಿಟಿ ಮತ್ತು ರಿಸರ್ಚ್ ಸೆಂಟರ್ನ ನಿರ್ದೇಶಕರಾದ ಡಾ.ಶೋಭನಾ ಪಟ್ಟೇದ್, ಸೆಂಟ್ರಾಕೇರ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ.ನೀತಾ ದೇಶಪಾಂಡೆ, ಡಾ.ಹಿತಾ ಎಂ. ಹೆಬ್ಬಾಳಕರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಅಧ್ಯಯನ ಮಾಡಿ ಮಾತನಾಡುವೆ

ಜನರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುತ್ತಿದ್ದೇನೆ. ಜನರು ಯಾವ ಕೆಲಸ ಆಗುವುದಿಲ್ಲ, ಅದನ್ನು ನಮ್ಮ ಹತ್ರ ತೆಗೆದುಕೊಂಡು ಬರುತ್ತಾರೆ. ಅಂತಹ ಕೆಲಸಗಳನ್ನು ಮಾಡಿಕೊಡುವುದೇ ಜನಪ್ರತಿನಿಧಿಗಳ ಕೆಲಸ. ಎಲ್ಲಾ ಮಹಿಳೆಯರಿಗೆ ಸ್ಪಂದಿಸುವ ಕೆಲಸವನ್ನು ಮಾಡುತ್ತಿರುವೆ. ನಾನು ತುಂಬಾ ಅಧ್ಯಯನ ಮಾಡಿ ಮಾತನಾಡುವೆ, ನಾನು ರಾಜಕಾರಣಿ ಆಗಲಿಲ್ಲ ಅಂದಿದ್ದರೆ, ವೈದ್ಯೆ ಆಗುತ್ತಿದೆ ಎಂದು ಸಚಿವರು ಹೇಳಿಕೊಂಡರು.

ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಚಾಲನೆ

ರಾಮದುರ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ಚುನಾವಣೆಯಲ್ಲಿ ಘೋಷಣೆ ಮಾಡಿರುವ ಪಂಚ ಗ್ಯಾರಂಟಿ ಸಮರ್ಪಕ ಅನುಷ್ಠಾನದ ಜೊತೆಗೆ ರಾಜ್ಯದ ಮೂಲ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದೆ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಹೇಳಿದರು.

ಶುಕ್ರವಾರ ತಾಲೂಕಿನ ಬಟಕುರ್ಕಿಯಲ್ಲಿ ರೂ. 450 ಲಕ್ಷ ವೆಚ್ಚದಲ್ಲಿ ಗೋಕಾಕ ಫಾಲ್ಸ್ ಗೊಡಚಿ, ಬದಾಮಿ ರಾಜ್ಯ ಹೆದ್ದಾರಿ ಅಗಲೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರ ಹೆದ್ದಾರಿ ಅಭಿವೃದ್ಧಿ ಜೊತೆಗೆ ಗ್ರಾಮೀಣ ಮತ್ತು ರೈತರ ಜಮೀನುಗಳಿಗೆ ಸಂಪರ್ಕ ಕಲ್ಪಿಸುವ ಯೋಜನೆಗಳಿಗೆ ಸಹಿತ ಅನುದಾನ ನೀಡಲಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಸನಗೌಡ ಪ್ಯಾಟಿಗೌಡರ, ರಾಮಣ್ಣ ಬೀಡಕಿ, ಗ್ರಾಪಂ ಮಾಜಿ ಅಧ್ಯಕ್ಷ ಹನಮಂತ ಲಕ್ಕನ್ನವರ , ಲೋಕೋಪಯೋಗಿ ಇಲಾಖೆಯ ಎಇಇ ರವಿಕುಮಾರ ಸೇರಿದಂತೆ ಹಲವರಿದ್ದರು.

ಸೂಕ್ತ ಕ್ರಮ

ರಸ್ತೆಗಳ ಸುಧಾರಣೆ ಸಂದರ್ಭದಲ್ಲಿ ಅಧಿಕಾರಿಗಳು ಸಮರ್ಪಕ ಉಸ್ತುವಾರಿ ಮಾಡಬೇಕು ಗುತ್ತಿಗೆದಾರರು ಶೀಘ್ರ ಕೆಲಸ ಮುಗಿಸುವ ಅವಸರದಲ್ಲಿ ಕಾಮಗಾರಿ ಕಳಪೆಯಾಗದಂತೆ ನೋಡಿಕೊಳ್ಳಬೇಕು ಗುಣಮಟ್ಟದ ವಿಷಯದಲ್ಲಿ ರಾಜಿಯಾಗದಂತೆ ತಿಳಿಸಿದರಲ್ಲದೆ ಕಳಪೆಯಾದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಅನಿವಾರ್ಯ ಎಂದು ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಎಚ್ಚರಿಸಿದರು.



ನಿರಂತರ ಪರಿಶ್ರಮದಿಂದ ಸಾಧನೆ ಸಾಧ್ಯ



ಕಕಮರಿ: ವಿದ್ಯಾರ್ಥಿಗಳಿಗೆ ತಂದೆ-ತಾಯಿಯರೇ ಮೊದಲ ಗುರು, ಹಾಗೆಯೇ ಶಿಲೆಯ ಒಡೆದ ಕಲ್ಲನ್ನು ತಿದ್ದಿ ಅದಕ್ಕೆ ಮೂರ್ತಿಯ ರೂಪ ಕೊಡುವವನೇ ಮೂರನೇ ಗುರುವಾಗುತ್ತಾನೆ ಎಂದು ಶಿಕ್ಷಕ ಡಿ.ಎಸ್.ದಳವಾಯಿ ಹೇಳಿದರು.

ಗುರುವಾರ ಸ್ಥಳೀಯ ಶ್ರೀ ಅಮ್ಮಾಜೇಶ್ವರಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಪ್ರಶಸ್ತಿ ಪತ್ರ ವಿತರಣಾ ಸಮಾರಂಭದಲ್ಲಿ ಮಾತನಾಡಿ, ವಿದ್ಯಾರ್ಥಿಗಳು ದೃಢಸಂಕಲ್ಪ ಹಾಗೂ ಆತ್ಮವಿಶ್ವಾಸದಿಂದ ನಿರಂತರ ಪರಿಶ್ರಮದ ಮೂಲಕ ಅಧ್ಯಯನ ಮಾಡಿದರೆ ಸಾಧನೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿಜಯಪೂರ ಜ್ಞಾನಯೋಗಾಶ್ರಮ ಪ.ಪೂ.ಅದ್ವೈತಾನಂದ ಸ್ವಾಮೀಜಿ ಮಾತನಾಡಿದರು.

ಸಂಸ್ಥೆಯ ಅಧ್ಯಕ್ಷ ಅಪ್ಪಾಸಾಬ ವಾಲಿ, ಸಂಸ್ಥೆಯ ಕಾರ್ಯದರ್ಶಿ ಹಾಗೂ ಜಿಪಂ ಮಾಜಿ ಸದಸ್ಯ ಗುರುಪ್ಪ ದಾಶ್ಯಾಳ, ಮಾರುತಿ ಮಾಳಿ, ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಗಿರಮಲ್ಲ ಬಸರಗಿ, ಗದಿಗೆಪ್ಪ ಚಮಕೇರಿ, ಗುರುನಾಥ ವಾಲಿ, ಶ್ರೀಕಾಂತ ಕನಮಡಿ, ಶ್ರೀಕಾಂತ ಮಾಳಿ, ಮುಖ್ಯೋಪಾಧ್ಯಾಯ ಬಿ.ವಿ.ಅಸ್ಕಿ, ಶಿಕ್ಷಕ ಕಲ್ಮೇಶ ಹೊನವಾಡ, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಯ ಬಿ.ವಿ.ಆಸ್ಕಿ ಸ್ವಾಗತಿಸಿ, ಶಿಕ್ಷಕ ಕಲ್ಮೇಶ ಹೊನವಾಡ ನಿರೂಪಿಸಿ ವಂದಿಸಿದರು.



ಬೆಳಗಾವಿ : ಬೆಳಗಾವಿ ಮಹಾನಗರ ಪಾಲಿಕೆಗೆ ಆಯ್ಕೆಯಾದ ಕನ್ನಡತಿ ಮೇಯರ್ ಪ್ರೀತಿ ಕಾಮಕರ್, ಉಪ ಮೇಯರ್ ಹಣಮಂತ ಕೊಂಗಾಲಿ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು.

ಜಾತ್ರೆಗಳಿಂದ ಬಾಂಧವ್ಯ, ಸಂಸ್ಕಾರ ಹೆಚ್ಚಳ: ಪಾಟೀಲ

ನೇಸರಗಿ: ದೇಶದಲ್ಲಿ ನಡೆಯುವ ಜಾತ್ರೆ, ಆಧ್ಯಾತ್ಮಿಕ ಪ್ರವಚನ, ಅನ್ನ ದಾಸೋಹ ಪರಸ್ಪರ ಮನುಷ್ಯ ಮನುಷ್ಯರು ಬೆರೆತು ಹಬ್ಬ ಜಾತ್ರೆಗಳನ್ನು ಆಚರಿಸಿ, ಸ್ನೇಹಿತರು, ಸಂಬಂಧಿಕರು, ಹೊರ ದೂರದ ಊರುಗಳಲ್ಲಿ ವಾಸಿಸುವ ಗ್ರಾಮದ ಜನರು ಇಂತಹ ಜಾತ್ರೆಗಳಲ್ಲಿ ಪಾಲ್ಗೊಂಡು ಬಾಂಧವ್ಯ, ಸಂಸ್ಕಾರ ಹೆಚ್ಚಿಸುವ ಸತ್ಕಾರ್ಯ ಆಗುತ್ತದೆ ಎಂದು ಚನ್ನಮ್ಮನ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.



ಅವರು ಶುಕ್ರವಾರ ಗ್ರಾಮದ ಶ್ರೀ ಚನ್ನವೃಷಬೇಂದ್ರ ದೇವರಕೊಂಡ ಅಜ್ಜನವರ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ರಥೋತ್ಸವದಲ್ಲಿ ಪಾಲ್ಗೊಂಡು, ದೇವರದರ್ಶನಪಡೆದು, ದೇವಸ್ಥಾನದ ಆವರಣದಲ್ಲಿ ನೂತನ ಕೋಣೆ ಉದ್ಘಾಟನೆ ನೆರವೇರಿಸಿ ಮಾತನಾಡಿ, ಚನ್ನವೃಷಬೇಂದ್ರ ಅಜ್ಜನವರ ದೇವಸ್ಥಾನಕ್ಕೆ ಈಗಾಗಲೇ ಅನುಧಾನ ನೀಡಿದ್ದು ಮುಂದಿನ ದಿನಗಳಲ್ಲಿ ಮಠದ ಅಭಿವೃದ್ಧಿಗೆ ಸದಾ ಸಹಕರಿಸುತ್ತೇನೆ ಎಂದರು.

ಸಾನ್ನಿಧ್ಯ ವಹಿಸಿ ನೇಸರಗಿ ಮಲ್ಲಾಪೂರ ಗಾಳೇಶ್ವರ ಮಠದ ಚಿದಾನಂದ ಸ್ವಾಮೀಜಿ ಮಾತನಾಡಿ, ಚನ್ನವೃಷಬೇಂದ್ರ ಅಜ್ಜನವರ ಮಠವು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದ್ದು ಇದಕ್ಕೆ ಸದ್ಭಕ್ತರ ಭಕ್ತಿಯ ಸೇವೆ, ರಾಜಕೀಯ ಮುಖಂಡರ ಸಹಕಾರ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮಗಳ ಮುಖಂಡರು, ಎಲ್ಲ ಸಮಾಜದ ಮುಖಂಡರು, ನೇಸರಗಿ ಗ್ರಾಮಸ್ಥರು,ಸಕಲ ಸದ್ಭಕ್ತರು ಭಾಗವಹಿಸಿದ್ದರು.

ಚನ್ನವೃಷಬೇಂದ್ರ ಅಜ್ಜನವರ ರಥೋತ್ಸವ

ನೇಸರಗಿ: ಇಲ್ಲಿನ ಪ್ರಸಿದ್ಧ ಶ್ರೀ ಚನ್ನ ವೃಷಬೇಂದ್ರ ದೇವರಕೊಂಡ ಅಜ್ಜ ನವರ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಅಜ್ಜನವರ ರಥೋತ್ಸವವು ಅದ್ದೂರಿಯಾಗಿ ಜರಿಗಿತು. ಬೆಳ್ಳಿಗೆ ಮಹಾ ಪೂಜೆ, ಪ್ರಸಾದ, ಇನ್ನಿತರೇ ಕಾರ್ಯಕ್ರಮಗಳೊಂದಿಗೆ ಆರಂಭ ವಾದ ಜಾತ್ರೆ ಸಂಜೆ 5 ಗಂಟೆಗೆ ರಥೋತ್ಸವ ಅಜ್ಜನ ಮಠದಿಂದ ಆರಂಭ ವಾಗಿ ಗ್ರಾಮದ ಅಜ್ಜನ ಗದ್ದುಗೆವರೆಗೆ ಸಂಚರಿಸಿ ಮರಳಿ ಮಠದ ಹೊರಭಾಗದಲ್ಲಿ ಬಂದು ರಥೋತ್ಸವವು ಸಂಪನ್ನಗೊಂಡಿತು. ಈ ಸಂದರ್ಭದಲ್ಲಿ ನೇಸರಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು, ಸದ್ಭಕ್ತರು ಭಾಗವಹಿಸಿ ಅಜ್ಜನ ಆಶೀರ್ವಾದ ಪಡೆದರು.




ವಿಶಿಷ್ಟಚೇತನರಿಗೆ ಸಲಕರಣೆ ವಿತರಣೆ

ಚನ್ನಮ್ಮನ ಕಿತ್ತೂರು: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆವತಿಯಿಂದ ಬಹುಪಾಲು ವಿಶಿಷ್ಟಚೇತನ ಹೊಂದಿದ ಸಂಜು ನಾಗಪ್ಪ ಕೊಡೊಳ್ಳಿ ಅವರಿಗೆ ಸೇಪ್ ವಾಕರನ್ನು ವಿತರಿಸಲಾಯಿತು. ತಾಲೂಕಿನ ಖೋದಾನಪೂರ ಗ್ರಾಮದ ಇವರು ತಮ್ಮ ಎರಡು ಕೈ ಹಾಗೂ ಎರಡು ಕಾಲುಗಳ ಮೊಣಕಾಲೂರಿ ನಡೆಯುವ ವಿಕಲಚೇತನವಿದ್ದು ಈತನು ಮುಂದೆ ಹೋಗಲು ತೊಂದರೆ ಅನುಭವಿಸಿ ಹೋಗಬೇಕಾಗಿತ್ತು ಆದ್ದರಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಮಂಗಳ ಯೋಜನೆಯಡಿ ವಾಕರ್ ವಿತರಿಸಿ ಇತನಿಗೆ ಅನುಕೂಲ ಒದಗಿಸಿದ್ದಾರೆ. ನನ್ನ ಕಷ್ಟಕ್ಕೆ ಸ್ಪಂದಿಸಿ ನನಗೆ ಸೇಪ್ ವಾಕರ ನೀಡಲು ಕಾರಣೀಕರ್ತರಾದ ಧರ್ಮಸ್ಥಳದ ಪೂಜ್ಯರಿಗೆ ವಂದನೆಯನ್ನು ತಿಳಿಸಿದ ಸಂಜು ನನಗೆ ದೊರೆತಿದ್ದು ನನ್ನ ಭಾಗ್ಯವೆಂದು ಸಂತಷ ವ್ಯಕ್ತಪಡಿಸಿದರು.ಧರ್ಮಸ್ಥಳದಗ್ರಾಮಾಭಿವೃದ್ಧಿ ಯೋಜನೆ ಯೋಜನಾಧಿಕಾರಿ ಯೋಗೀಶ್ ಬಿ.ಆರ್, ವಲಯ ಮೇಲ್ವಿಚಾರಕ ಗಂಗಪ್ಪ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.



ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಣೆ ಇಂದು

ಯಮಕನಮರಡಿ: ಸ್ಥಳೀಯ ಸುಕ್ಷೇತ್ರ ಹರಿಮಂದಿರದ ಪೂಜ್ಯರಾಗಿದ್ದ ಸದ್ಗುರು ಏಕನಾಥ ದಾದಾ ಮಹಾರಾಜರ 23ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ಶ್ರೀ ಮಠದ ಸಭಾಭವನದಲ್ಲಿ ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಣಾ ಸಮಾರಂಭ ಮಾ.22ರಂದು ನಡೆಯಲಿದೆ. ಸಾನ್ನಿಧ್ಯವನ್ನು ಶ್ರೀ ಮಠದ ಪೀಠಾಧ್ಯಕ್ಷರಾದ ಡಾ. ಆನಂದ ಮಹಾರಾಜ ಗೋಸಾವಿರವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹುಕ್ಕೇರಿ ತಾಲೂಕಾ ಕ್ಷೇತ್ರ ಶಿಕ್ಷಣ ಅಧಿಕಾರಿ ಪ್ರಭಾವತಿ ಪಾಟೀಲ ಹಾಗೂ ಬೆಳಗಾವಿ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ರವಿ ಭಜಂತ್ರಿ ಹಾಗೂ ಕನ್ನಡ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷರಾದ ದೀಪಕ ಗುಡಗನಹಟ್ಟಿ ಹಾಗೂ ಉಪಾಧ್ಯಕ್ಷರಾದ ರಾಜು ನಾಶಿಪುಡಿ,



ಗಡಿ ಮಹಾರಾಷ್ಟ್ರದ ರಾಮಚಂದ್ರ ಕುಲಕರ್ಣಿ ಹಾಗೂ ಆಗಮಿಸಲಿದ್ದಾರೆ.

ಶ್ರೀ ಮಠವು ಗಡಿ ಭಾಗದಲ್ಲಿರುವುದರಿಂದ ಮಹಾರಾಷ್ಟ್ರ ಮತ್ತು ಕರ್ನಾಟಕದ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಶಿಷ್ಯವೇತನ ಪ್ರಮಾಣ ಪತ್ರ ಹಾಗೂ ಕಲಿಕಾ ಸಾಮಗ್ರಿ ವಿತರಿಸಲಾಗುವುದಿದ್ದು ಸದರಿ ಕಾರ್ಯಕ್ರಮ ಉದ್ದೇಶಿಸಿ ಡಾ. ಶ್ರೀಶೈಲ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಗಣ್ಯರನ್ನು ಸನ್ಮಾನಿಸಲಾಗುವುದು.

ಮಹಾಪೌರರಿಗೆ ಬಿಜೆಪಿಯಿಂದ ಸನ್ಮಾನ



ಬೆಳಗಾವಿ: ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಇಬ್ಬರು ಕನ್ನಡಿಗರೇ ಪಾಲಿಕೆಯ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದಾರೆ. ಬೆಳಗಾವಿಯ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ತಮ ಆಡಳಿತ ಹಾಗೂ ಅಭಿವೃಧಿ ಮಾಡಲಿರುವ, ನೂತನ ಮಹಾಪೌರರಾಗಿ ಆಯ್ಕೆಯಾದ ಪ್ರೀತಿ ಕಾಮಕರ್-ಉಪಮಹಾಪೌರರಾಗಿ ಆಯ್ಕೆಯಾದ ಹಣಮಂತ ಕೊಂಗಾಲಿ ಅವರನ್ನು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ನೇತೃತ್ವದಲ್ಲಿ ಬಿಜೆಪಿಯ ನಿಯೋಗವು ಪಾಲಿಕೆಗೆ ಬೇಟಿ ನೀಡಿ ಅಭಿನಂದನೆ ಸಲ್ಲಿಸಿ ಸನ್ಮಾನಿಸಿದರು.

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂದೀಪ ದೇಶಪಾಂಡೆ, ಪ್ರಕೋಷ್ಠಗಳ ಜಿಲ್ಲಾ ಸಂಯೋಜಕ ಮಹೇಶ್ ಮೋಹಿತೆ, ಧನಂಜಯ ಜಾಧವ, ಜಿಲ್ಲಾ ಮಾಧ್ಯಮ ಪ್ರಮುಖ್ ಸಚಿನ್ ಕಡಿ, ಸಾಮಾಜಿಕ ಜಾಲತಾಣ ಜಿಲ್ಲಾ ಸಂಚಾಲಕ ಸುಭಾಷ್ ಸಣ್ಣವೀರಪ್ಪನವರ, ಸಂತೋಷ್ ದೇಶನೂರ, ಮಂಜುನಾಥ ಪಮ್ಮಾರ, ವಿಜಯ ಗುಡದಾರಿ, ಮನೋಜ ಪಾಟೀಲ, ಶ್ವೇತಾ ಜಗದಾಳೆ, ರಂಜಿತಾ ಕೊಲಕಾರ, ಪ್ರಶಾಂತ್ ಅಮ್ಮಿನಭಾವಿ, ವೀರಭದ್ರ ಪೂಜಾರಿ, ಓಂಪ್ರಕಾಶ್ ಕುಳ್ಳೂರ ಸೇರಿದಂತೆ ಹಲವರು ಇದ್ದರು.

ಭಕ್ತಿ ಭಾವದ ರಂಜಾನ್ ಆಚರಣೆ

ಬೆಳಗಾವಿ: ಕುಂದಾನಗರಿಯಲ್ಲಿ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ, ಈದ್ ಉಲ್ ಫಿತರ್ ಹಬ್ಬವನ್ನು ಭಕ್ತಿಭಾವದಿಂದ ಮತ್ತು ಸಡಗರದಿಂದ ಆಚರಿಸಲಾಯಿತು. ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ವಿಶೇಷ ನಮಾಜ್ ಮಾಡುವುದರ ಮೂಲಕ ಮುಸ್ಲಿಂ ಸಂಪ್ರದಾಯದ ಪ್ರಕಾರ ದೇವರಲ್ಲಿ ಪ್ರಾರ್ಥನೆ ಮಾಡಿ ಶಾಂತಿ, ಸಮೃದ್ಧಿಗಾಗಿ ಬೇಡಿಕೊಂಡರು. ಶನಿವಾರ ಹಬ್ಬದ ಸಂಭ್ರಮದಲ್ಲಿ ಮುಸ್ಲಿಂ ಸಮುದಾಯದವರು ಒಬ್ಬರಿಗೊಬ್ಬರು ಈದ್ ಮುಬಾರಕ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು ಹಬ್ಬದ ಸಂತೋಷವನ್ನು ಹಂಚಿಕೊಂಡರು. ಮನೆಮನೆಗಳಲ್ಲಿ ಸಾಂಪ್ರದಾಯಿಕ ತಿಂಡಿಗಳನ್ನು ತಯಾರಿಸಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಈ ಸಂದರ್ಭದಲ್ಲಿ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸಿಫ್ ಸೇಠ್ ಅವರಿಗೆ ನಮಾಜ ಮಾಡುವುದುರ ಮೂಲಕ ಹಬ್ಬದಲ್ಲಿ ಬಾಗಿಯಾಗಿದ್ದರು, ಮುಸ್ಲಿಂ ಬಾಂಧವರು ರಂಜಾನ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು. ನಗರದಲ್ಲಿ ಈದ್ ಹಬ್ಬ ಶಾಂತಿಯುತವಾಗಿ ನಡೆಯಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಂಡಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರದ ಪ್ರಮುಖ ಪ್ರದೇಶಗಳಲ್ಲಿ ಸೂಕ್ತ ಬಂದೂಬಸ್ತ್ ಪೊಲೀಸರು ಮಾಡಿಕೊಂಡಿದ್ದರು.



ಮೂರ್ತಿ ಪ್ರತಿಷ್ಠಾಪನೆ: ಭೂಮಿಪೂಜೆ



ಬೆಳಗಾವಿ: ನಗರದ ಶ್ರೀ ಬಸವೇಶ್ವರ ವೃತ್ತದ ಉದ್ಯಾನವನದಲ್ಲಿ ಮಹಾನ ಮಾನವತಾವಾದಿ, ಜಗಜ್ಯೋತಿ ಬಸವಣ್ಣನವರ ನೂತನ ಕಂಚಿನ ಮೂರ್ತಿ ಪ್ರತಿಷ್ಠಾಪನೆಯನ್ನು ಹಿರಿಯರ ಸಮ್ಮುಖದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ಶಕ್ರವಾರ ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆಯ ಈ ಸತ್ಕಾರ್ಯದಲ್ಲಿ ಮುತುವರ್ಜಿ ವಹಿಸಿ ಶ್ರಮಿಸಿ ಅನುದಾನ ನೀಡಿದ ಶಾಸಕ ಅಭಯ ಪಾಟೀಲ, ತಮ್ಮ ಹಿತಾಸಕ್ತಿಯಿಂದ ಈ ಕಾರ್ಯ ಜರುಗುವಂತೆಮಾರ್ಗದರ್ಶನನೀಡಿ ಸಹಕಾರ ಮಾಡುತ್ತಿರುವಕೆಎಲ್ಇ ಸಂಸ್ಥೆಯ ಕಾರ್ಯಕಾರಿ ಕಾರ್ಯಧ್ಯಕ್ಷ ಪ್ರಭಾಕರ ಕೋರೆ, ಬೆಳಗಾವಿಯ ಹಿರಿಯ ನ್ಯಾಯವಾದಿಗಳು ಸಮಾಜದ ಪ್ರಮುಖ ಎಂ.ಬಿ. ಜಿರಲಿ, ಮಹಾನಗರ ಪಾಲಿಕೆಯ ನೂತನ ಮೇಯರ ಪ್ರೀತಿ ಕಾಮಕರ, ಉಪಮೇಯರ್ ಹಣಮಂತ ಕೊಂಗಾಲಿ, ವೀರಶೈವ ಮಹಾಸಭೆಯ ಜಿಲ್ಲಾ ಅಧ್ಯಕ್ಷರಾದ ರತ್ನಕ್ಕ ಬೆಲ್ಲದ, ಶಿವನಗೌಡ ಪಾಟೀಲ, ಬಿಜೆಪಿ ಮುಖಂಡ ಮಹಾಂತೇಶ ವಕ್ಕುಂದ, ಆರ್ ಎಸ್ ಪಾಟೀಲ, ಸೇರಿದಂತೆ ಬಸವಣ್ಣನವರ ಅಭಿಮಾನಿಗಳು, ಹಿರಿಯರು, ಪ್ರಮುಖರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದಿನಿಂದ ಸಿದ್ಧಾರೂಢರ ಜಾತ್ರೆ

ನೇಸರಗಿ: ಸಮೀಪದ ಸುಪ್ರಸಿದ್ಧ ಶ್ರೀ ಸದ್ಗುರು ಸಿದ್ಧಾರೂಢರ 38 ನೇ ವೇದ್ಧಾಂತ ಪರಿಷತ್ ಹಾಗೂ ಜಾತ್ರಾ ಮಹೋತ್ಸವ ಮಾ.22ರಿಂದ ಗುರುವಾರ ಮಾ.26ರವರೆಗೆ ಅದ್ದೂರಿಯಾಗಿ ಜರುಗಲಿದೆ. ಸಾನ್ನಿಧ್ಯವನ್ನು ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಸ್ವಾಮಿಜಿ, ಮುಕ್ತಾನಂದ ಪರಮಹಂಸರು, ಪೂರ್ಣಾನಂದ ಭಾರತಿ ಸ್ವಾಮೀಜಿ ವಹಿಸುವರು. ಮಾ. 22 ರಂದು ಬೆಳಿಗ್ಗೆ 5 ಗಂಟೆಗೆ ಶ್ರೀ ಸಿದ್ಧಾರೂಢರ ಮೂರ್ತಿಗೆ, ಶ್ರೀ ಸಿದ್ಧಲಿಂಗೇಶ್ವರ, ಶ್ರೀ ರುದ್ರಪ್ಪ ಶರಣರ, ಶ್ರೀ ಮುಕ್ತಾನಂದ ಪರಮಹಂಸರ ಕರ್ತುಗದ್ದುಗೆಗಳಿಗೆ ಗುರುಸ್ತೋತ್ರ, ರುದ್ರಾಭಿಷೇಕ, ಮಹಾಪೂಜೆ, ಅಗ್ನಿಕುಂಡ, ವೇದಾಂತ ವೇದಿಕೆ ಉದ್ಘಾಟನೆ ನೆರವೇರಲಿದೆ. ಮಾ.22ರಿಂದ ಜಾತ್ರೆಯು ಪ್ರತಿ ದಿನ ಬೆಳಿಗ್ಗೆ 6.30 ರಿಂದ 7.30 ರವರೆಗೆ ಶ್ರೀ ಭಗವದ್ಗೀತೆ ಪಾರಾಯಣ ಅನೇಕ ಶ್ರೀಗಳಿಂದ ನೆರವೇರುವದು, ಬೆಳಿಗ್ಗೆ 9 ರಿಂದ 11 ರವರೆಗೆ ಮತ್ತು ಸಂಜೆ 7 ರಿಂದ 10 ರವರೆಗೆ ನಾಡಿನ ಅನೇಕ ಮಠಗಳ ಮಹಾತ್ಮರಿಂದ ಆಧ್ಯಾತ್ಮಿಕ ಪ್ರವಚನ ನೆರವೇರಲಿದೆ. ಮಾ. 24 ರಂದು ಸಂಜೆ 4 ಘಂಟೆಗೆ ಗ್ರಾಮದೇವಿಗೆ ಉಡಿ ತುಂಬುವದು,ಸಂಜೆ 5 ಕ್ಕೆ ತೆರಿನ ಕಳಸರೋಹಣ, ರಾತ್ರಿ 9 ಕ್ಕೆ ಅನೇಕ ಗಣ್ಯರಿಗೆ ಸನ್ಮಾನ ನಡೆಯಲಿದೆ. ಮಾ. 26 ರಂದು ಸಿದ್ಧಾರೂಢರ ಪಲ್ಲಕ್ಕಿ ಉತ್ಸವ, ಶ್ರೀ ಸಿದ್ಧಾರೂಢರ ಹಾಗೂ ಶ್ರೀ ಶಿವಾನಂದ ಭಾರತಿ ಶ್ರೀಗಳಿಗೆ ಬೆಳ್ಳಿ ತೊಟ್ಟಿಲೋತ್ಸವ, ಮಧ್ಯಾಹ್ನ 12 ಗಂಟೆಗೆ ಸಾಮೂಹಿಕ ವಿವಾಹ, ಸಂಜೆ 5 ಘಂಟೆಗೆ ಶ್ರೀ ಸಿದ್ಧಾರೂಢರ ಮಹಾರಥೋತ್ಸವ ಜರುಗಲಿವೆ. ಪ್ರತಿದಿನ ರಾತ್ರಿ 10 ಘಂಟೆಗೆ ಡಾ. ಶಿವಾನಂದ ಭಾರತಿ ಮಹಾಸ್ವಾಮಿಗಳ ತುಲಾಭಾರ, ಕನಕ ಕಿರೀಟ ಮಹಾಪೂಜೆ ನೆರವೇರಲಿದೆ. ಮಾ. 27 ರಂದು ಸಿದ್ಧಾರೂಢರ ಕೌದಿ ಪೂಜೆ, ಪ್ರತಿದಿನ ಭಜನೆ, ಮಹಾಪ್ರಸಾದ ನೆರವೇರಲಿದ್ದು, ಪ್ರತಿದಿನ ಅನೇಕ ಮಹಾನ್ ಪುರುಷರ ಜೀವನ ಚರಿತ್ರೆ ಕುರಿತು ಅನೇಕ ಮಹಾತ್ಮರಿಂದ ಆಧ್ಯಾತ್ಮಿಕ ಪ್ರವಚನ ಜರುಗಲಿದೆ ಎಂದು ಜಾತ್ರಾ ಕಮಿಟಿಯ ಸದಸ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ನಿಲುಗಡೆ ಇಂದು

ಬೆಳಗಾವಿ: ಮಾ.22 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕವಿಪ್ರನಿನಿ ವತಿಯಿಂದ ನಾಲ್ಕನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ 110 ಕೆ.ವ್ಹಿ. ಹಿರೇಬಾಗೇವಾಡಿ ಉಪಕೇಂದ್ರದಿಂದ ಸರಬರಾಜು ಆಗುವ ಬೆಳಗಾವಿ ತಾಲೂಕಿನ ಮುತ್ನಾಳ, ವಿರಕನಕೊಪ್ಪ, ಅರಳಿಕಟ್ಟಿ, ಬಸಾಪೂರ, ಹಿರೇಬಾಗೇವಾಡಿ, ಭೆಂಡಿಗೇರಿ, ಗಜಪತಿ, ಅಂಕಲಗಿ, ಹುಲಿಕವಿ, ಕೆ. ಕೆ. ಕೊಪ್ಪ, ಕಲಾರಕೊಪ್ಪ, ಸಿದ್ಧನಹಳ್ಳಿ, ಬಡೇಕೊಳ್ಳಮಠ, ಹಲಗಿಮರಡಿ, ನಾಗೇನಟ್ಟಿ, ನಾಗೇರಹಾಳ, ಬಡಸ, ನಂದಿಹಳ್ಳಿ ಹಾಗೂ ಕುಕಡೊಳ್ಳಿ ಗ್ರಾಮಗಳಿಗೆ ಹಾಗೂ ಖಾನಾಪೂರ ತಾಲೂಕಿನ ಹಿರೇಹಟ್ಟಿಹೊಳಿ, ಗಾಡಿಕೊಪ್ಪ, ಹಾಗೂ ಪಾರಿಶ್ವಾಡ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ಕುಡಚಿ: ಪಟ್ಟಣದ ರಕ್ಷಣಾ ವೇದಿಕೆ ಅಧ್ಯಕ್ಷ ಅಮೀನ ವಾಟೆ ಅವರ ಮೊಮ್ಮಕ್ಕಳು ರಂಜಾನ ಹಬ್ಬದ ಶುಭಾಶಯ ಹಂಚಿಕೊಂಡರು.

ನಿಧನ ಸುದ್ದಿ

ರಾಮಪ್ಪ ತೇರದಾಳ



ಕಬ್ಬೂರ: ಪಟ್ಟಣದ ತೇರದಾಳ ತೋಟದ ನಿವಾಸಿ ರಾಮಪ್ಪ ದುಂಡಪ್ಪ ತೇರದಾಳ (72) ನಿಧನರಾಗಿದ್ದಾರೆ. ಇಬ್ಬರು ಪುತ್ರಿಯರು, ಒರ್ವ ಪುತ್ರ ಸೇರಿದಂತೆ ಅಪಾರ ಬಂಧ ಬಳಗವನ್ನು ಅಗಲಿದ್ದಾರೆ.



ಚಿಕ್ಕೋಡಿ: ಸಮೀಪದ ಚಿಂಚಣಿ ಶ್ರೀ ಅಲ್ಲಮಪ್ರಭು ಸಿದ್ಧ ಸಂಸ್ಥಾನ ಮಠದ ಯುಗಾದಿ ದಾಸೋಹ ಜಾತ್ರೆ ಮಹೋತ್ಸವದ ಕಾರ್ಯಕ್ರಮದಲ್ಲಿ ಅಂಗವಾಗಿ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀ ಮಠದ ಉತ್ತರಾಧಿಕಾರಿಗಳಾದ ಶಿವಪ್ರಸಾದ ದೇವರು ಪೂಜ್ಯರಿಗೆ ಧುಳಗನವಾಡಿ ರಂಗದರ್ಶನ ಕಲಾತಂಡದಿಂದ ಗೌರವಿಸಲಾಯಿತು. ಚಿಕ್ಕೋಡಿ- ಸದಲಗಾ ಕ್ಷೇತ್ರದ ಶಾಸಕರಾದ ಗಣೇಶ ಪ್ರ ಹುಕ್ಕೇರಿ ಮಾಜಿ ವಿಧಾನ ಪರಿಷತ್ತ ಸದಸ್ಯರಾದ ಮಹಾಂತೇಶ ಕವಟಗಿಮಠ, ಮಹೇಶ ಭಾತೆ, ಸುರೇಶ ಘುರಬುಡೆ, ಸಂಜಯಗೌಡಾ ಪಾಟೀಲ, ಮಿಥುನ ಅಂಕಲೆ, ಭರತ ಕಲಾಚಂದ್ರ, ಹಾಗೂ ಕಲಾವಿದರು ಉಪಸ್ಥಿತರಿದ್ದರು.

ರೈತರ ಶ್ರೇಯೋಭಿವೃದ್ಧಿಗಾಗಿ ಸದಾ ಬದ್ಧ

ಚಿಕ್ಕೋಡಿ: ನಿಪ್ಪಾಣಿ ಮತಕ್ಷೇತ್ರದ ಅಕ್ಕೊಳ ಗ್ರಾಮದ ಶ್ರೀ ಭೈರವನಾಥ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ನೂತನ ರೈತ ಸದಸ್ಯರಿಗೆ ಪ್ರಥಮ ಬಾರಿಗೆ ಡಿ.ಸಿ.ಸಿ.ಬ್ಯಾಂಕ್ ವತಿಯಿಂದ 65 ಲಕ್ಷ ರೂ.ಕೃಷಿ ಪತ್ತಿನಸಾಲ ಧನಾದೇಶ ಪತ್ರವನ್ನು ನಿಪ್ಪಾಣಿ ಸಮಾಧಿ ಮಠದ ಪ್ರಾಣಲಿಂಗ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಹಾಗೂ ಮಾಜಿ ಸಚಿವ ಹಾಗೂ ನಿಪ್ಪಾಣಿ ಜನಪ್ರಿಯ ಶಾಸಕ ಶಶಿಕಲಾ ಜೊಲ್ಲೆ ಯವರು ವಿತರಿಸಿದರು.

ಇದಕ್ಕೂ ಮೊದಲು ಕಾರ್ಯಕ್ರಮಕ್ಕೆ ಆಗಮಿಸುತ್ತಿದಂತೆ ಸೊಸೈಟಿಯ ಸದಸ್ಯರು,ರೈತರು ಹಾಗೂ ಗ್ರಾಮಸ್ಥರು ಅತ್ಯಂತ ಆತ್ಮೀಯವಾಗಿ ಸ್ವಾಗತಿಸಿ ಬರಮಾಡಿಕೊಂಡರು.ಬಳಿಕ ಸೊಸೈಟಿಯವರು ಪ್ರೀತಿಯಿಂದ ನೀಡಿದ ಸತ್ಕಾರ ಸ್ವೀಕರಿಸಿ ಅವರ ಆತಿಥ್ಯಕ್ಕೆ ಕೃತಜ್ಞತೆ ಸಲ್ಲಿಸಿದರು.ರೈತ ದೇಶದ ಬೆನ್ನಲಬು.ಕೃಷಿ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ರೈತರು ಆರ್ಥಿಕವಾಗಿ ಸದೃಢವಾಗಲು ಶೂನ್ಯ (0) ಬಡ್ಡಿ ದರದಲ್ಲಿ ಸಾಲವನ್ನು ವಿತರಿಸಲಾಗಿದೆ ಎಂದು ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಹೇಳಿದರು. ಈ ಸಂದರ್ಭದಲ್ಲಿ ಹಾಲಸಿದ್ದನಾಥ ಸಕ್ಕರೆ ಕಾರ್ಖಾನೆ ಅಧ್ಯಕ್ಷರು,ನಿರ್ದೇಶಕ ಮಂಡಳಿ ಸದಸ್ಯರು,ಭೈರವನಾಥ ಸೊಸೈಟಿಯ ಅಧ್ಯಕ್ಷರಾದ ವಿಕಾಸ ಭೂಪಾಲ ಸಂಕಪಾಳ,ಉಪಾಧ್ಯಕ್ಷರಾದ ಸವಿತಾ ಮಹೇಶ ಸಾಬಳೆ, ಸಂಚಾಲಕ ಮಂಡಳಿ ಸದಸ್ಯರು,ಸ್ಥಳೀಯ ಮುಖಂಡರು,ಸದಸ್ಯರು,ರೈತರು ಹಾಗೂ ಗ್ರಾಮಸ್ಥರು ಇದ್ದರು.



ಚಿಕ್ಕೋಡಿ: ನಿಪ್ಪಾಣಿ ಮತಕ್ಷೇತ್ರದ ಅಕ್ಕೊಳ ಗ್ರಾಮದ ಶ್ರೀ ಭೈರವನಾಥ ವಿವಿಧೋದ್ದೇಶಗಳ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರಿ ಸಂಘದ ನೂತನ ರೈತ ಸದಸ್ಯರಿಗೆ ಪ್ರಥಮ ಬಾರಿಗೆ ಡಿ.ಸಿ.ಸಿ.ಬ್ಯಾಂಕ್ ವತಿಯಿಂದ 65 ಲಕ್ಷ ರೂ.ಕೃಷಿ ಪತ್ತಿನಸಾಲ ಧನಾದೇಶ ಪತ್ರವನ್ನು ವಿತರಿಸಲಾಯಿತು.

ಮಾ.24 ರಿಂದ ಪ್ರಶಿಕ್ಷಣ ಅಭ್ಯಾಸ ವರ್ಗ

ಸವದತ್ತಿ: ಭಾರತೀಯ ಜನತಾ ಪಕ್ಷ ಸವದತ್ತಿ ಮಂಡಲದ ಪದಾಧಿಕಾರಿಗಳ ಪ್ರಶಿಕ್ಷಣ ಅಭ್ಯಾಸ ವರ್ಗ ಮಾರ್ಚ್ 24 ರಿಂದ ಮಾರ್ಚ್ 27ರವರೆಗೆ ನಡೆಯಲಿದೆ ಎಂದು ಬಿಜೆಪಿ ಮುಖಂಡ ವಿರೂಪಾಕ್ಷಪ್ಪ ಕ ಮಾಮನಿ ಹೇಳಿದರು.



ಅವರು ಎಪಿಎಂಸಿ ಆವರಣದಲ್ಲಿರುವ ತಮ್ಮ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಅಭ್ಯಾಸವು ಸ್ಥಳೀಯ ಮಾಮನಿ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಅಭ್ಯಾಸ ವರ್ಗದಲ್ಲಿ ರಾಜ್ಯದ ಮತ್ತು ಜಿಲ್ಲೆಯ ಪಕ್ಷದ ಮುಖಂಡರು ಆಗಮಿಸಲಿದ್ದಾರೆ ಎಂದು ಹೇಳಿದರು.

ಪ್ರತಿ ಮೂರು ವರ್ಷಗಳಿಗೊಮ್ಮೆ ಪಕ್ಷದ ಪದಾಧಿಕಾರಿಗಳಿಗೆ ಪ್ರಶಿಕ್ಷಣ ವರ್ಗ ನಡೆಸುವುದು ವಾಡಿಕೆ. ಇದು ಪಂಡಿತ್ ದೀನ್ ದಯಾಳ್ ಉಪಾಧ್ಯಾಯರ ದೂರ ದೃಷ್ಟಿ ಹೊಂದಿದ್ದ ಕನಸು. ಒಂದು ರಾಜಕೀಯ ಪಕ್ಷದಲ್ಲಿ ವ್ಯಕ್ತಿ ನಿರ್ಮಾಣದ ಕಾರ್ಯವಾಗಿದೆ. ಇದು ನಮ್ಮ ಕಾರ್ಯಕರ್ತರಲ್ಲಿ ಪ್ರಭುದ್ಧತೆ ಮತ್ತು ಪಕ್ಷದ ಮೇಲಿನ ಬದ್ಧತೆಯನ್ನು ಹೆಚ್ಚಿಸಲಿದೆ.

ಸವದತ್ತಿ ಮಂಡಲದ ನೂತನವಾಗಿ ಆಯ್ಕೆಯಾದ ಮಂಡಲದ ಎಲ್ಲ ಪದಾಧಿಕಾರಿಗಳು ಈ ಅಭ್ಯಾಸ ವರ್ಗದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮಂಡಲದ ಪ್ರಧಾನ ಕಾರ್ಯದರ್ಶಿ ಮಹದೇವ ಬಿ ಮುರಗೋಡ ಮಾತನಾಡಿ, ಮಾ.24ರಿಂದ 27 ರವರೆಗೆ ಪ್ರಶಿಕ್ಷಣ ಅಭ್ಯಾಸ ವರ್ಗ ಪ್ರಾರಂಭವಾಗಲಿದೆ. ಈ ಅಭ್ಯಾಸ ವರ್ಗವು ಮಂಡಲದಲ್ಲಿ ಮೂರು ಹಂತದಲ್ಲಿ ನಡೆಯಲಿದೆ ಎಂದರು.

ಬೂತ್ ಅಧ್ಯಕ್ಷರು, ಮಂಡಲ ಪದಾಧಿಕಾರಿಗಳು, ಮೋರ್ಚಾ ಪದಾಧಿಕಾರಿಗಳು, ಮಹಾಶಕ್ತಿ ಕೇಂದ್ರ, ಜಿಲ್ಲಾ, ರಾಷ್ಟ್ರೀಯ , ಪಕ್ಷದ ಮಟ್ಟದ ಪದಾಧಿಕಾರಿಗಳು ಮತ್ತು ಪಕ್ಷದ ಸ್ಥಳೀಯ ಜನಪ್ರತಿನಿಧಿಗಳು ಮೂರು ಹಂತದ ಅಭ್ಯಾಸ ವರ್ಗದಲ್ಲಿ ಒಟ್ಟು 600 ಜನ ಪ್ರಸಿಕ್ಷಣಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.ಮಂಡಲದ ಪ್ರಧಾನ ಕಾರ್ಯದರ್ಶಿ ಸುಭಾಸ ಗೀದಿಗೌಡರ ಮಾತನಾಡಿ, ಪ್ರಶಿಕ್ಷಣದ ಮುಖ್ಯ ಗುರಿ ಕಾರ್ಯಕರ್ತರಲ್ಲಿನ ವೈಚಾರಿಕ ಬದ್ಧತೆ ಬೆಳೆಸುವುದು. ಪಕ್ಷದ ಕಾರ್ಯ ವೈಖರಿ ತಿಳಿಸುವುದು. ಕಾರ್ಯಕರ್ತರ ಮಡತೆಯಲ್ಲಿ ಶ್ರೇಷ್ಠತೆ ರೂಪಿಸುವುದು ಮಾತ್ರವಲ್ಲದೆ ಕಾರ್ಯಕರ್ತನಿಗೆ ಪಕ್ಷದ ವಿಕಾಸ ಇತಿಹಾಸ ತಿಳಿಸಿ ಕೊಡಲಾಗುವುದು ಮತ್ತು ಪ್ರಶಿಕ್ಷಣಾರ್ಥಿಗಳ ವ್ಯವಸ್ಥೆ ದೃಷ್ಟಿಯಿಂದ ಮೂರು ಹಂತದ ಅಭ್ಯಾಸ ವರ್ಗವನ್ನು ನಡೆಸಲಾಗುತ್ತಿದೆ ಈ ಅಭ್ಯಾಸ ವರ್ಗದಲ್ಲಿ ಭಾಗವಹಿಸುವವರಿಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಂಡಲ ಮಾಧ್ಯಮ ಪ್ರಮುಖರಾದ ಈರಣ್ಣ ವಿರಶೆಟ್ಟಿ, ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಬಸವರಾಜ್ ಸಿಗ್ಗಾವಿ ಮತ್ತು ಶೇಖರ್ ಗೋಖಾವಿ, ಮಹಾಂತೇಶ್ ಯಕ್ಕೇರಿ, ಬಸವರಾಜ್ ಹನಸಿ, ಸಂತೋಷ ಹೊಂಗಲ್ ಸೇರಿದಂತೆ ಭಾರತೀಯ ಜನತಾ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ಧರಣಿ ಸತ್ಯಾಗ್ರಹ 13ನೇ ದಿನಕ್ಕೆ

ಬೈಲಹೊಂಗಲ: ನಗರದ ಕಿತ್ತೂರು ರಾಣಿ ಚೆನ್ನಮ್ಮಾಜಿ ಸಮಾಧಿ ಹಾಗೂ ರಾಕ್ ಗಾರ್ಡನ್ ಉದ್ಘಾಟನೆ ಕಾರ್ಯಕ್ರಮವನ್ನು ಸಾರ್ವಜನಿಕರಿಗೆ ತಿಳಿಸದೇ ನಡೆಸಿದ ಕ್ರಮವನ್ನು ಖಂಡಿಸಿ, ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಕಿತ್ತೂರು ರಾಣಿ ಚೆನ್ನಮ್ಮ ಅಭಿಮಾನಿಗಳು ಹಾಗೂ ಕನ್ನಡಪರ ಸಂಘಟನೆಗಳ ನೇತೃತ್ವದಲ್ಲಿ ನಡೆಯುತ್ತಿರುವ ಸರದಿ ಧರಣಿ ಸತ್ಯಾಗ್ರಹ ಶನಿವಾರ 13ನೇ ದಿನಕ್ಕೆ ಕಾಲಿಟ್ಟಿದೆ.

ಧರಣಿ ಸ್ಥಳಕ್ಕೆ ಭೇಟಿ ನೀಡಿದ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮಿಜಿ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿ, ದೇಶದಲ್ಲಿ ಮೊಟ್ಟ ಮೊದಲ ಸ್ವಾತಂತ್ರ್ಯ ಹೋರಾಟದ ಕಹಳೆ ಮೊಳಗಿಸಿದ ರಾಣಿ ಚೆನ್ನಮ್ಮ ತಾಯಿಗೆ ಅವಮಾನ ಮಾಡಿದಂತಾಗಿದೆ. ಸಮಾಧಿ ಸ್ಥಳ ಇಷ್ಟು ವರ್ಷಗಳಾದರೂ ಅಭಿವೃದ್ಧಿಯಾಗದಿರುವುದು ನಾಚಿಕೆಗೇಡಿನ ಸಂಗತಿ. ಕೆಲ ಗೊಂಬೆಗಳನ್ನು ತಂದು ರಾಕ್ ಗಾರ್ಡನ್ ನಿರ್ಮಿಸಿ, ಯಾರಿಗೂ ತಿಳಿಸದೆ ಉದ್ಘಾಟನೆಮಾಡಿರುವುದುದೊಡ್ಡಅಪಮಾನ ಎಂದು ಆಕ್ರೋಶ ವ್ಯಕ್ತಪಡಿಸಿದರು.

13 ದಿನಗಳಿಂದ ಹೋರಾಟ ನಡೆಯುತ್ತಿದ್ದರೂ ಈ ಭಾಗದ ಶಾಸಕರು ಹಾಗೂ ಸರ್ಕಾರದ ಪ್ರತಿನಿಧಿಗಳು ಹೋರಾಟಗಾರರ ಬೇಡಿಕೆಗಳನ್ನು ಕೇಳದಿರುವುದು ನೋವಿನ ಸಂಗತಿ ಎಂದು ಹೇಳಿದರು.

ಹೋರಾಟಕ್ಕೆ ಬೆಂಬಲ ಸೂಚಿಸಿ ಮುಖಂಡರಾದ ಪಂಚನಗೌಡರ ದ್ಯಾಮನಗೌಡರ, ಬಿ.ಆರ್. ಚಿಕ್ಕನಗೌಡರ, ಎಫ್.ಎಸ್. ಸಿದ್ದನಗೌಡರ, ರಫೀಕ್ ಬಡೆಘರ ಮಾತನಾಡಿದರು.

ಶಂಕರ ಮಾಡಲಗಿ, ಮಡಿವಾಳಪ್ಪ ಹೋಟಿ, ಮಹೇಶ್ ಹರಕುಣಿ, ಸಿದ್ಧಾರೂಢ ಹೊಂಡಪ್ಪನವರ, ಶ್ರೀಶೈಲ ಚೌಡಣ್ಣವರ, ಸತೀಶ ಧಾರವಾಡ, ಶಿವಾನಂದ ಚೌಡಣ್ಣವರ, ಬಸವರಾಜ ಉದ್ದಾನಶೆಟ್ಟಿ, ಈರಪ್ಪ ಗಂಟಿ, ಬಸವರಾಜ ಮಡಿವಾಳರ, ಎನ್.ವಿ. ಚೌಡಣ್ಣವರ, ಬಸವಂತಪ್ಪ ಗಂಟಿ, ಉದಯ ಕೊಟಬಾಗಿ, ಶಿವಯ್ಯ ಸಂಗಮೇಶ್ವರಮಠ, ರುದ್ರಮುನಿ ಚರಂತಿಮಠ, ಕಿರಣ ಅಸುಂಡಿ, ಶಿವಾನಂದ ಹಾಲನ್ನವರ, ರಮೇಶ್ ಸಂಗೊಳ್ಳಿ, ನವೀನ ಜೀರಗಾಳ, ಬಸವರಾಜ ಧಾರವಾಡ, ಸಿದ್ದು ಯಮೋಜಿ, ದರ್ಶನ್ ಪಾಟೀಲ, ರೂಪೇಶ್ ಕುಬಿಹಾಳ, ಚಂದ್ರು ಪವಾಡಿ, ಸಂಗು ಸಂಗೊಳ್ಳಿ, ಯಲ್ಲಪ್ಪ ಹಾಲನ್ನವರ, ಆಕಾಶ ಹೋರಾಟದಲ್ಲಿ ಭಾಗವಹಿಸಿದ್ದರು.





ಕೊಕಟನೂರ ಗ್ರಾಮದ ಈದ್ಗಾ ಮೈದಾನದಲ್ಲಿ ರಂಜಾನ್ ಹಬ್ಬ ಆಚರಿಸಲಯಿತು. ಮೌಲಾನ ಸರಫ್ರಾಜ್ , ಎಸ್.ಎ. ಕಾವರೆ, ಜಾಪರ್ಸಾಬ್ ಕರಿಹಾಜಿ, ಮಮ್ಮದ್ಹನೀಫ್ ಮೋಮಿನ, ಜಾವೀದ್ ನರಾಫ್, ಜಮೀರ್ ಮುಲ್ಲಾ, ಅಲ್ಲಾವುದ್ದೀನ್ ಕೊರಬು, ಮುಬಾರಕ್ ಕಾಳೆ, ಹಾಜಿಬಶೀರ್ ಮುಲ್ಲಾ, ಶಮಶೂರ್ ಮುಜಾರ್ವ ಸೇರಿದಂತೆ ಇತರರು ಇದ್ದರು.



ರಾಯಬಾಗ: ಉಗಾರ ಖುರ್ದ ಮೂಲದ ಸ್ವಸ್ತಿಕುಬೇರ ಸೌಹಾರ್ದ ಸಹಕಾರಿ ಸಂಘದ ಚಿಂಚಲಿ ಶಾಖೆಯನ್ನು ಶಾಸಕ ಡಿ.ಎಂ. ಐಹೊಳೆ ಅವರು ಉದ್ಘಾಟಿಸಿ ಮಾತನಾಡಿದರು. ಚಿಂಚಲಿ ಪಟ್ಟಣದ ಮಲ್ಲಿಕಾರ್ಜುನ ಗುರುದೇವ ಆಶ್ರಮದ ಪ.ಪೂ.ಸಿದ್ಧಪ್ರಸಾದ ಸ್ವಾಮೀಜಿ, ಸ್ವಸ್ತಿ ಕುಬೇರ ಬ್ಯಾಂಕ್ ನ ಸಂಸ್ಥಾಪಕ ಅಧ್ಯಕ್ಷ ರಜನಿಕಾಂತ ಶಹಾ, ತೃಪ್ತಿ ಕಾಗೆ, ಭೂಷಣ ಶಹಾ, ಅಂಕುಶ ಜಾಧವ, ನಾನಾಸಾಬ ಸೌಂದಲಗಿ, ಗಜಾನನ ನಾಯಿಕ,ಸಂದೇಶ ಶೆಟ್ಟಿ, ವಸಂತ ಖೋತ,ಮಹಾದೇವ ದಂಡಾಪುರೆ,ಸದಾಶಿವ ನಿಡವಣಿ ಸೇರಿದಂತೆ ಇತರರು ಇದ್ದರು.

ಆರೋಗ್ಯ ಇಲಾಖೆ: ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

ಬೆಳಗಾವಿ : ಜಿಲ್ಲಾ ಆರೋಗ್ಯ ಮತ್ತು ಕು ಕ ಅಧಿಕಾರಿಗಳ ಸಭಾಂಗಣದಲ್ಲಿ ಬೆಳಗಾವಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಂತರ ಇಲಾಖೆಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಯ ಸಭೆ ನಡೆಯಿತು.

ಈ ವೇಳೆ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಬೆಳಗಾವಿ ನಗರದಾದ್ಯಂತ 50 ಶೈಕ್ಷಣಿಕ ಸಂಸ್ಥೆಗಳು ಹಾಗೂ ಉಳಿದ ತಾಲೂಕುಗಳಲ್ಲಿ 100 ಶೈಕ್ಷಣಿಕ ಸಂಸ್ಥೆಗಳನ್ನು ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಗಳೆಂದು ಘೋಷಿಸುವಂತೆ ಕ್ರಮ ನಿರ್ವಹಿಸಲು ಸೂಚಿಸಿದರು.

ತಂಬಾಕು ಉತ್ಪನ್ನ ಮಾರಾಟಾ ಮಾಡುತ್ತಿರುವ ಅಂಗಡಿ ಮಾಲಿಕರು ಕೋಟ್ಪಾ ಕಾಯ್ದೆಯನ್ನು ಮರು ಉಲ್ಲಘಂನೆ ಮಾಡುತ್ತಿದ್ದರೆ ಅಂತವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳು ಸಭೆಗೆ ನಿರ್ದೇಶನ ನೀಡಿದರು.

ಡಾ. ವಿಶ್ವನಾಥ ಭೋವಿ ಇವರು ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗದಲ್ಲಿ ಬರುವ 1588 ಶೈಕ್ಷಣಿಕ ಸಂಸ್ಥೆಗಳನ್ನು ಸರ್ಕಾರದ ಮಾರ್ಗಸೂಚಿಯಂತೆ ತಂಬಾಕು ಮುಕ್ತ ಶೈಕ್ಷಣಿಕ ಸಂಸ್ಥೆಗಳನ್ನಾಗಿ ಘೋಷಿಸಲಾಗಿರುವ ವಿಷಯವನ್ನು ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾತಂಬಾಕುನಿಯಂತ್ರಣಕೋಶಹಾಗೂತಾಲೂಕಾಆರೋಗ್ಯಾಧಿಕಾರಿಗಳ ಕಚೇರಿ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಕೋಟ್ಪಾ ಕಾಯ್ದೆ ಸೆಕ್ಷನ್ -4, 6(ಎ), 6(ಬಿ) ಮತ್ತು 6(ಸಿ) ಅಡಿಯಲ್ಲಿ ಒಟ್ಟು 64 ಕಾರ್ಯಾಚರಣೆಯನ್ನು ನಗರಾದ್ಯಾಂತ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಆಯ್.ಪಿ.ಗಡಾದ, ಜಿಲ್ಲಾ ಆಯುಷ್ ಅಧಿಕಾರಿ ಶ್ರೀಕಾಂತ ಸುಣಧೋಳಿ ಸೇರಿದಂತೆ ಆರೋಗ್ಯ ಇಲಾಖೆಯ ವಿವಿಧ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.



ಕಕಮರಿ : ಯುಗಾದಿಯ ನಿಮಿತ್ತ ಶುಕ್ರವಾರ ಗ್ರಾಮದೇವತೆ ಶ್ರೀ ಅಮ್ಮಾಜೀಶ್ವರಿ ದೇವಿಯ ನಂದಿಧ್ವಜ ಹಾಗೂ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ಜರುಗಿತು. ಸಮಸ್ತ ಗ್ರಾಮಸ್ಥರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಖಾನಾಪುರ ತಾಲೂಕಿನಾದ್ಯಂತ ರಂಜಾನ್ ಹಬ್ಬದ ಸಂಭ್ರಮ

ಖಾನಾಪುರ: ಪಟ್ಟಣ ಸೇರಿದಂತೆ ತಾಲೂಕಿನ ಪಾರಿಶ್ವಾಡ, ಬೀಡಿ, ನಂದಗಡ, ಲಿಂಗನಮಠ, ಕಕ್ಕೇರಿ ಚುಂಚವಾಡ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಶನಿವಾರ ಮುಸಲ್ಮಾನ್ ಬಾಂಧವರು ಪವಿತ್ರವಾದ ರಮಜಾನ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು. ಹಬ್ಬದ ಅಂಗವಾಗಿ ಸಮಾಜದ ಬಾಂಧವರು ಹೊಸ ಉಡುಪು ಧರಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ತಮ್ಮ ತಮ್ಮ ಮನೆಯಲ್ಲಿ ಬಗೆ ಬಗೆಯ ಭಕ್ಷ್ಯಗಳನ್ನು ತಯಾರಿಸಿ ಬಂಧು ಬಾಂಧವರೊಂದಿಗೆ ಸವಿದು ಸಂಭ್ರಮಿಸಿದರು.



ಇಸ್ಲಾಂ ಧರ್ಮದಲ್ಲಿ ರಂಜಾನ್ ಪವಿತ್ರವಾದ ಹಬ್ಬವಾಗಿದ್ದು, ಕಳೆದ ಒಂದು ತಿಂಗಳ ಕಾಲ ಅಬಾಲವೃದ್ಧಿಯಾಗಿ ಮುಸ್ಲಿಂ ಬಾಂಧವರು ಹಗಲು ಹೊತ್ತಿನಲ್ಲಿ ಉಪವಾಸ ಕೈಗೊಂಡಿದ್ದರು. ಶನಿವಾರ ಈ ಹಬ್ಬದ ಸಮಾರೋಪ ಕೈಗೊಂಡು ಮೌಲ್ವಿಯವರ ಸಾನ್ನಿಧ್ಯದಲ್ಲಿ ಪ್ರಾರ್ಥನೆ ಸಲ್ಲಿಸಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು.

ಹಬ್ಬದ ಅಂಗವಾಗಿ ಮುಸ್ಲಿಂ ಬಾಂಧವರು ಹೊಸ ಬಟ್ಟೆ ತೊಟ್ಟು, ತಲೆಯ ಮೇಲೆ ಟೋಪಿ, ವಸ್ತ್ರ ಧರಿಸಿ ಈದ್ಗಾದಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ಕೆಲವೆಡೆ ಮುಸ್ಲಿಂ ಬಾಂಧವರು ಹಾಗೂ ಹಿಂದೂ ಬಾಂಧವರು ಪರಸ್ಪರ ಅಪ್ಪಿಕೊಂಡು ಸಿಹಿ ಹಂಚಿ ಸಂಭ್ರಮಿಸಿದರು .

ಕವಿತೆಗಳು ಶಕ್ತಿಶಾಲಿ ಮಾಧ್ಯಮ: ದಳವಾಯಿ

ಚನ್ನಮ್ಮನ ಕಿತ್ತೂರ: ಕವಿತೆಗಳು ಸಮಾಜದ ಭಾವನೆಗಳನ್ನು ವ್ಯಕ್ತಪಡಿಸುವ ಶಕ್ತಿಶಾಲಿ ಮಾಧ್ಯಮಗಳಾಗಿವೆ ಎಂದು ಕಸಾಪ ಅಧ್ಯಕ್ಷ ಡಾ.ಎಸ್.ಬಿ.ದಳವಾಯಿ ಅಭಿಪ್ರಾಯಪಟ್ಟರು.

ಸಮೀಪದ ಅಂಬಡಗಟ್ಟಿ ಗ್ರಾಮದ ಮಡಿವಾಳೇಶ್ವರ ಮಠದ ಆವರಣದಲ್ಲಿ ಸ್ವಾಮಿ ವಿವೇಕಾನಂದ ಯುವಕ ಮಂಡಳ, ಶಿವಸಾಯಿ ಶಿಕ್ಷಣ ಹಾಗೂ ಸಮಾಜ ಅಭಿವೃದ್ಧಿ ಸಂಸ್ಥೆ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತುಗಳ ಸಂಯುಕ್ತ ಆಶ್ರಯದಲ್ಲಿ ಇತ್ತೀಚಿಗೆ ನಡೆದ ನಿವೃತ್ತ ಶಿಕ್ಷಕ ಬಿ.ಬಿ.ಕಾದರವಳ್ಳಿ ರಚಿಸಿದ ಭಾವ ಸ್ಪಂದನ ಕವನ ಸಂಕಲನದ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಸರಳ ಸಜ್ಜನಿಕೆಯ ಸ್ವಭಾವರಾಗಿದ್ದು, ನಿವೃತ್ತಿ ನಂತರವೂ ಸಾಹಿತ್ಯ ರಚನೆಯಲ್ಲಿ ಕ್ರಿಯಾಶೀಲರಾಗಿ ಹಲವಾರು ಕೃತಿಗಳನ್ನು ರಚಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ ಎಂದರು.

ಖಾನಾಪೂರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ವಿಜಯ ಬಡಿಗೇರ ಮಾತನಾಡಿ ಈ ಕವನ ಸಂಕಲನದಲ್ಲಿ ಸಮಾಜದ ಸಮಸ್ಯೆಗಳು ಮತ್ತು ಮಾನವೀಯ ಮೌಲ್ಯಗಳನ್ನು ಸುಂದರವಾಗಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಮಡಿವಾಳೇಶ್ವರ ಮಠದ ವೀರೇಶ್ವರ ಸ್ವಾಮೀಜಿ ಮಾತನಾಡಿ ಈ ಕವನ ಸಂಕಲನದ ಮೂಲಕ ಯುವ ಪೀಳಿಗೆಗೆ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿರುವ ಬಿ.ಬಿ.ಕಾದರವಳ್ಳಿ ಶಿಕ್ಷಕರಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಇನ್ನೂ ಅನೇಕ ಕೃತಿಗಳು ಮೂಡಿ ಬರಲಿ ಎಂದು ಆಶೀರ್ವದಿಸಿದರು.



ಸನ್ಮಾನ ಸ್ವೀಕರಿಸಿದ ನಿವೃತ್ತ ಶಿಕ್ಷಕ ಬಿ.ಬಿ.ಕಾದರವಳ್ಳಿ ಮಾತನಾಡಿ, ತೀರ ಬಡತನದಲ್ಲಿ ಬೆಳೆದು ಶಿಕ್ಷಣ ಪಡೆದ ನಾನು ಶಿಕ್ಷಕ ವೃತ್ತಿಯನ್ನು ಸಂತಸದಿಂದ ಪೂರ್ಣಗೊಳಿಸಿ ಇದೀಗ ಕೃಷಿ ಕ್ಷೇತ್ರದ ಜೊತೆಗೆ ಬರವಣಿಗೆಯಲ್ಲಿ ತೊಡಗಿದ್ದು ತಾವು ರಚಿಸಿದ ಕವನ ಸಂಕಲನವನ್ನು ನಮ್ಮ ಗ್ರಾಮದಲ್ಲಿ ಪೂಜ್ಯರ ಸಮ್ಮುಖದಲ್ಲಿ ಬಿಡುಗಡೆಗೊಳಿಸಿದ ಪ್ರತಿಯೊಬ್ಬರಿಗೆ ಧನ್ಯವಾದಗಳನ್ನು ತಿಳಿಸಿದರು.ಬಸವರಾಜ ದಳವಾಯಿ, ಪ್ರಕಾಶಗೌಡ ಪಾಟೀಲ, ಶಾಮ್ ಕಾದ್ರೊಳ್ಳಿ , ಮಹಾದೇವ ಹಿತ್ತಲಮನಿ ಮುತ್ತಿತರರು ಮಾನಾಡಿದರು.85 ವರ್ಷಗಳನ್ನು ಪೂರ್ಣಗೊಳಿಸಿ, 85 ಕವನಗಳನ್ನು ಒಳಗೊಂಡ ಕವನ ಸಂಕಲನವನ್ನು ರಚಿಸಿದ ಬಿ.ಬಿ.ಕಾದರವಳ್ಳಿಯವರನ್ನು ಸನ್ಮಾನಿಸಲಾಯಿತು.

ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಿಜಯ ಸಾಣಿಕೊಪ್ಪ, ಪ್ರಾಚಾರ್ಯ ಹುಣಶೀಕಟ್ಟಿ ಸೇರಿದಂತೆ ಗ್ರಾಮಸ್ಥರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಬಸರವಾಜ ಹುರಕಡ್ಲಿ ನಿರೂಪಿಸಿದರು, ವಿಕ್ರಂ ಖೊದಾನಪೂರ ಸ್ವಾಗತಿಸಿದರು. ಈರಣ್ಣ ಹುಕ್ಕೇರಿ ವಂದಿಸಿದರು.

ಅಭಿವೃದ್ಧಿ ಕಾರ್ಯಕ್ಕೆ ಪಕ್ಷಾತೀತವಾಗಿ ಬೆಂಬಲಿಸಿ

ರಾಮದುರ್ಗ: ಜನರಪರ ಕಾರ್ಯ ಕೈಗೊಳ್ಳುವಾಗ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜಕೀಯ ಮಾಡದೇ ಪಕ್ಷಾತೀತವಾಗಿ ಅಭಿವೃದ್ಧಿ ಕಾರ್ಯಕ್ಕೆ ಪ್ರತಿಯೊಬ್ಬರೂ ಬೆಂಬಲಿಸಿದಾಗ ಮಾತ್ರ ಜನಪ್ರತಿನಿಧಿಗಳಿಗೆ ಮತ್ತಷ್ಟು ಕೆಲಸ ಮಾಡಲು ಪ್ರೇರಣೆಯಾಗಲು ಸಾಧ್ಯ ಎಂದು ಸರ್ಕಾರದ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು.

ಶನಿವಾರ ತಾಲೂಕಿನ ಸುರೇಬಾನ-ಮನಿಹಾಳದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಡಾ. ಬಿ. ಆರ್. ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯ ರೂ. 16 ಲಕ್ಷ ವೆಚ್ಚದ ನೂತನ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 2017 ರಲ್ಲಿ ಈ ಶಾಲೆ ಮತ್ತು ತಾಲೂಕಿನ ಬಟಕುರ್ಕಿಯ ಇಂದಿರಾಗಾಂದಿ ವಸತಿ ಶಾಲೆ ಮಂಜೂರಾತಿ ಪಡೆದು ಆರಂಭಿಸಲಾಗಿತ್ತು ಬಟಕುರ್ಕಿ ಶಾಲೆಗೆ ನಿವೇಶನ ಲಭ್ಯವಾದ ಹಿನ್ನಲೆಯಲ್ಲಿ ಬೇಗನೆ ಕಟ್ಟಡ ನಿರ್ಮಾಣವಾಯಿತು ಆದರೆ ನಿವೇಶನದ ಇಲ್ಲದಕ್ಕಾಗಿ ಅಂಬೇಡ್ಕರ ವಸತಿ ಶಾಲೆಯನ್ನು ಕಟಕೋಳದಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಸಿದ್ದು ಸುರೇಬಾನ ಮತ್ತು ಮನಿಹಾಳ ಪಂಚಾಯ್ತಿ ನಿವೇಶನ ನೀಡಿದ್ದು ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಿದ್ದು ನಿವೇಶನ ನೀಡಿರುವ ಪಂಚಾಯತಿ ಆಡಳಿತ ಮಂಡಳಿಗೆ ಅಭಿನಂದಿಸುವುದಾಗಿ ಹೇಳಿದರು.



ಸಮಾಜದಲ್ಲಿ ಹಿಂದುಳಿದ ಕುಟುಂಬಗಳ ಮಕ್ಕಳಿಗೆ ಶಿಕ್ಷಣ ನೀಡುವ ವಸತಿ ಶಾಲೆಯಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರು ಶ್ರಮಿಸುವ ಮೂಲಕ ಸಮಾಜದ ಮುಖ್ಯವಾಹಿನಿಯಲ್ಲಿ ಗುರ್ತಿಸುವಂತೆ ಮಾಡಲು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಪರಪ್ಪ ಜಂಗವಾಡ, ಗಿರಿಯಪ್ಪ ಹನಸಿ, ಚಿನ್ನಪ್ಪ ಮುದೇನೂರ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾ ವಕ್ಕುಂದ ಕ್ರೈಸ್ ಎಇಇ ಚಂದ್ರಶೇಖರ ಸೇರಿದಂತೆ ಹಲವರಿದ್ದರು.

ಸಂಘಟಕರ ವಿರುದ್ಧ ಅಸಮಾಧಾನ

ವಸತಿ ಶಾಲೆ ನಿರ್ಮಾಣಕ್ಕೆ ಗ್ರಾಮ ಪಂಚಾಯತಿಯಿಂದ ನಿವೇಶನ ನೀಡಿರುವ ಪಂಚಾಯತಿ ಅಧ್ಯಕ್ಷ/ ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ವೇದಿಕೆಗೆ ಕರೆಯದೆ ಪಂಚಾಯತಿಗೆ ಸಂಬಂಧವಿಲ್ಲದ ವ್ಯಕ್ತಿಗಳನ್ನು ವೇದಿಕೆಗೆ ಕರೆದಿದ್ದಾರೆ ಎಂದು ಬೇಸರಿಸಿಕೊಂಡು ಪಂಚಾಯತಿಯ ಮಹಿಳಾ ಮಾಜಿ ಅಧ್ಯಕ್ಷೆ ಪಿಡ್ಡನ್ನವರ ಮತ್ತು ಮಹಿಳಾ ಸದಸ್ಯರು ಕಾರ್ಯಕ್ರಮದ ಸಂಘಟಕರು ವಿರುದ್ಧ ಅಸಮಧಾನ ಹೊರಹಾಕಿದರು.

ಕಿರುಸುದ್ದಿ

ಇಂದು ಸತ್ಸಂಗ ಕಾರ್ಯಕ್ರಮ

ಜಮಖಂಡಿ: ಸಮೀಪದ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಮಾ.22ರಂದು ಸಂಜೆ 6 ಗಂಟೆಗೆ ತಿಂಗಳ 4ನೇ ಭಾನುವಾರ ಮಾಸಿಕ ಕಾರ್ಯಕ್ರಮ ಗುರುದೇವ ಸತ್ಸಂಗ ಹಮ್ಮಿಕೊಳ್ಳಲಾಗಿದೆ ಎಂದು ಗುರುದೇವಾಶ್ರಮದ ಹರ್ಷಾನಂದ ಶ್ರೀಗಳು ತಿಳಿಸಿದ್ದಾರೆ. ತಾಲೂಕಿನ ಕುಂಚನೂರ-ಜಕನೂರ ಗ್ರಾಮಗಳ ಕಮರಿಮಠದ ಸಿದ್ದಲಿಂಗ ಸ್ವಾಮಿಗಳು ಸಮಾಜ ನಿರ್ಮಾಣದಲ್ಲಿ ಯುವಕರ ಪಾತ್ರ ವಿಷಯ ಕುರಿತು ಅನುಭಾವ ಹಂಚಿಕೊಳ್ಳಲಿದ್ದಾರೆ. ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಪಿ.ಗಿರಡ್ಡಿ ಪ್ರಸಾದ ಸೇವೆ ನೆರವೇರಿಸುವರು. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ತಿಳಿಸಿದ್ದಾರೆ.

ಆಲಿಕಲ್ಲು ಸಹಿತ ಭಾರೀ ಮಳೆ

ಬೀಳಗಿ: ತಾಲೂಕಿನ ಅರಕೇರಿ, ಜಾನಮಟ್ಟಿ, ಕಾತರಕಿ, ಕುಂದರಗಿ, ಚಿಕ್ಕಾಲಗುಂಡಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಗುರುವಾರ ಸುರಿದ ಗುಡುಗು, ಸಿಡಿಲು, ಆಲಿಕಲ್ಲು ಸಹಿತ ಭಾರಿ ಮಳೆಗೆ ರೈತರು ತತ್ತರಿಸಿದ್ದಾರೆ. ಅರಕೇರಿಯಲ್ಲಿ ಬಿಸಿಲಿಗೆ ಬಸವಳಿದಿದ್ದ ಮಕ್ಕಳು ಆಲಿಕಲ್ಲು ಮಳೆಗೆ ಮೈಯೊಡ್ಡಿ ಆಲಿಕಲ್ಲು ಹಿಡಿಯಲು ಚಿನ್ನಾಟ ಆಡಿದರು. ವರ್ಷದ ಮೊದಲ ಮಳೆಗೆ ಯುಗಾದಿ ಪಾಡ್ಯಮಿ ದಿವಸ ಕಾದ ಕಾವಲಿಯಂತಾಗಿದ್ದ ಇಳೆಯನ್ನು ವರುಣ ತಂಪೆರೆದನು. ತಾಲೂಕಿನ ಅನಗವಾಡಿ ಹೋಬಳಿಯಲ್ಲಿ ಅತಿಹೆಚ್ಚು 2.7 ಮಿಲಿ ಮೀಟರ್ ಮಳೆಯಾದ ಬಗ್ಗೆ ಮಳೆಮಾಪನ ಕೇಂದ್ರದಲ್ಲಿ ದಾಖಲಾಗಿದೆ. ಭಾರಿ ಮಳೆಗೆ ಗಿಡಗಳು ಮುರಿದು ಬಿದ್ದಿವೆ. ವೇಗವಾಗಿ ಬೀಸಿದ ಗಾಳಿಗೆ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗಿತ್ತು. ದಾಳಿಂಬೆ, ದ್ರಾಕ್ಷಿ, ಗೋಧಿ, ಸೂರ್ಯಕಾಂತಿ ಬೆಳೆಗೆ ಹಾನಿಯಾಗಿದ್ದರೆ, ಕಬ್ಬು ಬೆಳೆಯ ರವದಿ ಆಲಿಕಲ್ಲು ರಭಸಕ್ಕೆ ಹರಿದು ನವಿಲು ಗರಿಯಂತೆ ನಿಂತಿವೆ. ಮಾವಿನ ಕಾಯಿಗಳು ಉದುರಿ ನೆಲಕ್ಕೆ ಬಿದ್ದಿವೆ. ಜೋಳದ ಕಣಕಿ ತೊಯ್ದು ಹಾಳಾಗಿದೆ. ಕೆಲವು ರೈತರಿಗೆ ಅಕಾಲಿಕ ಮಳೆ ಲಾಭದ ನಿರೀಕ್ಷೆಗೆ ತಣ್ಣೀರೆರಚಿದೆ.

ಇಂದು ಸತ್ಕಾರ ಸಮಾರಂಭ

ಕಲಾದಗಿ: ಸನಾತನ ಉತ್ಸವಗಳ ಆಚರಣಾ ಸಮಿತಿ ಕಲಾದಗಿ ವತಿಯಿಂದ ಮಾ.22ರಂದು ಭಾನುವಾರ ಸಂಜೆ 6 ಗಂಟೆಗೆ ಗ್ರಾಮದ ಶಿವಚಿದಂಬರೇಶ್ವರ ಸಭಾಭವನದಲ್ಲಿ ಸತ್ಕಾರ ಸಮಾರಂಭ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಧಾರ್ಮಿಕ, ಸಾಮಾಜಿಕ ಕ್ಷೇತ್ರ, ವಿವಿಧ ಕ್ಷೇತ್ರದ ಪ್ರಶಸ್ತಿ ಪುರಸ್ಕೃತರು ಸೇರಿದಂತೆ ವಿವಿಧ ಸೇವಾರ್ಥಿಗಳಿಗೆ ಸತ್ಕಾರ ಸಮಾರಂಭ ಹಾಗೂ ಸಹ ಭೋಜನ ಕಾರ್ಯಕ್ರಮ ಜರುಗಲಿದೆ ಎಂದು ಸನಾತನ ಉತ್ಸವಗಳ ಆಚರಣಾ ಸಮಿತಿಯ ವ್ಯವಸ್ಥಾಪಕರು ತಿಳಿಸಿದ್ದಾರೆ.

ಅದ್ದೂರಿ ರಥೋತ್ಸವ



ಜಮಖಂಡಿ: ಸಮೀಪದ ಹುನ್ನೂರಿನ ಅಂಬಾಭವಾನಿ ಜಾತ್ರೆಯ ಅಂಗವಾಗಿ ರಥೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ದೇವಿಯ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಭಕ್ತರ ಘೋಷಣೆಗಳ ಮಧ್ಯೆ ರಥೋತ್ಸವ ನಡೆಸಲಾಯಿತು. ರಥವನ್ನು ಸಾವಿರಾರು ಭಕ್ತರು ಭಕ್ತಿ ಭಾವದಿಂದ ಎಳೆದುಕೊಂಡು ಹೋಗಿದ್ದು ವಿಶೇಷ ಆಕರ್ಷಣೆಯಾಯಿತು. ಜ್ಞಾನ ಮುನೇಶ್ವರ ಸಂಬಾಳ ಮತ್ತು ಕರಡಿಮೇಳ ಕಾಖಂಡಕಿ, ಕಂಕನವಾಡಿಯ ಗೊಂಬೆಗಳ ಆಟ, ಬಸವೇಶ್ವರ ಮತ್ತು ಮಲ್ಲಿಕಾರ್ಜುನ ದೇವಸ್ಥಾನಗಳ ನಂದಿ ಕೋಲುಗಳು ರಥದ ಮುಂದೆ ತಮ್ಮ ಪ್ರತಿಭೆ ಪ್ರಸ್ತುತಪಡಿಸಿದವು.

ಕಟ್ಟಡ ಕಾರ್ಮಿಕ ಸಾವು: ಪ್ರಕರಣ ದಾಖಲು

ಕಲಾದಗಿ: ಕಟ್ಟಡ ನಿರ್ಮಾಣ ಕಾಮಗಾರಿಯ ಗೌಂಡಿ ಕೆಲಸ ಮಾಡಿಕೊಂಡು ವಿಪರೀತ ಕುಡಿತದ ಚಟಕ್ಕೆ ದಾಸನಾಗಿದ್ದ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಕಲಾದಗಿ ಗ್ರಾಮದಲ್ಲಿ ನಡೆದಿದೆ. ಬಾಗಲಕೋಟೆ ಹತ್ತಿರದ ಶಿಕ್ಕೇರಿ ಗ್ರಾಮದ ಆಯ್ಯಪ್ಪ ಲಂಕ್ಯಪ್ಪ ಕಾತರಕಿ(30) ಸಾವನ್ನಪ್ಪರುವ ವ್ಯಕ್ತಿಯಾಗಿದ್ದು, ಕಲಾದಗಿ ಗ್ರಾಮದ ಬಸ ನಿಲ್ದಾನದ ಹತ್ತಿರ ನಿರ್ಮಾಣ ಹಂತದ ಕಟ್ಟಡದ ಕೋಣೆಯಲ್ಲಿ



ಶವ ಪತ್ತೆಯಾಗಿದ್ದು, ಶುಕ್ರವಾರ ಮದ್ಯಾಹ್ನ ಅಕ್ಕ-ಪಕ್ಕದ ಅಂಗಡಿಗಾರರಿಗೆ ದುರ್ವಾಸನೆ ಬಂದಿದ್ದು ಅನುಮಾನಗೊಂಡು ಪೋಲಿಸರಿಗೆ ಮಾಹಿತಿ ನೀಡಿದ್ದಾರೆ. ಕೋಣೆಯ ಶೆಟರ್ ತೆಗೆದು ನೋಡಿದಾಗ ವ್ಯಕ್ತಿ ಶವ ಪತ್ತೆಯಾಗಿದ್ದು ಈ ಕುರಿತು ಕಲಾದಗಿ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕೆರೂರ: ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಶನಿವಾರ ಮುಸ್ಲಿಂ ಭಾಂದವರು ಈದ್ ಉಲ್ ಫಿತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಭಾಂದವರು ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿ ಒಬ್ಬರಿಗೊಬ್ಬರು ಪರಸ್ಪರ ವಿನಿಮಯ ಮಾಡಿಕೊಂಡು ಹಬ್ಬದ ಶುಭಾಶಯ ಕೋರಿದರು. ಸಲಾಬತ್ ಹದ್ಲಿ, ಬ್.ಸಿ.ಚಿಕ್ಕೂರ, ರಂಜಾನ ಕಡಕೋಳ, ಬಿ.ಕೆ.ಬಾಳಿಕಾಯಿ, ಎಚ್.ಎಲ್ ಕುಡಚಿ ಭಾಗವಹಿಸಿದ್ದರು.

ತಂತ್ರಜ್ಞಾನದಲ್ಲಿ ಗಣಿತದ ಅನ್ವಯ ಮುಖ್ಯ

ಬಾಗಲಕೋಟೆ: ಆಧುನಿಕ ಶಿಕ್ಷಣದಲ್ಲಿಂದು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ವಿಷಯಗಳ ಉತ್ತೇಜಿಸುವ ಮತ್ತು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ಗಣಿತ ದಿನವನ್ನು ಪ್ರತಿವರ್ಷ ಮಾ.14ರಂದು ಆಚರಿಸಲಾಗುತ್ತದೆ ಎಂದು ಸಹಪ್ರಾಧ್ಯಾಪಕ ಡಾ.ಪ್ರಶಾಂತ ಎಸ್. ಅಡರಕಟ್ಟಿ ಹೇಳಿದರು. ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ ವಿಶ್ವಮಾನವ ಸಭಾಭವನದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಗಣಿತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿನೆ ಮಾಡಿ ಮಾತನಾಡಿದರು. ವಿಶ್ವಪ್ರಸಿದ್ಧ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೀನ್ ಜನ್ಮದಿನದ ಅಂಗವಾಗಿ ಯೂನೆಸ್ಕೋ ಈ ದಿನವನ್ನು ಅಂತಾರಾಷ್ಟ್ರೀಯ ಪೈ ಡೇ ಆಗಿ ಆಚರಿಸುತ್ತಾ ಬಂದಿದ್ದಾರೆ. ವೈಜ್ಞಾನಿಕ ಸಂಶೋಧನೆಗಳು ಜಾಗತಿಕ ಸವಾಲುಗಳಿಗೆ ನೇರವಾಗಿ ಹೇಗೆ ಪರಿಹಾರ ನೀಡುತ್ತವೆ ಎಂಬುದನ್ನು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಅವರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ, ತಂತ್ರಜ್ಞಾನದ ಅವಿಷ್ಕಾರಗಳ ಜೊತೆಗೆ ಗಣಿತಶಾಸ್ತ್ರದ ಮಹತ್ವ ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ವಿಮರ್ಶಾತ್ಮಕ ಚಿಂತನೆಗೆ ಹೆಚ್ಚಿಸಲು ವಿಜ್ಞಾನ ಸ್ಪರ್ಧೆಗಳನ್ನು ಆಯೋಜಿಸಿತ್ತು. ಇದರಿಂದ ವಿದ್ಯಾರ್ಥಿಗಳಲ್ಲಿ ತಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನದ ಪ್ರಾಮುಖ್ಯತೆ ಅರಿಯುವಂತೆ ಮಾಡಲಾಯಿತು ಎಂದರು. ಪಿಯುಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸೈನ್ಸ್ ಕ್ವಿಜ್ ಸ್ಪರ್ಧೆಯಲ್ಲಿ ಬೀಳಗಿ ಬಿ.ಎನ್.ಖೋತ ಪಿಯು ಕಾಲೇಜು ಪ್ರಥಮ, ವಿದ್ಯಾಗಿರಿಯ ತುಂಗಳ ಸೈನ್ಸ್ ಪಿಯು ಕಾಲೇಜು ದ್ವಿತಿಯ ಮತ್ತು ತೃತೀಯ ಬಹುಮಾನ ಪಡೆದರು.



ಬಾಗಲಕೋಟೆ: ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ ವಿಶ್ವಮಾನವ ಸಭಾಭವನದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಅಂತಾರಾಷ್ಟ್ರೀಯ ಗಣಿತ ದಿನಾಚರಣೆ ಕಾರ್ಯಕ್ರಮ ನಡೆಯಿತು. ವಿಜ್ಞಾನ ವಿಭಾಗದ ಡಾ.ಆನಂದರಾವ್ ಕುಲಕರ್ಣಿ ಮಾತನಾಡಿದರು. ಪ್ರೊ.ಸವಿತಾ ಬಾದಾಮಿ, ಪ್ರೊ. ಶ್ರೀಶೈಲ ಶಿರೋಳ ಸೇರಿದಂತೆ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಅಭಾವ ವದಂತಿ | ಗ್ರಾಹಕರ ಪರದಾಟ

ವಿತರಣಾ ಕೇಂದ್ರದ ಮುಂದೆ ಸರತಿ ಸಾಲು

ನಿತೀಶ ಪಾಟೀಲ

ಕಲಾದಗಿ: ಮದ್ಯಪ್ರಾಚ್ಯ ಯುದ್ಧದ ಪರಿಣಾಮ ಜಾಗತಿಕ ಕಚ್ಚಾತೈಲ ಕೊರತೆ ಹಿನ್ನಲೆ ದೇಶ್ಯಾದ್ಯಂತ ಎಲ್‌ಪಿಜಿ ಗ್ಯಾಸ್ ಕೊರತೆ ಅಭಾವದ ವದಂತಿ ಹೆಚ್ಚಾಗುತ್ತಿದ್ದು, ಇತ್ತ ಗ್ರಾಮದಲ್ಲಿನ ಎಲ್‌ಪಿಜಿ ವಿತರಣಾ ಕೇಂದ್ರದ ಮುಂದೆ ಗ್ರಾಹಕರು ಜಮಾವಣೆಯಾಗುತ್ತಿದ್ದಾರೆ. ಸಿಗುತ್ತೋ ಇಲ್ಲವೋ? ಎನ್ನುವ ಆತಂಕದಿಂದಲೇ ಸರತಿ ಸಾಲಿನಲ್ಲಿ ನಿಂತು ಗೃಹ ಬಳಕೆಯ ಸಿಲಿಂಡರ್ ಪಡೆದುಕೊಳ್ಳುತ್ತಿದ್ದು ಕಳೆದೊಂದು ವಾರದಿಂದ ಸಿಲಿಂಡರ ಪಡೆದುಕೊಳ್ಳಲು ಗ್ರಾಹಕರು ಪರದಾಡುತ್ತಿದ್ದಾರೆ.

ದಿನ ಕಳೆದಂತೆಲ್ಲಾ ಹೋಟೆಲ್ ಉದ್ಯಮದ ಆರ್ಥಿಕ ಸ್ಥಿತಿ ತಲೆಕೆಳಗಾಗುತ್ತಿದ್ದು, ಕಮರ್ಷಿಯಲ್ ಸಿಲಿಂಡರ ಸಿಗದಿರುವ ಹೋಟೆಲ್‌ಗಳು ಸೌದೆ ಒಲೆ ಹಾಗೂ ವಿದ್ಯುತ್ ಒಲೆಗಳ ಬಳಕೆಗೆ ಮುಂದಾಗುತ್ತಿದ್ದಾರೆ. ಕಲಾದಗಿ, ಗದ್ದನಕೇರಿ ಸೇರಿದಂತೆ ಹೆಚ್ಚು ಜನ ಸಂಖ್ಯೆ ಹೊಂದಿರುವ ಗ್ರಾಮಗಳ ಹೋಟೆಲ್‌ಗಳು ಪರ್ಯಾಯ ಮಾರ್ಗ ಕಂಡುಕೊಂಡಿವೆ. ಗ್ರಾಮದಲ್ಲಿರುವ ಶೆಟ್ಟರ ಇಂಡೇನ್ ಗ್ಯಾಸ್ ಸಿಲಿಂಡರ್ ವಿತರಣಾ ಕೇಂದ್ರದ ಮುಂದೆ ದಿನಂಪ್ರತಿ ನೂರಾರು ಗ್ರಾಹಕರು ಗೃಹಬಳಕೆಯ ಸಿಲಿಂಡರ್ ಸಿಗುವುದಿಲ್ಲವೆಂದು ಗಾಳಿ ಸುದ್ದಿ ನಂಬಿಕೊಂಡು ಆತಂಕ ಪಟ್ಟು ದೌಡಾಯಿಸುತ್ತಿದ್ದು ಅವರನ್ನೆಲ್ಲ ಸಮಾಧಾನಗೊಳಿಸುವುದೇ ಗ್ಯಾಸ ಏಜೆನ್ಸಿ ಮಾಲೀಕರಿಗೆ ತಲೆ ನೋವಾಗಿದೆ. ಈ ಮೊದಲು 21ರಿಂದ 25 ದಿನಗಳ ನಂತರ ಮರು ಬುಕ್ಕಿಂಗ ಮಾಡಬಹುದಾಗಿತ್ತಾದರೂ ಅದನ್ನು ಈಗ 45 ದಿನಕ್ಕೇರಿಸಿರುವುದು ಒಂದೆಡೆಯಾದರೇ ಸರ್ವರ ಸಮಸ್ಯೆಯಿಂದಾಗಿ ಬುಕಿಂಗ್ ಡಿಎಸಿ ನಂಬರ ಕೂಡಾ ಬರದಿರುವುದರಿಂದ ಗ್ರಾಹಕರು ಆತಂಕ ಪಟ್ಟು ವಿತರಣಾ ಕೇಂದ್ರಗಳ ಮುಂದೆ ಜಮಾವಣೆಯಾಗುತ್ತಿದ್ದಾರೆ.

ದಿಗಂತ ವಿಶೇಷ



> ಗ್ರಾಹಕರು ಮುಂದಿನ ದಿನಗಳಲ್ಲಿ ಸಿಲಿಂಡರ್ ಅಭಾವ ಸೃಷ್ಟಿಯಾಗಬಹುದೆಂದು ಆತಂಕ ಪಟ್ಟು ವಿತರಣಾ ಕೇಂದ್ರಗಳ ಮುಂದೆ ಮುಗಿ ಬೀಳುತ್ತಿದ್ದಾರೆ. ಸದ್ಯ ಗೃಹ ಬಳಕೆಯ ಸಿಲಿಂಡರಗಳ ದಾಸ್ತಾನು ನಿತ್ಯ ನಮಗೆ ದೊರೆಯುತ್ತಿದ್ದು, ಸರಬರಾಜಿನಲ್ಲಿ ಸ್ವಲ್ಪ ಪ್ರಮಾಣ ಕಡಿಮೆಯಾಗಿದೆ. ಗ್ರಾಹಕರು ಆತಂಕ ಪಡದೇ ಸಮಾದಾನವಾಗಿ ಬಂದು ಸಿಲಿಂಡರ ಪಡೆಯಬೇಕಿ.
>
> ■ ಮಲ್ಲಣ್ಣ ಶೆಟ್ಟರ, ಇಂಡೇನ ಗ್ಯಾಸ್ ಏಜೆನ್ಸಿ ಮಾಲೀಕರು

> ನಮ್ಮ ಹೋಟೆಲನಲ್ಲಿ ಬಿಸಿ ಬಿಸಿ ತಿನಿಸುಗಳನ್ನು ಮಾಡಿ ಗ್ರಾಹಕರಿಗೆ ನೀಡುತ್ತಿದ್ದೆವು. ಆದರೆ ಸಿಲಿಂಡರ ಅಭಾವದಿಂದ ಸೌದೆ ಒಲೆ ಬಳಸುತ್ತಿದ್ದು, ಕೇವಲ ನಾಲ್ಕೈದು ತರದ ತಿನಿಸುಗಳನ್ನು ಮಾತ್ರ ತಯಾರಿಸುತ್ತಿದ್ದೇವೆ. ಮುಂದಿನ ದಿಗಳಲ್ಲಿ ಇದೇ ಸಮಸ್ಯೆ ಮುಂದುವರೆದರೆ ಆರ್ಥಿಕ ಸಂಕಷ್ಟ ಎದುರಿಸುವಂತಾಗುತ್ತದೆ.
>
> ■ ಅಜಿತ ಜಾಧವ, ಹೋಟೆಲ್ ವ್ಯಾಪಾರಿ

ವಿತರಣೆಗೆ ಸಮಸ್ಯೆಯಿಲ್ಲ

ಸಿಲಿಂಡರ್ ವಿತರಣಾ ಕೇಂದ್ರದಲ್ಲಿ ಗೃಹ ಬಳಕೆಯ ಸಿಲಿಂಡರಗಳ ದಾಸ್ತಾನು ನಿತ್ಯ ಆಗಮಿಸುತ್ತಿದ್ದು, ವಿತರಣೆಗೆ ಏನು ಸಮಸ್ಯೆಯಿಲ್ಲ. ಆದರೆ ಮುಂದಿನ ದಿನಗಳಲ್ಲಿ ಸಿಲಿಂಡರ ಸಿಗುವುದಿಲ್ಲವೆನ್ನುವ ತಪ್ಪುತಿಳುವಳಿಯಿಂದ ಖಾಲಿ ಸಿಲಿಂಡರನೊಂದಿಗೆ ವಿತರಣಾ ಕೇಂದ್ರದ ಮುಂದೆ ಗ್ರಾಹಕರು ಜಮಾವಣೆಯಾಗುತ್ತಿದ್ದು, ಸರತಿ ಸಾಲಿನಲ್ಲಿ ನಿಂತು ಸಿಲಿಂಡರ ಪಡೆದುಕೊಳ್ಳುವಲ್ಲಿ ಗ್ರಾಹಕರ ಪರದಾಡುತ್ತಿದ್ದಾರೆ. ಯುದ್ದದ ವಾತಾವರಣ ಹೀಗೆ ಮುಂದುವರೆದರೆ ಹೋಟೆಲ್ ವ್ಯಾಪಾರಸ್ತರ ಹೊಟ್ಟೆಗೆ ತಣ್ಣರು ಬಟ್ಟೆಯೇ ಗತಿಯೆಂದು ಚಿಂತಾಕ್ರಾಂತರಾಗಿದ್ದಾರೆ.

ಧರ್ಮದ ಗೆಲುವು ನಿಶ್ಚಿತ: ಭಾಂಡಗೆ

ಬಾಗಲಕೋಟೆ: ಬಾಗಲಕೋಟೆಯಲ್ಲಿ ಹಿಂದೂ ಶಕ್ತಿ ಒಂದಾಗಿದೆ. ಚುನಾವಣೆಯಲ್ಲಿ ಧರ್ಮದ ಗೆಲುವು ನಿಶ್ಚಿತ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ಸಭೆಯಲ್ಲಿ ಬಿಜೆಪಿ ಸೇರ್ಪಡೆಗೊಂಡ ನಗರ ಸಭೆ ಮಾಜಿ ಅಧ್ಯಕ್ಷ ಬಸವರಾಜ ಕಟಗೇರಿ ಹಾಗೂ ಅರುಣ ಲೋಕಾಪುರ ಅವರಿಗೆ ಅಭಿನಂದಿಸಿ ಮಾತನಾಡಿದ ಅವರು, ವೀರಣ್ಣ ಚರಂತಿಮಠ ಶಾಸಕರಾಗಿದ್ದ ಅವಧಿಯಲ್ಲಿ ಬಾಗಲಕೋಟೆ ಅಭಿವೃದ್ಧಿ ಹೊಂದಿದ್ದು, ನಗರ ಸ್ವಚ್ಛತೆ, ಸುಂದರನಗರವನ್ನಾಗಿ ಮಾಡಿ ಒಂದು ಮಾದರಿ ಕ್ಷೇತ್ರವನ್ನಾಗಿಸಿದವರು ಚರಂತಿಮಠರು ಎಂದರು.

ಮುಳಗಡೆ ಸಂತ್ರಸ್ಥರ ಸಮಸ್ಯೆಗಳಿಗೆ ಸ್ಪಂದಿಸಿದವರು ಚರಂತಿಮಠ. ಅವರ ಕಾಲದಲ್ಲಿಯೇ ಸರ್ಕಾರಿ ಪ್ರಥಮ ದರ್ಜೆ ಡಿಗ್ರಿ ಕಾಲೇಜಿಗೆ ಅನುಮತಿ ತಂದು ಪ್ರಾರಂಭಿಸಿದರು. ಅದು ಇಂದು ಮಾದರಿಯಾಗಿದೆ. 145 ದೇವಸ್ಥಾನಗಳ ಜೀರ್ಣೋದ್ಧಾರ ಕೆಲಸ ಮಾಡಿದ್ದಾರೆ. 3744 ಮನೆಗಳ ನಿರ್ಮಾಣ ಮಾಡುವ ಮೂಲಕ ವಸತಿ ಸೌಲಭ್ಯ ನೀಡಿದ್ದಾರೆ. ಸಾವಿರಾರು ಕೋಟಿ ರೂ. ಅನುದಾನ ತಂದು ಕೆಲಸ ಕಾರ್ಯಗತಗೊಳಿಸಿದ್ದಾರೆ. ಅಭಿವೃದ್ಧಿಯೊಂದೆ ಅವರ ಮಂತ್ರವಾಗಿದೆ ಎಂದರು. ನಗರಸಭೆ ಮಾಜಿ ಅಧ್ಯಕ್ಷ ಬಸವರಾಜ ಕಟಗೇರಿ ಮಾತನಾಡಿ, ಬಾಗಲಕೋಟೆ ಇದು ಹಿಂದುತ್ವದ ನೆಲ. ಪ್ರಧಾನ ನರೇಂದ ಮೋದಿಯವರ ನೇತೃತ್ವದಲ್ಲಿ ದೇಶ ಅಭಿವೃದ್ಧಿ ಹೊಂದುತ್ತಿದೆ. ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠರು ಶಾಸಕರಾಗಿದ್ದ ಅವಧಿಯಲ್ಲಿ ನಾನು ನಗರಸಭೆ ಅಧ್ಯಕ್ಷನಾಗಿದ್ದ ಸಮಯದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ, ಬಾಗಲಕೋಟೆಗೆ ಇಂದು ಅಭಿವೃದ್ಧಿ ಪರ ಕೆಲಸ ಮಾಡುವ ಶಾಸಕರ ಅವಶ್ಯಕತೆ ಇದೆ, ವೀರಣ್ಣ ಚರಂತಿಮಠರು ಸಮರ್ಥರಾಗಿದ್ದಾರೆ, ಮೊತ್ತಮ್ಮೆ ಬಿಜೆಪಿಯನ್ನು ಗೆಲ್ಲಿಸೋಣ ಎಂದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ, ಮಾಜಿ ಶಾಸಕ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಅರುಣ ಲೋಕಾಪುರ, ಲಕ್ಷ್ಮೀ ನಾರಾಯಣ ಕಾಸಟ್, ವಿಜಯ ಅಂಗಡಿ, ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ ಇದ್ದರು. ಪಕ್ಷಕ್ಕೆ ನಗರಸಭೆ ಮಾಜಿ ಅಧ್ಯಕ್ಷ ಬಸವರಾಜ ಕಟಗೇರಿ ಹಾಗೂ ಅರುಣ ಲೋಕಾಪರ ಅವರಿಗೆ ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಅಭಿನಂದಿಸಿ ಪಕ್ಷದ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ತಿಳಿಸಿದರು.



ಗುಣಮಟ್ಟದ ಶಿಕ್ಷಣದಿಂದ ಉಜ್ವಲ ಭವಿಷ್ಯ

ಲೋಕಾಪುರ: ಮಲ್ಲಪ್ಪಣ್ಣ ನೀಲಿ ಶಾಲೆಯಲ್ಲಿ ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ಸಮಾಜದದಲ್ಲಿ ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕೆಂದು ನಿವೃತ್ತ ಡಿಡಿಪಿಐ ಎಂ.ಜಿ.ದಾಸರ ಹೇಳಿದರು.

ಸಮೀಪದ ಚಿಂಚಖಂಡಿ ಬಿಕೆ ಗ್ರಾಮದ ಮಲ್ಲಪ್ಪಣ್ಣ ನೀಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಹಾಗೂ ಯುಕೆಜಿ ಮಕ್ಕಳ 'ಗ್ರಾಜುಯೇಷನ್ ಡೇ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಯಿ ತನ್ನ ಮಗಳನ್ನು ಗಂಡನ ಮನೆಗೆ ಕಳಿಸುವಾಗ ಯಾವ ರೀತಿ ದುಃಖ ಆಗುತ್ತದೆ, ಅದೇ ತರಹ ಇಂದು ನಮ್ಮ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ನಮ್ಮ ಶಾಲೆಯಿಂದ ಬೀಳ್ಕೊಡುತ್ತಿದ್ದೇವೆ ಅನ್ನೋದನ್ನ ಜಾನಪದ ಗೀತೆಯ ಮೂಲಕ ಹೇಳಿದರು.

ಬೇರೆ ಬೇರೆ ಊರುಗಳಿಂದ ಇಲ್ಲಿ ಶಿಕ್ಷಣ ಪಡೆಯಲು ಆಕಸ್ಮಿಕವಾಗಿ ನಾವೆಲ್ಲರೂ ಸೇರಿದ್ದೇವೆ. ಆದರೆ ಇಂದು ನಾವೆಲ್ಲರೂ ಅಗಲುವುದು ಅನಿವಾರ್ಯವಾಗಿದೆ. ಜೊತೆಗೆ ಈ ಶಾಲೆಯಿಂದ ಕಲಿತು ಬೇರೆ ಶಾಲೆಗೆ ಹೋದಾಗ ಈ ಶಾಲೆ ನಿಮಗೆ ನೀಡಿದಂತಹ ಅನುಭವಗಳನ್ನು ಮುಂದೆ ನಿಮ್ಮ ಜೀವನದ ಉದ್ದಕ್ಕೂ ಅವುಗಳನ್ನು ಅಳವಡಿಸಿಕೊಂಡು ಸಾಗಿರಿ ಎನ್ನುವ ಮಾತನ್ನು ಕೂಡ ಹೇಳಿದರು.

ಮಲ್ಲಪ್ಪಣ್ಣ ನೀಲಿ ಶಾಲೆ ಬರೀ ಜ್ಞಾನವನ್ನು ನೀಡುವುದು ಅಷ್ಟೇ ಅಲ್ಲದೆ ಉತ್ತಮವಾದ ಸಂಸ್ಕೃತಿ ಮಕ್ಕಳಲ್ಲಿ ಬಿತ್ತರಿಸುವುದನ್ನು ಸ್ವಾರಸ್ಯಕರವಾಗಿ ಹೇಳಿದರು.

ಸಂಸ್ಥೆ ಅಧ್ಯಕ್ಷ ಎಸ್.ಎಂ.ನೀಲಿ ಮಾತನಾಡಿ, ಗ್ರಾಜುಯೇಷನ್ ಡೇ ಕಾರ್ಯಕ್ರಮ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಮಲ್ಲಪ್ಪಣ್ಣ ನೀಲಿ ಶಾಲೆಯಲ್ಲಿ ಹಬ್ಬದ ವಾತಾವರಣ ಮೂಡಿಸಿದೆ ಎಂದು ಹೇಳಿದರು.

ಶಾಲೆ ಮುಖ್ಯ ಶಿಕ್ಷಕ ಶಿವರುದ್ರಪ್ಪ ಎಸ್. ನೀಲಿ ಮಾತನಾಡಿದರು. ಪ್ರಾಥಮಿಕ ಹಾಗೂ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಉಮಾ ಎಸ್. ನೀಲಿ, ಶಿವು ಎಸ್.ನೀಲಿ, ಪಾಲಕರು, ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು. ಹಿರಿಯ ಶಿಕ್ಷಕ ಎಚ್.ಎಸ್.ಮೆಟಗುಡ್ಡ ಸ್ವಾಗತಿಸಿದರು.



ತಾಯಿಯ ಪ್ರೇರಣೆಯಿಂದ ಲೆಫ್ಟಿನೆಂಟ್ ಅಧಿಕಾರಿಯಾದ ಚಿನ್ಮಯ

ಮಹಾಂತೇಶ ಅಂಬಿಗೇರ

ದಿಗಂತ ವಿಶೇಷ

ಕೆರೂರ: ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾರೆ. ಪಟ್ಟಣದ ಚಿನ್ಮಯ ಘಟ್ಟದ ಎಂಬ ವಿದ್ಯಾರ್ಥಿ ಈಗ ಭಾರತಿಯ ಸೇನೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ಆಯ್ಕೆಯಾಗಿರುವುದು ಪಟ್ಟಣಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಬಾಲ್ಯದಿಂದಲೂ ಸೇನೆಯಲ್ಲಿ ಉನ್ನತಮಟ್ಟದ ಅಧಿಕಾರಿಯಾಗಬೇಕೆಂಬ ಕನಸುಹೊತ್ತ ವಿದ್ಯಾರ್ಥಿನಿ, ತಾಯಿಯ ಪ್ರೇರಣೆಯಿಂದ ಇಂದು ಸೇನಾಧಿಕಾರಿ ಆಯ್ಕೆಯಾಗಿದ್ದಾಳೆ. ವಿದ್ಯಾರ್ಥಿನಿ ಮೊದಲು ಪ್ರಾಥಮಿಕ ಶಿಕ್ಷಣವನ್ನು ಬಾಗಲಕೋಟೆಯ ಬಸವೇಶ್ವರ ಇಂಟರ್ ನ್ಯಾಶನಲ್ ಸ್ಕೂಲನಲ್ಲಿ ಮುಗಿಸಿ ಬೆಂಗಳೂರಿನ ಚೇತನ ವಸತಿ ಶಾಲೆಯಲ್ಲಿ ಪ್ರೌಢ ಶಿಕ್ಷಣ ಪಡೆದುಕೊಂಡಿದ್ದಾರೆ. ಪಿಯು ಶಿಕ್ಷಣವನ್ನು ಕೋಕಾ ರಾಜಸ್ಥಾನದಲ್ಲಿ ಮುಗಿಸಿದ ನಂತರ ಎನ್‌ಐಟಿ ಜೈಪುರದಲ್ಲಿ ಆರ್ಕಿಟೆಕ್ಚರ್ ಪದವಿ ಪಡೆದುಕೊಂಡಿದ್ದಾರೆ. ಮೂಲತ ವ್ಯಾಪಾರಸ್ಥರ ಕುಟುಂಬದಲ್ಲಿ ಜನಿಸಿದ ಚಿನ್ಮಯ, ತಂದೆ ಶಂಕರ ಘಟ್ಟದ. ತಾಯಿ ಗೌರಿ ಶಂಕರ ಘಟ್ಟದ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು. ಮೂವರು ಮಕ್ಕಳು ಕೂಡಾ ಉನ್ನತ ಶಿಕ್ಷಣ ಪಡೆದು ತಂದೆ-ತಾಯಿಯ ಕಿರ್ತಿ ಹೆಚ್ಚಿಸಿದ್ದಾರೆ.



> ಬಾಲ್ಯದಿಂದಲೂ ಸೇನೆಗೆ ಸೇರಬೇಕೆಂಬ ಆಸೆ ಇತ್ತು, ಇಂದು ಆಸೆ ನಮ್ಮ ತಾಯಿಯ ಪ್ರೇರಣೆ ಹಾಗೂ ಪ್ರೋತ್ಸಾಹದಿಂದ ನನಸಾಗಿದೆ.
>
> ■ ಚಿನ್ಮಯ ಘಟ್ಟದ

ವಿದ್ಯಾರ್ಥಿನಿ ತಾಯಿ ಗೌರಿ ಘಟ್ಟದ ಅವರು ಮಗಳನ್ನು ಹೇಗಾದರೂ ಮಾಡಿ ಸೇನಯಲ್ಲಿ ಉನ್ನತ ಅಧಿಕಾರಿಯನ್ನಾಗಿ ಮಾಡಬೇಕಂಬ ಛಲ ತೊಟ್ಟ ತಾಯಿ, ಊರಿನ ಹಾಗೂ ಪರ ಊರಿನ ಮಾಜಿ ಸೈನಿಕರು ಸೇನಾ ಅಧಿಕಾರಿಗಳಿಂದ ಮಾಹಿತಿ ಪಡೆದು ಮಗಳಿಗೆ ಪ್ರೋತ್ಸಾಹ ನೀಡಿದ್ದಾರೆ. ವಿದ್ಯಾರ್ಥಿನಿಯು ಮಾ.26ರಂದು ಬಿಹಾರದ ಗಯಾ ಪ್ರದೇಶಕ್ಕೆ ಸೇನೆಯ ತರಬೇತಿ ಪಡೆಯಲು ಹಾಜರಾಗಲಿದ್ದಾಳೆ.

ವಿಶೇಷ ಉಪನ್ಯಾಸ ಕಾರ್ಯಕ್ರಮ



ಜಮಖಂಡಿ: ಸ್ಥಳೀಯ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದಿಂದ ಆಧುನಿಕ ಮಹಿಳೆಯರು ಎಂಬ ವಿಷಯದಡಿ ವಿಶೇಷ ಉಪನ್ಯಾಸ ಆಯೋಜಿಸಿದ್ದರು. ಸಾಹಿತಿ, ಶಿವಮೊಗ್ಗ ಸಹ್ಯಾದ್ರಿ ವಿಜ್ಞಾನ ಕಾಲೇಜು ವಿಶ್ರಾಂತ ಪ್ರಾಂಶುಪಾಲರಾದ ಪ್ರೊ.ಗಾಯತ್ರಿದೇವಿ ಸಜ್ಜನ, ವಿಶ್ರಾಂತ ಪ್ರಾಂಶುಪಾಲ ಪ್ರೊ.ವೀಣಾ ಎಂ ಕೆ, ನಿವೃತ್ತ ಕನ್ನಡ ಉಪನ್ಯಾಸಕ ಪ್ರೊ.ಮಂಜುಳಾ ಕೆ, ವಿಶ್ರಾಂತ ಪ್ರಾಂಶುಪಾಲ ಪ್ರೊ.ವಾಗ್ದೇವಿ ಎಚ್.ಎಂ ಉಪನ್ಯಾಸ ನೀಡಿದರು. ಕುಲಸಚಿವ ಆಯ್ಕೆ ಶ್ರೇಣಿ ಸೋಮಲಿಂಗ ಗೆಣ್ಣೂರ, ಕೆ. ಎ. ಎಸ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೌಲ್ಯಮಾಪನ ಕುಲಸಚಿವ ಪ್ರೊ.ಲತಾ ಕೆ ಪಿ., ಹಣಕಾಸು ಅಧಿಕಾರಿ ಡಾ.ಚಿದಾನಂದ ಢವಳೇಶ್ವರ, ಪ್ರಸಾರಾಂಗ ವಿಭಾಗ ನಿರ್ದೇಶಕ ಡಾ.ಮಲ್ಲಿಕಾರ್ಜುನ ಎಂ ಮರಡಿ ಇದ್ದರು.

ಪ್ರತಿಜ್ಞಾ ಸ್ವೀಕಾರ ಸಮಾರಂಭ

ಜಮಖಂಡಿ: ನಗರದ ಬಿಎಲ್‌ಡಿಇ ಸಂಸ್ಥೆಯ ನರ್ಸಿಂಗ್ ಕಾಲೇಜು, ಬಿಎಸ್ಸಿ ನರ್ಸಿಂಗ್ 5ನೇ ಬ್ಯಾಚ್ ವಿದ್ಯಾರ್ಥಿಗಳ ಲ್ಯಾಂಪ್ ಲೈಟಿಂಗ್ ಮತ್ತು ಪ್ರತಿಜ್ಞಾ ಸ್ವೀಕಾರ ಸಮಾರಂಭ ನಡೆಯಿತು. ವಿಜಯಪುರದ ಬಿ.ಎಂ.ಪಾಟೀಲ ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಪ್ರಿನ್ಸಿಪಾಲ್ ಡಾ.ತೇಜಸ್ವಿನಿ ವಲ್ಲಭ, ಉದ್ಘಾಟಿಸಿದರು. ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಡೀನ್ ಫ್ಯಾಕಲ್ಟಿ ಆಫ್ ನರ್ಸಿಂಗ್ ಹಾಗೂ ಪ್ರಿನ್ಸಿಪಾಲ್ ಡಾ.ದೀಲಿಪ್ ನಟೇಕರ್, ಆಡಳಿತಾಧಿಕಾರಿ ಪ್ರೊ.ಎಸ್.ಎಚ್.ಲಗಳಿ, ಪ್ರಾಂಶುಪಾಲ ಡಾ.ವೀರಭದ್ರಪ್ಪ ಜಿ.ಮೆಂಡಗುಡ್ಲಿ, ಶೃತಿ ಸಂಗಂ, ಚಿಕ್ಕರಡ್ಡಿ ಅಂಕಿತಾ, ವಂದನಾ ಚಿಕ್ಕರಡ್ಡಿ ಇದ್ದರು. ಅಕ್ಷತಾ ಅರಳಿಮಟ್ಟಿ, ಶಶಿಕಲಾ ಮುಧೋಳ ಪ್ರತಿಜ್ಞೆ ಸ್ವೀಕರಿಸಿದರು. ಸಹ ಪ್ರಾಧ್ಯಾಪಕಿ ಶಿವಲೀಲಾ ಸರವಾಡ ನೆರವೇರಿಸಿದರು.



ಸಹೋದರತೆಯ ಪ್ರತೀಕ ರಂಜಾನ್



ಜಮಖಂಡಿ: ನಗರದ ಜೋಗಿಮಡ್ಡಿ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರ ರಂಜಾನ ಹಬ್ಬದಲ್ಲಿ ಮಾಜಿ ಶಾಸಕ ಆನಂದ ನ್ಯಾಮಗೌಡ ಭಾಗವಹಿಸಿ ಶುಭ ಕೋರಿದರು.

ಈ ವೇಳೆ ಮಾತನಾಡಿದ ಅವರು, ರಂಜಾನ್ ಮುಸ್ಲಿಂ ಬಾಂಧವರಿಗೆ ದೊಡ್ಡ ಹಬ್ಬವಾಗಿದ್ದು, ಒಂದು ತಿಂಗಳು ಉಪವಾಸ ವ್ರತ ಆಚರಿಸಿ ಕೊನೆಯ ದಿನ ಎಲ್ಲರೂ ಕೂಡಿ ಸಾಮೂಹಿಕ ನಮಾಜ್ ಸಲ್ಲಿಸಿ ಹಬ್ಬ ಆಚರಣೆಯು ಸಾಮಾಜಿಕ ಕಳಕಳಿ ತೋರಿಸುತ್ತದೆ ಎಂದರು. ಈ ಹಬ್ಬದಿಂದ ಪ್ರೀತಿ ಸೌಹಾರ್ದತೆ, ಸಹನೆ ಕಲಿಯಬೇಕು. ಭಾರತ ಸರ್ವ ಧರ್ಮದ ಶಾಂತಿಯ ತೋಟವಾಗಿದೆ. ಇಲ್ಲಿ ಎಲ್ಲರೂ ಕೂಡಿಯೇ ಜೀವಿಸಬೇಕು. ಪ್ರತಿಯೊಬ್ಬರೂ ಕೂಡಾ ಸಹೋದರರಂತೆ ಬಾಳಬೇಕು. ಸಮಾರಸ್ಯ ಜೀವನವೇ ನಮ್ಮ ಧ್ಯೇಯವಾಗಿದೆ ಎಂದರು. ರಸ್ತೆಯ ಅಗಲೀಕರಣದ ಬೇಡಿಕೆಯಿತ್ತು. ಅದಕ್ಕಾಗಿ ಈ ಈದ್ಗಾ ಮೈದಾನಕ್ಕೆ ಹೆಚ್ಚುವರಿಯಾಗಿ ಸ್ಥಳಾವಕಾಶ ನೀಡಲು ಶ್ರಮಿಸುತ್ತೇವೆ. ಪ್ರಾಮಾಣಿಕವಾಗಿ ನಾವು ಸರ್ಕಾರದಲ್ಲಿ ಒತ್ತಾಯಿಸಿ ನಿಮ್ಮ ಕಾರ್ಯ ಮಾಡಿಕೊಡುತ್ತೇವೆ. ನಮ್ಮ ಪ್ರಯತ್ನ ಮಾಡಿ ಮುಂದಿನ ದಿನದಲ್ಲಿ ಇದನ್ನು ಸರಿಪಡಿಸುತ್ತೇವೆ ಎಂದರು. ಡಿವೈಎಸ್‌ಪಿ ಜಹೀರ ಅಹಮ್ಮದ ಎಸ್, ಅರ್ಬನ ಬ್ಯಾಂಕ್ ನಿರ್ದೇಶಕ ಫಕೀರಸಾಬ್ ಬಾಗವಾನ, ಮೌಲಾನಾ ಸೇರಿದಂತೆ ಸಮಾಜ ಬಾಂಧವರು ಇದ್ದರು.

ಕಮತಗಿಯಲ್ಲಿ ರಂಜಾನ್ ಸಂಭ್ರಮ

ಕಮತಗಿ: ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸ್ಲಿಮರಿಂದ ಮೌಲಾನಾ ಮುಸ್ತಾಕ್ ಬಿಳೆಕುದುರಿ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಈ ಇಸ್ಲಾಂ ಧರ್ಮದ ಪವಿತ್ರ ಮಾಸವಾದ ರಂಜಾನ್ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಿದರು.

ಈ ಹಬ್ಬವು ಬಡವರಿಗೆ ಮತ್ತು ಅಶಕ್ತರಿಗೆ ಸಹಾಯ ಮಾಡುವದು ಈ ಹಬ್ಬದ ಒಂದು ಮುಖ್ಯ ಭಾಗವಾಗಿದೆ. ರಂಜಾನ್ ಹಬ್ಬದ ಕೊನೆಯ ದಿನದಂದು ನಮಾಜ್ ಮುಗಿಸಿದ ನಂತರ ಪಟ್ಟಣದ ಆರಾಧ್ಯ ದೇವರಾದ ಹೊಳೆ ಹುಚ್ಚೇಶ್ವರ ಸ್ವಾಮೀಜಿಗಳು ಈದ್ಗಾ ಮೈದಾನಕ್ಕೆ ಆಗಮಿಸಿ ರಂಜಾನ್ ಹಬ್ಬದ ಎಲ್ಲ ಮುಸ್ಲಿಂ ಬಾಂಧವರಿಗೆ ಶುಭಕೋರಿದರು.

ರಾಜೇಸಾಬ್ ಕೋಲ್ಹಾರ್ ,ಶಬ್ಬೀರ್ ಬಿಜಾಪುರ, ಯಾಸಿನ್ ಬಿಳೇಕುದರಿ, ವಾಯದ್ ಬಿಳೇಕುದರಿ, ಮಾಬಲಿ ಗಂಜಿಹಾಳ, ಯಾಸಿನ್ ಮಕಾನದಾರ, ಉಸಮಾನ ಉನಚಗಿ, ದಸಗಿರಸಾಬ ತಹಸೀಲ್ದಾರ, ವಕೀಲರು ಎನ್.ಎಂ. ತಹಸೀಲ್ದಾರ, ರಾಜೇಸಾಬ ಗುಬ್ಯಾಡಿ, ಬಾಷಾ ಇಳಕಲ್, ಬಂದು ಕೋಲಾರ, ರಜಾಕಸಾಬ ಕೋರಿಶೆಟ್ಟಿ, ದಾದು ಕೋಲಾರ. ಯಾಕೂಬ್ ಶಿರೂರ, ಅಬ್ದುಲ್ ಡೊಣ್ಣಿಗುಡ್ಡ ಸೇರಿದಂತೆ ಮುಸ್ಲಿಂ ಸಮಾಜದ ಗುರುಹಿರಿಯರು ಹಾಗೂ ಯುವಕರು ಪಾಲ್ಗೊಂಡಿದ್ದರು.



ಮುಸ್ಲಿಂ ಬಾಂಧವರಿಂದ ಸಂಭ್ರಮದ ರಂಜಾನ್



ಮುಧೋಳ: ನಗರದಲ್ಲಿ ಮುಸ್ಲಿಂ ಬಾಂಧವರು ಪವಿತ್ರ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಬೆಳಗ್ಗೆ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಪ್ರಾರ್ಥನೆ ಸಲ್ಲಿಸಿ ನಂತರ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಎಲ್ಲರೂ ಪರಸ್ಪರ ಸಹೋದರತ್ವ ಭಾವದಿಂದ ಜೀವನ ನಡೆಸಲಿ ಎಂದು ಪ್ರಾರ್ಥಿಸಿದರು. ಮೌಲಾನಾ ಇಲಿಯಾಸ್, ಇನಾಮದಾರ, ಮೌಲಾನಾ ಇಕ್ಬಾಲ್ ನಗಾರ್ಚಿ, ಹುಸೇನ ತುಕಾನಟ್ಟಿ, ಹಿರಿಯರಾದ ಐ.ಎಚ್.ಅಂಬಿ, ಅಂಜುಮನ ಸಂಸ್ಥೆಯ ಅಧ್ಯಕ್ಷ ಬಿಲಾಲ್ ಬಾಲದಾರ, ಕಾಂಗ್ರೆಸ್ ಯುವ ನಾಯಕ ವಿನಯ್ ತಿಮ್ಮಾಪುರ, ಎಸ್.ಬಿ.ಹುಬ್ಬಳ್ಳಿ, ಬಾದಷ ರಾಮದುರ್ಗ, ನಗರಸಭೆ ಮಾಜಿ ಅಧ್ಯಕ್ಷ ಮಂಜುನಾಥ ಮಾನೆ, ಆರೀಫ್ ಪಠಾಣ, ಬಾದಷ ಕೌಜಲಗಿ, ಶಿರಾಜ ಹೊರಟ್ಟಿ, ನಬಿ ಜಾಗಿರದಾರ, ಮಹಿಬೂಬ ಕೌಜಲಗಿ, ಸಾಹೇಬಲಾಲ ನದಾಫ, ಎನ್.ಆರ್. ಉಸ್ತಾದ, ಖಾಜಾಮೀನ್ ಬಾಗವಾನ, ಬಿ.ಎಚ್.ಬೀಳಗಿ, ಮೈನೋದ್ದಿನ್ ಅಂಬಿ, ಯುಸೂಫ್ ಜಮಾದಾರ, ಎಂ.ಎಚ್.ನದಾಫ, ವೈ.ಎಂ.ಹುಲಕುಂದ, ಮುಸಾ ರಾಯಬಾಗ, ಇಬ್ರಾಹಿಂ ಸಾರವಾನ, ನಜೀರ ಪಠಾಣ, ಎಂ ಆರ್ ಅಮ್ಮಲಜೇರಿ, ಯುಸೂಫ್ ಚಾಂದ್, ಮುನ್ನಾ ಆಸಂಗಿ, ಬಶೀರ ಚಾಂದ, ಹಾಗೂ ಅಂಜುಮನ್ ಸಂಸ್ಥೆಯ ಸದಸ್ಯರು ತಾಲೂಕಿನ ಸಾವಿರಾರು ಮುಸ್ಲಿಂ ಬಾಂಧವರು ಪಾಲ್ಗೊಂಡಿದ್ದರು.

ಸಾಮೂಹಿಕ ವಿವಾಹ ಬಡವರಿಗೆ ವರದಾನ

ಬಾದಾಮಿ: ಇಂದಿನ ಆಧುನಿಕ ದಿನಮಾನಗಳಲ್ಲಿ ಮದುವೆ ಮಾಡುವುದು ಬಹಳ ಕಷ್ಟದ ಕೆಲಸ. ಲಕ್ಷಾಂತರ ರೂ. ಸಾಲ ಮಾಡುವುದರ ಬದಲಾಗಿ ಸಾಮೂಹಿಕ ವಿವಾಹಗಳಿಂದ ಬಡವರಿಗೆ ಅನುಕೂಲವಾಗುತ್ತವೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು. ತಾಲೂಕಿನ ಮುತ್ತಲಗೇರಿ ಗ್ರಾಮದಲ್ಲಿ ವಾಲ್ಮೀಕಿ ಸಮಾಜದ ನಾಯ್ಕಪ್ಪಜ್ಜ ಜಾತ್ರಾ ನಿಮಿತ್ತ ವತಿಯಿಂದ ಹಮ್ಮಿಕೊಂಡಿದ್ದ ಸರ್ವ ಧರ್ಮ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ವಧು ವರರಿಗೆ ಶುಭ ಕೋರಿ ಮಾತನಾಡಿದರು. ಬಡವರು ಸಾಲ ಮಾಡಿ ಮಕ್ಕಳ ಮದುವೆ ಮಾಡಿ ಮಂಗಳೂರು, ಗೋವಾದಲ್ಲಿ ದುಡಿಯಲು ಹೋಗುತ್ತಾರೆ. ಆಡಂಬರದ ಮದುವೆ ಮಾಡುವುದನ್ನು ಬಿಟ್ಟು ಸರಳವಾಗಿ ವಿವಾಹ ಮಾಡಬೇಕೆಂದು ಮನವಿ ಮಾಡಿದರು. 23 ಜೋಡಿ ನವದಂಪತಿಗಳು ನವ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಕಾರ್ಯಕ್ರಮದಲ್ಲಿ ಮುಖಂಡರಾದ ಬಸವರಾಜ ತಳವಾರ, ಫಕೀರಪ್ಪ ಪೂಜಾರ, ರೇವಣಸಿದ್ದಪ್ಪ ನೋಟಗಾರ, ಮಹಾಂತೇಶ ಹಟ್ಟಿ ಸೇರಿದಂತೆ ವಾಲ್ಮೀಕಿ ಸಮಾಜದ ಮುಖಂಡರು, ಗ್ರಾಮದ ಗುರು ಹಿರಿಯರು ಯುವಕರು ಹಾಜರಿದ್ದರು.



ಕಿರುಸುದ್ದಿ

ಸಿಡಿಲಿಗೆ 12 ಕುರಿ ಸಾವು

ದೇವರಹಿಪ್ಪರಗಿ: ತಾಲೂಕಿನ ಆಲಗೂರ ಗ್ರಾಮದಲ್ಲಿ ಗುರುವಾರ ಸಂಜೆ 5.45ಗಂಟೆಗೆ ಸಿಡಿಲು ಬಡಿದು 12 ಕುರಿಗಳು ಸಾವನ್ನಪ್ಪಿದ ದುರ್ಘಟನೆ ನಡೆದಿದೆ. ಗ್ರಾಮದ ಮಡಿವಾಳಪ್ಪ ಶರಣಪ್ಪ ಮಾಕೊಂಡ ಎಂಬುವರ ಕುರಿಗಳು ಸಾವನ್ನಪ್ಪಿದೆ. 12 ಕುರಿಗಳ ಸಾವಿನಿಂದ ರೈತನಿಗೆ ಸುಮಾರು 2.5ಲಕ್ಷ ರೂಪಾಯಿ ನಷ್ಟವಾಗಿದೆ. ಸೂಕ್ತ ಪರಿಹಾರ ನೀಡುವಂತೆ ಸರ್ಕಾರಕ್ಕೆ ರೈತ ಒತ್ತಾಯಿಸಿದ್ದಾನೆ. ಕಂದಾಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಲಕೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಇಂದಿನಿಂದ ಜಾತ್ರೆ

ಬಸವನಬಾಗೇವಾಡಿ: ತಾಲೂಕಿನ ಯರನಾಳ ಅವಿಮುಕ್ತ ಸುಕ್ಷೇತ್ರ ಸಂಸ್ಥಾನ ವಿರಕ್ತಮಠದ ಕರ್ತೃ ಜಗದ್ಗುರು ಪಂಪಾಪತಿ ಶಿವಯೋಗಿಗಳ ಜಾತ್ರಾ ಮಹೋತ್ಸವ ಜ್ಞಾನ ದಾಸೋಹಿ ಸಂಗನಬಸವ ಮಹಾಸ್ವಾಮಿಗಳ 125ನೇ ಜಯಂತಿ ನೂತನ ಮಹಾದ್ವಾರ ಲೋಕಾರ್ಪಣೆ, ದ್ವಿಸಹಸ್ರ ಮಾತೆಯರ ಉಡಿ ತುಂಬುವ ಕಾರ್ಯಕ್ರಮ ಹಾಗೂ ಮಹಾರಥೋತ್ಸವ ಸಮಾರಂಭ ಗುರು ಸಂಗನಬಸವ ಸ್ವಾಮೀಜಿಯವರ ನೇತೃತ್ವದಲ್ಲಿ ಮಾ.22ರಿಂದ 24ರ ವರೆಗೆ 3ದಿನ ನಡೆಯಲಿದೆ. ಮಾ.22ರಂದು ಬೆಳಗ್ಗೆ 11ಗಂಟೆಗೆ ಷಟಸ್ಥಲ ಧ್ವಜಾರೋಹಣ, ಜ್ಞಾನ ದಾಸೋಹಿ ಸಂಗನಬಸವ ಸ್ವಾಮಿಗಳ ಮಹಾಪುರಾಣ ಮಂಗಲೋತ್ಸವ ಹಾಗೂ ಉತ್ತರ ಕರ್ನಾಟಕದ ಸಾಂಸ್ಕೃತಿಕ ಬಿಂಬಿಸುವ ವಿಶೇಷ ಸದ್ಭಾವನಾ ಬುತ್ತಿ ಊಟ ನಡೆಯಲಿದೆ. ಸಂಜೆ 7-30ಕ್ಕೆ ಜ್ಞಾನ ದಾಸೋಹಿ ಸಂಗನಬಸವ ಶ್ರೀಗಳ 125ನೇ ಜಯಂತಿ ಹಾಗೂ ಜಾತ್ರಾ ಮಹೋತ್ಸವ ಉದ್ಘಾಟನೆ ಹಾಗೂ ಆದರ್ಶ ವೈದ್ಯ ದಂಪತಿಗಳಿಗೆ ಸನ್ಮಾನ. ಮಾ.23ರಂದು ಬೆಳಗ್ಗೆ 10.30ಕ್ಕೆ ನೂತನ ಮಹಾದ್ವಾರ ಲೋಕಾರ್ಪಣೆ, ದ್ವಿಸಹಸ್ರ ಮಾತೆಯರ ಉಡಿ ತುಂಬುವ ಕಾರ್ಯಕ್ರಮ ಹಾಗೂ ಶ್ರೇಷ್ಠ ಮಹಿಳಾ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ. ಸಂಜೆ 7.30ಕ್ಕೆ ಜ್ಞಾನ ದಾಸೋಹಿ ಸಂಗನಬಸವ ಸ್ವಾಮಿಗಳ 125ನೇ ಜಯಂತಿ ನಡೆಯಲಿದೆ. ಮಾ.24ರಂದು ಗುರು ಸಂಗನಬಸವ ಸ್ವಾಮಿಗಳ ಪಾದಪೂಜೆ ನಂತರ ಸಿಂಹಾಸನಾರೋಹಣ ಕಿರೀಟಧಾರಣೆ, ಮಹಾರಥೋತ್ಸವ ಜರಗುವುದು ಎಂದು ಜಾತ್ರಾ ಉತ್ಸವ ಸಮಿತಿ ತಿಳಿಸಿದೆ.

ನಾಳೆಯಿಂದ ಉಚಿತ ಶಿಬಿರ

ವಿಜಯಪುರ: ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಶಲ್ಯತಂತ್ರ ವಿಭಾಗದ ವತಿಯಿಂದ ಉರುಪು ಮೂಲವ್ಯಾದಿ ಸಮಸ್ಯೆ ಕುರಿತು ಉಚಿತ ತಪಾಸಣೆ, ಚಿಕಿತ್ಸೆ ಶಿಬಿರ ಮಾ.23ರಿಂದ 27ರ ವರೆಗೆ ಐದು ದಿನ ನಡೆಯಲಿದೆ. ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ, ಶಲ್ಯತಂತ್ರ ವಿಭಾಗದ ಮುಖ್ಯಸ್ಥ ಡಾ.ಪ್ರಸಾದಶಕ್ತಿ ಗಣ್ಣೂರ ತಿಳಿಸಿದ್ದಾರೆ.

ಕಷ್ಟ ಸುಖ ಸಮಾನವಾಗಿ ಸ್ವೀಕರಿಸಿ: ಜೋಶಿ

ಬಸವನಬಾಗೇವಾಡಿ: ನಿಂಬಕದಳದಿಂದ ಶರೀರವನ್ನು ಗಟ್ಟಿಗೊಳಿಸುತ್ತದೆ, ನೂರು ವರ್ಷ ಆಯುಷ್ಯ ಹೆಚ್ಚಿಸುತ್ತದೆ. ಜೀವನದಲ್ಲಿ ಕಷ್ಟ ಸುಖವನ್ನು ಸಮಾನವಾಗಿ ಸ್ವೀಕರಿಸುವುದು ಸೂರ್ಯನ ಆದಾನಕಾಲದಲ್ಲಿ ಶಕ್ತಿ ಬರಬೇಕೆಂದು ಹೇಳಿ ಬೇವು ಬೆಲ್ಲ ಸೇವಿಸುವುದು, ಜೀವನದಲ್ಲಿ ಕಷ್ಟ ಅಷ್ಟೇ ಬರಬಾರದು, ಸುಖನ್ನು ಅಷ್ಟೇ ಬರಬಾರದು ಬೇವು ಬೆಲ್ಲದ ಹಾಗೇ ಕಷ್ಟ-ಸುಖ ಎರಡನ್ನು ಸಮಾನವಾಗಿ ಸ್ವೀಕರಿಸಬೇಕೆಂದು ವಿಜಯಪುರ ಜಿಲ್ಲಾ ಕಾರ್ಯವಾಹ ಡಾ.ಸಂಜೀವ ಜೋಶಿ ಹೇಳಿದರು.

ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಮ್ಮಿಕೊಂಡ ಯುಗಾದಿ ಉತ್ಸವದಲ್ಲಿ ಮಾತನಾಡಿದ ಅವರು, ವಸಂತ ಋತುವಿನಲ್ಲಿ ಶರೀರದಲ್ಲಿ ಕಫ ಜಾಸ್ತಿಯಾಗಿರುತ್ತದೆ, ಬೇವು ಬೆಲ್ಲ ಸ್ವೀಕರ ಮಾಡುವುದರಿಂದ ಕಫ ಶಮನ ಮಾಡಲು ಸಾಧ್ಯವಾಗುತ್ತದೆ. ವಸಂತ ಋತುವಿನಲ್ಲಿ ಎಲ್ಲ ಗಿಡ-ಮರಗಳ ಎಲೆಗಳು ಚಿಗುರಿರುತ್ತವೆ ಇಲ್ಲಿ ಹೊಸದನ್ನು ಕಾಣುತ್ತೇವೆ ಹಿಂದೂ ಕ್ಯಾಂಲೆಂಡರ ಪ್ರಕಾರ ಬಹಳಷ್ಟು ಬದಲಾವಣೆ ಕಾಣುತ್ತೇವೆ, ಹಿಂದೂಗಳ ಹೊಸ ವರ್ಷ ಯುಗಾದಿ, ಯುಗಾದಿ ಆಚರಣೆ ಮಾಡುವುದು ಉತ್ತಮ ಎಂದರು. ಅನೀಲ ಆಗರವಾಲ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಹಾದೇವ ಕೂಡಗಿ, ಶಶಿಕಾಂತ ಸ್ಥಾವರಮಠ, ಶಿವು ಹಂಚಿನಾಳ, ಸುಶಾಂತ, ಕಾಶಿನಾಥ ಅವಟಿ, ರಾಚಯ್ಯ ಗಣಕುಮಾರಮಠ ಇದ್ದರು.

ಸಂಗಮೇಶ ಮೆಳ್ಳಿಗೇರಿ ನಿಧನ

ವಿಜಯಪುರ: ನಗರದ ಅಯ್ಯಪ್ಪ ಸ್ವಾಮಿ ನಗರ ನಿವಾಸಿ ಹಾಗೂ ಮುದ್ದೇಬಿಹಾಳ ಗ್ರೇಡ್-2 ತಹಶೀಲ್ದಾರ್ ಸಂಗಮೇಶ ಮೆಳ್ಳಿಗೇರಿ(54) ನಿಧನರಾಗಿದ್ದಾರೆ. ಮೃತರು ಗ್ರೇಡ್-2 ತಹಶೀಲ್ದಾರರಾಗಿ ಚಡಚಣ ಮುಧೋಳ ಮತ್ತು ಬಬಲೇಶ್ವರ ತಾಲೂಕುಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಮೃತರಿಗೆ ಪತ್ನಿ, ಓರ್ವ ಪುತ್ರ, 2 ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.





ಮುದ್ದೆಬಿಹಾಳ: ಅಂತಾರಾಷ್ಟ್ರೀಯ ಲಯನ್ಸ್ ಸಂಘಟನೆಯ ತಾಲೂಕು ಘಟಕದ ಸಾಮಾಜಿಕ ಸೇವೆ ಹಾಗೂ ಚಟುವಟಿಕೆ ಗಮನಿಸಿ ಲಯನ್ಸ್ ಸಂಸ್ಥೆಯ ವಿಜಯಪುರ ಜಿಲ್ಲಾ ಆಡಳಿತಾಧಿಕಾರಿ ಜೈಮೂಲ ನಾಯಕ, ಕೀರ್ತಿ ನಾಯಕ ಅವರು ಪ್ರಶಂಸಾ ಪತ್ರ ಬುಧುವಾರ ನೀಡಿದರು. ತಾಲೂಕು ಘಟಕದ ಅಧ್ಯಕ್ಷ ವೆಂಕನಗೌಡ ಪಾಟೀಲ್, ಮಹೇಂದ್ರ ಓಸ್ವಾಲ, ದೀಪಾ ದೇಸಾಯಿ, ಮಲ್ಲಿಕಾರ್ಜುನ ಬಿದರಕುಂದಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಪವಿತ್ರ ರಂಜಾನ್: ಸಾಮೂಹಿಕ ಪ್ರಾರ್ಥನೆ

ಇಂಡಿ: ಪವಿತ್ರ ರಂಜಾನ್ ಅಂಗವಾಗಿ ಶನಿವಾರ ನಗರದ ಚವಡಿಹಾಳ ರಸ್ತೆ ಈದ್ಗಾ ಮೈದಾನದಲ್ಲಿ ಧರ್ಮ ಗುರು ಮೌಲಾನಾ ಶಾಕೀರ್ ಹುಸೇನ್ ಕಾಸ್ಮಿ ಮುಸ್ಲಿಂಬಾಂದವರು ಸಾಮೂಹಿಕವಾಗಿ ಪ್ರಾರ್ಥನೆ ಮಾಡಿದರು. ಈ ವೇಳೆ ಶಾಸಕ ಯಶವಂತರಾಯಗೌಡ ಪಾಟೀಲ ಭಾಗವಹಿಸಿ ಮುಸ್ಲಿಂ ಬಾಂಧವರಿಗೆ ಹಬ್ಬದ ಶುಭಾಶಯ ತಿಳಿಸಿದರು. ರಂಜಾನ ಹಬ್ಬದ ಪ್ರಯುಕ್ತವಾಗಿ ಒಂದು ತಿಂಗಳ ಪರ್ಯಂತರ ಉಪವಾಸ ಆಚರಿಸಿದ ಬಳಿಕ ಜಕಾತ್, ಫಿತ್ರ ದಾನ ಮಾಡಿದರು. ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಹೊಸ ಬಟ್ಟೆಗಳನ್ನು ಧರಿಸಿ ಗುಂಪು ಗುಂಪಾಗಿ ಇದ್ಗಾ ಮೈದಾನ ಮಸಿದಿಗಳತ್ತ ತೆರಳಿ ಮುಸ್ಲಿಮ ಬಾಂದವರು ಪ್ರಾರ್ಥನೆ ನಂತರ ಒಬ್ಬರಿಗೊಬ್ಬರು ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಧರ್ಮ ಗುರುಗಳಾದ ಮೌಲಾನಾ ಶಾಕೀರ್ ಹುಸೇನ್ ಕಾಸ್ಮಿ ಮುಫ್ತಿ, ಅಬ್ದುಲ್ ರೆಹಮಾನ್ ಅರಬ್, ಹಫೀಜ್ ಫಿರೋಜ್ ಬಾಗವಾನ, ಶಾಸಕ ಯಶವಂತರಾಯಗೌಡ ಪಾಟೀಲ, ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ಇಲಿಯಾಸ ಬೋರಾಮಣಿ, ಸತ್ತಾರ ಬಾಗವಾನ, ಜಾವೀದ ಮೋಮಿನ್, ಜೈನುದ್ದಿನ್ ಬಾಗವಾನ, ಪ್ರಶಾಂತ ಕಾಳೆ, ಜಟ್ಟಪ್ಪ ರವಳಿ, ಅಖಿಲ ಹವಾಲ್ದಾರ, ಭರಮಣ್ಣ ಕಾವಳ್ಳಿ, ಮಹಿಬೂಬ್ ಅರಬ, ರಫೀಕ್ ಇಂಡೀಕರ, ರೇಸಾ ಅಸ್ತಕೇರ, ಅಸ್ಲಾಂ ಪಟೇಲ್, ಅಯೂಬ್ ಬಾಗವಾನ, ಅಬ್ದುಲ್ ರಹಿದ್ ಅರಬ, ಬಶೀರ್ ಇನಾಮದಾರ, ಷರೀಫ್ ಪಟೇಲ್, ಅಬ್ದುಲ್ ರಶೀದ್ ಮುಗಳಿ, ಶಬ್ಬೀರ ಖಾಜಿ, ನಜರ್ ಪಠಾಣ, ಯುನುಸ್ ರಾವಕರ್, ಹಸನ ಮುಜಾವರ, ಅಸ್ಲಾಂ ಕಡಣಿ ಇದ್ದರು.



ಇಂಡಿ: ಪವಿತ್ರ ರಂಜಾನ್ ಅಂಗವಾಗಿ ಶನಿವಾರ ನಗರದ ಚವಡಿಹಾಳ ರಸ್ತೆ ಈದ್ಗಾ ಮೈದಾನದಲ್ಲಿ ಧರ್ಮ ಗುರು ಮೌಲಾನಾ ಶಾಕೀರ್ ಹುಸೇನ್ ಕಾಸ್ಮಿ ಮುಸ್ಲಿಂಬಾಂದವರು ಸಾಮೂಹಿಕವಾಗಿ ಪ್ರಾರ್ಥನೆ ಮಾಡಿದರು. ಹುಮಾಯೂನ್ ಬಿಳವಾರ, ರಿಯಾಜ್ ಗೌಂಡಿ, ಮಹಿಬೂಬ್ ಮಕಾನದಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಚಕ್ರವರ್ತಿ ಸದಾಶಿವ ಮಠದ ಜಾತ್ರಾ ಮಹೋತ್ಸವ । ಶಿವಯ್ಯ ಶ್ರೀ ಸಲಹೆ

ಕಷ್ಟದಲ್ಲಿದ್ದವರಿಗೆ ಕೌದಿಯಂತೆ ರಕ್ಷಣೆ ನೀಡಿ

ವಿಜಯಪುರ: ಕಷ್ಟದಲ್ಲಿರುವವರಿಗೆ ಕೌದಿಯಂತೆ ರಕ್ಷಣೆ ನೀಡಬೇಕು. ವಿಶ್ವದಲ್ಲಿಯೇ ಕೌದಿ ಜಾತ್ರೆ, ಕೌದಿ ಸಿಂಹಾಸನವಿರುವುದು ಕತ್ನಳ್ಳಿ ಮಠದಲ್ಲಿಯೇ ಎಂದು ಕತಕನಹಳ್ಳಿಯ ಗುರುಚಕ್ರವರ್ತಿ ಸದಾಶಿವ ಮಠದ ಶಿವಯ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಕತಕನಹಳ್ಳಿ ಗ್ರಾಮದ ಆರಾಧ್ಯದೈವ ಶ್ರೀಗುರು ಚಕ್ರವರ್ತಿ ಸದಾಶಿವ ಮಠದ ಜಾತ್ರಾ ಮಹೋತ್ಸವದ ಕೌದಿ ಜಾತ್ರೆಯಲ್ಲಿ ಅವರು ಆಶೀರ್ವಚನ ನೀಡಿ ಮಾತನಾಡಿದರು. ಕೌದಿಯಲ್ಲಿ ಕಲಾತ್ಮ, ಸೃಜನಾತ್ಮಕ ಗುಣಗಳಿವೆ. ಮತ್ತೊಬ್ಬರಿಗೆ ಹೊದಿಕೆಯಾಗಿ, ಚಳಿ, ಗಾಳಿಯಿಂದ ರಕ್ಷಣೆ ನೀಡುತ್ತದೆ. ಆ ಗುಣಗಳು ನಮ್ಮಲ್ಲಿಯೂ ಬರಬೇಕು. ಅಂದರೆ ಕಷ್ಟದಲ್ಲಿರುವ, ದುಃಖದಲ್ಲಿರುವ ಜನರ ರಕ್ಷಣೆ ಮಾಡಬೇಕು. ಅವರಿಗೆ ನೇರವಾಗಿ ಸಹಾಯ ಮಾಡಬೇಕು ಆಗಲೇ ಕೌದಿಯಂತೆ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದರು.

ಎಲೆ ಮಾನವ ಕೈದಿಯಾಗಿ ಜೈಲಿನಲ್ಲಿ ಇರುವುದಕ್ಕಿಂತ ಭೋದಿಯಾಗಿ ಕೌದಿಯೊಳಗಿರುವುದು ಲೇಸು ಎಂದು ಸದಾಶಿವ ಶಿವಯೋಗಿ ಸಿದ್ಧರಾಮ ಅಂದರೆ, ಜೈಲಿನಲ್ಲಿ ಇರುವ ಕೈದಿಯಾಗುವುದಕ್ಕಿಂತ ಕೌದಿಯೊಳಗಿನ ಗುರುಮಂತ್ರ ಭೋದಕನಾಗಿ ಬದುಕಿದರೆ ನಿಶ್ಚಿಂತೆಯಾಗಿ ಇರಬಹುದು. ಈ ಕೌದಿ ಹೊದಿಕೆಯಾಗಿ, ಮತ್ತೊಬ್ಬರಿಗೆ ಆಶ್ರಯ ನೀಡಿದೆ. ಕೌದಿಯಂತೆ ನಾವು ಕೂಡ ಮತ್ತೊಬ್ಬರ ಬದುಕು ಸುಧಾರಿಸಬಹುದು. ತಾಯಂದಿರು ಹೊಲೆಯುವ ಕೌದಿ ಕೆಂಪು, ಬಿಳಿ, ಹಸಿರು, ಕೇಸರಿ ಸೇರಿದಂತೆ ಎಲ್ಲ ಬಣ್ಣ, ಹಳೆದು, ಹೊಸದು ಎಲ್ಲ ತರಹದ ಬಟ್ಟೆ ತುಕುಡಿಗಳನ್ನು ಸೇರಿಸಿ ಹೊಲೆಯುತ್ತಾರೆ ಎಂದರು.

ಕೌದಿಯೊಳು ಕಲೆ ಉಂಟು, ಹಾದಿಯೊಳು ಗತಿ ಉಂಟು, ಗುರುಮಂತ್ರದೊಳು ಮುಕ್ತಿ ಉಂಟು, ಅಯ್ಯಾ ನೀನು ಮಹಾತ್ಮರ ಜೊತೆ ಆಡುವ ಮಾತಿನಲ್ಲಿ ಮಿತಿ ಉಂಟಿರಲಿ ಎನ್ನಯ ನಿಶ್ಚಿಂತ ಶಿವನ್ನಿರೂಪಾಧೀಶ ಕೌದಿಯಲ್ಲಿ ಕಲೆಯಿದೆ. ಕೌದಿ ನನ್ನ ತಾಯಿ ಶಂಕ್ರೆಮ್ಮ ಹೊಲೆಯುತ್ತಿದ್ದಳು, ನನ್ನ ತಾಯಿ ನನಗೆ ಕೌದೆಪ್ಪ, ಕೌದೀಶ ಎಂದು ಕರೆಯುತ್ತಿದ್ದಳು ಆಗಿಂದಲೇ ನನಗೆ ಕೌದಿ ಮೇಲೆ ಪ್ರೀತಿ. ಎಲ್ಲ ಭಕ್ತರು ಮಂದಿನ 5 ನೆ ವರ್ಷಕ್ಕೆ ಶ್ರೀಮಠಕ್ಕೆ ಕೌದಿ ಅರ್ಪಿಸಬೇಕು. ಅದು ತಾಯಂದಿಯರು, ಅಂದರೆ ನೀವುಗಳು ಕೈಯಿಂದ ಹೊಲೆದು ತರಬೇಕು ಎಂದರು.



> ಕೌದಿಗೆ ಎಲ್ಲರೊಂದಿಗೆ ಬೆರೆಯುವ ಅಭೇದ ಶಕ್ತಿ ಇದೆ. ಮೊದಲಿನ ಅವಿಭಕ್ತ ಕುಟುಂಬಗಳು ಇಂದು ಮರೆಯಾಗುತ್ತಿವೆ, ಕಾರಣ ನಮ್ಮಲ್ಲಿ ಭೇದ ಬುದ್ಧಿಯಿದೆ. ಆ ಬುದ್ಧಿಯಿಂದ ವಿಭಕ್ತಕುಟುಂಬಗಳು ಹೆಚ್ಚಾಗುತ್ತಿರುವುದು ವಿಷಾದದ ಸಂಗತಿ.
>
> ■ ಶಿವಯ್ಯ ಸ್ವಾಮೀಜಿ, ಕತಕನಹಳ್ಳಿ

ಕಾನೂನು ಹೋರಾಟಕ್ಕೆ ಸಿದ್ಧ: ಪಾಟೀಲ

ಮುದ್ದೇಬಿಹಾಳ: ತಾವು ಕಾಂಗ್ರೆಸ್‌ನಲ್ಲಿ ಇದ್ದಾಗ ತಾಲೂಕಿನ ಹಾಗೂ ಜಿಲ್ಲೆಯ ಯಾವ ಶಾಸಕ ಅಥವಾ ಸಚಿವರ ಮನೆಗೆ ತಲೆತಗ್ಗಿಸಿ ಹೋಗಿಲ್ಲ, ರಾಜ್ಯ ನಾಯಕರುಗಳೇ ನನ್ನ ಜನಸೇವೆ ಹಾಗೂ ಜನಪ್ರಿಯತೆ ಗಮನಿಸಿ ವಿಧಾನಸಭೆಗೆ ಟಿಕೆಟ್ ನೀಡಿದ್ದರು. ತಮ್ಮ ಒಂದು ಬಾರಿ ಶಾಸಕ ಅವಧಿಯಲ್ಲಿ ತಾಲೂಕಿನ ರಸ್ತೆ, ಕುಡಿಯುವ ನೀರಿನ ಯೋಜನೆ ಮಾಡಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಯಾವುದೇ ಬೇನಾಮಿ ಆಸ್ತಿ ಅಥವಾ ಕಮಿಷನ್ ಪಡೆದಿಲ್ಲ ಎಂದು ಮಾಜಿ ಶಾಸಕ ಎ.ಎಸ್.ಪಾಟೀಲ್ (ನಡಹಳ್ಳಿ) ಹೇಳಿದರು.

ದಾಸೋಹ ಭವನ ನಿಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರಾಗಿದ್ದಾಗ ತಾಳಿಕೋಟೆ ಪುರಸಭೆಯ ಜಾಗದಲ್ಲಿ ಆಡಳಿತ ಸೌಧ ನಿರ್ಮಿಸಬೇಕೆಂದು ಯೋಚಿಸಿದ್ದೆ. ಆದರೆ ಇಂದು ನಾಲ್ಕೈದು ಕಿಮೀ ದೂರ ಇರುವ, ತಮ್ಮ ಬೆಂಬಲಿಗರ ಬಡಾವಣೆ ನಿರ್ಮಾಣದ ಪಕ್ಕದಲ್ಲಿ ಆಡಳಿತ ಸಹೋದರ ನಿರ್ಮಿಸಲು ತೀರ್ಮಾನಿಸಲಾಗಿದೆ. ಇದರ ಹಿಂದೆ ಭೂಗಳ್ಳರ ಕೈವಾಡವಿದೆ. ಮೂರು ವರ್ಷದಲ್ಲಿ ಹಿಂದಿನ ಸರ್ಕಾರದ ಘೋಷಿತ ಯೋಜನೆ ನಿಧಾನವಾಗಿ ಮಾಡುತ್ತಿದ್ದಾರೆ. ಮತ ಕ್ಷೇತ್ರದಲ್ಲಿ ಭೂ ಸೇನಾ ಇಲಾಖೆ ಮೂಲಕ ಖಾಸಗಿ ಅವರಿಗೆ ಕೆಲಸ ನೀಡಿ, ಕಮಿಷನ್ ವ್ಯವಹಾರ ನಡೆದಿದೆ. 40 ವರ್ಷ ಶಾಸಕರಾಗಿ ಇದ್ದುಕೊಂಡು ದೇವರಾಜ ಅರಸ ಕಾಲದಲ್ಲಿ ಜಾರಿಗೆ ಬಂದ ಉಳುವವನೇ ಭೂಮಿಯ ಒಡೆಯ ಎಂಬ ಕಾನೂನು ಅನ್ವಯ ಭೂಮಿ ಬಿಟ್ಟುಕೊಡದೆ ತಾವು ದಾನಿ ಎಂದು ಹೇಳುವುದಕ್ಕೆ ಒಂದು ಮಿತಿ ಇದೆ. ಅದು ಬ್ರಿಟಿಷರ ಕಾಲದ ಸರ್ಕಾರಿ ಭೂಮಿ ಎಂದರು.

ಬೂದಿಹಾಳ ಪಿರಾಪೂರ ನೀರಾವರಿ ಯೋಜನೆಗೆ ಎಂ.ಬಿ.ಪಾಟೀಲರು ಮಹತ್ವ ನೀಡದ್ದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎದುರು ಹಾಕಿಕೊಂಡು ತಾವು ಕಾಂಗ್ರೆಸ್ ತ್ಯಜಿಸಿದ್ದು, ಯಾರಿಗೂ ತಲೆಬಾಗಿಲ್ಲ, ಎಲ್ಲಾ ದಾಖಲೆಗಳೊಂದಿಗೆ ಕಾನೂನು ಕ್ರಮ ಎದುರಿಸುತ್ತೇನೆ ಎಂದರು.

ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ, ಕಾರ್ಯದರ್ಶಿ ಗಿರೀಶಗೌಡ ಪಾಟೀಲ, ತಾಲೂಕು ಉಸ್ತುವಾರಿ ಮದನಸ್ವಾಮಿ ಹಿರೇಮಠ, ಕೆಂಚಪ್ಪ ಬಿರಾದರ, ಸಿದ್ದರಾಜ ಹೊಳಿ, ಮಲ್ಲಣ್ಣ ತಂಗಡಗಿ, ಹರೀಶನಾಟಿಕರ, ಶಂಕರಗೌಡ ಶಿವಣಗಿ, ವೈ.ಟಿ.ಗೌಡರ, ಶ್ರೀಶೈಲ ದೊಡಮನಿ, ಅಶೋಕ ರಾಥೋಡ, ಬಸವರಾಜ ಚಿತ್ತರಗಿ, ಸಂಗನಗೌಡ ಪಾಟೀಲ, ಚೇತನ ಸಂಗಮ, ಸಂಗಮ್ಮ ದೇವರಳ್ಳಿ, ಸಹನಾ ಬಡಿಗೇರ, ಅಪ್ಪಣ್ಣ ದನ್ನೂರ. ಮಹಾಂತೇಶ ಗಂಗನಗೌಡರ, ನಾಗೇಶ ಕವಡಿಮಟ್ಟಿ, ಸಂತೋಷ ಗೌಡರ ಇತರರು ಉಪಸ್ಥಿತರಿದ್ದರು.



ಇಂದು ರೋಣಿಹಾಳಕ್ಕೆ ಗವಿಶ್ರೀ

ಕೊಲ್ಹಾರ: ತಾಲೂಕಿನ ರೋಣಿಹಾಳ ಗ್ರಾಮದ ಯಡೆಯೂರ ಸಿದ್ಧಲಿಂಗೇಶ್ವರ ಪೂರ್ವ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಮಾ.22ರಂದು ಭಾನುವಾರ ಸಂಜೆ 4 ಗಂಟೆಗೆ ಕೊಪ್ಪಳ ಗವಿಮಠದ ಗವಿಸಿದ್ಧೇಶ್ವರ ಶ್ರೀಗಳು ನೆರವೇರಿಸುವರು ಎಂದು ರೋಣಿಹಾಳ ಎಸಿವಿವ ಸಂಘದ ಅಧ್ಯಕ್ಷ ರಮೇಶ ಮಮದಾಪುರ ತಿಳಿಸಿದ್ದಾರೆ. ಕಾಖಂಡಕಿ ಗುರುದೇವಾಶ್ರಮದ ಪಪೂ ಶಿವಯೋಗೀಶ್ವರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿ ಜ್ಯೋತಿ ಬೆಳಗಿಸಲಿದ್ದಾರೆ. ರೋಣಿಹಾಳದ ರಾಜಶೇಖರಯ್ಯ ಹಿರೇಮಠ, ರಾಚೋಟಯ್ಯ ಹಿರೇಮಠ, ಮಹಾಂತಯ್ಯ ಮಠಪತಿ ಸಾನ್ನಿಧ್ಯ ವಹಿಸುವರು. ಎಸಿವಿವ ಸಂಘದ ಅಧ್ಯಕ್ಷ ರಮೇಶ ಮಮದಾಪುರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶರಣುಸಾವುಕಾರ ನ್ಯಾಮಗೌಡ್ರ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು, ಗ್ರಾಮದ ಗಣ್ಯರು ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಪ್ರಜಾಸೌಧಕ್ಕೆ ಸ್ಥಳ ವಿರೋಧಿಸಿ 26ನೇ ದಿನಕ್ಕೆ ಧರಣೆ

ತಾಳಿಕೋಟೆ: ತಾಲೂಕಿನ ಮೇಲೆಶ್ವರ ಗ್ರಾಮದ ಸಮೀಪ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಆಯ್ಕೆ ಮಾಡಿರುವ ಸ್ಥಳದ ವಿರುದ್ಧ ತಾಳಿಕೋಟೆ ಪಟ್ಟಣದಲ್ಲಿ ಭುಗಿಲೆದ್ದ ಜನಾಕ್ರೋಶ ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವು ಶನಿವಾರ 25ನೇ ದಿನಕ್ಕೆ ಕಾಲಿಟ್ಟಿದ್ದು, ಬಸವೇಶ್ವರ ವೃತ್ತ ಹೋರಾಟದ ಕೇಂದ್ರವಾಗಿಯೇ ಅಲ್ಲದೆ ಜನರ ನ್ಯಾಯ ಹೋರಾಟದ ಸಂಕೇತವಾಗಿ ರೂಪಾಂತರಗೊಂಡಿದೆ.

ಈ ಹೋರಾಟಕ್ಕೆ ಇದೀಗ ಭಾವಸಾರ ಕ್ಷತ್ರಿಯ ಸಮಾಜ ತಾಳಿಕೋಟೆ ವತಿಯಿಂದ ಘೋಷಣಾತ್ಮಕ ಹಾಗೂ ಸಂಪೂರ್ಣ ಬೆಂಬಲ ವ್ಯಕ್ತವಾಗಿದ್ದು, ಸಮಾಜದ ಹಿರಿಯರು, ಯುವಕರು, ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಹೊಸ ತಿರುವು ನೀಡಿದರು.

ಪ್ರಜಾಸೌಧ ಪಟ್ಟಣದಲ್ಲೇ ನಿರ್ಮಿಸಬೇಕು ಎಂಬ ಒಂದೇ ಬೇಡಿಕೆ ಗಟ್ಟಿಯಾಗಿ ಪ್ರತಿಧ್ವನಿಸಲಾಯಿತು.

ಧರಣಿ ವೇದಿಕೆಯಲ್ಲಿ ಮಾತನಾಡಿದ ಮುಖಂಡರಾದ ಆರ್.ಎಸ್. ಪಾಟೀಲ, ವಿಜಯಸಿಂಗ್ ಹಜೇರಿ, ಪರಶುರಾಮ ತಂಗಡಗಿ ಮಾತನಾಡಿ, ಸರ್ಕಾರದ ನಿರ್ಧಾರವನ್ನು ತೀವ್ರವಾಗಿ ಖಂಡಿಸಿ, ಪಟ್ಟಣದಿಂದ ನಾಲ್ಕು, ಐದು ಕಿಲೋಮೀಟರ್ ದೂರದ ನಿರ್ಜನ ಪ್ರದೇಶದಲ್ಲಿ ಪ್ರಜಾಸೌಧ ನಿರ್ಮಿಸುವುದು ಜನರೊಂದಿಗೆ ದ್ರೋಹ ಮಾಡುವಂತಾಗಿದೆ'' ಎಂದು ಕಿಡಿಕಾರಿದರು.

ಭಾವಸಾರ ಕ್ಷತ್ರಿಯ ಸಮಾಜದ ಮುಖಂಡರು ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿ, 'ಹೋರಾಟ ಸಮಿತಿಯ ಕರೆ ಬಂದಾಗ ನಾವು ಎಲ್ಲರೂ ಒಗ್ಗಟ್ಟಿನಿಂದ ಈ ಹೋರಾಟವನ್ನು ಮತ್ತಷ್ಟು ಬಲಪಡಿಸುತ್ತೇವೆ,' ಎಂದು ಭರವಸೆ ನೀಡಿದರು. ಇದರಿಂದ ಹೋರಾಟಕ್ಕೆ ಭಾರೀ ಬಲ ಸಿಕ್ಕಿದೆ ಎಂದರು.

ಅರವಿಂದ ಹಂಚಾಟೆ, ರಾಜು ಹಂಚಾಟೆ, ಕಿಶನ್ ಲೋಕರೆ ಸೇರಿದಂತೆ ಹಲವರು ಮಾತನಾಡಿ, ಹೋರಾಟದ ಅಗತ್ಯತೆ ವಿವರಿಸಿದರು. ದತ್ತು ಮಹೇಂದ್ರಕರ, ಸಂಜು ಹಂಚಾಟೆ, ರಾಜು ತಿರುಪತಿ ಹಂಚಾಟೆ, ವಿಜಯ ದರ್ಜಿ, ವಿ.ಬಿ. ಲೋಕರೆ, ಕೃಷ್ಣ ಮಹೇಂದ್ರಕರ, ರಘು ಬಾಸುತ್ಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಹೋರಾಟ ಸಮಿತಿಯ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್.ಎಸ್.ಪಾಟೀಲ(ಕುಚಬಾಳ), ಮುತ್ತಪ್ಪ ಚಮಲಾಪುರ, ಕಾಶಿನಾಥ ಮುರಾಳ, ಪರಶುರಾಮ ತಂಗಡಗಿ, ವಿಜಯಸಿಂಗ್ ಹಜೇರಿ ಸೇರಿದಂತೆ ಹಲವು ಪ್ರಮುಖರು ಧರಣೆಯಲ್ಲಿ ಪಾಲ್ಗೊಂಡಿದ್ದರು.



ಗ್ರಾಮೀಣ ಭಾಗದಲ್ಲಿ ಸಹಕಾರಿ ಕ್ಷೇತ್ರ ಬಲವಾದರೆ ಆರ್ಥಿಕ ಪರಿಸ್ಥಿತಿ ಸುಧಾರಣೆ

ಬಸವನಬಾಗೇವಾಡಿ: ಸಹಕಾರಿ ಕ್ಷೇತ್ರ ಗ್ರಾಮೀಣ ಭಾಗದಲ್ಲಿ ಬಲವರ್ಧನೆಗೊಂಡಾಗ ಮಾತ್ರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸಾಧ್ಯ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ವಿಜಯಪುರ ರಸ್ತೆಯಲ್ಲಿನ ಚಿಕ್ಕೊಂಡ ಅವರ ವಾಣಿಜ್ಯ ಮಳಿಗೆಯಲ್ಲಿ ಶುಕ್ರವಾರ ಬನಶಂಕರಿ ಕೋ-ಆಪರೇಟಿವ್ ಬ್ಯಾಂಕಿನ ನೂತನ ಶಾಖೆ ಉದ್ಘಾಟಿಸಿ ಮಾತನಾಡಿದ ಅವರು, ಈ ಕ್ಷೇತ್ರದ ಜನ ಸಾಮಾನ್ಯರ ಆರ್ಥಿಕ ಬೆನ್ನೆಲುಬಾಗಿ ಕಾರ್ಯನಿರ್ವಹಿಸಬೇಕು, ಜನರಿಗೆ ಉಳಿತಾಯ, ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಸ್ವಾವಲಂಬನೆ ಬದುಕಿಗೆ ಉತ್ತಮ ವೇದಿಕೆಯನ್ನು ಒದಗಿಸಲಿ ಎಂದರು.



ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ, ಮನಗೂಳಿ ಹಿರೇಮಠದ ಅಭಿನವ ಸಂಗನಬಸವ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ವೇ.ಮೂ.ಪಂಚಾಕ್ಷರಿಯ್ಯ ಕಾಳಹಸ್ತೇಶ್ವರಮಠ, ಶಿವಾನಂದ ಈರಕಾರ ಮುತ್ಯಾ, ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕಿ ಸಂಯುಕ್ತ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಟಿಎಪಿಎಂಎಸ್ ಅಧ್ಯಕ್ಷ ಚಂದ್ರಶೇಖರಗೌಡ ಪಾಟೀಲ, ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಶಿವನಗೌಡ ಬಿರಾದಾರ, ಅಶೋಕ ಕಲ್ಲೂರ, ನಿಖೀಲ ಪಾಟೀಲ, ಬನಶಂಕರಿ ಕೋ-ಆಪರೇಟಿವ್ ಸೊಸೈಯ ಅಧ್ಯಕ್ಷ ಸೋಮನಾಥ ಪಾಟೀಲ, ಉಪಾಧ್ಯಕ್ಷ ಮಂಜುನಾಥ ಕಡಕೋಳ(ಕುಂಬಾರ) ಆಡಳಿತ ಮಂಡಳಿಯ ನಿರ್ದೇಶಕ ರಾಜೇಶ ತಿಪ್ಪನಗೌಡರ, ಸಿದ್ದು ಹಿರೇಮಠ, ಶ್ರೀಧರ ನಾಯಕೋಡಿ, ಸತೀಶ ಚಿಕ್ಕೊಂಡ, ಜೀವನ ಮ್ಯಾಗೇರಿ, ರಿಯಾನ ಬಾಗವಾನ, ಸಿದ್ದು ಕಡ್ಲಿಮಟ್ಟಿ, ಶಶಿಧರ ದೇಸಾಯಿ ನಿರ್ದೇಶಕಿ ಅಂಬಿಕಾ ನಾಯಕೋಡಿ, ರೋಹಿಣಿ ಡಂಬಳ ಇದ್ದರು.

ರಂಜಾನ್ ಆಚರಣೆಯಲ್ಲಿ ಎಂಬಿಪಾ ಭಾಗಿ



ವಿಜಯಪುರ: ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಇಂದು ಶನಿವಾರ ರಂಜಾನ್ ಅಂಗವಾಗಿ ನಗರದ ದಖನಿ ಶಾಹಿ ಈದ್ಗಾದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ನಾಡಿನಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸಲಿ. ಉತ್ತಮ ಮಳೆಯಾಗಿ, ಒಳ್ಳೆಯ ಬೆಳೆ ಬೆಳೆಯಲಿ. ಎಲ್ಲೆಡೆ ಶಾಂತಿ, ಸೌಹಾರ್ದತೆ ನೆಲೆಸಲಿ ಎಂದು ಪ್ರಾರ್ಥನೆ ಸಲ್ಲಿಸಿದರು. ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ನಾನಾ ಮುಖಂಡರು ಮತ್ತು ಜನರೊಂದಿಗೆ ಸಚಿವರು ಶುಭಾಷಯ ವಿನಿಮಯ ಮಾಡಿದರು. ಸಹೋದರತೆ ಮತ್ತು ಸಮಾನತೆ ಹಾಗೂ ಸರ್ವರ ಹಿತ ಬಯಸುವ ಈ ಹಬ್ಬ ಎಲ್ಲರಿಗೂ ಒಳಿತನ್ನುಂಟು ಮಾಡಲಿ ಎಂದು ಸಚಿವರು ಶುಭ ಹಾರೈಸಿದರು. ನಾನಾ ಮುಖಂಡರು ಉಪಸ್ಥಿತರಿದ್ದರು.

55 ತೊಲೆ ಬೆಳ್ಳಿ ಬೆತ್ತ ವಿತರಣೆ: ಮೆರವಣಿಗೆ

ನಾಲತವಾಡ: ಪಟ್ಟಣದಲ್ಲಿ ಯುಗಾದಿ ದಿನದಂದು ಶರಣ ವೀರೇಶ್ವರರಿಗೆ 55 ತೊಲೆ ಬೆಳ್ಳಿ ಬೆತ್ತವನ್ನು ಗುಡಿಓಣಿಯ ಶೀ ಶರಣ ವೀರೇಶ್ವರ ಗೆಳೆಯರ ಬಳಗದವರು ಸಮರ್ಪಿಸಿದರು. ಸಕಲ ವಾದ್ಯಗಳೊಂದಿಗೆ, ಗಂಗನಗೌಡರ ಓಣಿಯ ಗಚ್ಚಿನ ಬಾವಿಯಲ್ಲಿ ವೇದಮೂರ್ತಿ ಪ್ರಭುಸ್ವಾಮಿ ಹಿರೇಮಠ್ ಪೂಜಾ ಕಾರ್ಯಕ್ರಮವನ್ನು ಬೆಳ್ಳಿ ಬೆತ್ತಕ್ಕೆ ಅಭಿಷೇಕ ಮಾಡುವ ಮೂಲಕ ಕಾರ್ಯ ನೆರವೇರಿಸಿದರು. ಶರಣ ವೀರೇಶ್ವರ ಕಮಿಟಿಯವರು ವೀರೇಶ್ವರ ಗೆಳೆಯರ ಬಳಗದ ಅಧ್ಯಕ್ಷ ವೀರೇಶ ಸ್ಥಾವರಮಠ, ಚನ್ನಪ್ಪಗೌಡ ಹಾದಿಮನಿ ಅವರಿಗೆ ಸನ್ಮಾನಿಸಿದರು. ಎಂ.ಎಸ್.ಪಾಟೀಲ, ನಾನಾಸಾಹೇಬ ದೇಶಮುಖ ಗುಪ್ರಸಾದ ದೇಶಮುಖ,ಬಿ.ಎಂ.ತಾಳಿಕೋಟಿ, ಎಂ.ಬಿ.ಅಂಗಡಿ ಶಶಿದರ ಬಂಗಾರಿ, ಸಂಗಣ್ಣ ಕುಳಗೇರಿ, ಅಮರೇಶ ಮೇಟಿ, ಶಿವಪುತ್ರಯ್ಯ ಸ್ಥಾವರಮಠ, ಬಸವರಾಜ ಹಂಪನಗೌಡ, ಗಂಗಯ್ಯ ಕಂಠಿಮಠ, ಆನಂದ ಗೌಡರ ಇದ್ದರು.



ಸಂಭ್ರಮದ ರಂಜಾನ್ ಆಚರಣೆ



ಚಡಚಣ: ರೇವತಗಾಂವ ಗ್ರಾಮದಲ್ಲಿ ಪವಿತ್ರ ರಂಜಾನ್ ಹಬ್ಬವನ್ನು ಮುಸ್ಲಿಂ ಬಾಂಧವರೊಂದಿಗೆ ಆಚರಣೆ ಮಾಡಿದರು.

ಈ ವೇಳೆ ಮಾತನಾಡಿದ ಕಾಂಗ್ರೆಸ್ ತಾಲೂಕು ಘಟಕದ ಅಧ್ಯಕ್ಷ ಆರ್.ಡಿ. ಹಕ್ಕೆ, ರಂಜಾನ್ ಎಂದರೆ ಕೇವಲ ಹಬ್ಬವಲ್ಲ, ಅದು ಜೀವನಕ್ಕೆ ಮಾರ್ಗದರ್ಶಕವಾದ ಪಾಠವಾಗಿದೆ. ಅಹಂಕಾರ ತೊರೆದು ಸರಳ ಜೀವನ ನಡೆಸುವುದು. ಬಡವರ ನೋವಿಗೆ ಸ್ಪಂದಿಸುವ ಮನಸ್ಸು ಬೆಳೆಸುವುದು ಇದರ ಮುಖ್ಯ ಉದ್ದೇಶ ಎಂದು ಹೇಳಿದರು. ಸುಳ್ಳು, ಕೋಪ, ಅಸೂಯೆ ಮತ್ತು ದ್ವೇಷದಿಂದ ದೂರವಿರುವುದೇ ನಿಜವಾದ ರಂಜಾನ್ ಆಚರಣೆಯ ಸಂದೇಶವಾಗಿದೆ, ಪ್ರೀತಿ, ಸಹನೆ ಮತ್ತು ಸತ್ಯದ ಮಾರ್ಗದಲ್ಲಿ ನಡೆಯುವುದೇ ನಿಜವಾದ ಉಪವಾಸದ ಅರ್ಥವಾಗಿದೆ, ರಂಜಾನ್ ತಿಂಗಳು ಕೇವಲ ಮುಸ್ಲಿಮರಿಗೆ ಮಾತ್ರವಲ್ಲ, ಸಂಪೂರ್ಣ ಮಾನವಕುಲಕ್ಕೆ ಶಾಂತಿ, ಸಹೋದರತ್ವ ಮತ್ತು ಮಾನವೀಯತೆ ಸಂದೇಶ ನೀಡುತ್ತದೆ ಎಂದು ಹೇಳಿದರು.

ಗ್ರಾಮದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಗ್ರಾಮದ ಮುಸ್ಲಿಮ್ ಬಾಂಧವರು ತಮ್ಮ ತಮ್ಮ ಮನೆಗಳಲ್ಲಿ ಸುರುಕುಂಬ ಸೇರಿದಂತೆ ಅನೇಕ ಸಿಹಿ ಪದಾರ್ಥ ಮಾಡಿದ್ದು ಹಿಂದು-ಮುಸ್ಲಿಮ್ ಎಲ್ಲರಿಗೂ ಸಿಹಿ ಪದಾರ್ಥ ಉಣಬಡಿಸಿ ಸಂತೋಷಪಟ್ಟರು. ರಜಾಕ ನದಾಫ್, ಮಹಾದೇವ ಬಿರಾದಾರ, ರಾಜು ಜಿಗಜೀವಣಿ, ಶಿವಾನಂದ ಕುಂಬಾರ, ಸಿಕಂದರ ನದಾಫ, ಸಿದ್ರಾಮ ಮಾಳಿ, ಶರಣಪ್ಪ ಕುಂಬಾರ ಉಪಸ್ಥಿತರಿದ್ದರು.

ನಾಲತವಾಡದಲ್ಲಿ ಸಂಭ್ರಮದ ರಂಜಾನ್

ನಾಲತವಾಡ: ರಂಜಾನ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಈದ್ಗಾ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಸಹಸ್ರ ವರ್ಷಗಳ ವಾಡಿಕೆಯಂತೆ ಸಮಾಜದ ಗಣ್ಯರಾದ ಅಬ್ದುಲಗನಿಸಾಬ್ ಖಾಜಿಯವರ ಮನೆಗೆ ತೆರಳಿದ ಆಯಾ ಮಸೀದಿಗಳ ಮುಖಂಡರು ಅವರನ್ನು ಜೊತೆಗೆ ಬರಮಾಡಿಕೊಂಡು ಈದ್ಗಾ ತೆರಳಿದರು. ಮೌಲಾನಾ ಮೈನುದ್ದಿನ್ ಖಾಜಿ ಪ್ರಾರ್ಥನೆ ಸಲ್ಲಿಸಿದರು, ಅಲ್ಲಾಬಕ್ಷ ಖಾಜಿ ಮಾತನಾಡಿದರು.

ಪ್ರಾರ್ಥನೆಯ ನಂತರ ಅಗಲಿದ ಜೀವಿಗಳ ಸಮಾಧಿಗಳಿಗೆ ತೆರಳಿ ಅವರ ಆತ್ಮಕ್ಕೆ ಶಾಂತಿ ಕೋರಿ ವೈಯಕ್ತಿಕವಾಗಿ ಪ್ರಾರ್ಥನೆ ಸಲ್ಲಿಸಿದರು. ಆಗಮಿಸಿದ ಬಡವ ದೀನ ದಲಿತರಿಗೆ ಕೈಲಾದಷ್ಟು ದಾನ ನೀಡಿದ ಮುಸ್ಲಿಂ ಬಾಂಧವರು ಪರಸ್ಪರ ಈದ್ ಮುಬಾರಕ್ ಎನ್ನುವ ಮೂಲಕ ಶುಭ ಕೋರಿದರು.

ಅಂಜುಮನ್ ಸಮಿತಿ ಅಧ್ಯಕ್ಷ ಎಲ್.ಎಚ್.ಅವಟಿ, ಉಪಾಧ್ಯಕ್ಷ ಬಾಶೇಸಾಬ್ ತಗ್ಗಿನಮನಿ, ಇಬರಾಯಿಂ ಮುಲ್ಲಾ ಸೇರಿದಂತೆ ಆಜಾದ್ ನಗರದ ಅನ್‌ಸೂರ್ಮಾ, ಜಾಮೀಯಾ, ಬಿಲಾಲ್, ಮೆಕ್ಕಾ ಮದಿನಾ ಮಸೀದಿಯ ಅಪಾರ ಮುಸ್ಲಿಂರು ಗಣ್ಯರು ಭಾಗವಹಿಸಿದ್ದರು.

ಈದ್ ವೇಳೆ ಯಾವದೇ ಘಟನೆಗಳು ಸಂಭಂದಿಸದಿರಲಿ ಎನ್ನುವ ಉದ್ದೇಶದಿಂದ ಸ್ಥಳಿಯ ಪೋಲೀಸ್ ಅಧಿಕಾರಿಗಳಾದ ಬಸವರಾಜ ಚಿಂಚೊಳ್ಳಿ, ಎಚ್.ಹಬ್ಬುಲಿ ಸೇರಿದಂತೆ ಭದ್ರತಾ ರಕ್ಷಕರು ಕಾರ್ಯ ನಿರ್ವಹಿಸಿದರು.



ಸಂಭ್ರಮದ ರಂಜಾನ್: ಸಾಮೂಹಿಕ ಪ್ರಾರ್ಥನೆ



ನಿಡಗುಂದಿ: ಪಟ್ಟಣ ಸೇರಿದಂತೆ ತಾಲೂಕಾದ್ಯಂತ ಮುಸ್ಲಿಂ ಬಾಂಧವರು ಶನಿವಾರ ರಂಜಾನ್ ಹಬ್ಬ ಸಡಗರ, ಸಂಭ್ರಮದಿಂದ ಆಚರಿಸಿದರು.

ಬೆಳಗ್ಗೆ ಮಸೀದಿಗಳಿಗೆ ತೆರಳಿ ಸಾಮೂಹಿಕ ಪ್ರಾರ್ಥನೆ, ಈದ್ ಸಂದೇಶ, ಪ್ರವಚನ ಆಲಿಸಿ ಪರಸ್ಪರ ಈದ್ ಶುಭ ಕೋರಿದರು. ಪಟ್ಟಣದ ಜಾಮೀಯಾ ಮಸೀದಿ ಬಳಿ ನೆರೆದ ಮುಸ್ಲಿಂರು ತಕಬೀರಾ

ಹೇಳುತ್ತಾ ಬಜಾರ್ ರಸ್ತೆ, ಹಳೆ ಬಸ್ ನಿಲ್ದಾಣ ಮಾರ್ಗವಾಗಿ ಹೊರವಲಯದ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಮೌಲಾನಾ ಆಸೀಫ್ ಚಪ್ಪರಬಂದ ಪ್ರಾರ್ಥನೆ ಮಾಡಿಸಿದರು. ಹಾಫಿಜ್ ಜಾವೀದ ಸೌದಾಗಾರ ಧರ್ಮೋಪದೇಶ ನೀಡಿದರು. ಅಂಜುಮನ್ ಅಧ್ಯಕ್ಷ ಎಂ.ಎಂ.ಮುಲ್ಲಾ, ಮುಖಂಡ ಹುಸೇನಬಾಷಾ ಲಷ್ಕರಿ, ಹಾಜಿ ಜಾಕೀರ್ ಬೇಪಾರಿ, ಲಾಲಸಾಬ ಬಾಣಕಾರ, ರಾಜಾಸಾಬ ಬಾಣಕಾರ, ಮೌಲಾಸಾಬ್ ಅತ್ತಾರ, ಅಲಿ ಚಪ್ಪರಬಂದ, ರಮಜಾನ ನದಾಫ್, ರಾಜು ನದಾಫ್, ಮೈಬುಬಸಾಬ ಮುಲ್ಲಾ, ಲಾಲಸಾಬ ಹೆರಕಲ್ಲ,

ಇಮಾಮಸಾಬ ಮಾಲ್ದಾರ, ಯೂಸುಫ್ ಜೈನಾಪುರ, ಹಸನ್ ಡೊಂಗ್ರಿ ಹಾದಿಮನಿ, ಇಮಾಮಖಾನ್ ಪಾಟೀಲ, ಶಿಕ್ಷಕ ಶಖೀಲಅಹ್ಮದ ಕುಂಟೋಜಿ, ಯುಸೂಫ್ ಜೈನಾಪುರ, ದಾವಲಮಲೀಕ ನದಾಫ್, ನಜೀರ ಗುಳೇದ, ಮಹಬೂಬ ವಾಲಿಕಾರ, ಅಲ್ಲಾಬಕ್ಷ ಲಷ್ಕರಿ ಇತರರಿದ್ದರು.

ನೀರಿನ ಅರವಟಿಗೆ ಸ್ಥಾಪನೆ

ಬಸವನಬಾಗೇವಾಡಿ: ವಿವೇಕ ಬ್ರಿಗೇಡ ಸಂಸ್ಥೆ ವತಿಯಿಂದ ಬಸವೇಶ್ವರ ದೇವಾಲಯದ ಮುಂದೆ ಪ್ರತಿ ವರ್ಷದಂತೆ ಈ ವರ್ಷವೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಅರವಟಿಗೆ ಸ್ಥಾಪಿಸಲಾಯಿತು.

ಸ್ಥಳೀಯ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ಪ್ರತಿ ಜೀವಿಗೂ ನೀರು ಬೇಕೇ ಬೇಕು ಈ ಹಿನ್ನೆಲೆಯಲ್ಲಿ ಬೇಸಗೆ ಬಿಸಲಿನ ತಾಪತ್ರಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ದನ-ಕರುಗಳಿಗೆ ಪಕ್ಷಿ ಸೇರಿ ಪ್ರತಿಯೊಬ್ಬರಿಗೂ ನೀರು ಬೇಕು ಈ ಹಿನ್ನೆಲೆಯಲ್ಲಿ ವಿವೇಕ್ ಬ್ರಿಗೇಡ್ ಉತ್ತಮ ಕಾರ್ಯ ಮಾಡುತ್ತದೆ ಎಂದು ಹೇಳಿದರು.

ಊರಿನ ಹಿರಿಯರಾದ ಸಂಗಪ್ಪ ಡಂಬಳ, ಮುದುಕಪ್ಪ ಮಡಗೊಂಡ, ಗಜೇಂದ್ರ ಅಗರವಾಲ, ಮಣಿಕಂಠ ಕಲ್ಲೂರ, ಸಂಗಣ್ಣ ಹುಜರತಿ, ಪೃಥ್ವಿ ನಾಯ್ಕೋಡಿ, ಕಾಶಿನಾಥ ಅವಟಿ, ಪ್ರಭಾಕರ ಖೇಡದ, ಶಿವಾನಂದ ತೋಳನೂರ, ಶಂಕರ ಬ್ಯಾಕೋಳ, ಶಿವಾನಂದ ಪತ್ತಾರ, ಶಿವು ನಾವದಗಿ ಸೇರಿದಂತೆ ಇತರರು ಇದ್ದರು.



ಕಿರುಸುದ್ದಿ

ಸಾಮೂಹಿಕ ಪ್ರಾರ್ಥನೆಯಲ್ಲಿ ಶಾಸಕ ಅಜಯ್ ಸಿಂಗ್ ಭಾಗಿ



ಕಲಬುರಗಿ: ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಜಿಲ್ಲೆಯ ಜೇವರ್ಗಿ ಪಟ್ಟಣದ ಈದ್ಗಾ ಮೈದಾನದಲ್ಲಿ ಮುಸಲ್ಮಾನ ಬಾಂಧವರೊಡನೆ ಬೆರೆತು ಕೆಕೆಆರ್‌ಡಿಬಿ ಅಧ್ಯಕ್ಷ, ಜೇವರ್ಗಿ ಶಾಸಕ ಡಾ.ಅಜಯ್ ಸಿಂಗ್ ಅವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ತಿಂಗಳ ಕಾಲ ಉಪವಾಸ ವ್ರತ ಆಚರಿಸಿ, ಭಕ್ತಿ ಮತ್ತು ಶ್ರದ್ಧೆಯಿಂದ ಶನಿವಾರ ಮೈದಾನದಲ್ಲಿ ನೆರೆದಿದ್ದ ಸಾವಿರಾರು ಬಾಂಧವರು ವಿಶ್ವ ಶಾಂತಿ ಹಾಗೂ ಸೋದರತ್ವಕ್ಕಾಗಿ ಪ್ರಾರ್ಥಿಸಿದರು. ಪರಸ್ಪರ ಅಪ್ಪಿಕೊಂಡು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಭಾವೈಕ್ಯತೆ ಮೆರೆಯಲಾಯಿತು. ಈ ಸಂದರ್ಭದಲ್ಲಿ ಜೇವರ್ಗಿ ಪಟ್ಟಣದ ಸಕಲ ಮುಸಲ್ಮಾನ ಬಾಂಧವರು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಭಾಗಿಯಾಗಿದ್ದರು. ಈ ಪವಿತ್ರ ಹಬ್ಬವು ಎಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಆಶಿಸುತ್ತೇನೆಂದು ಹೇಳುವ ಮೂಲಕ ಡಾ. ಅಜ್ ಸಿಂಗ್ ಅವರು ಎಲ್ಲರಿಗೂ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯಗಳು ಕೋರಿದರು.

ದುರ್ಗಾಪರಮೇಶ್ವರಿಗೆ ಅಲಂಕಾರ



ಮುನಿರಾಬಾದ್: ಈ ವರ್ಷದ ಮೊದಲ ಯುಗಾದಿ ಹಬ್ಬದಲ್ಲಿ ಐತಿಹಾಸಿಕ ಕ್ಷೇತ್ರ ಹೇಮಗುಡ್ಡದಲ್ಲಿ ಶ್ರೀದುರ್ಗಾಪರಮೇಶ್ವರಿ ದೇವಿಗೆ ಪುಷ್ಪಾಲಂಕಾರ, ಆಭರಣಗಳ ಸೌಂದರ್ಯ ಮತ್ತು ಭಕ್ತಿಯ ವಿಶೇಷ ಅಲಂಕಾರ ಮಾಡಲಾಯಿತು. ತುಂಬಾ ದೈವಿಕ ವಾತಾವರಣವನ್ನು ಸೃಷ್ಟಿಸುತ್ತಿತ್ತು. ಇಂತಹ ಶುಭ ಸಂದರ್ಭದಲ್ಲಿ ಸಾವಿರಾರು ಭಕ್ತರು ದರ್ಶನ ಪಡೆದು, ಭಕ್ತಿ ಮತ್ತು ಸಂತೋಷವನ್ನು ಹಂಚಿಕೊಂಡಿರುವುದು ತುಂಬಾ ವಿಶೇಷವಾಗಿತುತ್ತು. ಯುಗಾದಿ ಹಬ್ಬದ ದಿನ ದೇವಿಯ ದರ್ಶನ ಪಡೆದು ಅಮ್ಮನವರ ಕೃಪೆಗೆ ಪಾತ್ರರಾದರು. ನಂತರ ಮಧ್ಯಾಹ್ನ ಭಕ್ತರಿಗೆ ಪ್ರಸಾದ ಭೋಜನದ ವ್ಯವಸ್ಥೆಯನ್ನು ಮಾಡಲಾಯಿತು. ಅಮ್ಮನವರಿಗೆ ಮದ್ದಾನಪ್ಪ ಹೂಗಾರ್ ಪೂಜಾರಿ ದೇವಿಗೆ ಅದ್ಭುತವಾಗಿ ಅಲಂಕಾರ ಮಾಡಿದ್ದರು.

ಅತ್ಯಾಚಾರ: 20 ವರ್ಷ ಜೈಲು ಶಿಕ್ಷೆ

ಕಲಬುರಗಿ: 16 ವರ್ಷದ ಅಪ್ರಾಪ್ತ ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಪ್ರಕರಣದ ಆರೋಪಿ ವಿಶಾಲ ರಾಜಣ್ಣ ಕಾಂಬಳೆ (20) ಎಂಬಾತನಿಗೆ ಇಲ್ಲಿನ ವಿಶೇಷ ಪೋಕ್ಸೋ ನ್ಯಾಯಾಲಯವು 20 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ 1.25 ಲಕ್ಷ ರೂಪಾಯಿ ದಂಡ ವಿಧಿಸಿ ತೀರ್ಪು ನೀಡಿದೆ. ಕಳೆದ 2024ರ ಡಿಸೆಂಬರ್‌ನಲ್ಲಿ ಆರೋಪಿ ವಿಶಾಲ ಸಣ್ಣೂರು ಗ್ರಾಮದ ಬಾಲಕಿಯನ್ನು ಪುಸಲಾಯಿಸಿ ಮುಂಬೈಗೆ ಕರೆದೊಯ್ದು, ಅಲ್ಲಿನ ಅಂಧೇರಿ ವೆಸ್ಟ್ ಪ್ರದೇಶದಲ್ಲಿ ಬಾಲಕಿಯ ಮೇಲೆ ದೌರ್ಜನ್ಯ ಎಸಗಿದ್ದನು. ಈ ಕುರಿತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪಿಎಸ್‌ಐ ರೇಣುಕಾದೇವಿ ಹಾಗೂ ಪಿಐ ಸುಶೀಲಕುಮಾರ್ ಅವರು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದ ತೀರ್ಪು: ಪ್ರಕರಣದ ವಿಚಾರಣೆ ನಡೆಸಿದ ಎಫ್‌ಟಿಎಸ್‌ಸಿ-1 ನ್ಯಾಯಾಧೀಶರಾದ ಯಮನಪ್ಪ ಬಮ್ಮಣಗಿ ಅವರು, ಆರೋಪಿಯ ಮೇಲಿನ ಅಪರಾಧ ಸಾಬೀತಾಗಿದೆ ಎಂದು ತೀರ್ಮಾನಿಸಿದರು. ಪೋಕ್ಸೋ ಕಾಯ್ದೆಯಡಿ 20 ವರ್ಷ ಜೈಲು ಹಾಗೂ 1 ಲಕ್ಷ ರೂ. ದಂಡ, ಬಿಎನ್‌ಎಸ್ ಕಾಯ್ದೆಯಡಿ 2 ವರ್ಷ ಜೈಲು ಹಾಗೂ 25 ಸಾವಿರ ರೂ. ದಂಡ ವಿಧಿಸಿದ್ದಾರೆ. ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು. ಅಲ್ಲದೆ, ನೊಂದ ಬಾಲಕಿಗೆ ಕಾನೂನು ಪ್ರಾಧಿಕಾರದಿಂದ 1ಲಕ್ಷ ರೂ. ಪರಿಹಾರ ನೀಡುವಂತೆಯೂ ನ್ಯಾಯಾಧೀಶರು ಆದೇಶಿಸಿದ್ದಾರೆ.



ಕಲಬುರಗಿ: ಈದ್ ಉಲ್ ಫಿತ್ರ್ ಅಂಗವಾಗಿ ಶನಿವಾರ ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಸಮುದಾಯದವರು ಸಾಮೂಹಿಕ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಸಂಭ್ರಮದಿಂದ ರಂಜಾನ್ ಹಬ್ಬ ಆಚರಣೆ

ಯಲಬುರ್ಗಾ: ಪಟ್ಟಣದ ಮುಸ್ಲಿಂ ಭಾಂಧವರು ರಂಜಾನ ಹಬ್ಬವನ್ನು ಶನಿವಾರ ಸಂಭ್ರಮ ಸಡಗರದಿಂದ ಆಚರಿಸಿದರು. ಬೆಳಿಗ್ಗೆ ನಗರದ ಜುಮ್ಮಾ ಮಸೀದಿ ಹತ್ತಿರ ಜಮಾಸಿದ ಮುಸ್ಲಿಂರು ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ತೆಕ್ಕೆದಾರ ಓಣಿಯಿಂದ ಮೆರವಣಿಗೆ ಹೊರಟ ಮುಸ್ಲಿಂ ಭಾಂಧವರು ಜುಮ್ಮಾ ಮಸೀದಿ ಹಾಗೂ ಅಷ್ರಫಲಿ ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ ಸಿದ್ದರಾಮೇಶ್ವರ ನಗರದ ಹತ್ತಿರ ಇರುವ ಈದ್ಗಾ ಮೈದಾನಕ್ಕೆ ತೆರಳಿ ಪರಸ್ಪರ ಶುಭಕೋರಿದರು. ಬಳಿಕ ಇರ್ಷಾದ್ ಖಾಜಿ ಮಾತನಾಡಿದರು. ತಾಲೂಕಿನ ಮಾರನಾಳ, ಮುಧೋಳ, ಕುದ್ರಿಕೋಟಗಿ, ಸಂಗನಾಳ, ತುಮ್ಮರಗುದ್ದಿ, ಗೆದಗೇರಿ, ಹೊಸಳ್ಳಿ, ಮಲ್ಕಸಮುದ್ರ, ಚಿಕ್ಕಮ್ಯಾಗೇರಿ, ಚಿಕ್ಕೊಪ್ಪ, ದಮ್ಮೂರ, ಬೂನಕೊಪ್ಪ ಗ್ರಾಮದ ಮುಸ್ಲಿಮರು ಈ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಮುಸ್ಲಿಂ ಸಮಾಜದ ಮುಖಂಡರಾದ ಇಕ್ಬಾಲಸಾಬ ವಣಗೇರಿ, ಮೈಹಿಬೂಬಸಾಬ ಮಕಾಂದಾರ, ಎಂ.ಎಫ್.ನದಾಫ್, ಮೈಹಿಮೂದಮೀಯಾ ಖಾಜಿ, ಬಾಬುಸಾಬ ಕೊತ್ವಾಲ್, ನಜೀರಸಾಬ ಹಿರೇಮನಿ, ಖಾಜಾಮೈನುದ್ದೀನ್ ವಣಗೇರಿ, ನೂರಅಹ್ಮದಖಾನ್ ಗಡಾದ, ಶಹಾಬುದ್ದೀನ್ ಎಲಿಗಾರ, ಮೌಲಾಹುಸೇನ ಬುಲ್ಡಿಯಾರ್, ಇಮಾಮ ಕೊತ್ವಾಲ್, ಎಂ.ಡಿ.ಮುಸ್ತಾಫ್, ಅಬ್ದುಲ್ ಮುನಾಫ್, ರೀಯಾಜ್ ಖಾಜಿ, ಎಂ.ಡಿ.ಯೂಸೂಫ್, ರಹೀಮಾನ ನಾಯಕ, ಚೆನ್ನುಭಾಷ ಅತ್ತಾರ, ದಾದು ಎಲಿಗಾರ, ರಸೀದ್ ಖಾಜಿ, ರಹೀಮಾನ ರೇವಡಿವಾಲೆ, ಶ್ಯಾಮೀದ ಆನೆಗುಂದಿ, ಖಾಜಾವಲಿ ಗಡಾದ, ಅಬ್ದುಲ್ ಕವಲೂರ, ಪಾಷಾಸಾಬ ಮಕಾಂದಾರ, ಲಾಲಅಹ್ಮದ್ ರಾಯಚೂರ, ಗೌಸುಸಾಬ ಕನಕಗಿರಿ, ಇಮಾಮಸಾಬ ಸಂಕನೂರ, ಖಾಸೀಂಅಲಿ ಮಾನ್ವಿ, ಎಂ.ಡಿ.ರಫಿ, ರಾಜು ಎಲಿಗಾರ, ಹುಸೇನಖಾನ್ ಗಡಾದ, ಖಾಜಾವಲಿ ಗುಳಗುಳಿ ಇದ್ದರು.



ಯಲಬುರ್ಗಾ: ಪಟ್ಟಣದ ಮುಸ್ಲಿಂ ಭಾಂಧವರು ರಂಜಾನ ಹಬ್ಬವನ್ನು ಶನಿವಾರ ಸಂಭ್ರಮ ಸಡಗರದಿಂದ ಆಚರಿಸಿದರು. ಬೆಳಿಗ್ಗೆ ನಗರದ ಜುಮ್ಮಾ ಮಸೀದಿ ಹತ್ತಿರ ಜಮಾಸಿದ ಮುಸ್ಲಿಂ ಭಾಂಧವರು ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಈದ್ಗಾ ಮೈದಾನಕ್ಕೆ ತೆರಳಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಮಾಜಿ ಸಚಿವ ಹಾಲಪ್ಪ ಆಚಾರ್ ಆರೋಪ

ರಾಜ್ಯ ಸರ್ಕಾರದ ಖಜಾನೆ ಖಾಲಿ

ಯಲಬುರ್ಗಾ: ಪ್ರತಿಯೊಬ್ಬ ಬಿಜೆಪಿ ಪಕ್ಷದ ಕಾರ್ಯಕರ್ತರು ಪಕ್ಷ ನಿಷ್ಠೆ, ಪ್ರಮಾಣಿಕತೆಯಿಂದ ದುಡಿದಾಗ ಅವರನ್ನು ಪಕ್ಷ ಗುರುತಿಸಿ ಉನ್ನತ ಸ್ಥಾನಮಾನ ನೀಡುವ ಏಕೈಕ ಪಕ್ಷವಾಗಿದ್ದು, ಅದಕ್ಕೆ ನಾನೂಬ್ಬ ಕಾರ್ಯಕರ್ತನಾಗಿ ಶಾಸಕನಾಗಿ, ಸಚಿವನಾಗಲು ಪಕ್ಷ, ನಿಮ್ಮೆಲ್ಲರ ಸಹಕಾರವೇ ಇದಕ್ಕೆ ಕಾರಣವಾಗಿದೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ ಹೇಳಿದರು.



ಪಟ್ಟಣದ ಸಾಯಿ ಪ್ಯಾಲೇಸ್‌ನಲ್ಲಿ ಬಿಜೆಪಿ ಪಕ್ಷದ ವತಿಯಿಂದ ಶನಿವಾರ ಪಂ.ದೀನದಯಾಳ ಉಪಾಧ್ಯಾಯರ ಪ್ರಶಿಕ್ಷಣ ಮಹಾಭಿಯಾನ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, ಎಲ್ಲರೂ ಒಟ್ಟಾಗಿ ಪಕ್ಷದ ಸಿದ್ಧಾಂತ,ಗುರಿ,ಆದರ್ಶಗಳನ್ನು ಪಾಲಿಸುವುದೇ ಪ್ರಶಿಕ್ಷಣದ ಮೂಲ ಆಶಯವಾಗಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳಿಲ್ಲ, ಇದರಿಂದ ರಾಜ್ಯದ ಜನತೆ ರೋಸಿ ಹೋಗಿದ್ದಾರೆ. ಖಜಾನೆ ಖಾಲಿಯಾಗಿದೆ ಸರ್ಕಾರದಲ್ಲಿ ಕುರ್ಚಿಗಾಗಿ ಕಚ್ಚಾಟ ನಡೆಸಿದ್ದಾರೆ. ಮುಖ್ಯಮಂತ್ರಿ ಮುಡಾ ಹಗರಣ, ಸಚಿವರು ವಾಲ್ಮೀಕಿ ಹಗರಣದಲ್ಲಿ ಸಿಲುಕಿದ್ದಾರೆ. ಎಸ್ಸಿ, ಎಸ್ಟಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಸರ್ಕಾರ ಜನರಿಂದ ತಿರಸ್ಕಾರಗೊಂಡಿದೆ ಎಂದು ಆರೋಪಿಸಿದರು.

ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾರ್ಯಕರ್ತರಲ್ಲಿ ವೈಚಾರಿಕ, ಬದ್ದತೆ, ಪಕ್ಷದ ಇತಿಹಾಸ ವೈಖರಿ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಮೂಡಿಸುತ್ತಿದೆ. ಪ್ರಶಿಕ್ಷಣ ಅಭಿಯಾನ ಮೂಲಧ್ಯೇಯವಾಗಿದೆ ಎಂದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನವೀನಕುಮಾರ ಗುಳಗಣ್ಣನವರ್ ಮಾತನಾಡಿ, ಬಿಜೆಪಿಯು ವ್ಯಕ್ತಿಗಿಂತ ರಾಷ್ಟ್ರ ಮೊದಲು ಎಂಬ ಘೋಷವಾಕ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಇಡೀ ವಿಶ್ವದಲ್ಲೇ ಬಿಜೆಪಿ ಪಕ್ಷ ಹೆಚ್ಚು ಸದಸ್ಯರನ್ನೊಳಗೊಂಡ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ ಎಂದು ಹೇಳಿದರು.

ಬಿಜೆಪ ತಾಲೂಕಾಧ್ಯಕ್ಷ ಮಾರಿತಿ ಗಾವರಾಳ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಶಿಕ್ಷಣ ಅಭಿಯಾನ ವರ್ಗದ ಎರಡು ದಿನಗಳ ಕಾರ್ಯಾಗಾರವನ್ನು ಪಕ್ಷದ ಕಾರ್ಯಕರ್ತರು, ಬೂತ ಮಟ್ಟದ ಅಧ್ಯಕ್ಷರು, ಶಕ್ತಿ ಕೇಂದ್ರದ ಅಧ್ಯಕ್ಷರು ಸದುಪಯೋಗವನ್ನು ಪಡೆದು ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದರು.

ಈ ವೇಳೆ ಜಿಲ್ಲಾ ಮೋರ್ಚಾಧ್ಯಕ್ಷೆ ರತ್ನಕುಮಾರಿ, ರಾಜ್ಯ ಕಾರ್ಯಕಾರ್ಯಣಿ ಸದಸ್ಯ ಬಸವರಾಜ ಗೌರಾ, ಮುಖಂಡರಾದ ಬಸವಲಿಂಗಪ್ಪ ಭೂತೆ, ವೀರಣ್ಣ ಹುಬ್ಬಳ್ಳಿ, ವಿಶ್ವನಾಥ ಮರಿಬಸಪ್ಪನವರ, ಕೀರ್ತಿ ಪಾಟೀಲ, ಶಿವಕುಮಾರ ಆರಕೇರಿ, ಸಂತೋಷಿಮಾ ಜೋಶಿ, ವಾಣಿಶ್ರೀ ಹಿರೇಮಠ, ಶರಣಪ್ಪ ಗುಂಗಾಡಿ, ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳಾದ ನೀಲಕಂಠಪ್ಪ,ಸೋಮನಾಥ ಕುಲಕರ್ಣಿ, ಶರಣಪ್ಪ ಇಳಗೇರ, ರತ್ನ ದೇಸಾಯಿ, ಶಿವಣ್ಣ ವಾದಿ, ಶಿವಲೀಲಾ ದಳವಾಯಿ, ಸಿದ್ದು ಮಣ್ಣಿನವರ್, ಅಮಾತೆಪ್ಪ ಹಡಪದ, ಪ್ರಭುರಾಜ ಕಲಬುರ್ಗಿ ಇದ್ದರು. ದೊಡ್ಡಯ್ಯ ಗುರುವಿನ್ ನಿರೂಪಿಸಿದರು. ಕಲ್ಲೇಶ ಕರಮುಡಿ ಸ್ವಾಗತಿಸಿದರು. ಶಂಕ್ರಪ್ಪ ಭಾವಿಮನಿ ವಂದಿಸಿದರು.

ಓದುವ ಅಭ್ಯಾಸ ರೂಢಿಸಿಕೊಳ್ಳಿ

ರಾಯಚೂರು: ವಿದ್ಯಾರ್ಥಿಗಳು ಸಾಮಾಜಿಕ ಜಾಲತಾಣಗಳ ಬಳಕೆ ಕಡಿಮೆ ಮಾಡಿ, ಉತ್ತಮವಾಗಿ ಓದುವ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದು ಜಿಪಂ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಹೇಳಿದರು.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದ ವೃತ್ತಿ ಪ್ರಪಂಚದ ಅರಿವು ಮೂಡಿಸಲು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ತಂದೆ-ತಾಯಿಯವರ ಕನಸು ಈಡೇರಿಸಬೇಕು. ವಿದ್ಯಾರ್ಥಿಗಳು ಕೌಶಲದ ಕಡೆ ಗಮನಹರಿಸಬೇಕು. ಹತ್ತನೇ ಹಾಗೂ ದ್ವಿತೀಯ ಪಿಯುಸಿ ನಂತರ ಕೋರ್ಸುಗಳ ಆಯ್ಕೆಗೆ ಈ ಮೇಳ ಸಹಕಾರಿ ಎಂದರು.

ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಿಸಿಲಿನ ತಾಪಮಾನ ಏರಿಕೆಯಾಗಿದ್ದು, ಜಿಲ್ಲಾಡಳಿತದಿಂದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅವುಗಳನ್ನು ಎಲ್ಲರೂ ಪಾಲಿಸಬೇಕು ಎಂದರು.

ಡಿಡಿಪಿಐ ಕೆ.ಡಿ.ಬಡಿಗೇರ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ವೃತ್ತಿಪರ ಕೌಶಲ್ಯಗಳನ್ನು ಬೆಳೆಸಿಕೊಂಡು ಜೀವನದಲ್ಲಿ ಉನ್ನತ ಸಾಧನೆ ಮಾಡಬೇಕು ಎಂದರು.

ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ವಿಶೇಷ ಅವಕಾಶ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣ, ವಿದ್ಯಾರ್ಥಿ ವೇತನ ಮತ್ತು ಉದ್ಯೋಗಾವಕಾಶಗಳ ಬಗ್ಗೆ ಸಮಗ್ರ ಮಾಹಿತಿ ಹಾಗೂ ಮಾರ್ಗದರ್ಶನ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿದ್ದ ವಿವಿಧ ಮಳಿಗೆಗಳಿಗೆ ಜಿಪಂ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜಾರಿ ಚಾಲನೆ ನೀಡಿದರು.

ಮಳಿಗೆಯಲ್ಲಿ ಕೃಷಿ ವಿಶ್ವವಿದ್ಯಾಲಯ ಆಡಿಯಲ್ಲಿನ ಕೋರ್ಸ್‌ಗಳ ಮಾಹಿತಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಆರೋಗ್ಯ ಇಲಾಖೆ, ಕಾರ್ಮಿಕ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಸರ್ಕಾರಿ ಇಲಾಖೆಗಳಿಂದ ವಿವಿಧ ಶಿಕ್ಷಣಾವಕಾಶಗಳು, ತಾಂತ್ರಿಕ ಶಿಕ್ಷಣ, ಐಟಿಐ, ಡಿಪ್ಲೋಮಾ, ಎಂಜಿನಿಯರಿಂಗ್, ಮೆಡಿಕಲ್, ಕೌಶಲ್ಯ ತರಬೇತಿ, ಕೃಷಿ, ಕಂಪ್ಯೂಟರ್ ಕೋರ್ಸ್, ವಿದ್ಯಾರ್ಥಿ ವೇತನ, ತರಬೇತಿ ಕೇಂದ್ರಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಪದವಿ ಪೂರ್ವ ಶಿಕ್ಷಣ ಇಲಾಖೆ ಪ್ರಭಾರಿ ಉಪ ನಿರ್ದೇಶಕ ಸೋಮಶೇಖರಪ್ಪ ಹೊಕ್ರಾಣಿ, ಡಯಟ್ ಪ್ರಾಂಶುಪಾಲ, ಅಭಿವೃದ್ಧಿ ಉಪ ನಿರ್ದೇಶಕ ಚಂದ್ರಶೇಖರ ಭಂಡಾರಿ, ಶಿವಮ್ಮ, ಶರಣಪ್ಪ ವಟಗಲ್, ಸುಖದೇವ್, ಶಿವಮಣಿ ಇದ್ದರು.



ಡಿವಿಜಿ ಸಾಹಿತ್ಯ ಸಾರ ಬದುಕಿಗೆ ದಾರಿದೀಪ

ಕುಕನೂರು: ಖ್ಯಾತ ಸಾಹಿತ್ಯ ದಿಗ್ಗಜ ಡಿ.ವಿ.ಜಿ ಅವರ ಜೀವನದ ಒಂದೊಂದು ಸಂಗತಿಗಳೂ ದಾರಿದೀಪ ಎಂದು ಇಟಗಿ ಮಹೇಶ್ವರ ಕಾಲೇಜಿನ ನಿವೃತ್ತ ಉಪನ್ಯಾಸಕ ಎಸ್.ಎಂ.ಹಿರೇಮಠ ಹೇಳಿದರು. ಗುರುವಾರ ಇಲ್ಲಿಯ ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ (ರಿ) ಹಾಗೂ ತಾಲೂಕು ಚುಟುಕು ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಇಟಗಿ ಭಿಮಾಂಬಿಕಾ ದೇವಿ ಮಠದ ಆವರಣದಲ್ಲಿ ಆಯೋಜಿಸಿದ್ದ ಯುಗಾದಿ ಸಂಭ್ರಮ ಮತ್ತು ಸಾಹಿತ್ಯ ದಿಗ್ಗಜ ಡಿವಿಜಿ, ವಚನಕಾರ ಅಲ್ಲಮಪ್ರಭು ಅವರ ಜಯಂತಿ ನಿಮಿತ್ತ ಉಪನ್ಯಾಸ ಮತ್ತು ಗಾಯನೋತ್ಸವದ ಕಾರ್ಯಕ್ರಮದಲ್ಲಿ ಡಿವಿಜಿ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಂಕು ತಿಮ್ಮನ ಕಗ್ಗದ ಹೆಸರಿನಲ್ಲಿ ಸುಮಾರು 945 ಕಗ್ಗಗಳನ್ನು ವಿವಿಧ ಆಯಾಮಗಳ ಮೂಲಕ ಬರೆದು ಜನ ಮನ್ನಣೆ ಗಳಿಸಿದ್ದಾರೆ. ಓದುಗರ ಮನಕ್ಕೆ ಧೈರ್ಯ ತುಂಬುವ ಕಗ್ಗಗಳನ್ನು ಬರೆದಿದ್ದು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕ್ಲಾಸಿಕ್ ಶೈಲಿಯ ಕಗ್ಗಗಳು ಪ್ರಮುಖವಾಗಿವೆ. ಎಸ್ಸೆಸ್ಸೆಲ್ಸಿ ವರೆಗೆ ಓದಿರುವ ಸಾಮಾನ್ಯ ವ್ಯಕ್ತಿಯಾಗಿದ್ದ ಆಳವಾದ ಸಾಹಿತ್ಯಕ್ಕೆ ಸರಕಾರ ಜ್ಞಾನಪೀಠ ನೀಡಿ ಗೌರವ ದೊರೆಯಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತತ್ವಪದಕಾರ ಆರ್. ಪಿ.ರಾಜೂರ, ಹಿರಿಯ ರಂಗ ಭೂಮಿ ಕಲಾವಿದರಾದ ವೆ.ಮೂ. ಸಿದ್ದಲಿಂಗಯ್ಯ ಸ್ವಾಮಿ ಹಿರೇಮಠ, ಹಿರಿಯ ಸಾಹಿತಿ ವೀರಣ್ಣ ವಾಲಿ, ತಾಲುಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕಳಕಪ್ಪ ಕುಂಬಾರ ಮಾತನಾಡಿದರು.

ಭೂ ನ್ಯಾಯ ಮಂಡಳಿ ಸದಸ್ಯ, ವಕೀಲರಾದ ಬಸವರಾಜ್ ಜಂಗಲಿ, ನಿವೃತ್ತ ಉಪನ್ಯಾಸಕ ಲಕ್ಷ್ಮಣ ಬೇದವಟ್ಟಿ, ಆರೋಗ್ಯ ಇಲಾಖೆ ಆಪ್ತ ಸಮಾಲೋಚಕ ಕನಕರಾಯ ಭಜಂತ್ರಿ, ವಕೀಲರಾದ ಅಡಿವೆಪ್ಪ ಬೋರಣ್ಣವರ, ರಮೇಶ್ ಗಜಾಕೋಶ್ ವೇದಿಕೆಯಲ್ಲಿದ್ದರು.

ಗಾಯಕರಾದ ಮೇಘರಾಜ ಜಿಡಗಿ, ವೀರಪ್ಪ ನವಲಗುಂದ ಗಾಯನ ಪ್ರಸ್ತುತ ಪಡಿಸಿದರು. ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಭಂಡಾರಿ ಪ್ರಾಸ್ತಾವಿಕನುಡಿಗಳನ್ನಾಡಿದರು. ಚುಟುಕು ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಬಸವರಾಜ್ ಉಪ್ಪಿನ ಸ್ವಾಗತಿಸಿ ನಿರೂಪಿಸಿದರು.



ಇಂದು ಯುಗಾದಿ ಉತ್ಸವ: ಕಲ್ಯಾಣ ಕರ್ನಾಟಕ ಕಣ್ಮಣಿ ಪುರಸ್ಕಾರ

ಸಿಂಧನೂರು : ಶ್ರೀ ಪರಭವ ನಾಮ ಸಂವತ್ಸರ ಯುಗಾದಿ ಹಬ್ಬವನ್ನು ಪ್ರತಿ ವರ್ಷದಂತೆ ಈ ಬಾರಿಯೂ ಕೂಡ ಅತ್ಯಂತ ಅದ್ದೂರಿಯಾಗಿ ಆಚರಣೆ ಮಾಡಲು ಯುಗಾದಿ ಉತ್ಸವ ಸಮಿತಿಯು ನಿರ್ಣಯಿಸಿದ್ದು, ಮಾ.22 ರಂದು ನಗರದ ಸತ್ಯ ಗಾರ್ಡನ್‌ನಲ್ಲಿ ಕಲ್ಯಾಣ ಕರ್ನಾಟಕ ಕಣ್ಮಣಿ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಉತ್ಸವ ಸಮಿತಿಯ ಮುಖಂಡ ವೈ.ನರೇಂದ್ರನಾಥ ಹೇಳಿದರು.

ಈ ಕುರಿತು ಯುಗಾದಿ ಉತ್ಸವ ಆಚರಣೆ ಸಮಿತಿ ವತಿಯಿಂದ ನಗರದ ಪತ್ರಿಕಾ ಭವನದಲ್ಲಿ ಮತ್ತು ಖಾಸಗಿ ಹೋಟೆಲ್‌ನಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ಹತ್ತು ವರ್ಷಗಳಿಂದ ಈ ಯುಗಾದಿ ಉತ್ಸವ ಆಚರಣೆ ಮಾಡುತ್ತಾ ಬಂದಿದ್ದು,ಮೊದ ಮೊದಲು ತೆಲುಗು ಭಾಷೆಯ ಜನರು ಮಾತ್ರ ಸೇರಿಕೊಂಡು ಆಚರಣೆ ಮಾಡಲಾಗುತ್ತಿದ್ದು, ಈಗ ಎಲ್ಲಾ ಸಮಾಜದ ವರ್ಗದ ಜನರೊಂದಿಗೆ ಸಮನ್ವಯದೊಂದಿಗೆ ಅತ್ಯಂತ ವಿಶೇಷವಾಗಿ ಹಾಗೂ ಅರ್ಥಪೂರ್ಣವಾಗಿ ಯುಗಾದಿ ಹಬ್ಬ ಮುಗಿದ ಮೊದಲ ಭಾನುವಾರ ರಂದು ಯುಗಾದಿ ಉತ್ಸವ ಆಚರಣೆ ಮಾಡಲಾಗುತ್ತಿದೆ ಎಂದರು.



ಸಮಿತಿಯ ಪದಾಧಿಕಾರಿಗಳಾದ ಯೋಗ ಗುರು ಭಾಸ್ಕರ ರಾವ್ ಮಾತನಾಡಿ, ಇಬ್ಬರಿಗೆ ಕಲ್ಯಾಣ ಕರ್ನಾಟಕ ಕಣ್ಮಣಿ ಪ್ರಶಸ್ತಿ ನೀಡಲಾಗುತ್ತಿದ್ದು, ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ, ಖ್ಯಾತ ಕಂಠ ದಾನ ಕಲಾವಿದೆ ಡಾ. ಅಧ್ಯಾ ಹನುಮಂತು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದರು. ಸಮಿತಿ ಸದಸ್ಯೆ ಸರಸ್ವತಿ ಪಾಟೀಲ್ ಮಾತನಾಡಿದರು. ಈ ವೇಳೆ ಭೀರಪ್ಪ ಶಂಬೋಜಿ,ಅಮರೇಶಪ್ಪ ಮೈಲಾರಿ, ಮುರಳಿ ಕೃಷ್ಣ, ಸುಮಿತ್ ತಡಕಲ್, ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಅಧ್ಯಕ್ಷರಾದ ಸತೀಶ್, ಮಲ್ಲಪ್ಪ ಮಾಡಿಗೇರಿ, ಗಂಗಣ್ಣ ಡಿಶ್, ದೇವೇಂದ್ರ ಗೌಡ, ಎನ್.ಶಿವು ಎನ್‌ಸಿ, ಬುದ್ದಪ್ಪ ಭಂಡಾರಿ, ಹುಸೇನ್ ಬಾಷಾ ಇಂದ್ರನಗರ್ ಸೇರಿದಂತೆ ಇತರರು ಇದ್ದರು.

ಅದ್ದೂರಿ ಮಾರುತೇಶ್ವರ ಜಾತ್ರೆ: ಸಪ್ತಪದಿ ತುಳಿದ 18 ಜೋಡಿ

ಮುನಿರಾಬಾದ್: ಸುಮಾರು 22ವರ್ಷಗಳಿಂದ 18 ಜೋಡಿಗಳಿಗೆ ಉಚಿತ ವಿವಾಹ ಮಾಡುವುದರ ಮೂಲಕ ನಿಸ್ವಾರ್ಥ ಸೇವೆಗೈದ ಬೇವಿನಹಳ್ಳಿ ಗ್ರಾಮದ ಜನರ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಶ್ರೀನಗರಗಡ್ಡಿ ಮಠದ ಶಿವಶಾಂತವೀರ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸೋಮವಾರ ಬೇವಿನಹಳ್ಳಿ ಶ್ರೀ ಮಾರುತೇಶ್ವರ ಜಾತ್ರಾಮಹೋತ್ಸವ ನಿಮಿತ್ತ ಜರುಗಿದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶುಕ್ರವಾರ ಬೆಳಗ್ಗೆ 6ಕ್ಕೆ ವಿವಿಧ ಹೂಗಳಿಂದ ಅಲಕೃತವಾಗಿ ಬೆಳ್ಳಿ ಒಡವೆಗಳನ್ನ ಧರಿಸಿದ್ದ ಮಾರುತೇಶ್ವರ ದೇವರಿಗೆ ಕುಂಕುಮಾರ್ಚನೆ ಅಭಿಷೇಕ ವಿವಿಧ ಪೂಜೆಗಳು ಜರುಗಿದವು. 12:30ಕ್ಕೆ ಗಂಟೆಗೆ ಹರ ಗುರು ಚರ ಶ್ರೀಗಳ ಸಾನಿಧ್ಯದಲ್ಲಿ ಸರ್ವ ಧರ್ಮದ 18ಜೋಡಿಗಳ ಉಚಿತ ಸಾಮೂಹಿಕ ವಿವಾಹಮಹೋತ್ಸವದಲ್ಲಿ ನವ ಜೀವನಕ್ಕೆ ಪಾದರ್ಪಣೆ ಮಾಡಿದರು. ದಿನ ಪೂರ್ತಿ ಅನ್ನಸಂತರ್ಪಣೆ ಕಾರ್ಯಕ್ರಮ, ಸಂಜೆ 5.30ಕ್ಕೆ ಮಾರುತೇಶ್ವರ ಮಹಾರಥೋತ್ಸವ, ನೀರುಗೊಂಡ ಆಯುವುದು, ಗಂಗಾ ಪೂಜೆ, ರಾತ್ರಿ ಸ್ಥಳೀಯ ವಾಹನ ಚಾಲಕ ಮತ್ತು ಮಾಲಕರ ಸಂಘದ ವತಿಯಿಂದ ರಸಮಂಜರಿ ಕಾರ್ಯಕ್ರಮ ಜರುಗಿದವು.

ಬೇವಿನಹಳ್ಳಿ ಮಾರುತೇಶ್ವರ ಮಹಾರಥೋತ್ಸವ ಜರಗಬೇಕಾದರೆ ಲಿಂಗದಹಳ್ಳಿಯ ಗ್ರಾಮದಿಂದ ಮಹಾರಥೋತ್ಸವದ ಕಳಸ ಆಗಮಿಸಬೇಕು. ಶಹಾಪುರ ಗ್ರಾಮದಿಂದ ಅಲಂಕೃತಗೊಂಡ ಬಣ್ಣದ ವಸ್ತ್ರಗಳು ಬರಬೇಕು. ಹಿಟ್ನಾಳ್ ಗ್ರಾಮದಿಂದ ಶ್ರೀ ಮಾರುತೇಶ್ವರನ ಬೆಳ್ಳಿಯ ಮೂರ್ತಿ, ಗಬ್ಬೂರು ಗ್ರಾಮದಿಂದ ಮಹಾರಥೋತ್ಸವ ಜಗ್ಗಲು ಹಗ್ಗ ಬರಬೇಕು ಹೀಗೆ ಐದಾರು ಹಳ್ಳಿಗಳಿಂದ ಮಹಾರಥೋತ್ಸವಕ್ಕೆ ಬೇಕಾದ ಎಲ್ಲಾ ವಸ್ತುಗಳು ತಮ್ಮ ತಮ್ಮ ಗ್ರಾಮಗಳಿಂದ ಮೆರವಣಿಗೆಯ ಮೂಲಕ ಗ್ರಾಮದ ಮುಖಂಡರು ತಂದುಕೊಡುವ ಸೇವೆಗಳಿಗೆ ಸೌಹಾರ್ದ ಸಾಮರಸ್ಯ ಬೆಸೆಯುತ್ತಾರೆ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿ ಹೊಸಹಳ್ಳಿಯಿಂದ ಉಚಿತ ಶುದ್ಧ ಕುಡಿಯುವ ನೀರಿನ ಸೇವೆ ಜರುಗಿತು.



ಮನುಷ್ಯತ್ವ ಜಾಗೃತಗೊಳಿಸಲು ಪ್ರಾರ್ಥನೆ ಅವಶ್ಯಕ

ಕೊಪ್ಪಳ: ಮನುಷ್ಯತ್ವವನ್ನು ಜಾಗೃತಗೊಳಿಸುವ ಶಕ್ತಿ ಪ್ರಾರ್ಥನೆಗೆ ಇದೆ ಎಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ತಿಳಿಸಿದರು.

ರಂಜಾನ್ ಹಬ್ಬದ ಪ್ರಯುಕ್ತ ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯ ನಂತರ ಮುಸ್ಲಿಂ ಬಾಂಧವರಿಗೆ ಶುಭಕೋರಿ ಮಾತನಾಡಿದರು.

ಮಾನವಕುಲದ ಒಳಿತಿಗೆ ಪ್ರಾರ್ಥನೆ ಅವಶ್ಯ. ಭ್ರಾತೃತ್ವ, ಅಂತಃಕರಣ ಹಾಗೂ ನಿಷ್ಕಲ್ಮಶ ಜೀವಪರ ಪ್ರೀತಿಯನ್ನು ಪ್ರಾರ್ಥನೆ ಸೃಷ್ಟಿಸುತ್ತದೆ. ಮನುಷ್ಯರಲ್ಲಿ ನೈತಿಕ ಶಕ್ತಿಯನ್ನು ತುಂಬಿ ಸರಿ ದಾರಿಯಲ್ಲಿ ನಡೆಯುವಂತೆ ಹಾಗೂ ಶಾಂತಿ ಮತ್ತು ನೆಮ್ಮದಿಯಿಂದ ಬಾಳುವಂತೆ ಪ್ರೇರೇಪಿಸುತ್ತದೆ ಎಂದರು.

ಮಾನವೀಯತೆಯಿಂದ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಅವಶ್ಯ. ಭಾರತ ದೇಶ ವಿವಿಧ ಜಾತಿ ಸಂಸ್ಕೃತಿಗಳಿಂದ ಕೂಡಿದೆ. ವಿವಿಧತೆಯಲ್ಲಿ ಏಕತೆಯಿರುವ ನಮ್ಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು. ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ, ಎಲ್ಲ ಧರ್ಮಗಳೂ ಪ್ರೀತಿಯನ್ನು ಬೋಧಿಸುತ್ತವೆ. ಶಾಂತಿ ಮತ್ತು ನೆಮ್ಮದಿ ಸಕಲ ಧರ್ಮಗಳ ಸಾರ. ನಾವೆಲ್ಲರೂ



ಇದನ್ನು ಪಾಲಿಸಬೇಕು ಎಂದು ಹೇಳಿದರು.

ಕೊಪ್ಪಳದ ಮುಸ್ಲಿಂ ಧರ್ಮ ಗುರುಗಳಾದ ಖಾಜಿ ಮೊಹಮ್ಮದ್ ಅಬ್ಬಾಸ್ ಅಲಿ ಹಾಗೂ ಹಾಫೀಜ್ ಮೊಹಮ್ಮದ್ ಆಸೀಫ್ ರಜಾ, ಹಾಫೀಜ್ ಮೊಹಮ್ಮದ್ ಇಸಾಕ್ ಖಾಜಿಯವರು ಸಿ.ವಿ. ಚಂದ್ರಶೇಖರ್ ಅವರನ್ನು ಸನ್ಮಾನಿಸಿ ಶುಭ ಕೋರಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾ ಓಬಿಸಿ ಅಧ್ಯಕ್ಷ ಕರಿಯಪ್ಪ ಹಾಲವರ್ತಿ, ಜೆಡಿಎಸ್ ಜಿಲ್ಲಾ ಕೈಗಾರಿಕಾ ಘಟಕದ ಅಧ್ಯಕ್ಷ ಮಾರುತಿ ಗೌಡ ಪೊಲೀಸ್ ಪಾಟೀಲ್, ಜಿಲ್ಲಾ ಕ್ರೀಡಾ ವಿಭಾಗದ ಅಧ್ಯಕ್ಷ ಸೈಯದ್ ಮಹೇಮೂದ್ ಹುಸೇನಿ ಬಲ್ಲೆ, ನಗರ ಅಧ್ಯಕ್ಷ ಸೋಮನಗೌಡ ಹೊಗರನಾಳ, ಯುವ ಘಟಕದ ಅಧ್ಯಕ್ಷ ಕಲೀಲ್, ಯುವ ಮುಖಂಡರಾದ ಸಲೀಮ್, ತಾಲೂಕು ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಏಣಿಗಿ ಹಾಗೂ ಇತರೆ ಮುಖಂಡರು ಉಪಸ್ಥಿತರಿದ್ದರು.

ಹರಟೆ, ಮಾತಿನ ಮಂಟಪ ಕಾರ್ಯಕ್ರಮ

ಕುಷ್ಟಗಿ: ತಾಲೂಕಿನ ತಾವರಗೇರಾ ಪಟ್ಟಣದ ಶ್ರೀ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನ ಆವರಣದಲ್ಲಿ ಸ್ಫೂರ್ತಿ ಯುವಕ ಸಂಘ (ರಿ) ಹಾಗೂ ಸ್ಫೂರ್ತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಯುಗಾದಿ ಹಬ್ಬದ ಹಾಗೂ ಹಿರೇ ಮಂಗಳೂರಿನ ಕಣ್ಣನ್ ರವರ ಸಾರಥ್ಯದಲ್ಲಿ ಹರಟೆ ಕಾರ್ಯಕ್ರಮ ಮತ್ತು ಗಂಗಾವತಿ ಪ್ರಾಣೇಶ್ ರವರಿಂದ ಮಾತಿನ ಮಂಟಪ ಕಾರ್ಯಕ್ರಮ ಗುರುವಾರ ಸಂಜೆ ಜರುಗಿತು.

ಈ ಕಾರ್ಯಕ್ರಮದ ಸಾನ್ನಿಧ್ಯ ಸಿದ್ದಾರೂಢ ಮಠದ ಕುಮಾರ ಸಿದ್ದಾರೂಢ ಮಹಾಸ್ವಾಮಿಗಳು ವಹಿಸಿದ್ದರು. ವಿಧಾನಸಭಾ ವಿರೋಧ ಪಕ್ಷದ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಉದ್ಘಾಟಿಸಿ ಮಾತನಾಡಿ, ನಮಗೆಲ್ಲರಿಗೂ ಸ್ಫೂರ್ತಿ ತುಂಬುವ ಕೆಲಸ ಮಾಡುತ್ತಿರುವ ಸ್ಫೂರ್ತಿ ಯುವಕ ಸಂಘ ಕಾರ್ಯ ಶ್ಲಾಘನೀಯ ಎಂದರು.

ಹಾಸ್ಯ ಬ್ರಹ್ಮ ಗಂಗಾವತಿ ಪ್ರಾಣೇಶ್ ಮಾತನಾಡಿ, ಸೇರಿದ್ದ ಜನರನ್ನು ನಗೆಗಡಲಲ್ಲಿ ತೇಲಿಸಿದರು. ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷ ನಾರಾಯಣಗೌಡ ಮದಿಕೇರಿ, ಉಪಾಧ್ಯಕ್ಷೆ ದುರ್ಗಮ್ಮ ಶ್ಯಾಮಣ್ಣ ಶಿರವಾಟಿ, ಮುಖಂಡರಾದ ಬಸನಗೌಡ ಪಾಟೀಲ್, ಸ್ಫೂರ್ತಿ ಯುವಕ ಸಂಘ ಅಧ್ಯಕ್ಷ ಶ್ಯಾಮ್ ಭಂಗಿ, ಪಿಎಸ್‌ಐ ಚಂದ್ರಪ್ಪ, ಪಪಂ ಸದಸ್ಯೆ ಅಂಬುಜಾ ಹೂಗಾರ, ಮಂಜುನಾಥ ಜುಲಕುಂಟಿ, ನರಹರಿ ಬಿಳೇಗುಡ್ಡ, ಮಂಜುನಾಥ ಶೆಟ್ಟಿ ಸೇರಿದಂತೆ ಇತರರಿದ್ದರು. ನಂತರ ಮಾತಿನ ಮಂಟಪ ಕಾರ್ಯಕ್ರಮ ಜರುಗಿತು. ನಂತರ ವಿವಿಧ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು.



ಆರೋಗ್ಯ ಕೇಂದ್ರದಲ್ಲಿ ಸಿಬ್ಬಂದಿ ಕೊರತೆ: ರೋಗಿಗಳ ಪರದಾಟ

ಸಂಗಮೇಶ ಹೇಮಗುಡ್ಡ

ದಿಗಂತ ವಿಶೇಷ

ಮುನಿರಾಬಾದ್: ಇಂದರಗಿ ಗ್ರಾಮದಲ್ಲಿ ಸುಮಾರು 5000 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇದೆ ಮತ್ತು ಏಳರಿಂದ ಎಂಟು ಗ್ರಾಮಗಳು ಈ ಆಸ್ಪತ್ರೆ ವ್ಯಾಪ್ತಿಗೆ ಬರುತ್ತವೆ. ಪ್ರತಿಯೊಂದು ಹಳ್ಳಿಯಿಂದ ಬಂದಂತ ಜನರಿಗೆ, ಬಡವರಿಗೆ ಚಿಕಿತ್ಸೆ ನೀಡಬೇಕಾದ ಡಾಕ್ಟರ್‌ಗಳು ಇಲ್ಲಿನ ಜನಕ್ಕೆ ಮಾರಕವಾಗಿದ್ದಾರೆ. ಈ ಪ್ರಾಥಮಿಕ ಆರೋಗ್ಯ ಕೇಂದ್ರವ ಹೆಸರಿಗೆ ಅಷ್ಟೇ ಆಸ್ಪತ್ರೆ ಎನ್ನುವಂತಾಗಿದೆ.

24 ಗಂಟೆ ತೆರೆದಿರುತ್ತದೆ ಆದರೆ ಯಾವೊಬ್ಬ ಸಿಬ್ಬಂದಿಯು ಸಹ ಇರುವುದಿಲ್ಲ. ಆರೋಗ್ಯ ಕೇಂದ್ರಗಳು ಓಪನ್ ಇರಬೇಕೆಂಬ ಆದೇಶ ಇದ್ದರೂ ಸಹ ಆಸ್ಪತ್ರೆ ನೋಡಿಕೊಂಡು ಬಂದ ದಾರಿಗೆ ಸುಂಕವಿಲ್ಲ ಅಂತ ಮರಳಿ ಹೋಗುತ್ತಾರೆ. ಗ್ರಾಮೀಣ ಭಾಗಗಳಿಗೆ ಅನುಕೂಲ ಆಗಲಿ ಎಂಬ ಒಂದೆ ಕಾರಣಕ್ಕೆ ಸರ್ಕಾರಗಳು ಆರೋಗ್ಯ ಕೇಂದ್ರಗಳನ್ನು ಕಟ್ಟಿರುತ್ತದೆ. ಆದರೆ ಇವರು ರೋಗಿಗಳು ಬಂದಾಗ ಯಾವ ಡಾಕ್ಟರ್ಸ್ ಹಾಗೂ ನರ್ಸ್‌ಗಳು ಇಲ್ಲದೆ ಬಿಕೋ ಎನ್ನುತ್ತಿದೆ. ಸಾರ್ವಜನಿಕರು ಫೋನ್ ಮಾಡಿದರೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬಡ ಜನರಿಗೆ ಹೆದರಿಸುತ್ತಾರೆ. ನಾವು ಇವತ್ತು ರಜಾ ಇದೀವಿ ನಾವು ಬರಲು ಆಗೋದಿಲ್ಲ ಇಲ್ಲಾಂದ್ರೆ ಬೇರೆ ಊರಿಗೆ ಹೋಗಿ ತೋರಿಸಿಕೊಂಡು ಬರ್ರಿ ಎಂದು ಹೇಳುತ್ತಾರೆ. ನಮ್ಮಂತ ಬಡ ಜನರು ಎಲ್ಲಿಗೆ ಹೋಗಬೇಕು ಹೇಳಿ ಎಂದು ಶಿವಪ್ಪ ರಾಥೋಡ್ ತಮ್ಮ ದುಃಖವನ್ನು ಹೇಳಿಕೊಂಡರು.



ನಮ್ಮ ನರ್ಸ್‌ಗಳು ಇಬ್ಬರೂ ಇದ್ದಾರೆ ಊಟದ ಸಮಯದಲ್ಲಿ ಬಂದ ಕಾರಣ ಅವರಿಗೆ ತೊಂದರೆ ಆಗಿರಬಹುದು. ನಮ್ಮ ಸಿಬ್ಬಂದಿಯವರಿಗೆ ಸಮಾಧಾನ ಮಾಡಿದರೂ ಸಹ ನಮ್ಮನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಸಮಾಧಾನ ಹೇಳಿದರೂ ಸಹ ಕೇಳುವಂತ ಸಂಯಮ ಅವರಲ್ಲಿ ಇಲ್ಲದ ಕಾರಣ ಇದಕ್ಕೆಲ್ಲ ಗೊಂದಲವಾಯಿತು.

■ ಆಡಿ ಶಿವಪ್ರಸಾದ್ ಕೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಇಂದರಗಿ

ಕಿರುಸುದ್ದಿ

ಆಂಜನೇಯ ರಥೋತ್ಸವ



◆**ಹಗರಿಬೊಮ್ಮನಹಳ್ಳಿ:** ತಾಲೂಕಿನ ಪಿಂಜಾರ್ ಹೆಗ್ಡಾಳ್ ಗ್ರಾಮದ ಶ್ರೀಆಂಜನೇಯ ಸ್ವಾಮಿ ರಥೋತ್ಸವ ಅದ್ದೂರಿಯಾಗಿ ನಡೆಯಿತು. ಗುರುವಾರ ಯುಗಾದಿ ಹಬ್ಬದ ದಿನ ರಥೋತ್ಸವದ ಅಂಗವಾಗಿ ಶ್ರೀಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಸಡಗರ ಸಂಭ್ರಮದಿಂದ ಜರುಗಿದವು. ಸಂಜೆ ರಥೋತ್ಸವಕ್ಕೂ ಮುನ್ನ ನಡೆದ ಪಟಾಕ್ಷಿ ಹರಾಜು ಪ್ರಕ್ರಿಯೆಯಲ್ಲಿ ವೆಂಕಟಾಪುರದ ಹನುಮಂತಪ್ಪ ಎಂಬುವರು 41 ಸಾವಿರ ರೂ ಗಳಿಗೆ ಪಡೆದರು. ಬಳಿಕ ಸಕಲ ವಾದ್ಯ ಮೇಳದೊಂದಿಗೆ ಸಹಸ್ರಾರು ಭಕ್ತರ ಜಯ ಘೋಷದ ಮಧ್ಯೆ ಶ್ರೀಆಂಜನೇಯ ಸ್ವಾಮಿ ರಥೋತ್ಸವ ಅದ್ದೂರಿಯಾಗಿ ನಡೆಯಿತು. ಪಿಂಜಾರ್ ಹೆಗ್ಡಾಳು ಗ್ರಾಮದ ಗುರು ಹಿರಿಯರು ಸುತ್ತಾ ಮುತ್ತಾಲಿನ ಗ್ರಾಮಗಳ ನಾಗರಿಕರು ಮಹಿಳೆಯರು ಮಕ್ಕಳು ಯುವಕರು ಪಾಲ್ಗೊಂಡಿದ್ದರು.

ಹನುಮಪ್ಪ ಸ್ವಾಮಿಯ ಮುಳ್ಳು ಗದ್ದುಗೆ ಉತ್ಸವ



◆**ಹೂವಿನಹಡಗಲಿ:** ಹೊಸ ವರುಷದ ಯುಗಾದಿ ಹಬ್ಬದಲ್ಲಿ ತಾಲ್ಲೂಕಿನ ಹೊಳಗುಂದಿ ಗ್ರಾಮದ ಶ್ರೀಹನುಮಪ್ಪ ಸ್ವಾಮಿಯ ರಥೋತ್ಸವ ನಿಮಿತ್ತ ಶುಕ್ರವಾರ ಸಂಜೆ 5.30ಕ್ಕೆ ಜರುಗಿದ ಭೇಟಿ ಮುಳ್ಳು ಗದ್ದುಗೆ ಉತ್ಸವ ಸಂಭ್ರಮದಿಂದ ಜರುಗಿತು. ಬೆಳಗ್ಗೆ 10ಗಂಟೆಗೆ ಭಕ್ತರು ಗ್ರಾಮದ ಹೊರವಲಯದಲ್ಲಿ ಧಾರ್ಮಿಕ ವಿಧಿ ವಿಧಾನಗಳ ಮೂಲಕ ಭೇಟಿ ಮುಳ್ಳಿನ ಕಂಟಿಗಳನ್ನು ಕಡಿದು ಕೊಂಡು ದೇಗುಲ ಮುಂಭಾಗದಲ್ಲಿ ಮುಳ್ಳಿನ ಗದ್ದುಗೆ ಸಿದ್ಧಪಡಿಸುತ್ತಾರೆ. ಸಂಜೆ 5.30ಕ್ಕೆ ರಾಶಿ ರಾಶಿ ಹಾಕಿರುವ ಭೇಟಿ ಮುಳ್ಳಿನ ಕಂಟಿಗಳ ಮೇಲೆ ಬರಗಾಲಲ್ಲಿ ಪೂಜಾರಿ ಬಸವರಾಜ್ ಮುಳ್ಳು ಗದ್ದುಗೆ ಹಾಯ್ದರು. ಈ ಉತ್ಸವದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು. ಸಂಭ್ರಮದ ಹನುಮಪ್ಪನ ರಥೋತ್ಸವ: ಹೊಳಗುಂದಿ ಗ್ರಾಮದಲ್ಲಿ ಗುರುವಾರ ಸಂಜೆ 5.30ಕ್ಕೆ ಹನುಮಪ್ಪ ಸ್ವಾಮಿ ರಥೋತ್ಸವ ಸಡಗರ ಸಂಭ್ರಮದಿಂದ ನೆರವೇರಿತು. ದೇವಸ್ಥಾನದಿಂದ ಭವ್ಯ ಮೆರವಣಿಗೆಯಲ್ಲಿ ಸಾಗಿ ಬಂದ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ತೇರನ್ನು ಎಳೆಯಲು ಚಾಲನೆ ನೀಡಲಾಯಿತು. ಸಮಾಳ, ನಂದಿಕೋಲು ಸೇರಿದಂತೆ ಮಂಗಳ ವಾದ್ಯಗಳು ರಥೋತ್ಸವಕ್ಕೆ ಮೆರುಗು ತಂದವು. ದೇಗುಲ ಅಧ್ಯಕ್ಷ ಸಿ.ಬಸವರಾಜ್, ಟಿ.ಹನುಮಂತಪ್ಪ, ಪರಶುರಾಮಪ್ಪ, ಹಾವನೂರು ರಾಜಶೇಖರ, ಗ್ರಾಮಸ್ಥರು ಭಾಗವಹಿಸಿದ್ದರು.

ನಿಧನ ಸುದ್ದಿ

ಟಿ. ಎಂ.ಭಾಗ್ಯಲಕ್ಷ್ಮೀ



◆ **ಕುರುಗೋಡು:** ತಾಲೂಕಿನ ಗೆಣಿಕಿಹಾಳ್ ಗ್ರಾಮದ ವೀರಶೈವ ಲಿಂಗಾಯತ ಸಮುದಾಯದ ಟಿ. ಎಂ. ಭಾಗ್ಯಲಕ್ಷ್ಮೀ (75)ನಿಧನರಾದರು. ಮೃತರಿಗೆ 6 ಜನ ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗ ಇದೆ.

ಹಿರೇಮಠದ ಕೊಟ್ರಬಸಮ್ಮ



◆ **ಹಗರಿಬೊಮ್ಮನಹಳ್ಳಿ:** ತಾಲೂಕಿನ ಬೆಣಕಲ್ಲು ಗ್ರಾಮದ ಹಿರೇಮಠದ ಕೊಟ್ರಬಸಮ್ಮ(85) ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ವಿಜಯನಗರ: ಜಿಲ್ಲಾ ಕೇಂದ್ರ ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಶನಿವಾರ ಈದ್-ಉಲ್- ಫಿತರ್ (ರಂಜಾನ್) ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಿದರು. ಹಬ್ಬದ ನಿಮಿತ್ತ ವಿವಿಧೆಡೆ ಇರುವ ಈದ್ಗಾ ಮೈದಾನಗಳಲ್ಲಿ ಶ್ರದ್ಧಾ-ಭಕ್ತಿಯಿಂದ ಸಾಮೂಹಿಕವಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ವಿಜಯನಗರ: ರಂಜಾನ್ ಸಂಭ್ರಮಾಚರಣೆ

◆**ವಿಜಯನಗರ:** ಜಿಲ್ಲಾ ಕೇಂದ್ರ ಹೊಸಪೇಟೆ ಸೇರಿದಂತೆ ಜಿಲ್ಲಾದ್ಯಂತ ಮುಸ್ಲಿಂ ಬಾಂಧವರು ಶನಿವಾರ ಈದ್-ಉಲ್- ಫಿತರ್(ರಂಜಾನ್) ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಿದರು. ಹಬ್ಬದ ನಿಮಿತ್ತ ವಿವಿಧೆಡೆ ಇರುವ ಈದ್ಗಾ ಮೈದಾನಗಳಲ್ಲಿ ಶ್ರದ್ಧಾ-ಭಕ್ತಿಯಿಂದ ಸಾಮೂಹಿಕವಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಹೊಸಪೇಟೆ ನಗರದ ಅಂಬೇಡ್ಕರ್ ವೃತ್ತ ಸಮೀಪದಲ್ಲಿರುವ ಅಂಜುಮನ್ ಕಿದ್ಮತ್ ಇ- ಇಸ್ಲಾಂಮ ಈದ್ಗಾ ಮೈದಾನದಲ್ಲಿ ಸಾವಿರಾರು ಸಂಖ್ಯೆ ಯಲ್ಲಿ ಮುಸ್ಲಿಂ ಬಾಂಧವರು ಲೋಕ ಕಲ್ಯಾಣಾರ್ಥವಾಗಿ ಸಾಮೂಹಿಕವಾಗಿ ನಮಾಜ್ ಮಾಡಿ, ಒಂದು ತಿಂಗಳ ಕಾಲ ಕೈಗೊಂಡಿದ್ದ ಉಪವಾಸ ವ್ರತಾಚರಣೆ ಸಂಪನ್ನಗೊಳಿಸಿದರು. ಬಳಿಕ ಆಶೀರ್ವಚನ ನೀಡಿದ ಧರ್ಮಗುರುಗಳು, ಈ ಬಾರಿ ಜಾಗತಿಕ ಮಟ್ಟದಲ್ಲಿ ಆವರಿಸಿರುವ ಸಂಘರ್ಷದ ವಾತಾವರಣ ತಿಳಿಯಾಗಬೇಕು. ವಿಶ್ವದಲ್ಲಿ ಶಾಂತಿ, ಸೌಹಾರ್ದತೆ ನೆಲೆ ನಿಲ್ಲಬೇಕು. ದೇಶದಲ್ಲಿ ಉತ್ತಮ ಮಳೆ, ಬೆಳೆ, ಸಮೃದ್ಧಿಯಾಗಬೇಕು. ಈದ್ ಉಲ್ ಫಿತರ್ ಆಚರಣೆಯಿಂದ ಸಮಾಜದಲ್ಲಿ ಸೌಹಾರ್ದ, ಸಹ ಬಾಳ್ವೆ ಸಹನೆ, ಪರಸ್ಪರ ಪ್ರೀತಿ, ವಿಶ್ವಾಸ ವೃದ್ಧಿಯಾಗಬೇಕು. ಪ್ರವಾದಿಗಳು ತೋರಿದ ಸನ್ಮಾರ್ಗವನ್ನು ಅನುಸರಿಸುವಂತೆ ಕಿವಿಮಾತು ಹೇಳಿದರು. ನಗರದ ವಿವಿಧ ಬಡಾವಣೆಗಳಲ್ಲಿರುವ ಮಸೀದಿಗಳಲ್ಲೂ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಸಾಮೂಹಿಕ ಪ್ರರ್ಥನೆ ಬಳಿಕ ಪರಸ್ಪರ ಆಲಂಗಿಸಿ ಕೊಂಡು 'ಈದ್ ಮುಬಾರಕ್' ಎಂದು ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು. ಸಮೂಹಿಕ ಪ್ರಾರ್ಥನೆಯಲ್ಲಿ ಹೊಸ ಬಟ್ಟೆ, ಟೋಪಿ, ಅರಬ್ ರಾಷ್ಟ್ರಗಳ ಮಾದರಿಯಲ್ಲಿ ರುಮಾಲು ಸುತ್ತಿಕೊಂಡು ಗಮನ ಸೆಳೆದರು. ಅದರಂತೆ ಮುಸ್ಲಿಂ ರಾಷ್ಟ್ರಗಳ ಮಾದರಿಯಲ್ಲಿ ವಿಶೇಷ ಉಡುಪಿನಲ್ಲಿ ಚಿಣ್ಣರು ಮನ ಸೆಳೆದರು.



ವಿಜಯನಗರ: ಹೊಸಪೇಟೆಯ ನಗರಸಭೆ ಕಚೇರಿ ಬಳಿ ಸಾರ್ವಜನಿಕರಿಗಾಗಿ ಮಿತ್ರ ಸೋಶಿಯಲ್ ಸರ್ವಿಸಸ್ ಟ್ರಸ್ಟ್ ವತಿಯಿಂದ ಆರಂಭಿಸಿರುವ ಕುಡಿಯುವ ನೀರಿನ ಅರವಟ್ಟಿಗೆಯನ್ನು ಶುಕ್ರವಾರ ನಗರಸಭೆ ಅಧ್ಯಕ್ಷ ಎನ್.ರೂಪೇಶ್‌ಕುಮಾರ್ ಚಾಲನೆ ನೀಡಿದರು. ಟ್ರಸ್ಟ್‌ನ ಅಧ್ಯಕ್ಷ ರಾಜಶೇಖರ್ ಸೂಳೆಬಾವಿ, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ರಾಯಸಂ, ಉಪಾಧ್ಯಕ್ಷ ಶ್ರೀನಿವಾಸ ಎಚ್., ಖಜಾಂಚಿ ಎ.ಕೆ.ವಿಜೇಂದ್ರ, ಸದಸ್ಯರಾದ ಗುಜ್ಜಲ್ ಹನುಮೇಶ್, ಶಿವಶಂಕರ್ ಸಿ., ರಾಘವೇಂದ್ರ ಕಾಕುಬಾಳ್, ಕಿರಣ್ ಕುಮಾರ್ ಕರ್ಣಂ, ಮಧುರಚನ್ನ ಶಾಸ್ತ್ರಿ ಹಿರೇಮಠ್, ಶಂಕರ್ ಮೇಟಿ, ಶಿವಕುಮಾರ್ ಇದ್ದರು.

ಹೈಬ್ರೀಡ್ ಜೋಳ ಖರೀದಿ ಕೇಂದ್ರ ಉದ್ಘಾಟನೆ | ಶಾಸಕ ಗಣೇಶ್ ಸಲಹೆ

ಜೋಳ ಖರೀದಿಗೆ ಸ್ಥಳೀಯರು ಸಹಕರಿಸಲಿ

◆**ಕುರುಗೋಡು:** ಸಮೀಪದ ಎಮ್ಮಿಗನೂರಿನ ಗ್ರಾಮದ ಕುರುಗೋಡು ರಸ್ತೆಯಲ್ಲಿನ ಉಪಸಂತೆ ಮಾರುಕಟ್ಟೆ ಅವರಣದಲ್ಲಿ ಹೈಬ್ರೀಡ್ ಜೋಳ ಖರೀದಿ ಕೇಂದ್ರವನ್ನು ಕಂಪ್ಲಿ ಶಾಸಕ ಜೆ.ಎನ್. ಗಣೇಶ್ ಶನಿವಾರ ಚಾಲನೆ ನೀಡಿದರು.

ನಂತರ ಶಾಸಕ ಗಣೇಶ್ ಮಾತನಾಡಿ, ಸ್ಥಳೀಯವಾಗಿ ಸಹಕಾರ ಸಂಘಕ್ಕೆ ಸಹಕರಿಸಬೇಕು. ಜಿಲ್ಲೆಯ ಎಮ್ಮಿಗನೂರು ಭೂ ಪ್ರದೇಶದಲ್ಲಿ ರೈತರು ಅತಿ ಹೆಚ್ಚಾಗಿ ಜೋಳ ಬೆಳೆ ಅವಲಂಬಿತವಾಗಿ ಬೆಳೆಯುತ್ತಿದ್ದು, ಪ್ರಸಕ್ತಲಿನಲ್ಲಿ 3699 ರೂ.ಗಳ ಬೆಂಬಲ ಬೆಲೆ ರೈತರಿಗೆ ಸಮರ್ಪಕವಾಗಿ ಬೆಂಬಲ ಬೆಲೆ ದೊರಕಬೇಕೆಂಬ ದೃಷ್ಟಿಯಿಂದ ಕಳೆದ ವರ್ದದಿಂದ ಖರೀದಿ ಕೇಂದ್ರ ಆರಂಭಿಸಲಾಗಿದೆ. ಇದರಿಂದ ಈ ಭಾಗದ ರೈತರಿಗೆ ಬಹಳಷ್ಟು ಅನುಕೂಲವಾಗುವ ಜೊತೆಗೆ ಸರ್ಕಾರದ ಅಡಿಯಲ್ಲಿ ಬೆಂಬಲ ಬೆಲೆ ಸಿಗಲಿದೆ. ಈ ಬೆಂಬಲ ಬೆಲೆಯಿಂದ ರೈತರ ಬದುಕು ಆರ್ಥಿಕವಾಗಿ ವೃದ್ಧಿಯಾಗಲು ಪ್ರಮುಖ ಕಾರಣವಾಗಿದೆ. ರೈತರು ಖರೀದಿ ಕೇಂದ್ರಕ್ಕೆ ತಾವು ಬೆಳೆದಂತಹ ಗುಣಮಟ್ಟದ ಜೋಳವನ್ನು ನೀಡುವ ಮೂಲಕ ಬೆಂಬಲ ಬೆಲೆ



ಪಡೆದುಕೊಳ್ಳಲು ಮುಂದಾಗಬೇಕು ಎಂದರು.

ತದನಂತರ ಆಹಾರ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ದೇವರಾಜ್ ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ 18 ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತಿದೆ. ಈಗ ಎಮ್ಮಿಗನೂರು ಗ್ರಾಮದಲ್ಲಿ ಕೇಂದ್ರ ಉದ್ಘಾಟಿಸಿದ್ದು, ಇದರಿಂದ ಇಲ್ಲಿನ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ, 599 ರೈತರು ನೋಂದಣಿ ಮಾಡಿಸಿಕೊಂಡಿದ್ದು, ಮತ್ತು ಕಂಪ್ಲಿ-ಕುರುಗೋಡು ಒಳಗೊಂಡಂತೆ ಎರಡು ತಾಲೂಕುಗಳಲ್ಲಿ ಸುಮಾರು ಒಂದು ಲಕ್ಷ ಕ್ವಿಂಟಲ್ ಜೋಳ ಖರೀದಿಸುವ ಗುರಿ ಹೊಂದಲಾಗಿದೆ ಎಂದರು.

ಗೊಂದಲ: ಪ್ರಾರಂಭದಲ್ಲಿ ಪ್ರತಿ ಕಿಂಟ್ವಾಲ್ ಸರಕಾರ ಪ್ರಸಕ್ತವಾಗಿ ರೂ 28 ನಿಗದಿ ಮಾಡಿದ್ದು, ಕಳೆದ ವರ್ಷ ರೂ 32 ನಿಗದಿ ಪಡಿಸಲಾಗಿತ್ತು. ಇದರ ಬಗ್ಗೆ ಚರ್ಚೆಗೆ ಬಂದಿತು. ಈ ಸಲ ರೈತರ ಖರೀದಿ ಕೇಂದ್ರವಿಳಂಭವಾಗಿದ್ದು ಎಲ್ಲಾ ರೀತಿಯಲ್ಲಿ ಸಹಕಾರ ಸಂಘಕ್ಕೆ ರೈತರು ಸಹಕರಿಸಬೇಕು ಎಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಇ.ಜಡೇಶ್ ರೆಡ್ಡಿ ಎಂದರು.

ಈ ವೇಳೆ ಸೊಸೈಟಿ ಅಧ್ಯಕ್ಷ ಬಿ.ಕಾಸಿಂಸಾಬ್, ಉಪಾದಕ್ಷಅಲ್ಲಸಾಬು,ಮುಖ್ಯಕಾರ್ಯನಿರ್ವಾಹಕ ಜಡೇಶ್‌ರೆಡ್ಡಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಬಿ.ವಿ.ಗೌಡ, ಮುಖಂಡರಾದ ಬಿ.ಸದಾಶಿವಪ್ಪ, ಮೀನುಕೇರೆ ಶೇಖಣ್ಣ, ಮಹೇಶ್‌ಗೌಡ, ಎನ್. ಸೂಗಪ್ಪ, ಜಿ. ಗಾದ್ಲಿ ನಾಗರೆಡ್ಡಿ, ಎಳ್ಳರ್ತಿ ರಾಘವೇಂದ್ರರೆಡ್ಡಿ, ನೀರು ರೈತ ಬಳಕೆ ಸಹಕಾರ ಸಂಘದ ಅಧ್ಯಕ್ಷ ಕಾಗಿ ಈರಣ್ಣ, ರೈತ ಸಂಘದ ಅಧ್ಯಕ್ಷ ವಿ.ವಿರೇಶ, ವೈ. ಆಶ್ವರ್ಥ ರೆಡಿ, ಸಂಘದ ನಿರ್ದೇಶಕರು, ರೈತರು, ಮುಖಂಡರು, ಸಿಬ್ಬಂದಿವರ್ಗ ಸೇರಿದಂತೆ ಇದ್ದರು.



ವಿಜಯನಗರ: ಹೊಸಪೇಟೆ ನಗರದ ಶ್ರೀಸಣ್ಣಕ್ಕಿ ವೀರಭದ್ರೇಶ್ವರ ಸ್ವಾಮಿ ರಥೋತ್ಸವವು ಶುಕ್ರವಾರ ಅತ್ಯಂತ ಸಂಭ್ರಮ, ಸಡಗರದಿಂದ ನೆರವೇರಿಯಿತು. ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಶ್ರೀಜಗದ್ಗುರು ಶ್ರೀಕೊಟ್ಟೂರು ಸಂಸ್ಥಾನ ಮಠದ ಬಸವಲಿಂಗ ಮಹಾಸ್ವಾಮಿಗಳು ರಥೋತ್ಸವಕ್ಕೆ ಚಾಲನೆ ನೀಡಿದರು. ಯುಗಾದಿ ಹಬ್ಬದ ಮುನ್ನ ದಿನವಾದ ಗುರುವಾರ ಸಂಜೆ ಶ್ರೀಸಣ್ಣಕ್ಕಿವೀರಭದ್ರೇಶ್ವರ ಸ್ವಾಮಿ ಅಗ್ನಿಕುಂಡ ಪ್ರವೇಶ ಭಕ್ತರು ನೆರವೇರಿಸಿದ್ದರು. ವಿಜಯನಗರ ಎಎಸ್ಪಿ ಮಂಜುನಾಥ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಪ್ರತಿ ವರ್ಷದಂತೆ ಈ ವರ್ಷವೂ ಇಲ್ಲಿನ ಜಾಗೃತ ನಾಯಕ ಬಳಗದ ಸದಸ್ಯರು ಭಕ್ತರಿಗೆ ಮಜ್ಜಿಗೆ ವಿತರಿಸಿದರು.

ತಂಗಡಗಿ ಹೇಳಿಕೆಗೆ ಖಂಡನೆ: ಹೋರಾಟದ ಎಚ್ಚರಿಕೆ

◆**ಬೀದರ:** ಕಲ್ಯಾಣ ಕರ್ನಾಟಕದ ಗಡಿ ಜಿಲ್ಲೆ ಬೀದರದ ಜೀವನಾಡಿಯಾದ ಕಾರಂಜಾ ನೀರಾವರಿ ಯೋಜನೆಗೆ ಭೂಮಿ ನೀಡಿದ ರೈತ ಸಂತ್ರಸ್ತರ ಸಮಸ್ಯೆಗಳ ಬಗ್ಗೆ ಸಚಿವ ಶಿವರಾಜ ತಂಗಡಗಿ ನೀಡಿದ ಹೇಳಿಕೆಯನ್ನು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ತೀವ್ರವಾಗಿ ಖಂಡಿಸಿದೆ.

ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿ ಹಾಗೂ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ ಪ್ರಕಟಣೆ ನೀಡಿದ್ದು, ಸಚಿವರ ಹೇಳಿಕೆ ಕಲ್ಯಾಣ ಕರ್ನಾಟಕ ಜನವಿರೋಧಿ ಹಾಗೂ ಬೀದರ ಜಿಲ್ಲೆಯ ರೈತ ಸಂತ್ರಸ್ತರ ವಿರುದ್ಧದ ಧೋರಣೆಯನ್ನು ತೋರಿಸುತ್ತದೆ ಎಂದು ಆರೋಪಿಸಿದ್ದಾರೆ.

ಕಾರಂಜಾ ಯೋಜನೆಗೆ ಭೂಮಿ ನೀಡಿದ ಬಹುತೇಕ ಸಂತ್ರಸ್ತರಿಗೆ ಕಳೆದ ನಾಲ್ಕು ದಶಕಗಳಿಂದ ಸಮರ್ಪಕ ಮತ್ತು ವೈಜ್ಞಾನಿಕ ಆಧಾರದ ಪರಿಹಾರ ದೊರಕಿಲ್ಲ ಎಂಬುದು ಸರ್ಕಾರಕ್ಕೂ ತಿಳಿದಿರುವ ವಿಚಾರವಾಗಿದೆ. ಇಂತಹ ಸೂಕ್ಷ್ಮ ವಿಷಯದ ಬಗ್ಗೆ ಸಮರ್ಪಕ ಅಧ್ಯಯನ ಮಾಡದೇ ಸಚಿವರು ವಿಧಾನಸಭೆಯಲ್ಲಿ ಬೇಜವಾಬ್ದಾರಿ ಉತ್ತರ ನೀಡಿರುವುದು ಖಂಡನೀಯ ಎಂದು ತಿಳಿಸಿದರು.

ಸಚಿವರು ಕನ್ನಡ ನೆಲ, ಜಲ, ಸಂಸ್ಕೃತಿ ಮತ್ತು ಭಾಷೆಯ ರಕ್ಷಣೆಗೆ ಸಂಬಂಧಿಸಿದ ಖಾತೆ ಹೊಂದಿದ್ದರೂ, ಕಾರಂಜಾ ಯೋಜನೆ ಹಾಗೂ ರೈತ ಸಂತ್ರಸ್ತರ ತ್ಯಾಗದ ಬಗ್ಗೆ ಅರಿವು ಇಲ್ಲದೆ ಮಾತನಾಡಿರುವುದು ಅವಮಾನಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅವರು ಸಚಿವಸ್ಥಾನದಲ್ಲಿ ಮುಂದುವರಿಯುವ ನೈತಿಕತೆ ಕಳೆದುಕೊಂಡಿದ್ದಾರೆ ಎಂದು ಸಮಿತಿಯವರು ಆರೋಪಿಸಿದ್ದಾರೆ.

ಹಿಂದಿನ ಸರ್ಕಾರಗಳು ಮತ್ತು ಸಮಿತಿಗಳು ಕಾರಂಜಾ ಸಂತ್ರಸ್ತರಿಗೆ ಪರಿಹಾರ ನೀಡುವ ಬಗ್ಗೆ ಶಿಫಾರಸು ಮಾಡಿರುವುದನ್ನು ಉಲ್ಲೇಖಿಸಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಲಾಯಿತು.

ಸಚಿವ ತಂಗಡಗಿಯವರ ಧೋರಣೆ ವಿರುದ್ಧ ಬರುವ ದಿನಗಳಲ್ಲಿ ಬೀದರ ಜಿಲ್ಲಾ ಕೇಂದ್ರದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದ್ದು, ಈ ಸಂಬಂಧ ಸಭೆ ಕೂಡ ನಡೆದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಸಂಘದ ಮುಖಂಡರಾದ ವಿನಯ ಮಾಳಗೆ, ರಾಜಪ್ಪಾ ಕೋಸಂ, ರಾಜಕುಮಾರ ಬುಸ್ಸಾ, ಸಂಗರೆಡ್ಡಿ ಅವರಾದ್, ಮಹಮ್ಮದ್ ಸೋಲಾಪೂರೆ, ಯೂಸುಫ್ ರೇಕಳಗಿ, ರೋಹನ್ ಕುಮಾರ, ಮಾದಪ್ಪಾ, ರಂಜೋಳ್, ವಿರೇಂದ್ರ ಭಾತಮುರಗೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವ್ಯಸನ ಮುಕ್ತ ಯುವಶಕ್ತಿ ಅತ್ಯಗತ್ಯ

◆**ಬಳ್ಳಾರಿ:** ಮಾದಕ ವ್ಯಸನವು ಕೇವಲ ವ್ಯಕ್ತಿಯ ಸಮಸ್ಯೆಯಲ್ಲ, ಕುಟುಂಬಗಳನ್ನು ವಿಘಟಿಸಿ ಸಮಾಜದಲ್ಲಿ ಅಶಾಂತಿ ಮತ್ತು ಅಪರಾಧಗಳನ್ನು ಹೆಚ್ಚಿಸುವ ರಾಷ್ಟ್ರೀಯ ಸವಾಲಾಗಿದೆ. ಸದೃಢ ಭಾರತ ನಿರ್ಮಾಣಕ್ಕಾಗಿ ಯುವಶಕ್ತಿಯು ವ್ಯಸನ ಮುಕ್ತ ಇಂದಿನ ಅತ್ಯಗತ್ಯ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ಕ್ರೀಡಾಂಗಣ ಮೈದಾನದಲ್ಲಿ ಬುಧವಾರ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾ ಬೋಧಿ ಫೌಂಡೇಷನ್ ಮತ್ತು ನಾರ್ಕೋಟಿಕ್ಸ್ ಬ್ಯೂರೋ ಸಹಯೋಗದಲ್ಲಿ ಆಯೋಜಿಸಿದ್ದ ನಶಾ ಮುಕ್ತ ಭಾರತ, ಯುವ ಶುದ್ಧಿ ಅಭಿಯಾನ ವಾಕಥಾನ್‌ಗೆ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕದ ಪುಣ್ಯ ಭೂಮಿಯು ಶ್ರೀಮಂತ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ. ಬಸವಣ್ಣನವರಂತಹ ಮಹಾನ್ ಸಂತರ ಬೋಧನೆಗಳು ನಮಗೆ ಸದಾ ಸಂಯಮ ಮತ್ತು ಸದಾಚಾರದ ಹಾದಿಯನ್ನು ತೋರಿಸಿವೆ. ಇಂತಹ ಪವಿತ್ರ ಮಣ್ಣಿನಲ್ಲಿ ಮಾದಕದ್ರವ್ಯಗಳ ಹಾವಳಿ ಹೆಚ್ಚುತ್ತಿರುವುದು ಆತಂಕಕಾರಿ ವಿಷಯವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾರತವು ವಿಶ್ವದ ಅತಿ ಹೆಚ್ಚು ಯುವ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದೆ. ತಂತ್ರಜ್ಞಾನ ಮತ್ತು ನಾವೀನ್ಯತೆಯಲ್ಲಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಗುರುತಿಸಿ ಕೊಂಡಿದೆ. ಯುವಜನತೆಯಲ್ಲಿರುವ ಶಕ್ತಿಯು ದೇಶವನ್ನು ವಿಕಸಿತ ಭಾರತದ ಕೊಂಡೊಯ್ಯಲು ಸಹಕಾರಿಯಾಗಬೇಕು ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕುಲಪತಿ ಡಾ.ಬಿ.ಸಿ.ಭಗವಾನ್ ಮಾತನಾಡಿ, ಯುವಜನತೆ ಮಾದಕ ವ್ಯಸನದಂತಹಕೆಟ್ಟಹವ್ಯಾಸಗಳಿಗೆಬಲಿಯಾಗದೆ, ಆರೋಗ್ಯವಂತ ಮತ್ತು ಸದೃಢ ಭಾರತದ ನಿರ್ಮಾಣಕ್ಕೆ ಕೈಜೋಡಿಸಬೇಕು. ಮಾದಕ ದ್ರವ್ಯ ಮುಕ್ತ ಕ್ಯಾಂಪಸ್ ನಿರ್ಮಾಣಕ್ಕಾಗಿ ಪ್ರತಿಯೊಂದು ಕಾಲೇಜಿನಲ್ಲಿ 'ಮಾದಕ ದ್ರವ್ಯ ವಿರೋ ಪಡೆ'ಯನ್ನು ರಚಿಸಲಾಗಿದೆ ಎಂದರು.

ಕ್ಯಾಥೋಲಿಕ್ ಬಿಷಪ್ ಹೆನ್ರಿ ಡಿಸೋಜ ಮಾತನಾಡಿದರು.

ಕಮ್ಮರಚೇಡು ಶ್ರೀಕಲ್ಯಾಣಸ್ವಾಮಿ ಸಂಸ್ಥಾನ ಮಠದ ಕಲ್ಯಾಣ ಸ್ವಾಮೀಜಿ ಮಾತನಾಡಿದರು. ಸಾವಿರಾರು ವಿದ್ಯಾರ್ಥಿಗಳಿಗೆ 'ಮಾದಕ ದ್ರವ್ಯ ಮುಕ್ತ ಭಾರತ'ಕ್ಕಾಗಿ ಪ್ರತಿಜ್ಞಾ ವಿಧಿ ಬೋಧಿಸಿದರು. ಈ ವೇಳೆ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಇನ್ಸ್ಪೆಕ್ಟರ್ ವಿಕಾಸ್‌ಸಿಂಗ್, ದಿಶಾ ಬೋರ್ಡ್ ಫೌಂಡೇಷನ್ ನಿರ್ದೇಶಕರಾದ ಕೆ.ಶಿವವಾಗಿ ರೆಡ್ಡಿ, ಎಸ್.ಪಿ.ಚಿದಾನಂದ, ಜಾನೆಕುಂಟೆ ಬಸವರಾಜ್ ಸೇರಿ ಇತರರಿದ್ದರು.



ಸಂಭ್ರಮದ ರಂಜಾನ್ ಹಬ್ಬ ಆಚರಣೆ: ಸಾಮೂಹಿಕ ಪ್ರಾರ್ಥನೆ

◆**ಹೂವಿನ ಹಡಗಲಿ:** ಪಟ್ಟಣದ ಎಪಿಎಂಸಿ ಸರ್ಕಲ್ ನಲ್ಲಿರುವ ಈದ್ಗಾ ಮೈದಾನದ ಆವರಣದಲ್ಲಿ ಮುಸ್ಲಿಂ ಧರ್ಮದ ಗುರುಗಳಾದ ಹಜರತ್ ಗುಪ್ತಿ ಮತ್ತು ಎಲ್ಲಾ ಮುಸ್ಲಿಂ ಬಾಂಧವರು ಸೇರಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪವಿತ್ರ ಇಸ್ಲಾಮಿಕ್ ತಿಂಗಳು ಇದರಲ್ಲಿ 30 ದಿನಗಳ ಕಾಲ ಬೆಳಗ್ಗೆಯಿಂದ ಸೂರ್ಯೋದಯಕ್ಕೂ ಮುನ್ನ ಸೂರ್ಯಸ್ತದವರೆಗೆ ನೀರು ಸೇವಿಸದೆ ಉಪವಾಸ ರೋಜಾ ಆಚರಣೆ ಮಾಡುತ್ತಾರೆ ಇದು ಆತ್ಮ ಶುದ್ಧಿ ತಾಳ್ಮೆ ಕೃತಜ್ಞತೆ ಮತ್ತು ಬಡವರ ಮೇಲಿನ ಸಹಾಭೂತಿಯ ಸಂಕೇತವಾಗಿದೆ ತಿಂಗಳ ಕೊನೆಯಲ್ಲಿ



ಚಂದ್ರ ದರ್ಶನದನಂತರ ಈದ್ ಉಲ್ ಪೀತರ್ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ.

ಅಂದು ಮುಸ್ಲಿಮರು ಹೊಸ ಬಟ್ಟೆಗಳನ್ನು ಧರಿಸಿ ಮಸಿದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ (ನಮಾಜ್) ಸಲ್ಲಿಸುತ್ತಾರೆ. ನಂತರ ಪರಸ್ಪರ ಈದ್ ಮುಬಾರಕ್ ಎಂದು ಶುಭಾಶಯ ಕೋರುತ್ತಾರೆ. ಸಿಹಿ ತಿನಿಸುಗಳನ್ನು ಹಂಚಿಕೊಳ್ಳುತ್ತಾರೆ.

ಈ ರಂಜಾನ್ ಹಬ್ಬವು ಮಾನವಿಯತೆ. ಸಹೋದರತ್ವ, ಪ್ರೀತಿ ಮತ್ತು ಶಾಂತಿ ಸಂದೇಶವನ್ನು ನೀಡುತ್ತದೆ. ಇದು ನಮ್ಮ ಮನಸ್ಸಿನ ಅಹಂಕಾರವನ್ನು ಕಡಿಮೆ ಮಾಡಿ ದೇವರಿಗೆ ಮತ್ತು ಸಹಮಾನವರಿಗೆ ಹತ್ತಿರವಾಗಲು ಸಹಾಯ ಮಾಡುತ್ತದೆ.

ಈ ಸಂದರ್ಭದಲ್ಲಿ ಶಾಸಕರಾದ ಕೃಷ್ಣನಾಯ್ಕ್, ಮುಸ್ಲಿಂ ಧರ್ಮ ಗುರುಗಳು, ಹಾಗೂ ಕಮಿಟಿಯ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಮುಸ್ಲಿಂ ಬಾಂಧವರು ಇದ್ದರು. ಈದ್ಗಾ ಮೈದಾನದ ಆವರಣದಲ್ಲಿ ಎಲ್ಲಾ ಮುಸ್ಲಿಂ ಬಾಂಧವರು ಸೇರಿ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಮುಸ್ಲಿಂ ಧರ್ಮದ ಮುಖಂಡರಾದ ವಾರದ್ ಗೌಸ್ ಮೂಹದ್ದಿನ್, ಮುಸ್ಲಿಂ ಧರ್ಮ ಗುರುಗಳು, ಸಿಪಿಐ ಮಲ್ಲಪ್ಪ ಹೂಗಾರ್, ಕಮಿಟಿಯ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಎಲ್ಲಾ ಮುಸ್ಲಿಂ ಬಾಂಧವರು ಇದ್ದರು.

ಆಂಜನೇಯಸ್ವಾಮಿ ದೇವಾಲಯ ಆವರಣದಲ್ಲಿ ಚಂದ್ರದರ್ಶನ

◆**ಹಗರಿಬೊಮ್ಮನಹಳ್ಳಿ:** ತಾಲೂಕಿನ ನಂದಿಪುರ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಇರುವ ಆಂಜನೇಯ ಸ್ವಾಮಿಯ ದೇವಾಲಯದ ಆವರಣ ದಲ್ಲಿ ಯುಗಾದಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ ಚಂದ್ರದರ್ಶನ ಸೌಹಾರ್ದತೆಯೊಂದಿಗೆ ಜರುಗಿತು.

ಗ್ರಾಮದ ಹಿಂದೂ ಹಾಗೂ ಇಸ್ಲಾಂ ಬಾಂಧವರು ಒಂದಾಗಿ ಸೇರಿ ಸಂಜೆ ಚಂದ್ರದರ್ಶನ ಮಾಡಿ ಹಬ್ಬದ ಸಂಭ್ರಮವನ್ನು ಹಂಚಿಕೊಂಡರು.

ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಏಕತೆ ಮತ್ತು ಭ್ರಾತೃತ್ವದ ಸಂದೇಶವನ್ನು ಸಾರಿದರು.

ಯುಗಾದಿಯ ಸಂಕೇತವಾದ ಬೇವು-ಬೆಲ್ಲ ಸೇವನೆಯ ಮೂಲಕ ಜೀವನದ ಕಹಿ-ಸಿಹಿ



ಅನುಭವಗಳನ್ನು ಸಮಾನವಾಗಿ ಸ್ವೀಕರಿಸುವ ಸಂದೇಶ ಹಂಚಿಕೊಳ್ಳಲಾಯಿತು. ರಂಜಾನ್ ಹಬ್ಬದ ಪಾವಿತ್ರ್ಯವು ಸಹ ಸಹನೆ, ಶಾಂತಿ ಮತ್ತು ಸಹಬಾಳ್ವೆಯ ಮೌಲ್ಯಗಳನ್ನು ಪ್ರತಿಬಿಂಬಿಸಿತು.

ಈ ಸಂದರ್ಭದಲ್ಲಿ ಮೌಲಾನ ಸಿರಾಜುದ್ದೀನ್, ಪಿ.ನಬೀ ಸಾಹೇಬ್, ಆರ್.ಚಾಂದ್ ಬಾಷಾ, ಅಬ್ದುಲ್ ವಾಹಿದ್, ಹೆಚ್.ಕಾಸೀಂ ಸಾಹೇಬ್, ಹೆಚ್.ರಾಜಾಸಾಹೇಬ್, ಪಿ.ರಹಿಮಾನ್, ಎಂ.ಡಿ. ಬಸವನಗೌಡ, ಬಿ.ದೇವರೆಡ್ಡಿ, ಹೆಚ್.ಎಸ್. ದೊಡ್ಡ ಬಸವರೆಡ್ಡಿ, ಬಣಕಾರ ದೊಡ್ಡ ಬಸಪ್ಪ, ಹೆಚ್.ಎಂ. ಗುರುಬಸವರಾಜಯ್ಯ, ಬಿ.ಎಂ. ಗುರುಲಿಂಗಯ್ಯ, ಎಸ್.ಎಂ. ಪರಮೇಶ್ವರಯ್ಯ, ಉಂಡಾಡಿ ಬಸವರಾಜ, ಎಂ. ನಾಗರಾಜ, ಎಸ್.ಎಂ. ತಿಪ್ಪಯ್ಯ, ಮೈನಳ್ಳಿ ದೊಡ್ಡ ಬಸವರೆಡ್ಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಗ್ರಾಮದ ಹಿರಿಯರು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು. ನಂದಿಪುರದಲ್ಲಿ ನಡೆದ ಈ ವಿಶೇಷ ಆಚರಣೆ ಸಮಾಜದಲ್ಲಿ ಸೌಹಾರ್ದತೆ ಹಾಗೂ ಏಕತೆಯ ಆದರ್ಶವಾಗಿ ಗಮನ ಸೆಳೆಯಿತು.

ರೈಲ್ವೆ ಸಮಸ್ಯೆ ಬಗೆ ಹರಿಸಲು ಮನವಿ



◆**ಬಳ್ಳಾರಿ:** ಬಳ್ಳಾರಿ ಭಾಗದ ರೈಲ್ವೆ ಸಮಸ್ಯೆಗಳ ಕುರಿತು ಹೆಚ್ಚು ಗಮನಹರಿಸಿ, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಒತ್ತಾಯಿಸಿ ಇಲ್ಲಿನ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿಯ ಸದಸ್ಯರು ಬಳ್ಳಾರಿಯ ಸಂಸದ ಈ.ತುಕಾರಾಂ ಅವರಿಗೆ ಶನಿವಾರ ಮನವಿ ಮಾಡಿದರು. ನಾನಾ ಕಾರಣಗಳಿಂದ ನಿಲುಗಡಿಯಾಗಿರುವ ಕೊಲ್ಹಾಪುರ್ ಮುನಗೂರು ರೈಲು, ಶಿವಮೊಗ್ಗ ಚೆನ್ನೈ ರೈಲು ಸೇರಿದಂತೆ ನಿಲುಗಡೆಯಾದ ಎಲ್ಲ ರೈಲುಗಳನ್ನು ಮತ್ತೆ ಪ್ರಾರಂಭಿಸಬೇಕು. ಬಳ್ಳಾರಿ ಮಾರ್ಗವಾಗಿ ಉದಯ ಒಂದೇ ಭಾರತ್ ಇಲ್ಲವೇ ಇಂಟರ್‌ಸಿಟಿ ಆರಂಭಿಸಬೇಕು, ಬಳ್ಳಾರಿಯ ಸ್ಟೇಡಿಯಂ ಬಳಿ ಬೈಪಾಸ್ ರೈಲ್ವೆ ನಿಲ್ದಾಣ, ಮೈಸೂರ ಅಜ್ಮೀರ್ ರೈಲನ್ನೂ ಬಳ್ಳಾರಿ ಹೊಸಪೇಟೆ ಮಾರ್ಗದಲ್ಲಿಯೇ ಸಂಚರಿಸಬೇಕು ಎಂಬ ರೈಲ್ವೆ ಬೇಡಿಕೆಗಳ ಮನವಿಯನ್ನು ಪದಾಧಿಕಾರಿಗಳು ಸಲ್ಲಿಸಿದರು. ಜೊತೆಗೆ ಪ್ರಮುಖವಾಗಿ ಬಳ್ಳಾರಿ ಸಿರುಗುಪ್ಪ ಸಿಂಧನೂರು ನೂತನ ರೈಲು ಮಾರ್ಗ ಜೊತೆಗೆ ಹಗರಿ ಆದೋನಿ ರೈಲ್ವೆ ಮಾರ್ಗಕ್ಕೆ ಚಾಲನೆ ನೀಡಬೇಕು ಎಂದು ಮನವಿ ಸಲ್ಲಿಸಿದರು. ರೈಲ್ವೆ ಸಮಿತಿ ಅಧ್ಯಕ್ಷ ಕೆ.ಎಂ. ಮಹೇಶ್ವರ ಸ್ವಾಮಿ, ಪದಾಧಿಕಾರಿಗಳಾದ ಪಿ.ಯೋಗಿರಾಜ್, ಕುಪಗಲ್ ಬೀರೇಶ್, ಪಿ.ಬಂಡೇಗೌಡ, ಎಚ್.ಕೆ. ಗೌರಿಶಂಕರ್, ಕೆ.ಎಂ. ಉಮಾಪತಿ ಗೌಡ, ಬಿ.ಎಂ. ಎರ್ರಿ ಸ್ವಾಮಿ, ಸಿಂದವಾಳ ಮಹೇಶ್ ಗೌಡ, ಎ.ಪಿ. ಉಮೇಶ್, ಬಸವರಾಜ್, ಶ್ರೀಧರ್ ಗೌಡ, ಪಿ. ಭರತ್ ರಾಜ್, ಪಲ್ಲದ ಪ್ರಭುಲಿಂಗ, ಬಸವರಾಜ್ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ರಂಜಾನ್: ಶುಭಾಶಯ ಕೋರಿದ ಡಾ.ಸೈಯದ್ ನಾಸಿರ್ ಹುಸೇನ್

◆**ಬಳ್ಳಾರಿ:** ಮುಸ್ಲಿಂ ಸಮುದಾಯದವರ ಪವಿತ್ರ ಹಬ್ಬ ರಂಜಾನ್ ಹಬ್ಬ ಹಿನ್ನಲೆ, ರಾಜ್ಯಸಭಾ ಸದಸ್ಯ ಡಾ. ಸೈಯ್ಯದ್ ನಾಸೀರ್ ಹುಸೇನ್ ಅವರು ಬೆಂಗಳೂರಿನ ಖುದ್ದೂಸ್ ಸಾಬ್ ಈದ್ಗಾ ಮೈದಾನದಲ್ಲಿ ಶನಿವಾರ ಸಾಮೋಹಿಕ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದು, ರಾಜ್ಯಸಭಾ ಸದಸ್ಯ ಡಾ. ಸೈಯ್ಯದ್ ನಾಸೀರ್ ಹುಸೇನ್ ಅವರು ಎಲ್ಲರಿಗೂ ಹಬ್ಬದ ಶುಭಾಶಯಗಳನ್ನು ತಿಳಿಸಿ, ಪರಸ್ಪರ ವಿನಿಮಯ ಮಾಡಿಕೊಂಡರು. ದೇಶದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವ ಇನ್ನಷ್ಟು ವೃದ್ಧಿಯಾಗಲಿ ಎಂದು ಗಣ್ಯರು ಪ್ರಾರ್ಥಿಸಿದರು.



ಶಾಂತಿ, ಸೌಹಾರ್ದತೆಯ ಮೆರಗು ರಂಜಾನ್



◆**ಕೊಟ್ಟೂರು:** ರಂಜಾನ್ ಹಬ್ಬವು ಶಾಂತಿ ಸೌಹಾರ್ದತೆ ಹಾಗೂ ಸಹೋದರತ್ವದ ಮೆರಗು ಆಗಿದೆ ಎಂದು ಯಾಸೀನ್ ಮುಷ್ಟಿ ತಿಳಿಸಿದರು.

ಪಟ್ಟಣದಲ್ಲಿ ಪವಿತ್ರ ರಂಜಾನ್ ಹಬ್ಬವನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಒಂದು ತಿಂಗಳ ಕಾಲ ಉಪವಾಸ ಆಚರಿಸಿದ ಮುಸ್ಲಿಂ ಬಾಂಧವರು ರಂಜಾನ್ ಅಂತ್ಯದಲ್ಲಿ ಈದ್ ನಮಾಜ್ ಸಲ್ಲಿಸಿ ಹಬ್ಬವನ್ನು ವಿಶೇಷವಾಗಿ ಆಚರಿಸಿದರು.

ಬೆಳಿಗ್ಗೆ ಮಸೀದಿಗಳಲ್ಲಿ ವಿಶೇಷ ನಮಾಜ್ ನಡೆಯಿತು. ಪಟ್ಟಣದ ಪ್ರಮುಖ ಮಸೀದಿಗಳಲ್ಲಿ ಭಕ್ತರು ಸೇರಿ ಶಾಂತಿ, ಸೌಹಾರ್ದತೆ ಮತ್ತು ಸಮೃದ್ಧಿಗಾಗಿ ಪ್ರಾರ್ಥಿಸಿದರು. ನಂತರ ಪರಸ್ಪರ ಅಪ್ಪಿಕೊಂಡು 'ಈದ್ ಮುಬಾರಕ್' ಎಂದು ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಈ ಸಂದರ್ಭದಲ್ಲಿ ಯಾಸೀನ್ ಮುಷ್ಟಿ ಅವರು ಸಭೆಯಲ್ಲಿ ಬೈಯಾನ್ ನಡೆಸಿ, ರಂಜಾನ್ ಹಬ್ಬದ ಮಹತ್ವವನ್ನು ವಿವರಿಸಿದರು. ಉಪವಾಸದ ಮೂಲಕ ಆತ್ಮಶುದ್ಧಿ, ಸಹನೆ ಮತ್ತು ದಾನಧರ್ಮದ ಮಹತ್ವವನ್ನು ತಿಳಿಸಿ, ಸಮಾಜದಲ್ಲಿ ಶಾಂತಿ ಹಾಗೂ ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸಮಾಜದಲ್ಲಿ ಸಹೋದರತ್ವ ಮತ್ತು ಏಕತೆಯನ್ನು ಬಲಪಡಿಸುವಸಂದೇಶವೂನೀಡಲಾಯಿತು. ವಿವಿಧ ಸಮುದಾಯದ ಜನರು ಸಹ ಈ ಹಬ್ಬದಲ್ಲಿ ಭಾಗವಹಿಸಿ ಸೌಹಾರ್ದತೆಯ ಉದಾಹರಣೆಯಾಗಿ ಕಾಣಿಸಿಕೊಂಡರು. ಕೊಟ್ಟೂರು ಹಾಗೂ ಸುತ್ತಮುತ್ತಲ ಗ್ರಾಮಗಳ ಸಮಸ್ತ ಮುಸ್ಲಿಂ ಬಾಂಧವರು ಸಾಮೂಹಿಕ ನಮಾಜಿನಲ್ಲಿ ಭಾಗವಹಿಸಿ ರಂಜಾನ್ ಆಚರಿಸಿದರು.

ನೀರನ್ನು ಮಿತವಾಗಿ ಬಳಸಿ: ಶ್ರೀಗಳು

◆**ಸಿರುಗುಪ್ಪ:** ಬೇಸಿಗೆ ವೇಳೆ ಪ್ರತಿಯೊಬ್ಬರು ನೀರನ್ನು ಮಿತವಾಗಿ ಬಳಸಬೇಕು. ಯಾವುದೇ ಕಾರಣಕ್ಕೂ ನೀರನ್ನು ವ್ಯರ್ಥಮಾಡಕೂಡದು ಎಂದು ಗುರುಬಸವ ಮಠದ ಬಸವ ಭೂಷಣ ಸ್ವಾಮೀಜಿ ಹೇಳಿದರು.

ನಗರದ ನಗರಸಭೆ ಕಾರ್ಯಾಲಯ ಆವರಣದಲ್ಲಿ ವಿಷ್ಣು ವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ವತಿಯಿಂದ ಅಳವಡಿಸಿದ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆಗೆ ಚಾಲನೆ ನೀಡಿ ಮಾತನಾಡಿ, ನೀರು ಅತ್ಯಮೂಲ್ಯವಾದದ್ದು, ಯಾವುದೇ ಕಾರಣಕ್ಕೂ ಪೋಲಾಗಬಾರದು, ಪ್ರತಿಯೊಬ್ಬರೂ ಮಿತವಾಗಿ ಬಳಸಲು ಮುಂದಾಗಬೇಕು ಎಂದರು.

ವಿಷ್ಣು ವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ ಅಧ್ಯಕ್ಷ ಎಚ್.ಜಿ.ಹನುಮಂತಯ್ಯ ಶೆಟ್ಟಿ ಮಾತನಾಡಿ, ಬೇಸಿಗೆ ವೇಳೆ ಜನರಿಗೆ ನೀರಿನ ಸಮಸ್ಯೆ ಎದುರಾಗಬಾರದು ಎಂದು ನಮ್ಮ ಸಹಕಾರಿ ಸಂಘದಡಿ ಶುದ್ಧ ಕೂಡುವ ನೀರಿನ ಅರವಟ್ಟಿಗೆ ಸ್ಥಾಪಿಸಲಾಗಿದೆ ಎಂದರು.

ಬಲಕುಂದಿ ಸೌಹಾರ್ದ ಸಂಘದ ಅಧ್ಯಕ್ಷ ಚಿಂತಕುಂಟೆ ಗಾದಿಲಿಂಗನಗೌಡ, ನಿರ್ದೇಶಕರಾದ ಜಿ.ಶ್ರೀರಾಮ, ಎಂ.ಭದ್ರಿನಾಥ, ಕೆ.ಆರ್.ನಾಗರಾಜ ಶೆಟ್ಟಿ, ಕೆ.ಸೂರ್ಯಪ್ರಕಾಶ, ಎ.ಸಂತೋಷ, ಮುಖ್ಯಕಾರ್ಯನಿರ್ವಹಕ ಅಧಿಕಾರಿ ಅನಿಲ ಕುಮಾರ್, ಸಿರಿಮಹಾಲಕ್ಷ್ಮಿ, ಸೌಹಾರ್ದ ನಿರ್ದೇಶಕ ರಾಘವೇಂದ್ರ ಆಚಾರ್ಯ ಸೇರಿದಂತೆ ಇತರರು ಭಾಗವಹಿಸಿದ್ದರು.

